ಸಾಯಿಸುತೆ



894.814 3083
SAI N99
ಗ್ರಂಥ ಸ್ವಾಮ್ಯ ವಿಭಾಗ

# ಅಭಿನಂದನೆ

(ಸಾಮಾಜಿಕ ಕಾದಂಬರಿ)

ಸಾಯಿಸುತೆ

ಪ್ರಕಾಶಕರು :

**ವಾಸವಾಂಬ ಪ್ರಕಾಶನ**

ವಾಸವಾಂಬ ನಿಲಯ, ಸಾರಕ್ಕಿ ಬಡಾವಣೆ,

**ಬೆಂಗಳೂರು - 560 078**

(ದೂರವಾಣಿ : 6642996)

META ENTERED

ABHINANDHANE - a social novel by Smt. Saisuthe; I edn. March 1999 ; Published by Sri Vasavamba Prakashana, No.63, Aryanagar, Sarakki Road, Bangalore - 78.
All rights reserved by the Authoress; Pages : 207 ; Price: Rs. 60=00.

ಪ್ರಥಮ ಮುದ್ರಣ: ಮಾರ್ಚ್ 1999
ಹಕ್ಕುಗಳು : ಲೇಖಿಕಿಯದು

ಅಧಿಕೃತ ಮಾರಾಟಗಾರರು :

**ಗೀತಾ ಏಜನ್ಸೀಸ್**

(*ಸಗಟು ಪುಸ್ತಕ ವ್ಯಾಪಾರಿಗಳು*)
ಬಳೇಪೇಟೆ ಚೌಕ, ಬೆಂಗಳೂರು - 53
(ದೂರವಾಣಿ : 2874226)

ಬೆಲೆ : ರೂ. 60=00.

*ಸುಂದರ ಲಿಪಿ ಜೋಡಣೆ* :
***ಎಸ್. ಎಸ್. ಕಂಪ್ಯೂಟರ್ ಇಂಡಿಯಾ ಇಂಪ್ರೆಷನ್ಸ್,***
ವಿದ್ಯಾನಗರ, ತುಮಕೂರು-3 : ದೂರವಾಣಿ : 880785

*ಮುದ್ರಣ:*
**ಜಗನ್ನಾಥ ಆಫ್‌ಸೆಟ್ ಪ್ರಿಂಟರ್ಸ್**
ಡಿ. ಎಸ್.ಲೇನ್, ಸೌರಾಷ್ಟ್ರಪೇಟೆ, ಬೆಂಗಳೂರು - 53.

# ಮುನ್ನುಡಿ

*ಆತ್ಮೀಯ ಓದುಗರಲ್ಲಿ,*

ನಂಬುಗೆ ಬದುಕಿನ ನೆಲೆಗಟ್ಟು, ಅದಕ್ಕೊಂದು ಚೌಕಟ್ಟು ಪ್ರೀತಿಯ ಸೆಲೆ. ಇಲ್ಲಿ ನಂಬುಗೆಯೇ ಭಕ್ತಿಯಾಗುತ್ತದೆ. ನಂಬುಗೆಯೇ ಭಯವಾಗುತ್ತದೆ. ಅದೇ ಬದುಕಿನ ಬಂಧವಾಗುತ್ತದೆ. ಇಲ್ಲಿ ರಾಗ ಅನುರಾಗಗಳು ಇದ್ದಂತೆ, ಬದುಕಿಗೆ ಸ್ವರ ಅಪಸ್ವರಗಳು ಕೂಡ ಇರುತ್ತದೆ. ಅಪಸ್ವರದ ಎಳೆ ಇಡೀ ಬದುಕನ್ನ ಛಿದ್ರವಾಗಿಸಿಬಿಡುತ್ತದೆ. ಮನಗಳಲ್ಲಿ ಅರಳಿದ ಮಲ್ಲಿಗೆ ಬಾಡಿಸಿಬಿಡುತ್ತದೆ. ಇಲ್ಲಿ ಎಲ್ಲಾ ಆಕರ್ಷಣೆಗಳು ಸತ್ತು ಒಂದು ವಿಶಾಲಾರ್ಥ ಗೋಚರಿಸುತ್ತದೆ. ಇದಕ್ಕೆ ಕಾರಣರಾದ ವ್ಯಕ್ತಿಗಳನ್ನ ದ್ವೇಷಿಸದೇ ಅಭಿನಂದಿಸುವುದು ಚಾರುಲತ ಅಂಥವರಿಗೆ ಸಾಧ್ಯವಾಗಬಹುದು.

ನನ್ನ ಕಾದಂಬರಿಗಳ ಪ್ರಕಟಣೆ ಮತ್ತು ಮಾರಾಟದ ಹೊಣೆ ಹೊತ್ತಿರುವ ಶ್ರೀ ಕೆ. ರಾಮಚಂದ್ರಯ್ಯನವರಿಗೂ, ಈ ಕಾದಂಬರಿಯನ್ನು ಪ್ರಕಟಿಸುತ್ತಿರುವ ವಾಸವಾಂಬ ಪ್ರಕಾಶನದವರಿಗೂ, ಮುಖ ಚಿತ್ರ ಕಲಾವಿದರಾದ ಶ್ರೀ ಎಂ.ಮೋನಪ್ಪನವರಿಗೂ ಮತ್ತು ಅಚ್ಚುಕಟ್ಟಾಗಿ ಮುದ್ರಿಸಿದ ಜಗನ್ನಾಥ ಆಫ್‌ಸೆಟ್ ಪ್ರಿಂಟರ್ಸ್‌ರವರಿಗೂ ಮತ್ತು ನಿಮಗೂ ನನ್ನ ಕೃತಜ್ಞತೆಗಳು.

22 -1 -99 **ಸಾಯಿಸುತೆ**

ಸಾಯಿಸದನ, ವಿದ್ಯಾನಗರ,

ತುಮಕೂರು-3

## ಸಾಯಿಸುತೆಯವರ ಕಾದಂಬರಿಗಳು

| | |
|---|---|
| ರಜತನಂದನ | ಅಭಿನಂದನೆ |
| ದೀಪಾಂಕುರ | ಆಡಿಸಿದಳು ಜಗದೋದ್ಧಾರನಾ |
| ಮಾಗಿಯ ಮಂಜು | ಹೇಮ ವಿಹಾರಿ |
| ಹಂಸ ಪಲ್ಲಕ್ಕಿ | ಪಾಂಚಜನ್ಯ |
| ನನ್ನದೆಯ ಹಾಡು | ಇಂದ್ರ ಧನಸ್ಸು |
| ಜನನೀ ಜನ್ಮಭೂಮಿ | ಅರುಣ ಕಿರಣ |
| ಪ್ರಿಯಸಖೀ | ಧವಳ ನಕ್ಷತ್ರ |
| ನನ್ನ ಭಾವ ನಿನ್ನ ರಾಗ | ಚಿರಬಾಂಧವ್ಯ |
| ಶ್ಯಾನುಭೋಗರ ಮಗಳು | ಶುಭಮಿಲನ |
| ಸಪ್ತರಂಜನಿ | ಮಧುರಗಾನ |
| ಕೋಗಿಲೆ ಹಾಡಿತು | ಕಾರ್ತೀಕದ ಸಂಜೆ |
| ಕರಗಿದ ಕಾರ್ಮೋಡ | ನಾಟ್ಯಸುಧಾ |
| ಹೇಮಂತದ ಸೊಗಸು | ಮೂಡಿ ಬಂದ ಶಶಿ |
| ರಾಧ ಮೋಹನಾ | ಗಂಧರ್ವಗಿರಿ |
| ಬಣ್ಣದ ಚುಂಬಕ | ಬಿಳಿ ಮೋಡಗಳು |
| ರಜತಾದ್ರಿಯ ಕನಸು | ಮಾನಸ ವೀಣಾ |
| ಶ್ರಾವಣ ಪೂರ್ಣಿಮ | ಮುಗಿಲ ತಾರೆ |
| ಸುಮಧುರ ಸಂಗಮ | ಸ್ವಪ್ನ ಸಂಭ್ರಮ |
| ರಾಗ ಬೃಂದಾವನ | ಶ್ವೇತ ಗುಲಾಬಿ |
| ಬೆಳದಿಂಗಳ ಚೆಲುವೆ | ಮಧುರ ಆರಾಧನ |
| ವಸಂತದ ಚಿಗುರು | ಪಸರಿಸಿದ ಶ್ರೀಗಂಧ |
| ನೂರು ನೆನಪು | ಮೇಘವರ್ಷಿಣಿ |
| ಬಾಂದಳದ ನಕ್ಷತ್ರ | ಮೌನ ಆಲಾಪನ |
| ಶ್ರೀರಸ್ತು ಶುಭಮಸ್ತು | ಭಾವ ಸರೋವರ |
| ಸ್ನೇಹ ಮಾಧುರಿ | ಆರಾಧಿತೆ |
| ಮಂಗಳ ದೀಪ | ನಿಶಾಂತ್ |
| ಇಬ್ಬನಿ ಕರಗಿತು | ಪಂಚವಟಿ |

ಪೂರ್ಣೋದಯ
ಪುಷ್ಕರಿಣಿ
ಹೃದಯ ರಾಗ
ಜೇನ ಸಂಧ್ಯಾ
ನೀ ಸಿಂಧೂರ
ನಮ್ರತಾ
ಮಿಡಿದ ಶೃತಿ
ಸ್ವರ್ಣ ಮಂದಿರ
ಸುಮಧುರ ಭಾರತಿ
ಮಂದಾರ ಕುಸುಮ
ಸೊಬಗಿನ ಪ್ರಿಯದರ್ಶಿನಿ
ಪ್ರೇಮ ಸಾಫಲ್ಯ
ಮಮತೆಯ ಸಂಕೋಲೆ
ಮುಂಜಾನೆಯ ಮುಂಬೆಳಕು
ಹೊಂಬೆಳಕು
ಸುಪ್ರಭಾತದ ಹೊಂಗನಸು
ಚೈತ್ರದ ಕೋಗಿಲೆ
ಪ್ರೀತಿಯ ಹೂಬನ
ಬಾನು ಮಿನುಗಿತು
ಮಂಜಿನಲ್ಲಿ ಮಿಂದ ಪುಷ್ಪ
ಶರದೃತುವಿನ ಚಂದ್ರ
ಶುಭಾಂಗಿಣಿ
ಬರಿದ ನೈದಿಲೆ
ವಸುಂಧರ
ಕಲ್ಯಾಣ ರೇಖೆ
ಅನುಬಂಧದ ಕಾರಂಜಿ
ಸಂಧ್ಯಾ ಗಗನ
ಮತ್ತೊಂದು ಬಾಡದ ಹೂ
ನಿಶೆಯಿಂದ ಉಷೆಗೆ
ಬಾಡದ ಹೂ
ಏಧಿವಂಚಿತೆ
ಗಿರಿಧರ
ಮಿಂಚು
ಸಪ್ತಪದಿ
ನವಚೈತ್ರ
ಅಭಿಲಾಷ
ಡಾ॥ ವಸುಧಾ
ಹಿಮಗಿರಿ ನವಿಲು
ವಿವಾಹ ಬಂಧನ
ಬೆಳ್ಳಿ ದೋಣಿ
ಅಮೃತ ಸಿಂಧು
ಸಮ್ಮಿಲನ
ವರ್ಷ ಬಂದು

*ಮುಂದಿನ ಕಾದಂಬರಿಗಳು*

*'ಸಾಗರ ತರಂಗಿಣಿ'*

*ಮಧುರಿಮ*

ಕೃಷ್ಣಮೂರ್ತಿ, ಚಾರುಲತಗೆ ಮದುವೆಯಾಗಿ ಒಂಬತ್ತು ತಿಂಗಳಾಗಿತ್ತು. ಹೊಸದಾಗಿ ಸಂಸಾರ ಹೂಡಿದ್ದರು. ಅತ್ಯಂತ ಸುಂದರವಾದ ಜೋಡಿಯೆಂದು ಅಕ್ಕಪಕ್ಕದ ಮನೆಯವರು ಹೇಳುತ್ತಿದ್ದರು. ಬಾಟನಿಯಲ್ಲಿ ಎಂ.ಎಸ್ಸಿ. ಮಾಡಿದ ಮೂರ್ತಿಗೆ ಬಿ.ಎಸ್ಸಿ. ಮಾಡಿದ ಯುವತಿ ಪತ್ನಿಯಾಗಿ ದೊರೆತಿದ್ದು ತೃಪ್ತಿಕರವೇ. ಅವನಿಗೆ ಓದೋ ಅಭ್ಯಾಸ ಬಿಟ್ಟು ಬೇರೇನು ಹಾಬಿಗಳು ಇಲ್ಲವೆಂದೇ ಹೇಳಬೇಕು. ಆಗಾಗ ಟೆನ್ನಿಸ್ ಆಡಲು ಹೋಗುತ್ತಿದ್ದ. ಅದು ಕೂಡ ವಿವಾಹದ ನಂತರ ಕ್ಯಾನ್ಸಲ್ ಆಗಿತ್ತು. ಎರಡು ರೂಮಿನ ಪುಟ್ಟ ಮನೆಯಾದರೂ ಎಲ್ಲಾ ರೀತಿಯ ಅನುಕೂಲವೂ ಇತ್ತು. ಬೋರ್ ಇದ್ದುದ್ದರಿಂದ ನೀರಿಗೆ ತಾಪತ್ರಯವಿರಲಿಲ್ಲ. ಒಂದಿಷ್ಟು ಗಿಡಗಳನ್ನು ಬೆಳೆಸಲು ಕಾಂಪೌಂಡ್‌ನಲ್ಲಿ ಅನುಕೂಲವಿತ್ತು. ಜೊತೆಗೆ ಬೇರೆ ಬೇರೆ ಜಾತಿಯ ಪಾಟುಗಳನ್ನ ತಂದು ಅಂಗಳವನ್ನ ಅಲಂಕರಿಸಿದ್ದರು ಗಂಡ, ಹೆಂಡತಿ. ಅವನೇನು ಸಂಬಳದಲ್ಲಿ ಒಂದು ಪಾಲನ್ನು ಊರಿಗೆ ಅಂದರೆ ತಾಯ್ತಂದೆಯರಿಗೆ ಕಳುಹಿಸಬೇಕಿರಲಿಲ್ಲ. ಆರ್ಥಿಕವಾಗಿ ಸುಮಾರಾಗಿ ಅನುಕೂಲವಾಗಿದ್ದ ಕುಟುಂಬ. ಎರಡು ಮನೆಗಳ ಬಾಡಿಗೆಯ ಜೊತೆ ಸ್ವಂತ ಮನೆ ಇತ್ತು. ಒಂದಿಷ್ಟು ಹಣವನ್ನ ತಮ್ಮ ಸಂಬಳದಲ್ಲಿ ಉಳಿಸಿ ಫಿಕ್ಸೆಡ್‌ಗೆ ಹಾಕಿದರು. ಬಡ್ಡಿ ಬರುತ್ತಿತ್ತು ತಿಂಗಳು ತಿಂಗಳು, ಇದ್ದ ಮಗಳ ಮದುವೆಗಾಗಿ ಕೂಡ ಹಣ ತೆಗೆದಿರಿಸಿದ್ದರಿಂದ ಮಗನ ಮುಂದೆ ಕೈಯೊಡ್ಡುವ ಸ್ಥಿತಿ ಅವರಿಗೆ ಇರಲಿಲ್ಲ. ಮಗನಿಗೆ ವಿವಾಹ ಮಾಡುವಾಗ ಕೂಡ ನಯಾಪೈಸಾ ವರದಕ್ಷಿಣೆ ತಂಗೊಂಡಿರಲಿಲ್ಲ. ಕೆಲವು ವಿಷಯಗಳಲ್ಲಿ ಬಹಳ ಪ್ರಿನ್ಸಿಪಲ್ಡ್ ವ್ಯಕ್ತಿ ಯುಗಂಧರ್.

ಕೈ ಹಿಡಿದ ಚಾರುಲತ ಬಗ್ಗೆ ಅತ್ಯಂತ ಪ್ರೀತಿ, ಅಭಿಮಾನ ಕೃಷ್ಣಮೂರ್ತಿಗೆ. ಹೂವಿಡಿದು ಬರುವ ಗಂಡನಿಗಾಗಿ ಕಾದು ನಿಲ್ಲುವ ಹೆಣ್ಣು ಅತ್ಯಂತ ಸರಳೆ. ಅವಳ ತಂದೆ ಕೂಡ ಸರ್ಕಾರಿ ಚಾಕರಿಯಲ್ಲಿದ್ದು ಈಚೆಗೆ ರಿಟೈರ್ಡ್ ಆದವರು. ಬರೀ ಮನೆ, ಮಡದಿ, ಮಕ್ಕಳು ಎಂದು ಬದುಕಿದ ಸಾಧಾರಣ ಜನ. ಹಿರಿಯವ ನವೀನ್ ಮೆಡಿಸಿನ್ ಓದಿಕೊಂಡಿದ್ದು ತನ್ನ ಬುದ್ಧಿವಂತಿಕೆ ಯಿಂದಲೇ ಫೀಜು ವಗೈರೆ ಕೊಟ್ಟಿರಬಹುದೇ ವಿನಃ ಡೊನೇಷನ್ ಕೊಟ್ಟು ಓದಿಸಿರಲಿಲ್ಲ. ಇಂಟರ್‌ಷಿಪ್ ಮುಗಿಸಿಕೊಂಡು ನರ್ಸಿಂಗ್‌ಹೋಂನಲ್ಲಿ ಜೂನಿಯರ್ ಡಾಕ್ಟರಾಗಿ ಕೆಲಸ ನಿರ್ವಹಿಸುತ್ತಿದ್ದ. ಅಂತು ಆ ಕುಟುಂಬಕ್ಕೆ ಮಕ್ಕಳು ಎಂದೂ ಸಮಸ್ಯೆಗಳಾಗಿರಲಿಲ್ಲ. ಆದರೆ ನಾಲ್ಕು ವರ್ಷದ ಹಿಂದೆ ಮನೆಯ ಗೃಹಿಣಿ ತೀರಿಕೊಂಡು ಎಲ್ಲರ ಬದುಕನ್ನು ಕತ್ತಲೆಯಾಗಿಸಿ ಹೋಗಿದ್ದಳು. ಎಷ್ಟು ದಿನ ನಿಲ್ಲಬಲ್ಲದು, ಕತ್ತಲು. ಕಾಲ ಎಲ್ಲವನ್ನ ಮರೆಸುತ್ತದೆಯೆನ್ನುವಂತೆ ಆಕೆ ಇಲ್ಲದ ಜೀವನಕ್ಕೆ ಮಕ್ಕಳು ನಿಧಾನವಾಗಿ ಯಾದರೂ ಹೊಂದಿಕೊಂಡರು.

ಇಂದು ಕೃಷ್ಣಮೂರ್ತಿ ಮೊದಲ ಸಲ ಹೂ ಮರೆತು ಬಂದಾಗ ಚಾರುಲತಗೆ ಅಚ್ಚರಿಯೆನಿಸಿದರೂ, ಅದರ ಬಗ್ಗೆ ತಲೆ ಕೆಡಿಸಿಕೊಳ್ಳಲಿಲ್ಲ. ಆದರೆ ಇಂದು ವಿಮನಸ್ಕನಾಗಿದ್ದು ಕಂಡು ಚಿಂತಿತಳಾದಳು. ಎಂದಿನ ಹಾರುವ ನಡಿಗೆ ಅವನದಾಗಿರಲಿಲ್ಲ. ಒಳಗೆ ಅಡಿಯಿಟ್ಟ ಕೂಡಲೇ ಪ್ರೀತಿಯ ಉಸುರಿನಲ್ಲಿ ಮಡದಿಯನ್ನು ತೇಲಾಡಿಸಿ ಬಿಡುತ್ತಿದ್ದ ವ್ರತವನ್ನು ಮೊದಲ ಸಲ ಕೈ ಬಿಟ್ಟ, ಅವನೊಬ್ಬ ಲೆಕ್ಚರರ್ ಆದುದ್ದರಿಂದ ಕಾಲೇಜು ಓದಿದ ಚಾರುಲತಗೆ ಅಲ್ಲಿನ ಸಮಸ್ಯೆಗಳ ಅರಿವಿದ್ದರಿಂದ ಸುಮ್ಮನಾದಳು.

ಬಟ್ಟೆ ಬದಲಾಯಿಸಿ ಬಾತ್ ರೂಮಿಗೆ ಹೋಗಿ ಬಂದವನು ತುಟಿ ಬಿಚ್ಚದೇ ಪೇಪರೆತ್ತಿಕೊಂಡ. "ಸಂಜೆಯೇನು ಮಾಡ್ಬೇಡ, ಹೊರ್ಗಡೆ ಹೋಗೋಣ" ಮಡದಿಯ ತುಟಿಗಳನ್ನು ನೋಯಿಸಿಯೇ ಬೆಳಿಗ್ಗೆ ನುಡಿದಿದ್ದ. ಅದಕ್ಕಾಗಿ ತಿಂಡಿಯ ಯೋಚನೆಯನ್ನು ಕೈಬಿಟ್ಟು, ರೆಡಿಯಾಗಿ ಕಾದು ನಿಂತಿದ್ದ.

ಆ ಬಗ್ಗೆ ತಲೆ ಕೆಡಿಸಿಕೊಳ್ಳದ ಚಾರುಲತ ನಾಲ್ಕು ಕೋಡುಬಳೆಗಳನ್ನ ಒಂದು ತಟ್ಟೆಗೆ ಹಾಕಿಕೊಂಡು ಬಂದು ಅವನ ಮುಂದಿಟ್ಟಳು. "ತಗೊಳ್ಳಿ, ಕಾಫಿ ತರ್ತೀನಿ" ಎಂದಾಗ, ಪೇಪರನ್ನ ಒರಟಾಗಿ ಎಸೆದು "ನಂಗ್ಬೇಡ, ಕಾಫಿ ತಂದ್ಬಿಡು" ಅಂದು ಹಣೆಯೊತ್ತಿಕೊಂಡಾಗ ಗಾಬರಿಯಿಂದ ಹಣೆಯ ಮೇಲೆ ಕೈಯಿಟ್ಟು "ತಲೆ ನೋವಾ ? ಅಮೃತಾಂಜನಾ ಹಾಕ್ಲಾ ?" ಕೇಳಿದಳು. ಆ ಕೈ

ಹಿತವೇ. ಅರ್ಧ ನೋವು ಕಡಿಮೆಯಾಗಿದೆಯೆನಿಸಿತು. "ಸ್ವಲ್ಪ ಬಿಗಿಯಾಗಿದ್ದರೇ, ಕೆಲ್ಸ ಸುಗಮ. ಇದು ನಿನ್ನ ಮನಸ್ಸಿನಲ್ಲಿ ಇರ್ಲಿ" ತಂದೆ ಬೆಳಿಗ್ಗೆ ಫೋನ್‌ನಲ್ಲಿ ಎಚ್ಚರಿಸಿದ್ದರು.

"ಏನ್ಬೇಡ, ಒಂದಿಷ್ಟು ಕಾಫಿ ತಗೊಂಡ್ಬಾ" ಅರೆ ಮನಸ್ಸಿನಿಂದ ಹೇಳಿದ.

ಮದುವೆಯಾದಂದಿನಿಂದ ಅವನ ಪ್ರೀತಿಯಲ್ಲಿಯೇ ತೇಲಿದವಳಿಗೆ ತಟ್ಟನೇ ಪ್ರೀತಿಯ ಪ್ರವಾಹವೆ ನಿಂತ ಅನುಭವವಾಯಿತು. ಈಚೆಗೆ ಓದಿದ ವಿಷಯ ನೆನಪಾಯಿತು. ಮದುವೆಯಾದ ಮೊದಲ ವಾರ ಹೆಂಡತಿಯನ್ನ ಪಾರ್ಕ್‌ಗೆ ಕರೆದೊಯ್ದ ಗಂಡ ಮುಳ್ಳನ್ನ ನೋಡಿದ ಕೂಡಲೇ ಗಾಬರಿಯಿಂದ ಮಡದಿಯನ್ನು ಎಳೆದು ಅಪ್ಪಿಕೊಂಡು 'ಮುಳ್ಳಿದೆ ನೋಡು ಚಿನ್ನ, ನಿಂಗೇನಾದ್ರೂ ಗಾಯವಾದರೇ ನನ್ನ ಎದೆಯ ಬಡಿತ ನಿಂತು ಹೋಗುತ್ತೆ' ಅಂತಾನೆ, ಅದೇ ಗಂಡ ಎರಡನೆ ವಾರ ಮಡದಿಯನ್ನು ಪಾರ್ಕಿಗೆ ಕರೆದೊಯ್ದಾಗ 'ಅಲ್ಲಿ ಮುಳ್ಳಿದೆ, ತುಳಿಬೇಡ' ಅಂತ ಎಚ್ಚರಿಸುತ್ತಾನೆ. ಮೂರನೆ ಸಲ ಪಾರ್ಕಿಗೆ ಕರೆದೊಯ್ದಾಗ 'ಮುಳ್ಳಿದೆ, ನಿಂಗೆ ಕಣ್ಣು ಕಾಣೋಲ್ವಾ ?' ಗದರಿಸುತ್ತಾನೆ. ಇದು ಲೌಕಿಕವಾದ ಸುಖ, ಅನುಭವ.

ಚಾರುಲತ ಮುಖದ ಮೇಲೆ ತೆಳುವಾದ ನಗು ಅರಳಿತು.

ಕಾಫಿ ಬಿಸಿ ಮಾಡಿ ತಂದು ಅವನ ಮುಂದಿಟ್ಟು "ತಗೊಳ್ಳಿ, ಸ್ವಲ್ಪ ತಲೆ ನೋವಾದರೇ ಒಂದಿಷ್ಟು ಮಲ್ಗಿ. ಹೊರ್‍ಗ ಹೋಗೋ ಪ್ರೋಗ್ರಾಮ್ ಬೇಡ" ನವಿರಾಗಿ ನುಡಿದಳು. ಮುಖ ಗಂಟಿಕ್ಕಿಯೇ ಕಾಫಿ ಕುಡಿದು ಮುಗಿಸಿ ಎದ್ದು ಹೋದ ರೂಮಿಗೆ. ಅವಳು ಹಿಂಬಾಲಿಸಲಿಲ್ಲ. ಕೆಲವು ಸಮಯ ಒಂಟಿಯಾಗಿ ಬಿಟ್ಟರೇ ತಾನಾಗಿ ಟೆನ್‌ಷನ್ ಕಮ್ಮಿಯಾಗುತ್ತದೆ ಯೆಂದು ತಿಳಿದು, ಆರಾಮಾಗಿ ಹೊರಗೆ ಬಂದು ಕಾಂಪೌಂಡ್ ಪಕ್ಕದಲ್ಲಿ ಬೆಳೆದು ನಿಂತ ಕನಕಾಂಬರ ಗಿಡಗಳಲ್ಲಿ ಅರಳಿದ ಹೂಗಳನ್ನ ಬಿಡಿಸಿದಳು. ಅವಳು ಬೆಳೆದಿದ್ದು ಹೆಚ್ಚು ಶ್ರೀಮಂತಿಕೆಯಲ್ಲಿ ಅಲ್ಲ. ತೀರಾ ಮಧ್ಯಮ ದರ್ಜೆಯ ಜೀವನದ ಎಲ್ಲಾ ಸೂಕ್ಷ್ಮಗಳು ಅವಳಿಗೆ ಅರ್ಥವಾಗಿತ್ತು.

ಹೂ ಕಟ್ಟಿ ಮುಗಿಸಿದ ನಂತರವೆ ರೂಮಿಗೆ ಹೋಗಿದ್ದು.

ಮೂರ್ತಿ ನೋಟ ಭಾವಣೆಯತ್ತ ನೆಟ್ಟಿತ್ತು. ಮುಖದ ಬಿಗುವು

ಕಡಿಮೆಯಾದರೂ ಆಂದೋಳನವಿತ್ತು. ಪಕ್ಕದಲ್ಲಿ ಕೂತು ಅವನ ಕೈಯನ್ನ ತನ್ನ ಕೈಯೊಳಗೆ ತಗೊಂಡು ಕೆನ್ನೆಗೊತ್ತಿಕೊಂಡು ಮೃದುವಾಗಿ ತುಟಿ ತೆರೆದಳು.

"ಯಾಕೋ ಒಂದು ತರಹ ಇದ್ದೀರಾ ? ಕಾಲೇಜಿನಲ್ಲಿ ಏನಾದ್ರೂ ಪ್ರಾಬ್ಲಮ್ಮಾ? ವಿದ್ಯಾರ್ಥಿಗಳದಾದ್ರೆ....ಸೀರಿಯಸ್ಸಾಗಿ ತಗೋಬೇಕು. ಮ್ಯಾನೇಜ್‌ಮೆಂಟ್ ಕಿರಿಕಿರಿ ಮಾಮೂಲ್. ಅದ್ನ ಡೀಪಾಗಿ ತಗೋಬೇಡಿ." ಬಹಳಷ್ಟು ದನಿ ಮೃದುವಾಗಿಸಿ ಕೇಳಿದ್ದು ಚಾರುಲತ.

ತಟ್ಟನೆ ಬಾಯಿ ಬಿಡಲಿಲ್ಲ ಮೂರ್ತಿ. ಪ್ರಸ್ತಾಪ ಮುಂದೂಡುವಂತಿರಲಿಲ್ಲ. ಎರಡು ಸಲ ತುಟಿಯ ಮೇಲೆ ನಾಲಿಗೆಯಾಡಿಸಿದವನು ಸರಕ್ಕನೆ ಅವಳನ್ನ ಎಳೆದುಕೊಂಡ.

"ಅಣ್ಣ ಫೋನ್ ಮಾಡಿದ್ರು" ಎಂದ.

ಇದು ಅವಳಿಗೆ ಸೀರಿಯಸ್ಸಾದ ವಿಷಯವಾಗಿ ಕಾಣಲಿಲ್ಲ. ಇನ್ನ ಮನೆಗೆ ಫೋನ್ ಇರದಿದ್ದರಿಂದ ಆಗಾಗ ಕಾಲೇಜಿಗೆ ಫೋನ್ ಮಾಡಿ ಯೋಗ ಕ್ಷೇಮ ವಿಚಾರಿಸುತ್ತಿದ್ದುದು ಸಹಜ. ಆದರೆ ಇಂದು ಅಷ್ಟೇ ಅಲ್ಲವಾಗಿ ಕಂಡಿತು.

"ಎಲ್ಲಾ ಹೇಗಿದ್ದಾರಂತೆ ?" ವಿಷಯಕ್ಕೆ ಬಂದಾಗ ಅವನ ಮುಖ ಬಿಗಿಯಿತು "ನಿಮ್ಮ ಮನೆಗೆ ಹೋಗಿದ್ರಂತೆ. ನಮ್ಮ ಪೂಜಾ ಏನಾಗಿದ್ದಾಳೆ?" ಅವನ ಮೂಗಿನ ತುದಿ ಕೆಂಪಾಗಿದ್ದು ನೋಡಿ ಒಂದಿಷ್ಟು ಹಿಂದೆ ಸರಿದಳು. ಮೂರ್ತಿ ಹೇಳದೆಯೇ ಒಂದಿಷ್ಟು ವಿಷಯ ಅರ್ಥವಾಯಿತು. ನಾದಿನಿ ಒಂದಲ್ಲ ಒಂದು ಕಾರಣ ಹೇಳಿಕೊಂಡು ಮನೆಗೆ ಬರುತ್ತಿದ್ದಾಗ ಅವಳಿಗೆ ಅಷ್ಟಿಷ್ಟು ಅರ್ಥವಾಗಿತ್ತು.

"ನನ್ನ ಪ್ರಶ್ನೆಗೆ ಉತ್ತರ ಸಿಗ್ಲಿಲ್ಲ" ದನಿಯೇರಿಸಿದ.

ಮೊದಲ ಸಲ ಕೈ ಹಿಡಿದವನ ಗಡಸು ಸ್ವರದ ಪರಿಚಯವಾಯಿತು. ಅನಗತ್ಯ ಘರ್ಷಣೆ ಬೇಡವೆನಿಸಿತು.

"ಪೂಜಾಗೇನು ದಂತದ ಗೊಂಬೆಯೇ. ವಿದ್ಯೆಯಲ್ಲಿ, ಬುದ್ಧಿಯಲ್ಲಿ ಸಧ್ಯಕ್ಕೆ ಹೋಲಿಸಲು ನಂಗೆ ಇನ್ನೊಬ್ಬ ವ್ಯಕ್ತಿ ಸಿಕ್ಕಿಲ್ಲ. ಹಾಗೇ ನೋಡಿದ್ರೆ ಅವಳ್ಗಿಂತ ನೀವು ಡಲ್" ನಗುವು ತುಂಬಿಕೊಂಡು ಉಸುರಿದಳು.

ಸ್ವಲ್ಪ ಬಿರುಸಾಗಿ ಇವಳತ್ತ ನೋಟ ಹರಿಸಿ "ಸ್ವಲ್ಪ ಸರ್‍ಯಾಗಿ ಕೇಳು ! ನನ್ಮುಂದೆ ಹೇಳ್ದ ಮಾತುಗಳನ್ನ ನಿನ್ನಣ್ಣನ ಮುಂದೆ ಹೇಳು. ಈಡಿಯಟ್

ಬೇಡಾನ್ನೋಷ್ಟು ಪೊಗರು" ರೇಗಿದ.

ಚಾರುಲತ ತಲೆ ಕೊಡವಿದಳು. ಅವಳಿಗೆ ಇದ್ದಿದ್ದು ಒಬ್ಬನೇ ಅಣ್ಣ. ಅವನು ಕೂಡ ಅಯೋಗ್ಯನಲ್ಲ. ಅಂಥದ್ದರಲ್ಲಿ 'ಈಡಿಯಟ್, ಪೊಗರು' ಶಬ್ದಗಳ ಬಳಕೆ ನಾಗರೀಕವೆನಿಸಲಿಲ್ಲ.

'ನಿಮ್ಮ ಮಾತಿನ ರೀತಿ ನಂಗಿಷ್ಟವಾಗ್ಲಿಲ್ಲ. ನಾನು ನಿಮ್ಮುಂದೆ ಹೇಳ್ದ ಮಾತುಗಳು ಉತ್ಪ್ರೇಕ್ಷೆಯದಲ್ಲ, ಎಲ್ಲಿ ಬೇಕಾದ್ರೂ ಹೇಳ್ತಲ್ಲೆ. ಯಾರ ಅಣ್ಣನ ಬಗ್ಗೆ ನೀವು 'ಈಡಿಯಟ್' ಅನ್ನೋ ಪದ ಬಳಸಿದ್ದು ?" ಅವಳ ನುಡಿಗಳು ನೇರವಾಗಿತ್ತು. ಚಾರುಲತ ಮನಸ್ಸಿಗೆ ನೋವಾಗಿತ್ತು. ಗಂಡನ ಬಗೆಗಿನ ಅಭಿಮಾನದ ಪರದೆ ಕಿಂಚಿತ್ ಅಲುಗಾಡಿತು.

ಈಗ ಮುಖಾಮುಖಿ ಮಾತಿಗೆ ಇಳಿದ ಮೂರ್ತಿ.

"ಪೂಜಾ, ನಿನ್ನಣ್ಣನ್ನ ಇಷ್ಟಪಟ್ಟಿದ್ದಾಳೆ. ಅದೊಂದನ್ನೇ ನೆಪ ಮಾಡ್ಕೊಂಡ್ ಅಪ್ಪ, ಅಮ್ಮ ನಿಮ್ಮ ಮನೆಗೆ ಹೋದ್ರಂತೆ. ಅವ್ರಿಗೆ ಏನು ಸಿಕ್ತು ಗೊತ್ತಾ ? ಅಪ್ಪ, ಮಗನ ಕಡೆ ಕೈ ತೋರಿಸಿದ್ರಂತೆ. ಅವ್ನು ಎದುರು ಮನೆ ಕಡೆ ನೋಡಿ ಆರಾಮಾಗಿ ಅಲ್ಲಾಡಿಸಿ ಬಿಟ್ಟ ಕೈನಾ. ಇದು ಎಷ್ಟು ಸರಿ ?" ರೋಷದಿಂದ ಕೂಗಾಡಿದ.

ಕೈ ಹಿಡಿದು ಅವನನ್ನು ಬಲವಂತದಿಂದ ಕೂಡಿಸಿದ ಚಾರುಲತ "ಬೀ ಕಾಮ್. ಕೂಗಾಡೋ ಅಂಥದೇನಾಗಿದೆ ? ಇದ್ನ ನಿಧಾನವಾಗಿ ಕೂತು ಮಾತಾಡ್ಬಹುದಿತ್ತು. ಪೂಜಾ ಬಗ್ಗೆ ಇನ್ನೊಂದ್ಮಾತಿಲ್ಲ. ಅಮ್ಮ ಸತ್ತಾಗ ನಮ್ಗೆ ತುಂಬ ಸಹಾಯ ಮಾಡಿದ ಶೇಖರ್ ಅಂಕಲ್ ಮಗ್ಳನ್ನ ಅಂದಿನಿಂದ್ಲೇ ಪ್ರೀತಿಸ್ತಾ ಇದ್ದ. ಇದ್ಕೆ ಯಾರ್ದೇ ವಿರೋಧವಿಲ್ಲ. ಇಷ್ಟೇ ವಿಷ್ಯ. ಪೂಜಾಗೆ ಇನ್ನ ಉತ್ತಮ ಸಂಬಂಧ ಕುದ್ರಿದರಾಯ್ತು" ಅತ್ಯಂತ ಶಾಂತವಾಗಿ ಹೇಳಿದಳು.

ಮುಖ ಕೊಡವಿ ಮೇಲೆದ್ದ. ಇದನ್ನ ದೊಡ್ಡ ಅವಮಾನವಾಗಿ ಭಾವಿಸಿದ್ದ ಅವನ ತಂದೆ ಮಗನನ್ನ ತರಾಟೆಗೆ ತಗೊಂಡರು "ಇದು ನನ್ನ ಪ್ರೆಸ್ಟೀಜ್ ಕೊಶ್ಚನ್ ಮಾತ್ರವಲ್ಲ, ಪೂಜಾ ನವೀನ್‌ನ ಮಾತ್ರ ವಿವಾಹವಾಗ್ತೀನೀಂತ ಹಟ ಹಿಡಿದಿದ್ದಾಳೆ. ಇದು ನಡೀಲೇ ಬೇಕು. ಮೂಗು ಹಿಡಿದರೇ ಬಾಯಿ ತಾನಾಗಿ ತೆರ್ದುಕೊಳ್ಳುತ್ತೆ. ನೀನು ಚಾರುಲತಗೆ ಸ್ವಲ್ಪ ಗಟ್ಟಿಯಾಗಿ ಹೇಳು. ನಿಂಗೆ ಇರೋಳು ಒಬ್ಳೇ ತಂಗಿ" ತಂದೆಯ ಮಾತುಗಳು ಅವನ ಮನಸ್ಸಿನ ಮೇಲೆ ವಿಪರೀತ ಪರಿಣಾಮ

ಬೀರಿತ್ತು. "ಡೋಂಟ್ ವರೀ, ನವೀನ್ ಹಾಗೇ ಅನ್ನೋಕೆ ಸಾಧ್ಯನೇ ಇಲ್ಲ. ನಾನು ಒಪ್ಪಿಸ್ತೀನಿ" ಭದ್ರವಾದ ಭರವಸೆ ಕೊಟ್ಟಿದ್ದ.

"ಇದೆಲ್ಲ ಮೃದುವಾಗಿ ಆಗೋ ಕೆಲಸವಲ್ಲ. ಸ್ವಲ್ಪ ಬಿಗಿಯಾಗಿರು" ಯುಗಂಧರ್ ಮಗನಿಗೆ ಉಪದೇಶಿಸಿದ್ದರು. ವರದಕ್ಷಿಣೆ ತೆಗೆದುಕೊಳ್ಳದೇ ಚಾರುಲತನ ಸೊಸೆಯಾಗಿ ತಂದುಕೊಂಡು ಆ ಕುಟುಂಬಕ್ಕೆ ದೊಡ್ಡ ಉಪಕಾರ ಮಾಡಿರುವ ಭಾವನೆ ಅವರದು. ಬಹುಶಃ ಅಂದು ಇರಲಿಲ್ಲವೇನೋ, ಇಂದು ಅದನ್ನ ಋಣವಾಗಿಸಿಕೊಂಡು ಮಗಳ ಆಸೆ ನೆರವೇರಿಸಲು ಕಂಕಣ ಬದ್ಧರಾಗಿದ್ದರು.

ರಾತ್ರಿ ಊಟದ ಸಮಯದವರೆಗೂ ಮಡದಿಯೊಂದಿಗೆ ಮಾತಾಡಲಿಲ್ಲ. ಸದಾ ವಟಗುಟ್ಟುವ ಗಂಡ ಇಷ್ಟೊಂದು ಸಂಯಮ ವಹಿಸಿದ್ದು ಹೇಗೆ ? ಸ್ವಲ್ಪ ಅಪಾಯವೆನಿಸಿತು. ಸದಾ ಕಾಡುವ ಅವನಿಂದ ಸ್ವಲ್ಪವಾದರೂ ಪುರಸತ್ತು ಸಿಕ್ಕಿದ್ದು ಸಮಾಧಾನದ ವಿಷಯವೇ.

"ಬೆಳಗಿನ ಟ್ರೇನ್‌ಗೆ ರಿಸರ್ವ್ ಮಾಡ್ಸಿದ್ದೀನಿ. ನಿನ್ನಣ್ಣನಿಗೆ ಸ್ವಲ್ಪ ಬುದ್ಧಿ ಹೇಳು. ಪೂಜಾ ಅವನನ್ನ ಮದ್ವೆಯಾಗ್ಬೇಕೂಂತ ಹಟ ಹಿಡ್ದು ಕೂತಿದ್ದಾಳಂತೆ. ಅವಳೊಬ್ಬ ಫೂಲ್. ಅಪ್ಪ ನವೀನ್‌ನ ತಾತನಂಥ ಗಂಡನ್ನ ಹುಡ್ಕಿ ತರುತ್ತಾ ಇದ್ದರು" ಅಭಿಮಾನದಿಂದ ಭುಸುಗುಟ್ಟಿದ ಬೆಡ್‌ರೂಂಗೆ ಹೋಗುವ ಮುನ್ನ.

ಚಾರುಲತ ಕೈಯಲ್ಲಿನ ಮ್ಯಾಗಝೀನ್‌ನ ಮುಚ್ಚಿ "ಬಹುಶಃ ಅಪ್ಪ ತಾತನ್ನ ಬೇಕಾದ್ರೆ ತಗಂಡ್ ಬರ್‍ತಾ ಇದ್ದರೇನೋ, ಅವನನ್ನ ಒಪ್ಪಿಸೋಕ್ಕಂತು ಆಗ್ತಾ ಇರ್ಲಿಲ್ಲ. ಪ್ಲೀಸ್, ಸ್ವಲ್ಪ ಅರ್ಥ ಮಾಡ್ಕೊಳ್ಳಿ. ಈಗಾಗ್ಲೇ ಬಹಳ ದೂರ ಬಂದಿದ್ದಾರೆ. ಈಗ ಅವ್ರ ಪ್ರೇಮ ಮೊಳಕೆಯ ಮಟ್ಟದಲ್ಲಿಲ್ಲ, ಕಿತ್ತು ಎಸೆಯೋಕೆ.....ಗಿಡವಾಗಿದೆ. ಅನಗತ್ಯವಾಗಿ ಆ ಪ್ರಸ್ತಾಪವೆತ್ತೋದೇ ಬೇಡ. ಪೂಜಾಗೆ ಬೇರೆ ಹುಡುಗನ್ನ ಹುಡ್ಕೋಣ" ಒಂದು ಸಲಹೆ ಕೊಟ್ಟಳು.

ಟೀಪಾಯಿ ಮೇಲಿದ್ದ ಪೇಪರ್‌ಗಳನ್ನೆಲ್ಲ ಎರಚಾಡಿ ಬಿಟ್ಟ ಮೂರ್ತಿ. ಮದುವೆ ನಂತರ ಒಂಬತ್ತು ತಿಂಗಳಾದ ಮೇಲೆ ಗಂಡನಿಗೆ ಕೋಪ ಬಂದರೇ ಹೇಗೆ ವರ್ತಿಸುತ್ತಾನೆಂದು ತಿಳಿದಳು.

"ಐ ಡೋಂಟ್ ಕೇರ್, ನಿನ್ನ ಸಜೆಷನ್ ಅಲ್ಲ ನಂಗೆ ಬೇಕಿರೋದು. ಆ ಮೂರ್ಖನ್ನ ವಿವಾಹಕ್ಕೆ ಒಪ್ಪು. ಬನಶಂಕರಿಯಲ್ಲಿ ಹೊಸ್ದಾಗಿ ಕಟ್ಟಿರೋ ಮನೆ

ಅವ್ರಿಗೆ ವರದಕ್ಷಿಣೆಯಾಗಿ ಅಪ್ಪ ಕೊಡೋಕೆ ಸಿದ್ಧವಾಗಿದ್ದಾರೆ. ಅದ್ರ ಬೆಲೆ ಈಗಿನ ರೇಟಿಗೆ ಮೂವತ್ತು ಲಕ್ಷವಾಗುತ್ತೆ" ಎಂದ.

ಚಾರುಲತಗೆ ಮಾತಾಡಬೇಕೆನಿಸಲಿಲ್ಲ. ಸುಮ್ಮನೆ ಹೋಗಿ ಮಲಗಿದಳು. ಮನುಷ್ಯನಲ್ಲಿರೋ ವಿಕಾರಗಳಲ್ಲಿ ಇದು ಕೂಡ ಒಂದೆನಿಸಿತು. ಅವಳಿಗೆ ಅಣ್ಣನ ಸ್ವಭಾವ ಗೊತ್ತು. ಜೀವನದಲ್ಲಿ ಕೆಲವು ಮೌಲ್ಯಗಳನ್ನು ಇಟ್ಟು ಕೊಂಡಿದ್ದ. ಹಣದ ಆಸೆಗೆ ಅವನ್ನು ಬಲಿಗೊಡಲಾರ. ಅಂಥ ಪ್ರೇರಣೆಯನ್ನು ಹಚ್ಚಲು ಅವಳು ಸಿದ್ಧವಿಲ್ಲ.

ಮಲಗುವ ಮುನ್ನ ಮೂರ್ತಿ "ಲಗೇಜ್ ರೆಡಿ ಮಾಡ್ಕೋ. ಆರುಗಂಟೆಗೆ ಟ್ರೈನ್, ನಾವು ಐದು ಹತ್ತಕ್ಕೆ ಮನೆ ಬಿಡ್ಬೇಕು" ಸೂಚಿಸಿದ ಬಿಗುವಾಗಿಯೇ. ಮಂಚದ ಮೇಲೆ ಉರುಳಿಕೊಂಡವಳು ಮೇಲಕ್ಕೆ ಏಳಲಿಲ್ಲ. ಅಪ್ಪನ ಮನೆ ಮಾವನ ಮನೆ ಒಂದೇ ಊರು. ಎರಡು ಕಡೆಯು ಅವಳ ಬಟ್ಟೆ ಬರೆಗಳು ಇತ್ತು. ಇನ್ನ ಪ್ಯಾಕ್ ಮಾಡಲು ಏನಿದೆ ?

ಹತ್ತೇ ನಿಮಿಷದಲ್ಲಿ ಮಡದಿಯನ್ನು ಬಾಹುಗಳಲ್ಲಿ ತುಂಬಿ ಕೊಂಡ ಮೂರ್ತಿ. ಕಣ ಕಣಗಳಲ್ಲಿ ಉಸಿರಾಡಿದ. ಅದು ಬರೀ ಬಯಕೆಯೆನಿಸಿತು ಚಾರುಲತಾಗೆ.

ಬೆಳಿಗ್ಗೆ ಐದರ ಸುಮಾರಿಗೆ ಬಂದು ಪಕ್ಕದ ಮನೆಯವರು "ನಿಮ್ಗಂದ ಫೋನಿದೆ" ಕರೆದೊಯ್ದರು ಮೂರ್ತಿಯನ್ನ. ಐದು ನಿಮಿಷಗಳ ನಂತರ ಬಂದ ಅವನ ಮುಖದಲ್ಲಿ ಕಠಿಣತೆ ಇತ್ತು. "ಇಂದು ಕೂಡ ನಿಮ್ಮಮ್ಮ ಹೋಗ್ಬಂದ್ಲು. ಅಪ್ಪ, ಮಗ್ನ ನಿಲುವಿನಲ್ಲಿ ಯಾವ್ದೇ ಬದಲಾವಣೆ ಇಲ್ಲ. ಪೂಜಾ ನೆನ್ನೆ ಇಡೀ ದಿನ ಏನು ತಿನ್ನಲಿಲ್ಲ. ಚಾರುಲತ ಇಂದ್ಲೇ ಈ ಕೆಲ್ಸ ಆಗ್ಬೇಕು" ಫೋನ್‌ನಲ್ಲಿ ಮಗನಿಗೆ ಎಚ್ಚರಿಕೆ ನೀಡಿದರು.

ಒಳಗೆ ಬಂದವನೇ ಕ್ರಾಪ್‌ನ ಕೂದಲಲ್ಲಿ ಕೈ ಹಾಕಿ ಕಿತ್ತ. ಆರಾಮಾಗಿ ಸಾಗುತ್ತಿದ್ದ ದಾಂಪತ್ಯಕ್ಕೆ ಇಂಥ ಒಂದು ವಿಘ್ನ ! ಅವನಿಗೆ ಪೂರ್ತಿ ತಲೆ ಕೆಟ್ಟಂತಾಯಿತು.

"ಮಾವನವ್ರು ಏನ್ಹೇಳಿದ್ರು ?" ಸ್ನಾನ ಮಾಡಿ ತಲೆಗೆ ಟವಲು ಸುತ್ತಿಕೊಂಡು ಬಂದ ಚಾರುಲತ ಕೇಳಿದಳು. ಕೂತಿದ್ದವನು ಎದ್ದು ನಿಂತು, ಮುಷ್ಟಿ ಬಿಗಿ ಹಿಡಿದು ತೋರು ಬೆರಳೆತ್ತಿ "ಬಿ ಕೇರ್‌ಫುಲ್, ಪೂಜಾನ ನವೀನ್ ವಿವಾಹವಾಗ್ಲೇ ಬೇಕು. ಇಲ್ಲದಿದ್ದರೇ ಪರಿಣಾಮ ನೆಟ್ಟಗಾಗೋಲ್ಲ" ಎಂದವನು ಟವಲನ್ನು

ಹೆಗಲ ಮೇಲೆ ಹಾಕಿಕೊಂಡು ಸ್ನಾನಕ್ಕೆ ಹೋದ.

ತೀರಾ ಅವಿವೇಕಿಯಾಗಿ ಕಂಡ ಮೂರ್ತಿ. ಪ್ರತಿಯೊಬ್ಬ ವ್ಯಕ್ತಿಯ ಜೀವನದಲ್ಲಿ ವಿವಾಹಗಳು ಎಷ್ಟು ಮುಖ್ಯವೋ, ಸಂಗಾತಿಯ ಆಯ್ಕೆಯಲ್ಲಿ ಅವರವದೇ ಹೆಚ್ಚಿನ ಪಾಲು. ಇಷ್ಟು ಅರ್ಥವಾಗದೇ ?

ತೀರಾ ಬೇಸರದಿಂದಲೇ ರೆಡಿಯಾಗಿ ಮೂರ್ತಿಗೆ ಒಂದು ಕಪ್ ಕಾಫಿ ತಂದಿಟ್ಟಳು.

"ನವೀನ್ ಈಗಾಗ್ಲೇ ತನ್ನ ಸಂಗಾತಿಯನ್ನ ಆರ್ರಿ ಕೊಂಡಿದ್ದಾನೆ. ನಮ್ಮ ಹೋಗುವಿಕೆಯಿಂದ ಯಾವ್ದೇ ಪ್ರಯೋಜನವಾಗ್ದು. ಪೂಜಾಗೆ ಬೇರೆ ಸಂಬಂಧ ನೋಡೋಣ. ಒತ್ತಾಯದ ವಿವಾಹಗಳಿಂದ ಯಾರು ಸುಖಿಗಳು ಆಗೋಲ್ಲ." ಮುಂದಿನ ಚಿತ್ರವನ್ನು ಬಿಡಿಸಿಟ್ಟಳು ಅತ್ಯಂತ ನವಿರಾಗಿ.

ಕಾಫಿಯ ಕಪ್‌ನ ಗೋಡೆಗೆ ಎಸೆದ "ಅದ್ನ ಆಮೇಲೆ ಯೋಚ್ಸೋಣ. ನವೀನ್ ಪೂಜಾ ಮದ್ವೆ ಆಗ್ಲೇ ಬೇಕು. ಅವ್ನ ಜೊತೆ ಓಡಾಡಿ ಈಗ ತಪ್ಪಿ ಕೊಳ್ಳೋಕ್ಕಾಗೋಲ್ಲ" ಕನಲಿದ. ಮಾತು ಬೇಡವೆನಿಸಿತು ಚಾರುಲತಾಗೆ. ಆದರೆ ಅವನ ಮಾತಿನ ರೀತಿಗೆ ಗಾಬರಿಗೊಂಡಳು.

ನವೀನ್ ಸರಸಿ, ಸರಳ ಮಾತಿನವ. ಆಕರ್ಷಕವಾಗಿ ಹರಟುತ್ತಿದ್ದ. ಇವಳು, ಮೂರ್ತಿಯ ವಿವಾಹ ಗೊತ್ತಾದ ಮೇಲೆ ಪದೇ ಪದೇ ಬರುತ್ತಿದ್ದ ಪೂಜಾ ಅವನನ್ನ ಡ್ರಾಪ್ ಮಾಡುವಂತೆ ಗೋಗರೆಯುತ್ತಿದ್ದಳು. ಕೆಲವೊಮ್ಮೆ ಬಲವಂತ ಮಾಡಿ ಷಾಪಿಂಗ್‌ಗೆ ಕರೆದೊಯ್ಯುತ್ತಿದ್ದುದುಂಟು. ಒಂದೆರಡು ಸಲ ಕಾಡಿ ಬೇಡಿ ಫಿಲಂಗೆ ಕೂಡ ಹೋಗಿದ್ದರು ಜೊತೆಯಲ್ಲಿ. ಅವನ ಸ್ನೇಹಮಯ ಆಕರ್ಷಕ ವ್ಯಕ್ತಿತ್ವವನ್ನ ಇಷ್ಟಪಟ್ಟಿರಬಹುದು. ಇಲ್ಲ ಅವನನ್ನ ತಪ್ಪಿತಸ್ಥನನ್ನಾಗಿ ಮಾಡಿ ಶಿಕ್ಷೆ ವಿಧಿಸಲು ಸಾಧ್ಯವೇ ?

ಕಾಫಿ ಅಲ್ಲಿಯೇ ತಣ್ಣಗಾಯಿತು. ಸ್ಟೇಷನ್‌ಗೆ ಬಂದಾಗ ಟ್ರೈನ್ ಹೊರಟು ನಿಂತಿತ್ತು. ಇಬ್ಬರು ಹತ್ತಿದರು. ಯಾರ ಮುಖದಲ್ಲು ಗೆಲುವಿಲ್ಲ. ಹೆಚ್ಚಿನ ಆತಂಕ ಮೂರ್ತಿಗೂ ಇತ್ತು. ಇಲ್ಲಿ ತಂದೆಯ ಪ್ರೆಸ್ಟೀಜ್ ಜೊತೆ ಪೂಜಾಳ ಹಟವನ್ನು ಲೆಕ್ಕ ಹಾಕಬೇಕಿತ್ತು. ಏನು ಮಾತಾಡಬೇಕೋ ತಿಳಿಯದಾಯಿತು. ಕಿಟಕಿಯಿಂದ ಹೊರಗೆ ನೋಡುತ್ತ ಕೂತ.

ಇವನಿಗೆ ಕೆಲಸ ಸಿಕ್ಕಾಗ "ಇನ್ನ ಸಾಕು ಒಂಟೀ ಜೀವ್ನ, ಅಕೌಂಟ್ ಸೆಕ್ಷನ್‌ನಲ್ಲಿ ಕೆಲ್ಸ ಮಾಡ್ತಾ ಇರೋ ವಾಸುದೇವಯ್ಯನಿಗೆ ಒಬ್ಬ ಮಗ್ಳು ಇದ್ದಾಳೆ. ಅಂಥ ದೊಡ್ಡ ಅನ್ಕೂಲವೇನಿಲ್ಲ. ಒಳ್ಳೆ ಜನ, ಹುಡ್ಗೀನು ಚೆನ್ನಾಗಿದ್ದಾಳೆ. ನಿಮ್ಮಮ್ಮನಿಗೆ ಒಪ್ಪಿಗೆಯೇ, ನಿನೊಮ್ಮೆ ನೋಡಿ ಬಿಡು" ಅಂದರು.

ಚಾರುಲತ ನಿಜವಾಗಿಯು ಅವನ ಮನಸ್ಸಿಗೆ ಬಂದಳು. ಗಂಡಿನ ಕಡೆಯವರು ಏನು ಕೇಳದಿದ್ದರೂ ಸಾಕಷ್ಟು ಚಿನ್ನ ಹಾಕಿ, ಬೆಳ್ಳಿ ಹಾಕಿ ವರನಿಗೆ ಸಂಪ್ರದಾಯಿಕವಾಗಿ ಕೊಡಬೇಕಾದುದ್ದನ್ನ ಕೊಟ್ಟು ವಿವಾಹ ಮಾಡಿದ್ದರು. ಎರಡು ಮನೆಯ ನಡುವೆಯು ಉತ್ತಮ ಸಂಬಂಧವಿತ್ತು. ಯೋಗಿ ಬರುವಷ್ಟರ ಮಟ್ಟಿಗಿನ ಸ್ನೇಹ. ಎಲ್ಲವೂ ಚೆನ್ನಾಗಿದ್ದಾಗ ಹುಟ್ಟಿ ಕೊಂಡಿದ್ದು ಒಂದು ಸಮಸ್ಯೆ.

"ಹೇಳಿದ್ದು ನೆನಪಿದ್ಯಾ ?" ಪಿಸುದನಿಯಲ್ಲಿ ಉಸುರಿದಾಗ ಎದುರಿಗೆ ಕೂತ ನಡುವಯಸ್ಸಿನ ಹೆಣ್ಣು ಇವಳನ್ನ ದಿಟ್ಟಿಸಿದಳು "ಏನು ತಿಳ್ಕೋಬೇಡಮ್ಮ ನನ್ಮಗ್ಳು ನಿನ್ನಂಗೆ ಇದ್ಲು, ಇದೇ ವಯಸ್ಸು. ನಿನ್ನಷ್ಟೇ ನಾಜೂಕಾದ ಹುಡ್ಗಿ. ಎರಡ್ವರ್ಷಕ್ಕೆ ಮುನ್ನ ಆತ್ಮಹತ್ಯೆ ಮಾಡ್ಕೊಂಡ್ಲು" ಆಕೆಯ ಕಣ್ಣಿಂದ ಕೆನ್ನೆಯ ಮೇಲೆ ಉರುಳಿದ ಕಂಬನಿಯ ಬಿಂದುಗಳನ್ನು ನೋಡಿ ಷಾಕಾದಳು. "ಅಳ್ಬೇಡಿ, ಹುಟ್ಟಿನ ಜೊತೆ ಸಾವು ಕೂಡ ಖಚಿತವಾಗಿರುತ್ತೆ. ಇಲ್ಲಿ ಇರೋರು ತಾನೇ ಯಾರಿದ್ದಾರೆ ? ಏನಾಗಿತ್ತು ?" ವಿಚಾರಿಸಿದಳು.

"ಗಂಡ, ಅಪ್ಪ ಇಬ್ರೂ ಸೇರಿ ಕೊಂದ್ಬಿಟ್ರು" ಎಂದ ಆಕೆ ಕಣ್ಣಿಗೆ ಸೆರಗು ಹಚ್ಚಿದಾಗ ವಿಸ್ಮಿತಳಾದಳು. 'ಗಂಡ-ಅಪ್ಪ' ವಿರುದ್ಧ ದಿಕ್ಕಿನ ವ್ಯಕ್ತಿಗಳು. "ನಂಗೆ ಅರ್ಥವಾಗ್ಲಿಲ್ಲ" ಮೆಲುವಾಗಿ ನುಡಿದಳು.

ಅಳಿಯನ ಚರಿತ್ರೆ ಗೊತ್ತಿದ್ದು ಕೂಡ ಮಗಳನ್ನು ಧಾರೆಯೆರೆದು ಕೈ ತೊಳೆದು ಕೊಂಡಿದ್ದ ಹುಟ್ಟಿಸಿದ ಅಪ್ಪ. 'ನೂರೆಂಟು ಹುಡ್ಗೀ ಮಾಡೋದ್ರಲ್ಲಿ ವಯಸ್ಸು ಆಗಿ ಹೋಗುತ್ತೆ. ವಿವಾಹವಾದ್ಮೇಲೆ ಸರಿ ಹೋಗುತ್ತೆ' ಹೆಂಡತಿಗೆ ಕೊಟ್ಟ ಉತ್ತರ. ನಂತರ ಆ ಹೆಣ್ಣು ಅನುಭವಿಸಿದ್ದು ನೂರೆಂಟು ಕಷ್ಟ. ಕೊನೆ ಗೊಮ್ಮೆ ಬಂದವಳೇ 'ಅಪ್ಪ, ನೀನು ಮನೆ ಕೊಡ್ತೀನೀಂತ ಅವ್ರಿಗೆ ಪ್ರಾಮಿಸ್ ಮಾಡಿದ್ದೀಯಂತೆ. ಈಗ ಕೇಳ್ಕೋಗೂಂತ ಕಳ್ಸಿದ್ದಾರೆ' ಕಣ್ಣೀರು ಸುರಿಸಿದಾಗ ಅಟ್ಟ ಹಾರುವಂತೆ ಹಾರಾಡಿದ್ದ. ಮನೆ ಇದ್ದರೂ ಕೊಡಲು ಒಪ್ಪಲಿಲ್ಲ. ಅಳಿಯ ಮಹಾಶಯ ಬಿಡಲಿಲ್ಲ. ಕೊನೆಗೆ ಅವಳು ಆತ್ಮಹತ್ಯೆ ಮಾಡಿ ಕೊಂಡಳು.

ರವಾಗಿ ಅವಳ ಸಾವಿಗೆ ಯಾರು ಕಾರಣರಲ್ಲದಿದ್ದರೂ, ಆಕೆಯ ದೃಷ್ಟಿಯಲ್ಲಿ ಬ್ಬರು ಅಪರಾಧಿಗಳೇ.

ಕಣ್ಣೀರಿನೊಂದಿಗೆ ಆಕೆ ತೆಗೆದುಕೊಂಡ ನಿರ್ಧಾರ ಕೂಡ ತಿಳಿಸಿದಳು. "ನಾನು ಗ ಹಳ್ಳಿಯಲ್ಲಿ ಒಂಟಿಯಾಗಿ ಇದ್ದೇನೆ. ಮಗ್ಳು ಸತ್ತ ಮೇಲೆ ಅವರಿಬ್ರ ಮುಖಗಳನ್ನ ನಂಗೆ ನೋಡೋಕೆ ಇಷ್ಟವಾಗ್ಲಿಲ್ಲ."

ಹೆಚ್ಚು ಓದು ಬರಹವಿಲ್ಲದ ನಡು ವಯಸ್ಸಿನ ಹೆಣ್ಣು ತೆಗೆದುಕೊಂಡ ನಿರ್ಧಾರಕ್ಕೆ ಚಕಿತಳಾದಳು ಚಾರುಲತ.

ಮುಂದಿನ ಸ್ಟೇಷನ್‌ನಲ್ಲಿ ಮಾರಲು ಬಂದ ಕಿತ್ತಲೆ ಹಣ್ಣು, ಹೂವನ್ನ ಕೊಂಡು ಅವಳ ಕೈಯಲ್ಲಿಟ್ಟಳು. "ನನ್ನ ಮಗ್ಳುನ ನೋಡಿದಂಗಾಯ್ತು" ಎಂದು ಇಳಿದು ಹೋದಾಗ ಚಾರುಲತಗೆ ತಾಯಿಯ ನೆನಪಾಯಿತು.

ಸ್ಟೇಷನ್‌ನಲ್ಲಿ ಇಳಿಯುವಾಗ ನವೀನ್‌ನ ಕಂಡು ಅವಳಿಗೆ ಆಶ್ಚರ್ಯ. ಬಹುಶಃ ಬರುವ ವಿಚಾರ ಅವನಿಗೆ ತಿಳಿಸಿರಬಹುದೇ ? ಮೆಲ್ಲಗೆ ನೋಟ ಮೂರ್ತಿಯತ್ತ ಹರಿಸಿದಾಗ ಅವನು ಬೇರೆಡೆ ನೋಡುತ್ತಿದ್ದ. ಅದು ನಟನೆಯೆನಿಸಿತು. ಅವನು ತೀರಾ ಸರಸಿ, ಅವಳಿಗೆ ಬೋರಾದರೂ ಮಾತು ನಿಲ್ಲಿಸುತ್ತಿರಲಿಲ್ಲ, ಅಂಥವನು ಗಪ್‌ಚಿಪ್ಪಾಗಿ ಇದ್ದುದ್ದು ಖಂಡಿತ ಸರಿಯೆನಿಸಲಿಲ್ಲ.

"ಏಯ್, ಚಾರು...ಒಂದಿಷ್ಟು ವಿಷ್ಯ ತಿಳಿಸ್ದೇ ಸರ್‌ಪ್ರೈಜ್ ಮಾಡ್ಬೇಕೂಂತ ಬಂದಿರಾ ? ಥ್ಯಾಂಕ್ಯೂ....ಥ್ಯಾಂಕ್ಯೂ....ಇಲ್ಲೇ ಹಿಡಿದೆನಲ್ಲ" ಓಡಿ ಬಂದು ಅವಳ ಕೈಯಲ್ಲಿದ್ದ ಬ್ಯಾಗು ಕಸಿದುಕೊಂಡ ಏದುಸಿರು ಬಿಡುತ್ತ ನವೀನ್ ಸಂತೋಷದಿಂದ "ಹಲೋ, ಮೂರ್ತಿ...ಹೌ ಆರ್ ಯು ?" ಭುಜದ ಮೇಲೆ ಕೈ ಹಾಕಿದಾಗ ಸ್ವಲ್ಪ ಸರಿಸಿದವನು "ಲಗೇಜ್ ಇಳಿಸ್ಕೋ, ಟ್ಯಾಕ್ಸಿ ನೋಡ್ತೀನಿ" ಹೊರಟೇ ಬಿಟ್ಟ.

ನವೀನ್ ಬೆಪ್ಪಾದ. ಮದುವೆ ನಿಶ್ಚಯವಾದ ಮೇಲೆ ಮೂರ್ತಿ, ಅವನು ಫ್ರೆಂಡ್ಸ್ ತರಹ ಇದ್ದರು. ಆರಾಮಾಗಿ ಬೈಕ್ ಮೇಲೆ ಸುತ್ತಾಡಿದ್ದುಂಟು. ಜೊತೆ ಜೊತೆಯಾಗಿ ಮೂವೀ ನೋಡಿದ್ದುಂಟು. ಗಂಟೆ ಗಟ್ಟಲೇ ಹರಟೆಯೊಡೆದಿದ್ದುಂಟು. ತಕ್ಷಣದ ಈ ಬದಲಾವಣೆಗೆ ಕಾರಣವೇನು ?

"ಚಾರು, ಇದೇನಿದು ? ನಿಮ್ಮಿಬ್ಬರ ಮಧ್ಯೆ ಏನಾದ್ರೂ ಪ್ರೇಮ ಕಲಹಾನಾ?"

ಸನಿಹಕ್ಕೆ ಬಗ್ಗಿ ಪಿಸುಗುಟ್ಟಿದಾಗ ಆರಾಮಾಗಿ ನಕ್ಕು ಬಿಟ್ಟಳು. "ಹೇಳಿ, ಕೇಳಿ ಲೆಕ್ಚರರ್ ಅಲ್ವಾ ?" ಅಂದಳಷ್ಟೆ. ಅವನಿಗೇನು ಅರ್ಥವಾಗ ಲಿಲ್ಲ.

ಲಗೇಜ್ ಟ್ಯಾಕ್ಸಿಯಲ್ಲಿ ಹಾಕಿದ ಮೇಲೆ ಕಾಲರ್ ಸರಿ ಮಾಡಿಕೊಂಡು ಮೂರ್ತಿ "ನೀನು....ಬರ್ತೀಯಾ ?" ಎಂದ ನವೀನ್‌ನತ್ತ ತಿರುಗಿ. ಪಿಚ್ಚೆನಿಸಿತು ಅವನಿಗೆ "ಕಣೇ ಕೇಳು....ನೀವು ಕಂಡ್ಮೇಲೆ ಜಗತ್ತಿನಲ್ಲಿ ಎಂಥ ಕೆಲ್ಸವಿದ್ರೂ ಕ್ಯಾನ್ಸಲ್" ತೂರಿ ಕೂತ.

"ಸಾಬ್...." ಎಂದಾಗ ಡ್ರೈವರ್, ತಮ್ಮ ಮನೆಯ ಅಡ್ರೆಸ್ ಹೇಳಿದ ನವೀನ್. ತಕ್ಷಣ ಸರಿಪಡಿಸಿದ "ಬೇಡ, ಮೊದ್ಲು ನಮ್ಮ ಮನೆಗೆ ಹೋಗ್ಬೇಕು, ಅಪ್ಪ ಫೋನ್ ಮಾಡಿದ್ರು" ಎಂದ ಬಿಗಿದ ಮುಖದಿಂದಲೇ ಮೂರ್ತಿ. "ಅದೇ ಕರೆಕ್ಟು..." ಉಸುರಿದ ನವೀನ್.

ಎರಡು ಕಿಲೋ ಮೀಟರ್ ಕ್ರಮಿಸುವ ವೇಳೆಗೆ ಮೂರ್ತಿ ಮನಸ್ಸು ಬದಲಾಯಿಸಿದ "ಬೇಡ, ಮೊದ್ಲು ನಿಮ್ಮ ಮನೆಗೆ ಹೋಗೋಣ" ಎಂದ.

ಟ್ಯಾಕ್ಸಿ ನವೀನ್ ಮನೆಯ ಮುಂದೆ ನಿಂತಾಗ ಮೂರ್ತಿ ಇಳಿಯಲಿಲ್ಲ "ಅರ್ಜೆಂಟಾಗಿ ಅಪ್ಪನ್ನ ನೋಡೋದಿದೆ. ಸಾಧ್ಯವಾದ್ರೆ ಬೆಳಿಗ್ಗೆ ಬರ್ತೀನಿ, ಇಲ್ಲ ನೀನೇ...ಬಾ" ಎಂದು ಅವಳ ಬಟ್ಟೆಗಳಿದ್ದ ಸೂಟ್‌ಕೇಸ್ ಮಾತ್ರ ಇಳಿಸಿಕೊಟ್ಟ.

ಟ್ಯಾಕ್ಸಿಯ ಚಕ್ರಗಳು ಮುಂದಕ್ಕೆ ಉರುಳಿದವು. ಎಲ್ಲಾ ಸರಿಯಿಲ್ಲವೆನಿಸಿತು ಅವನಿಗೆ. ಇತ್ತೀಚಿನ ವಿದ್ಯಮಾನಗಳಿಂದ ಕಾರಣ ಸ್ಪಷ್ಟವಾಗಿತ್ತು. ಆದರೆ ಇಲ್ಲಿಯವರೆಗೂ ಹೋಗುತ್ತದೆಯೆಂದು ಮಾತ್ರ ತಿಳಿದಿರಲಿಲ್ಲ.

"ಏನಾದ್ರೂ ಬೇಜಾರ ?" ತಂಗಿಯನ್ನ ಕೇಳಿದ.

"ಅಂಥದೇನಿಲ್ಲ ! ಅಪ್ಪ ಮನೆಯಲ್ಲಿದ್ದಾರೇ, ತಾನೇ ?" ಕೇಳಿದಳು.

ವಾಸುದೇವಯ್ಯ ಮನೆಯಲ್ಲೇ ಇದ್ದರು. ಮಗಳನ್ನು ನೋಡಿ ಅವರಿಗೆ ತುಂಬ ಸಂತೋಷವೇ. ಒಂಟಿಯಾಗಿ ಬಂದಿದ್ದು ಮಾತ್ರ ಸರಿಯೆನಿಸಲಿಲ್ಲ.

"ಮೂರ್ತಿ ಎಲ್ಲಿ ?" ಹಿಂದಕ್ಕೆ ನೋಟ ಎಸೆದಾಗ "ಮೈ ಗಾಡ್, ಮಗ್ಳು ನಾನು ಇಷ್ಟುದ್ದ ನಿಮ್ಮ ಮುಂದೆ ನಿಂತಿದ್ದೀನಿ. ಅದ್ಬಿಟ್ಟು ಅಳಿಯನ ಬಗ್ಗೆ ಕೇಳ್ತೀರಲ್ಲ, ಅಪ್ಪ" ಎಂದು ಎಚ್ಚರಿಸಿದಾಗ ಸ್ವಲ್ಪ ಪೆಚ್ಚಾದರು.

ಮಗ, ಮಗಳಿಗೆ ತಟ್ಟೆಗಳನ್ನ ಹಾಕಿ ಬಡಿಸಿದ ನಂತರ ಇತ್ತೀಚಿನ ವಿದ್ಯಮಾನಗಳನ್ನ ಮಗಳ ಮುಂದಿಟ್ಟರು.

"ದಿವಿನಾದ ಸಂಬಂಧ ! ಪೂಜಾ ಒಳ್ಳೆ ಹುಡ್ಗಿ ! ಹಾಗಂತ ಬೇರೊಂದು ಹೆಣ್ಣಿಗೆ ಅನ್ಯಾಯ ಮಾಡೋಕ್ಕಾಗುತ್ತ ? ಆ ಹುಡ್ಗೀನು ನಮ್ಮ ನವೀನ್‌ನ ನಂಬಿಕೊಂಡಿದ್ದಾಳೆ. ಎಂದೋ ನಿಶ್ಚಯವಾದ ವಿವಾಹ."

ಚಾರುಲತ ತಲೆ ತಗ್ಗಿಸಿ ಕೂತಳು. ಯಾವುದು ಹೊಸ ವಿಷಯಗಳಲ್ಲ. ಇವಳ ಮದುವೆಯಲ್ಲಿನ ಓಡಾಟವೆಲ್ಲ ನೀರದದೆ. ಇದೆಲ್ಲ ಮರೆಯಲು ಸಾಧ್ಯವೇ?

ನವೀನ್ ಕೂಡ ತಂಗಿಯ ಕಡೆ ನೋಡುತ್ತ ಕೂತ. ಅವಳ ಅಭಿಪ್ರಾಯ ತೀರಾ ಮುಖ್ಯವೇ. ಒಂದು ರೀತಿಯ ಆತಂಕ ಅವನಿಗೆ.

"ಅದನ್ನೇನು ಬದಲಾಯಿಸ್ಬೇಡಪ್ಪ. ಆದಷ್ಟು ಬೇಗ ವಿವಾಹ ಮಾಡಿ ಮುಗ್ಸಿಬಿಡಿ. ಇವ್ರು ಎದುರು ಮನೆ ಕಡೆ ನೋಡೋದು ಕಮ್ಮಿ ಆಗುತ್ತೆ" ಛೇಡಿಸಿ ನಕ್ಕಳು. ಆದರೆ ವಾಸುದೇವಯ್ಯನಿಗೆ ಸಮಾಧಾನವೆನಿಸಲಿಲ್ಲ. "ಈಗಾಗ್ಲೇ, ನಿನ್ನ ಅತ್ತೆ ಮಾವನಿಗೆ ನನ್ಮೇಲೆ ಕೋಪ. ಬಹುಶಃ ಅದ್ಕೇ ಮಗನನ್ನ ಕೂಡ ಕರ್ಸಿಕೊಂಡಿರ್ಬೇಕು. ದಂತದ ಗೊಂಬೆಯಂಥ ಹುಡ್ಗಿಗೆ ಗಂಡು ಸಿಗೋದು ಕಷ್ಟನಾ ? ನಮ್ಮ ನವೀನ್ ಬೇಕನ್ನೋ ಹಟ ಯಾಕೆ?" ನೋವಿನಿಂದ ಉಸುರಿದರು. ಅನ್ಯೋನ್ಯವಾಗಿದ್ದ ಸಂಬಂಧ ವಿರಸ ಗೊಳ್ಳುವುದು ಬೇಕಿರಲಿಲ್ಲ.

"ನಾನು ಹೇಳ್ತೀನಿ, ಬಿಡು" ಸಮರ್ಥಿಸಿಕೊಂಡಳು. ಅಷ್ಟು ಸುಲಭ ವಲ್ಲವೆಂದು ಅರಿವಿಗೆ ಬಂದಿತ್ತು. ನೀರದ ಮನಸ್ಸು ಬದಲಾಯಿಸಿದರೇ ಮಾತ್ರ ಸಾಧ್ಯವಿತ್ತು. "ಆ ಬಗ್ಗೆ ತಲೆ ಕೆಡ್ಸಿಕೊಳ್ಳುವುದೇನು, ಬೇಡಪ್ಪ" ಸಮಾಧಾನ ಪಡಿಸಿ ರೂಮಿಗೆ ಹೋದಳು.

ಹಿಂದೆಯೇ ಬಂದ ನವೀನ್ "ಮೂರ್ತಿಗೂ ವಿಷ್ಯ ಗೊತ್ತಿತ್ತು. ಈ ವಿಷ್ಯದಿಂದ ನೀವಿಬ್ರೂ ಮನಸ್ಸು ಕೆಡ್ಸಿಕೊಳ್ಳೋದ್ಬೇಡ" ಅವಳ ಎರಡು ಕೈಗಳನ್ನ ಹಿಡಿದುಕೊಂಡಾಗ ನಕ್ಕುಬಿಟ್ಟಳು "ಅಂಥದೇನಿಲ್ಲ, ನೀನ್ಯಾಕೆ ತಲೆ ಕೆಡ್ಸಿಕೊಳ್ತಿ. ನಿನ್ನ ಕೆಲ್ಸದ್ದು ಏನಾಯ್ತು ?" ಕೇಳಿದಳು.

"ನರ್ಸಿಂಗ್ ಹೋಂಗೆ ಹೋಗ್ತಾ ಇದ್ದೀನಿ. ನನ್ನ ಖರ್ಚಿಗೆ ಆಗೋಷ್ಟು ಹಣ ಕೊಡ್ತಾ ಇದ್ದಾರೆ. ಅಪ್ಪನ ಪೆನ್‌ಷನ್‌ನಲ್ಲಿ ಮನೆ ನಡೀತಾ ಇದೆ, ಆರಾಮಾಗಿ. ಸಧ್ಯಕ್ಕೆ ಏನು ತೊಂದರೆ ಇಲ್ಲ. ನೀರದ ಅಷ್ಟಿಷ್ಟು ಸಹಾಯ ಮಾಡ್ತಾಳೆ ಮನೆ

ಕೆಲ್ಸದಲ್ಲಿ ಅಪ್ಪನಿಗೆ. ನಾನು ಕೈಯಲಾದ್ದು ಮಾಡ್ತೀನಿ. ಎಷ್ಟೋ ಜನ ಅಪ್ಪಂದಿರನ್ನ ನೋಡಿದ್ದೀನಿ. ನಮ್ಮಪ್ಪ ಪೂರ್ತಿ ಸ್ವಾರ್ಥಿ ಅಲ್ಲ" ಎಂದ ಅಭಿಮಾನದಿಂದ. ತಂದೆಯ ಬಗ್ಗೆ ಅವನಿಗೆ ಅಪಾರವಾದ ಗೌರವ.

ಅಣ್ಣ, ತಂಗಿ ಬೇರೆಲ್ಲ ವಿಷಯಗಳನ್ನ ಮಾತಾಡಿದರು. ರಾತ್ರಿ ಒಂದೆರಡು ಸಲ ಫೋನ್‌ನ ಬಳಿಗೆ ಹೋದವಳು ಹಿಂದಕ್ಕೆ ಬಂದಳು. ಮೊದಲಾಗಿದ್ದರೇ ನಾಲ್ಕು ಅಲ್ಲ ಹತ್ತು ಸಲ ಫೋನ್ ಮಾಡುತ್ತಿದ್ದ ಮೂರ್ತಿ ಇಂದು ಗಪ್ ಚಿಪ್ಪಾಗಿದ್ದ.

ಟ್ಯಾಕ್ಸಿ ಇತ್ತ ತಿರುಗಿದಾಗಲೇ "ಬೇಡ, ಅತ್ತೆ ಮಾವನ್ನ ನೋಡ್ಕೊಂಡು ಬೆಳಿಗ್ಗೆ ಇಲ್ಲಿಗೆ ಬರ್ತೀನಿ" ಎಂದಿದ್ದಳು. ಅವನದು ಪೂರ್ತಿ ನಿರಾಕರಣೆ "ಬೇಡ, ಅಲ್ಲಿಗೆ ಬೆಳಿಗ್ಗೆ ಬರ್‍ಬಹುದು" ವಿಚಿತ್ರವೆನಿಸಿದರೂ ತುಟಿ ಎರಡು ಮಾಡಿರಲಿಲ್ಲ.

ಊಟಕ್ಕೆ ಕೂಡುವ ಮುನ್ನ ವಾಸುದೇವಯ್ಯ "ಒಂದ್ಸಲ ಅಳಿಯಂದಿರಿಗೆ ಫೋನ್ ಮಾಡು. ನಾಲ್ಕು ಮಾತಾಡದೇ ನಂಗೆ ಸಮಾಧಾನವಿಲ್ಲ" ಹಾಟ್‌ಬಾಕ್ಸ್ ತಂದಿಟ್ಟವರು ಹೇಳಿದರು.

ಅದು ಅವಳಿಗೂ ಸರಿಯೆನಿಸಿತು. ಪ್ರತಿಷ್ಠೆಗಳೇ ಮನುಷ್ಯರಿಂದ ಮನುಷ್ಯರನ್ನ ದೂರ ಮಾಡುತ್ತದೆಯೆಂದು ಅವಳಿಗೆ ಗೊತ್ತು. ನಿಧಾನವಾಗಿ ಫೋನ್ ಬಟನ್‌ಗಳನ್ನೊತ್ತಿದಾಗ ಅವಳ ಅತ್ತೆ ಮೃಣಾಲಿನಿ "ಹಲೋ..." ಎಂದರು.

"ಹೇಗಿದ್ದೀರಾ, ಅತ್ತೆ ?" ಕೇಳಿದಳು.

"ಚೆನ್ನಾಗಿದ್ದೀನಿ, ನೇರವಾಗಿ ಇಲ್ಲಿಗೆ ಬರ್ಬೇಕಿತ್ತು. ಬೆಳಿಗ್ಗೆ ಬರ್ತೀಯಲ್ಲ" ಎಂದಾಗ "ಬರ್ತೀನತ್ತೆ, ಊಟ ಆಯ್ತ ? ಅವರಿಗೆ ಫೋನ್ ಕೊಡಿ" ಹೇಳಿದಳು.

ಎರಡು ನಿಮಿಷ ಸ್ತಬ್ಧ, ನಂತರ ಲೈನ್‌ಗೆ ಬಂದವರು ಆಕೆಯೇ "ಊಟ ಮಾಡ್ತಾ ಇದ್ದಾರೆ. ಬೆಳಿಗ್ಗೆ ಬರೋಕೆ ಹೇಳಿದ್ದಾನೆ" ಲೈನ್ ಕಟ್ ಆಯಿತು. ಎಂದೂ ಈ ರೀತಿ ನಡೆದುಕೊಂಡಿರಲಿಲ್ಲ.

ಆಗಾಗ ಈ ಮನೆ, ಆ ಮನೆಯ ಮಧ್ಯೆ ಫೋನ್‌ಗಳ ವಿನಿಮಯವಾಗುತ್ತ ಇತ್ತು. ಯುಗಂಧರ್, ವಾಸುದೇವಯ್ಯ ಸಾಕಷ್ಟು ಮಾತಾಡುತ್ತಿದ್ದರು. ಹೋಗಿ ಬರುವುದು ಇತ್ತು. ಹಬ್ಬಗಳಲ್ಲಿ ತಂದೆ, ಮಗ ಕೈ ಮಸಿ ಮಾಡಿಕೊಳ್ಳುವುದು ಬೇಡವೆಂದು ಅಲ್ಲಿಗೆ ಊಟಕ್ಕೆ ಬರಲು ಆಮಂತ್ರಣ ನೀಡುತ್ತಿದ್ದರು. ಅಂತು

ಅತ್ಯುತ್ತಮವಾದ ಬಾಂಧವ್ಯ...ಈ ರೀತಿ ಬದಲಾಗಿದ್ದು ನೋವಿನ ವಿಷಯವೇ.

ತಲೆಯ ಮೇಲೆ ಕೈಯೊತ್ತು ಕೂತುಬಿಟ್ಟರು ವಾಸುದೇವಯ್ಯ. ಅವರಿಗೆ ಮಗಳ ಭವಿಷ್ಯದ ಬಗ್ಗೆ ಭಯ.

ತಂದೆಯ ಬಳಿ ಬಂದು ಕೂತ ಚಾರುಲತ "ಛೆ, ಇಷ್ಟಕ್ಕೆಲ್ಲ ಈ ರೀತಿ ಕೂತರೇ ಹೇಗೆ ? ಪೂಜಾಳ ಹಟ ಅವ್ರುಗಳ ನೆಮ್ದೀ ಕೆಡಿಸಿದೆ. ನಾನ್ಹೋಗಿ ಬೆಳಗ್ಗೆ ಮಾತಾಡ್ತೀನಿ. ಊಟ ಮಾಡೋಣ ಬನ್ನಿ" ಬಲವಂತದಿಂದ ಎಬ್ಬಿಸಿಕೊಂಡು ಹೋದಳು.

ಊಟ ಯಾರಿಗೂ ರುಚಿಸಲಿಲ್ಲ. ಒಬ್ಬರ ಸಮಾಧಾನಕ್ಕೆ ಮತ್ತೊಬ್ಬರು ತಿಂದರಷ್ಟೆ. ಅಂದು ರಾತ್ರಿ ಯಾರು ನಿದ್ರಿಸಲಿಲ್ಲ. ಪದೇ ಪದೇ ಎದ್ದು ಕೂತ ನವೀನ್ 'ಅವ್ರುಗಳ ಒತ್ತಾಯದ ಪ್ರಕಾರ ಪೂಜಾಳನ್ನ ವಿವಾಹವಾಗಿ ಬಿಡಲೇ?' ಎದೆಯೊತ್ತಿಕೊಂಡು ಬಂತು. ಇವನನ್ನ ನಂಬಿಕೊಂಡಿದ್ದ ನೀರದ ಆತ್ಮಹತ್ಯೆ ಮಾಡಿಕೊಂಡು ಬಿಡಬಹುದು. ಬರೀ ಮಾನ, ಮರ್ಯಾದೆ ಗಾಗಿಯೇ ಬದುಕಿರುವ ಅವಳ ಮನೆಯವರೆಲ್ಲ ಎದೆಯೊಡೆದು ಸತ್ತಾರು - ಇಡೀ ಒಂದು ಕುಟುಂಬದ ದುರಂತಕ್ಕೆ ತಾನು ಕಾರಣವಾಗಬಹುದು.

ಆ ನಿರ್ಧಾರ ಸರಿಯಲ್ಲವೆಂದುಕೊಂಡು ಮತ್ತೆ ಮಲಗಿದ. ನಾಳೆಗಾಗಿ ಕಾದ.

ಬೇಗ ಸ್ನಾನ ಮುಗಿಸಿ ತಾನೇ ಚಟ್ನಿ ಮಾಡಿ ತಂದೆಗೂ, ನವೀನ್ಗೂ ದೋಸೆ ಹಾಕಿ ಕೊಟ್ಟ ಚಾರುಲತ "ನನ್ನ ಅಲ್ಲಿಗೆ ತಲುಪಿಸಿ, ನೀನು ನರ್ಸಿಂಗ್ ಹೋಂಗೆ ಹೋಗು" ಎಂದವಳು ಮನಸ್ಸು ಬದಲಾಯಿಸಿಕೊಂಡು "ನೀನೇನು ಬರೋದ್ಬೇಡ, ನಾನ್ಹೋಗ್ತೀನಿ ಬಿಡು" ಅಂದಳು.

"ಏನಾದ್ರೂ ತಿಳ್ಕೋಬಹ್ದು" ಎಂದ ಅನುಮಾನದ ಸ್ವರದಲ್ಲಿ.

"ನೀನು ನರ್ಸಿಂಗ್ ಹೋಂಗೆ ಹೋದೇಂತ ಹೇಳ್ತೀನಿ."

ಮಧ್ಯೆ ಪ್ರವೇಶಿಸಿದ ವಾಸುದೇವಯ್ಯ "ಒಬ್ಳು ಹೋಗೋದ್ಬೇಡ. ನಾನ್ಹೋಗ್ತೀನಿ ಜೊತೆಯಲ್ಲಿ. ಒಂದಿಷ್ಟು ವಾತಾವರಣ ತಿಳಿಯಾದರೇ ಸಾಕು" ಎಂದರು. ಅದು ಇಬ್ಬರಿಗೂ ಸರಿಯೆನಿಸಿತು.

ಮೂವರು ಮನೆಯಿಂದ ಜೊತೆಯಾಗಿ ಹೊರಟರು, ಬೇರೆ ಬೇರೆ ಆಟೋ

ಏರಿದರು. ಯುಗಂಧರ್, ಮೃಣಾಲಿನಿ ಸ್ವಲ್ಪ ಖಾರವಾಗಿಯೇ ಅವರನ್ನ ದಂಡಿಸಿದ್ದರು.

"ನಮ್ಮ ಹುಡ್ಗಿಗೆ ಇದಕ್ಕಿಂತ ಉತ್ತಮವಾದ ಸಂಬಂಧಗಳ್ನ ತರಬಲ್ಲೆ. ಆದರೆ ಪೂಜಾ ನವೀನ್ ಇಷ್ಟಪಟ್ಟಿದ್ದಾಳೆ. ನೀರದ ನಿಮ್ಮ ಸೊಸೇಂತ ಘೋಷಣೆ ಮಾಡ್ಲಿಲ್ವಲ್ಲ. ಸುಮ್ನೇ ತಲೆ ಯಾಕೆ ಕೆಡಿಸ್ಕೋತೀರಿ ? ನನ್ಮಗನಿಗೆ ಲಕ್ಷಾಂತರ ವರದಕ್ಷಿಣೆ ಕೊಡೋ ಜನರಿದ್ರೂ...ಒಂದು ಪೈಸೆ ತಗೊಳ್ದೇ ಸೊಸೆಯನ್ನಾಗಿ ಮಾಡಿಕೊಳ್ಲಿಲ್ವಾ ? ಅದೆಲ್ಲ ಮನಸ್ಸಿನಲ್ಲಿ ಇರ್ಲಿ."

ಇದನ್ನೆಲ್ಲ ಮಗಳ ಮುಂದೆ ಹೇಳಿ ಅವಳ ಮನಸ್ಸನ್ನ ನೋಯಿಸಲು ಇಚ್ಛಿಸದ ವಾಸುದೇವಯ್ಯ ಉಗುಳು ನುಂಗುತ್ತ ಅವರ ಮನೆ ತಲುಪುವವರೆಗೂ ಮೌನವಹಿಸಿದರು.

ಬಾಗಿಲಲ್ಲಿ ಭವ್ಯವಾದ ಸ್ವಾಗತವೇ ಸಿಕ್ಕಿತು. ಇಡೀ ರಾತ್ರಿ ಕುಟುಂಬ ದವರೆಲ್ಲ ಚರ್ಚಿಸಿ ಒಳ್ಳೆ ಮಾತಿನಿಂದಲೇ ಒಪ್ಪಿಸಲು ನಿರ್ಧರಿಸಿದ್ದರು. ಒಪ್ಪದಿರುವುದಕ್ಕೆ ಅವರು ಕೊಡುವ ಕಾರಣ ಸರಿಯೆನಿಸಿರಲಿಲ್ಲ.

ಬಗ್ಗಿ, ಅತ್ತೆ ಮಾವಂದಿರ ಕಾಲಿಗೆ ಚಾರುಲತ ನಮಸ್ಕರಿಸಿದಾಗ ಇಬ್ಬರು 'ದೀರ್ಘ ಸುಮಂಗಲೀ ಭವ, ಎರಡು ಮಕ್ಕಳನ್ನ ಹೆತ್ತು ಸುಖವಾಗಿರು' ಎಂದು ಮನಃಪೂರ್ತಿಯಾಗಿ ಆಶೀರ್ವದಿಸಿದರು. ಈ ವಿಷಯ ಪ್ರಸ್ತಾಪ ವಾಗುವ ಮುನ್ನಿನ ದಿನದವರೆಗೂ ಸೊಸೆಯ ಮೇಲೆ ಬ್ರಹ್ಮಾಂಡವಾದ ಪ್ರೀತಿ ಇತ್ತು, ಅಕ್ಕರೆ ಇತ್ತು, ಅವಳಪ್ಪ ಅಣ್ಣ ತಮ್ಮ ಮಗಳನ್ನ ನಿರಾಕರಿಸಿದ ಕೂಡಲೇ ಸೊಸೆಯ ಬಗ್ಗೆ ಕೆಂಡಮಂಡಲವಾಗಿದ್ದರು.

ಸ್ವಲ್ಪ ಬಿಗುವಾಗಿಯೇ ವಾಸುದೇವಯ್ಯನವರನ್ನ ಮಾತಾಡಿಸಿದರು. "ಅಣ್ಣ, ತಂಗಿ ಹೊರ್ಗಡೆ ಹೋಗಿದ್ದಾರೆ. ತಂಗಿಯೆಂದರೆ ನಮ್ಮ ಮೂರ್ತಿಗೆ ಪಂಚಪ್ರಾಣ" ಮೃಣಾಲಿನಿ ಒತ್ತಿ ಹೇಳಿದ ಉದ್ದೇಶ ತಂದೆ ಮಗಳಿಗೆ ಸುಲಭ ವಾಗಿ ಅರ್ಥವಾಯಿತು. ಪೆಚ್ಚು ನಗೆ ಬೀರಿದರು ಇಬ್ಬರು.

"ಕೂತ್ಕೋಪ್ಪ..." ಎಂದು ಹೇಳಿದ ಚಾರುಲತ ಒಳಗೆ ಹೋದಳು. ಹಿಂಬಾಲಿಸಿ ಬಂದ ಮೃಣಾಲಿನಿ "ಬಿಸಿ ಇಡ್ಲಿ ಆಗಿದೆ, ತಗೊಂಡ್ಹೋಗಿ ಕೊಡು" ಎಂದರು. ಅತ್ತೆಯ ಕಡೆ ತಿರುಗಿದ ಅವಳು ಬ್ಯಾಗ್‌ನಲ್ಲಿದ್ದ ಉಪ್ಪಿನಕಾಯಿ ಬಾಟಲಿಗಳನ್ನ ತೆಗೆದಿಟ್ಟು "ಅಪ್ಪ, ಹಾಕಿದ್ರು, ಮಾವನೋರಿಗೆ ಇಷ್ಟಾಂತ ತೆಗ್ದು

ಇಟ್ಟಿದ್ರು" ಎಂದಳು. ಇದೇನು ಈ ತರಹ ಉಪ್ಪಿನಕಾಯಿ ಬಾಟಲುಗಳು ಬರುತ್ತಿದ್ದುದು ಮೊದಲ ಸಲವಲ್ಲ.

"ನಿನ್ನ ತಂದೆಗೆ ಅವ್ರನ್ನ ಕಂಡರೇ ಬಹಳ ಅಭಿಮಾನ. ಇದು ಹೀಗೇ ಮುಂದುವರಿಯೋದು ಮಾತ್ರವಲ್ಲ, ಮತ್ತಷ್ಟು ಬಿಗಿಯಾಗ್ಬೇಕು" ಅರ್ಥ ಗರ್ಭಿತವಾಗಿ ಹೇಳಿ ಹಾಟ್ ಬಾಕ್ಸ್‌ನಿಂದ ಇಡ್ಲಿಗಳನ್ನ ತೆಗೆದು ಪ್ಲೇಟಿಗೆ ಹಾಕಿದಾಗ ತಡೆದಳು "ತಿಂಡಿ ಆಯ್ತು, ಅತ್ತೆ. ಬರೀ ಕಾಫಿ ಸಾಕು."

"ಬೇಡ, ಹಾರ್ಲಿಕ್ಸ್ ಬೆರ್‍ಸಿ ಕೊಡ್ತೀನಿ. ಪದೇ ಪದೇ ಕಾಫಿ ಕುಡ್ಯೋದು ಒಳ್ಳೇದಲ್ಲ" ಎಂದು ತಾವೇ ಹಾರ್ಲಿಕ್ಸ್ ಬಾಟಲೆತ್ತಿಕೊಂಡಾಗ ಎದೆಯ ಮೇಲೆ ಕೈಯಿಟ್ಟುಕೊಂಡು 'ಈ ಶಾಂತಿ ಸದಾ ಇರಲಿ' ಎಂದು ದೇವರನ್ನ ಬೇಡಿಕೊಂಡಿದ್ದು ಭಕ್ತಿಯಿಂದ.

ಹಾರ್ಲಿಕ್ಸ್ ಲೋಟಗಳನ್ನ ಒಯ್ದು ತಾನೇ ಅವರ ಮುಂದಿನ ಟೀಪಾಯಿ ಮೇಲಿಟ್ಟಳು. ಯಾವಾಗ ಸಿಡಿಯುವುದೋ, ಕಾವಲಿಯ ಮೇಲೆ ಕೂತಂಗೆ ಇದ್ದರು ವಾಸುದೇವಯ್ಯ. ಕಡ್ಡಿ ಎರಡು ತುಂಡಾಗುವಂತೆ ಮಾತಾಡುವ ಸ್ವಭಾವ ಯುಗಂಧರ್‌ದೆಂದು ಅವರಿಗೆ ಗೊತ್ತು.

ಲೋಟಗಳು ಬರಿದಾದ ಮೇಲೆ "ಹಾಗೇ ಒಂದು ಸುತ್ತು ಹಾಕ್ಕೊಂಡು, ಒಂದಿಷ್ಟು ತರಕ್ಕಾರಿ ಹಿಡಿದು ಬಂದ್ಬಿಡೋಣ. ಅವ್ನ ಕರ್ಕಂಡ್ ಹೋದರೇ ನಡು ಮಧ್ಯಾಹ್ನವಾಗಿ ಬಿಡುತ್ತೆ. ಅವ್ನ ಚೌಕಾಶಿಯಲ್ಲಿ" ಎದ್ದರು.

ಅಂಥ ಆರಾಮ ಸ್ಥಿತಿಯಲ್ಲಿರಲಿಲ್ಲ ವಾಸುದೇವಯ್ಯ.

"ಇಲ್ಲ, ಇಲ್ಲೊಬ್ಬ ಸ್ನೇಹಿತನ್ನ ನೋಡ್ಬೇಕು. ಬಹಳ ದಿನದಿಂದ ಈ ಪ್ರೋಗ್ರಾಂ ಮುಂದಕ್ಕೆ ಹಾಕ್ಕೊಂಡು ಬಂದಿದ್ದೀನಿ. ಇಂದು ಅವಕಾಶ ಮಾಡಿ ಕೊಡಿ" ಎಂದರು.

ಯುಗಂಧರ್ ಜೋರಾಗಿ ನಕ್ಕರು "ಆಯ್ತು, ನಿಮ್ಮನ್ನ ಡ್ರಾಪ್ ಮಾಡಿ ನಾನು ಮಾರ್ಕೆಟ್‌ಗೆ ಹೋಗ್ತೀನಿ. ಹಿಂದಿರುಗೋ ವೇಳೆಗೆ ನಿಮ್ಮಗಳ ಮಾತುಕತೆ ಮುಗಿದಿದ್ದರೇ ಕರ್ಕಂಡ್ ಬರ್ತೀನಿ" ಎಂದಿದ್ದಕ್ಕೆ ಹ್ಞೂಗುಟ್ಟಿದರು.

ಫಿಯೆಟ್ ಕಾರು ಹೊರಟಾಗ ಅತ್ತೆ ಸೊಸೆ ಒಳಗೆ ಬಂದರು.

ಅಷ್ಟರಲ್ಲಿ ಪಕ್ಕದ ಮನೆಯಾಕೆ ಕೊಬ್ಬರಿ ಮಿಠಾಯಿ ಪಾಕ ತೋರಿಸಿ ಕೊಡಲು ಮೃಣಾಲಿನಿನ ಕರೆದೊಯ್ದಿದ್ದರಿಂದ ಕುಕ್ಕರಿಸಿದಳು ಚಾರುಲತ ಸೋತಂತೆ.

ಯುಗಂಧರ್ ಬಗ್ಗೆ ಅವಳಿಗೆ ಗೊತ್ತು. ಸ್ವಲ್ಪ ಪ್ರತಿಷ್ಠೆಯ ಮನುಷ್ಯ, 'ನಾನು' ಅನ್ನುವ ಅಹಂಕಾರ ಸ್ವಲ್ಪ ಜಾಸ್ತಿ ಅನ್ನೋದು ಬಿಟ್ಟರೇ ಒಳ್ಳೆಯವರೇ. ಒಂದು ಪ್ರೈವೇಟ್ ಸಿಮೆಂಟ್ ಫ್ಯಾಕ್ಟರಿಯಲ್ಲಿ ಒಳ್ಳೆ ಪೋಸ್ಟ್‌ನಲ್ಲಿದ್ದು ರಿಟೈರ್ಡ್ ಆದವರು. ಒಂದೆರಡು ದೇವಸ್ಥಾನಗಳ ಟ್ರಸ್ಟಿಗಳು...ಗಾಯನದ ಸಮಾಜದ ಸೆಕ್ರೆಟರಿ. ಲಯನ್ಸ್‌ಗೆ ಮಾಜಿ ಗೌರ್ನರ್. ಇಂಥ ಹಲವು ಗೌರವಗಳು ಅವರಿಗೆ ಲಭ್ಯ. ಸ್ವಲ್ಪ ಮುಂಗೋಪ, ಒಂದಿಷ್ಟು ಹಟ - ಅವರ ಸದ್ಗುಣಗಳನ್ನೆಲ್ಲ ಹೋಮ ಕುಂಡಕ್ಕೆ ಎಸೆದು ಬಿಡುತ್ತಿತ್ತು.

ಈ ಸ್ವಭಾವದ ಪರಿಚಯ ಚಾರುಲತಗೆ ಇದ್ದುದ್ದರಿಂದ ಹೆದರುತ್ತಿದ್ದಳು. ಸ್ವಲ್ಪ ಮೂರ್ತಿ ಅವಳ ಪರ ನಿಂತರೆ ಧೈರ್ಯವಾಗಿ ಎದುರಿಸಬಹುದಿತ್ತು. ತಾತ್ಕಾಲಿಕ ಅನುಮಾನ ಕಾಡುತ್ತಿತ್ತು. ಮೂರ್ತಿ ವಾಚಾಳಿ ಮಾತ್ರವಲ್ಲ, ವಾಗ್ಮಿ ಕೂಡ. ಯಾವುದೇ ವಿಷಯವನ್ನ ತಗೊಂಡರೂ ಅರ್ಥವತ್ತಾಗಿ, ಆಕರ್ಷಕವಾಗಿ ಮಾತಾಡಬಲ್ಲ. ಕೆಲವೊಮ್ಮೆ ತಾನು ಅವನಿಗೆ ವಿದ್ಯಾರ್ಥಿಯಾ ಗಿದ್ದರೇ ಚೆನ್ನಾಗಿರುತ್ತಿತ್ತು ಎಂದುಕೊಳ್ಳುತ್ತಿದ್ದುದುಂಟು.

ಮೃಣಾಲಿನಿ ಬರುವ ಮುನ್ನವೇ ಅಣ್ಣ, ತಂಗಿ ಬಂದರು. ತಬ್ಬಿ ಮುದ್ದಾಡುತ್ತಿದ್ದ ಪೂಜಾ ಇಂದು "ಯಾವಾಗ್ಬಂದಿದ್ದು ಅತ್ತಿಗೆ ? ನೇರವಾಗಿ ಇಲ್ಲಿಗ್ಬಂದು ಅಲ್ಲಿಗೆ ಹೋಗ್ಬಹುದಿತ್ತು" ಸಣ್ಣ ಆಕ್ಷೇಪಣೆ ಎತ್ತಿದಾಗ ಮೂರ್ತಿಯೇ ಉಸುರಿದ "ನಾನೇ ಬಿಟ್ಟು ಇಲ್ಲಿಗ್ಬಂದೆ. ಸ್ಟೇಷನ್‌ನಲ್ಲಿಯೇ ಕಾರು ಕೊಟ್ಬಂಗೆ ಬಂದಿದ್ದ ನಫೀಸ್."

ತಾನು ತಂದಿದ್ದ ಹೊಸ ಡ್ರೆಸ್‌ಗಳ ಪ್ಯಾಕೆಟ್‌ಗಳನ್ನ ಅವಳ ಮುಂದೆ ಹಿಡಿಸಿಟ್ಟು ಪೂಜಾ "ಈ ಕಲರ್ ನಂಗೆ ಚೆನ್ನಾಗಿ ಕಾಣ್ಸೋಲ್ವಾ ?" ಭುಜದ ಮೇಲೆ ಹಾಕ್ಕೊಂಡು ಕೇಳಿದಾಗ "ನೀನು ಯಾವ ಡ್ರೆಸ್ ಹಾಕಿದ್ರು ಚೆನ್ನಾಗೇ ಇರ್ತೀಯಾ! ಗುಡ್ ಪರ್ಸನಾಲಿಟಿ ನಿಂದು" ಹೊಗಳಿದಳು ಚಾರುಲತ. ಅದರಲ್ಲಿ ಉತ್ಪ್ರೇಕ್ಷೆಯೇನು ಇರಲಿಲ್ಲ. ನ್ಯಾಚುರಲ್ಲಾಗಿ ಅವಳು ಚೆನ್ನಾಗಿದ್ದಳು.

"ಅದ್ನ, ನೀವು ನಿಮ್ಮಣ್ಣನಿಗೆ ಹೇಳ್ಬೇಕು" ದಢಾರನೇ ಪ್ಯಾಕೆಟ್‌ಗಳನ್ನ ರೂಮಿಗೆ ಕೊಂಡೊಯ್ದು ಹಾಸಿಗೆಯ ಮೇಲೆ ಎಸೆದಳು ಪೂಜಾ "ಸಾರಿ ಪೂಜಾ, ಈಗಾಗ್ಲೇ ನನ್ನದ್ದೆ ನಿಶ್ಚಯವಾಗಿದೆ. ಎದುರು ಮನೆ ನೀರಜಾನ ನೀನು ನೋಡಿರಬೇಕಲ್ಲ.

ಅವ್ಳೇ ಹೆಣ್ಣು" ಎಂದಿದ್ದ ನವೀನ್. ಮುಂದಿದ್ದ ಐಸ್‌ಕ್ರೀಮ್ ಬಿಟ್ಟು ಬಂದು ಮತ್ತಷ್ಟು ಗಟ್ಟಿಯಾಗಿದ್ದಳು.

"ಅಪ್ಪ, ನಾನು ಡಾ|| ನವೀನ್‌ನ ಇಷ್ಟಪಟ್ಟಿದ್ದೀನಿ. ಮಿಕ್ಕಿದ್ದು ನಿಮ್ದು" ಎಂದು ತಾಯ್ತಂದೆ ಮುಂದೆ ಹೇಳಿದಾಗ ಅವರು ಹರ್ಷಿಸಿದ್ದರು. "ಗುಡ್ ಸೆಲೆಕ್ಷನ್, ಲಗ್ನದ ಡೇಟ್ ಫಿಕ್ಸ್ ಮಾಡಿ ಛತ್ರ ಹುಡ್ಕಿಕೋಬೇಕು" ಆ ಆನಂದ ಉಳಿಯಲಿಲ್ಲ. ಅತ್ಯಂತ ನಮ್ರವಾಗಿಯೇ ಇರೋ ವಿಷಯ ತಿಳಿಸಿ ನಿರಾಕರಿಸಿದ್ದು ಇವರ ಪಾಲಿಗೆ ದೊಡ್ಡ ಅಪರಾಧವಾಗಿತ್ತು. ಈ ಸೋಲನ್ನ ಅವರು ಮಾತ್ರ ಒಪ್ಪಿಕೊಳ್ಳಲಾರರು.

ಎದುರು ಕೂತಿದ್ದವನು ಬಂದು ಪಕ್ಕದಲ್ಲಿ ಕೂತ.

"ವಿಷ್ಯ ಪ್ರಸ್ತಾಪಿಸಿದ್ಯಾ ?" ಕೇಳಿದ.

ಇಲ್ಲವೆಂದು ತಲೆಯಾಡಿಸಿದ ಚಾರುಲತ "ವಿಷ್ಯ ನಂಗೆ ಗೊತ್ತಿದೆ. ಹೇಗೆ ಪ್ರಸ್ತಾಪಿಸ್ಲಿ ? ಸಮಾಜದ ಮುದ್ರೆಯೊಂದು ಬಿದ್ದಿಲ್ಲ ಅಷ್ಟೆ, ಅವ್ಳು ನಮ್ಮ ಮನೆ ಸೊಸೆನೇ ಆಗ್ಬಿಟ್ಟಿದ್ದಾಳೆ. ನನ್ನ ಪ್ರಯತ್ನ ಒಂದು ಹೆಣ್ಣಿನ ಹೃದಯ ಒಡ್ಯೋದು ಆಗುತ್ತೆ. ಪ್ಲೀಸ್, ಸ್ವಲ್ಪ ಅರ್ಥ ಮಾಡ್ಕೊಳ್ಳಿ" ವಿಷಯನ ಅರ್ಥ ಮಾಡಿಸುವ ಪ್ರಯತ್ನ ಮಾಡಿದಳು.

"ನನ್ನ ರೇಗಿಸ್ತಾ ಇದ್ದೀಯಾ ! ಇಲ್ಲಿ ಬೇರೆ ಹೆಣ್ಣಿನ ಪ್ರಸಕ್ತಿ ಬೇಡ. ವಯಸ್ಸಿನಲ್ಲಿ ಆಕರ್ಷಣೆ, ಪ್ರೇಮ ಪ್ರಕರಣಗಳು ಸಹಜ. ಅವೆಲ್ಲ ವಿವಾಹ ದಲ್ಲಿ ಮುಕ್ತಾಯವಾಗ್ಬೇಕೂನ್ನೋದೇನಿಲ್ಲ. ಸುಮ್ನೇ ನವೀನ್, ಪೂಜಾನ ಮದ್ವೆಯಾಗ್ಲಿ. ಇದ್ರಿಂದ ಅವ್ನ ಭವಿಷ್ಯಕ್ಕೆ ಒಳ್ಳೆದಾಗುತ್ತೆ. ಜಯನಗರದ ಮನೆನ ನರ್ಸಿಂಗ್‌ಹೋಂ ಆಗಿ ಪರಿವರ್ತಿಸಿ ಕೊಡೋಕೆ ಅಪ್ಪ ಒಪ್ಕೊಂಡಿ ದ್ದಾರೆ. ಇಂಥ ಅದೃಷ್ಟ ಎಷ್ಟು ಜನಕ್ಕೆ ?" ಹೆಮ್ಮೆ ಅಭಿಮಾನದಿಂದ ಹೇಳಿ ಕೊಂಡ.

ಚಾರುಲತ ಎದ್ದು ಹೋಗಿ ಹೊರಗೆ ನಿಂತಳು. ತಣ್ಣನೆಯ ಗಾಳಿ ಕೂಡ ಬಿಸಿಯೆನಿಸಿತು. ನೂರು ಕನಸುಗಳನ್ನ ಹೊತ್ತು ಈ ಮನೆಯ ಹೊಸಿಲನ್ನ ತುಳಿದಾಗ, ಇಲ್ಲಿನ ಜನರೆಲ್ಲ ದೇವತೆಗಳಂತೆ ಭಾಸವಾಗಿದ್ದರು. ಈಗ ಇಕ್ಕಟ್ಟಿಗೆ ಸಿಕ್ಕಿಸಲು ಆಯುಧಗಳನ್ನ ಹಿಡಿದು ನಿಂತಿದ್ದು ನೋಡಿ ಅವಳಿಗೆ ಹೆದರಿಕೆಯಾಗಿತ್ತು. ಪ್ರತಿಷ್ಠೆ, ಹಟದ ಮಧ್ಯೆ ಅವಳ ದಾಂಪತ್ಯ ನಲುಗಿ ಹೋಗುತ್ತಿತ್ತು.

ಬಂದ ಮೃಣಾಲಿನಿ ಹೊರಗೆ ಸಪ್ಪಗೆ ನಿಂತ ಸೊಸೇನಾ ನೋಡಿ "ಯಾರು...

ಬಂದಿಲ್ವಾ ?" ಕೇಳಿದರು. ಬೆಚ್ಚಿ ಬಿದ್ದು ನಗುವನ್ನು ಮುಖದ ಮೇಲೆ ತಂದುಕೊಂಡು "ಪೂಜಾ, ಅವ್ರು....ಬಂದಿದ್ದಾರೆ" ಒಳಗೆ ಬಂದಳು.

ಅಡಿಗೆಯ ಮನೆಯ ಛಾರ್ಜ್‌ನ ತಾನು ವಹಿಸಿಕೊಂಡು ಮೂವರನ್ನ ಮಾತಾಡಲು ಬಿಟ್ಟಳು. ನಿಶ್ಚಿತಾರ್ಥದ ದಿನಾಂಕದಿಂದ ಹಿಡಿದು, ಅಂದಿನ ಅಡಿಗೆ, ಕರೆಯಬೇಕಾದ ಜನರ ಬಗ್ಗೆಯೆಲ್ಲ ಮಾತುಕತೆ ನಡೆಯುತ್ತಿದ್ದಾಗ ಚಾರುಲತ ಎದೆಯ ಬಡಿತ ಜೋರಾಯಿತು. ಅವಳ ಕಣ್ಣಂಚು ಒದ್ದೆಯಾಯಿತು. ನೂರು ಕನಸುಗಳನ್ನ ಕಟ್ಟಿಕೊಂಡಿದ್ದ ಅವಳ ಭವಿಷ್ಯವನ್ನ ಚೂರು ಚೂರು ಮಾಡಲು ಸಿದ್ಧರಿದ್ದರು ಸರಿಯೆನಿಸಲಿಲ್ಲ. ತಾನು ಕೈ ಜೋಡಿಸಲು ಸಮ್ಮತಿಸಲಿಲ್ಲ ಅವಳ ಮನಸ್ಸು.

ಊಟಕ್ಕೆ ಕೂತಾಗ ಅತ್ತೆಯನ್ನ ಕೂಡ ಬಲವಂತದಿಂದ ಕೂಡಿಸಿ ತಾನೇ ಬಡಿಸಲು ನಿಂತ ಸೊಸೆಗೆ ಹೇಳಿದರು ಯುಗಂಧರ್ "ನಿಮ್ಮಪ್ಪ ಫ್ರೆಂಡ್ ಜೊತೆ ಎಲ್ಲೋ ಹೋಗಿದ್ದ" ಎನ್ನುತ್ತ ಉಪ್ಪಿನಕಾಯಿ ರಸದೊಂದಿಗೆ ಅನ್ನ ಕಲೆಸತೊಡಗಿದರು. ಅವರಿಗೆ ಉಪ್ಪಿನಕಾಯಿ, ತೊಕ್ಕಿನೊಂದಿಗೆ ಅನ್ನ ಕಲೆಸಿ ತಿನ್ನುವುದು ರೂಢಿ.

ಕಾರಣ ಗೊತ್ತಿದ್ದ ಅವಳು ಮಾತೇ ಆಡಲಿಲ್ಲ. ಎರಡು ದಿನದಲ್ಲಿ ಗುಬ್ಬಚ್ಚಿಯಂತಾಗಿದ್ದರು. ಅವರೇನು ಮಾಡುವ ಸ್ಥಿತಿಯಲ್ಲಿರಲಿಲ್ಲ.

"ಅತ್ತಿಗೆ ಕೈನ ಅಡಿಗೆ ಬ್ರಹ್ಮಾಂಡ" ಲೊಟ್ಟೆ ಹಾಕಿದಳು ಪೂಜಾ.

"ಬರೀ ಸುಳ್ಳು, ನಾನಿನ್ನು 'ಎಲ್' ಬೋರ್ಡು. ಅಲ್ಲಿ ಅಪ್ಪ ಆರಾಮಾಗಿ ಬೇಯ್ಸಿ ಹಾಕ್ತಾ ಇದ್ರು. ಇಲ್ಲಿ ಅತ್ತೆನೇ ಒಂದಿಷ್ಟು ಟ್ರೈನಿಂಗ್ ಕೊಟ್ಟಿದ್ದು" ಎಂದಳು ಗಂಡನ ಕಡೆ ನೋಡುತ್ತ. ಅವನು ಇವಳತ್ತ ನೋಟ ಹರಿಸಲೇ ಇಲ್ಲ.

ಇವರುಗಳ ಊಟವೇನೋ ಮುಗಿಯಿತು. ಮೃಣಾಲಿನಿ ಅವಳನ್ನ ಕೂಡಿಸಿ ಬಡಿಸಿದರೂ, ತುತ್ತು ನುಂಗಲು ಕಷ್ಟವಾಯಿತು. ಈಗ ವಿಷಯ ಪ್ರಾರಂಭವಾಗುತ್ತದೆ. ಹೇಗೆ, ಪ್ರತಿಕ್ರಿಯಿಸುವುದು ?

"ಬೆಳಿಗ್ಗೆ ತಿಂಡಿ ಜಾಸ್ತಿ ಆಯ್ತು. ಅಪ್ಪನ ಕೈನ ಕಾಯಿ ಚಟ್ನಿ ಬಹಳ ರುಚಿ. ಒಂದೆರಡು ಜಾಸ್ತಿನೇ ತಿಂದೆ" ಊಟ ಸರಿಯಾಗಿ ಮಾಡದಿದ್ದಕ್ಕೆ ಸಮಜಾಯಿಷಿ ಕೊಟ್ಟು ಎದ್ದು ಹೋದಳು.

ರೌಂಡ್ ಟೇಬಲ್ಲು ಕಾನ್ಫರೆನ್ಸ್‌ಗೆ ಕೂತರು. ಗಂಡ, ಹೆಂಡತಿ ಕಣ್ಣಲ್ಲಿಯೇ ಸನ್ನೆ ಮಾಡಿಕೊಂಡರು, ಯಾರು ಮೊದಲು ಪ್ರಾರಂಭಿಸುವುದೆಂದು ? ಆಮೇಲೆ ಯುಗಂಧರ್ ತಾವೇ ಮುಂದಾದರು.

"ಪೂಜಾ, ನವೀನ್ ಒಬ್ಬರನ್ನೊಬ್ರು ಇಷ್ಟಪಟ್ಟಿದ್ದಾರೆ" ಎಂದ ಕೂಡಲೇ ತಲೆಯೆತ್ತಿದಳು. ಇದು ನಿಜವಲ್ಲ ! ತುಟಿ ತೆರೆಯಲಾಗಲಿಲ್ಲ ಅವಳಿಂದ. "ಎದುರು ಮನೆ ಹುಡ್ಗೀ, ಅವ್ರ ಮನೆಯವ್ರು ನಿಮ್ಮ ತಾಯಿ ಸತ್ತಾಗ ಸಹಾಯ ಮಾಡಿದ್ರಂತೆ. ಆ ಕೃತಜ್ಞತೆಯನ್ನ ಉರುಳು ಹಾಕ್ಕೊಂಡಿದ್ದಾರೆ, ಅಪ್ಪ ಮಗ. ಅದರ ಬಿಡುಗಡೆಗೆ ನಿನ್ನ ಸಹಾಯಬೇಕು" ಚಮತ್ಕಾರದಿಂದ ಮಾತಾಡಿದರು.

ಸ್ವರವೆತ್ತುವುದೇ ಅವಳಿಗೆ ಕಷ್ಟವೆನಿಸಿತು.

"ಅದ್ಕೇ ನಿಮ್ಮಿಬ್ಬರನ್ನ ಕರ್‍ಸಿಕೊಂಡಿರೋದು. ನೀನೊಂದು ಸ್ವಲ್ಪ ಹೇಳು. ಎರಡು ಮನೆಗಳ ಸಂಬಂಧ ಮತ್ತಷ್ಟು ಗಟ್ಟಿ ಆಗುತ್ತೆ" ದಾಳ ಉರುಳಿಸಿದರು ಸರಾಗವಾಗಿ.

ಬಗ್ಗಿಸಿದ ತಲೆಯನ್ನ ಪ್ರಯಾಸದಿಂದ ಮೇಲೆತ್ತಿ ಚಾರುಲತ "ನಂಗೆ ಪೂಜಾ, ನವೀನ್ ಒಬ್ಬರನ್ನೊಬ್ರು ಇಷ್ಟಪಟ್ಟಿರೋದು ಗೊತ್ತಿಲ್ಲ. ಅವ್ನು ನೀರದಾನ ವಿವಾಹವಾಗೋ ವಿಷ್ಯ ಗೊತ್ತಿತ್ತು. ಇದ್ಕೆ ಎರಡು ಮನೆಯವ್ರ ಒಪ್ಪಿಗೇನು ಸಿಕ್ಕಿತ್ತು. ಪೂಜಾಗೆ ಬೇರೆ ಸಂಬಂಧ ನೋಡಬಹುದಲ್ಲ" ಅಷ್ಟೇ ನುಡಿದಿದ್ದು.

"ಡ್ಯಾಮಿಟ್...." ಯುಗಂಧರ್ ಷುರು ಮಾಡಿದರೆಂದರೆ ಅವಳಣ್ಣನನ್ನ ಅಪರಾಧದ ಕಟ್ಟೆಯಲ್ಲಿ ನಿಲ್ಲಿಸಿದರು. ಅವನೊಬ್ಬ 'ಅವಿವೇಕಿ, ಸ್ಕೌಂಡ್ರಲ್' ಇಂಥ ಪದಗಳೆಲ್ಲ ಬಳಕೆಯಾಗಿ ಬಿಟ್ಟವು. ಉಸಿರೆತ್ತುವುದಾಗಲಿಲ್ಲ. "ಇವೆಲ್ಲ ಬೇಡ ! ಪೂಜಾ ನವೀನ್‌ನ ಇಷ್ಟಪಟ್ಟಿದ್ದಾಳೆ. ನೀನು ನಿಂತು ವಿವಾಹ ಮಾಡ್ಬೇಕು. ಅದು ಸೊಸೆಯಾಗಿ ನಿನ್ನ ಕರ್ತವ್ಯ" ಜಡ್ಜ್‌ಮೆಂಟ್ ತಿಳಿಸಿ ಎದ್ದರು.

ಒಬ್ಬೊಬ್ಬರು ಒಂದೊಂದು ಕಡೆ ನಡೆದಾಗ, ಸೋತವಳಂತೆ ರೂಮಿಗೆ ಬಂದ ಚಾರುಲತ, ಗಂಡನ ಮಡಿಲಲ್ಲಿ ತಲೆ ಇಟ್ಟಳು. ಅವನ ಕೈ ನವಿರಾಗಿ ಆಡಿತು ಕೂದಲಲ್ಲಿ.

"ಅಪ್ಪ ಹೇಳಿದ್ದು, ಅರ್ಥವಾಯಿತಲ್ಲ. ನವೀನ್‌ಗೆ ಒಂದಿಷ್ಟು ಬುದ್ಧಿ ಹೇಳು. ನಂತರವೇ ಇಲ್ಲಿಂದ ಹೊರಡೋ ಮಾತು" ಎಂದ ಮೃದುವಾಗಿ.

ಕಠೋರವಾಗಿದೆಯೆನಿಸಿತು ಅವನ ಛಾಯ್ಸ್ "ಪ್ಲೀಸ್, ಸ್ವಲ್ಪ ಅರ್ಥ ಮಾಡ್ಕೊಳ್ಳಿ" ಎದ್ದಳು.

"ಅರ್ಥಮಾಡಿಕೊಳ್ಳೋಕೆ ಏನಿಲ್ಲ. ನನ್ನ ತಂಗಿ ನೀರದಾಗಿಂತ ಯಾವುದ್ರಲ್ಲಿ ಕಮ್ಮಿ ಇದ್ದಾಳೆ ? ಸ್ವತಃ ಅಪ್ಪ, ಅಮ್ಮ ಹೋಗಿ ಕೇಳಿದ್ದಾರೆ. ಅವು ಕೂಡ ನವೀನ್‌ನ ವಿವಾಹವಾಗ್ಬೇಕೂಂತ ಹಟ ಹಿಡಿದಿದ್ದಾಳೆ. ಇದು ನಡೆಯದಿದ್ದರೇ ತುಂಬ ತೊಂದರೆಗೆ ಒಳಗಾಗ್ಬೇಕಾಗುತ್ತೆ" ಎಚ್ಚರಿಕೆ ನೀಡಿದ.

ಮಂಚ ಬಿಟ್ಟು ಎದುರಿಗೆ ಇದ್ದ ಛೇರ್‌ನ ಮೇಲೆ ಕೂತಳು. ಎಂಥ ಸುಂದರ ಬದುಕನ್ನ ನೀಡಿದ ಮೂರ್ತಿ ಇವರೇನಾ, ಎಂದು ಯೋಚಿಸುವಂತಾಯಿತು, ಬೇರೆಯವರು ಕರುಬುವಂಥ ಪ್ರೀತಿ ತೋರಿದ್ದ. ಅಭಿಮಾನ ಸುರಿಸಿದ್ದ.

"ಚಾರು, ಏನ್ಬೇಕಾದ್ರೂ ಹೇಳು. ತವರು ಮನೆಗೆ ಹೋಗೋ ಸುದ್ದಿ ಮಾತ್ರ ಬೇಡ. ನಿನ್ನ ನಿಮಿಷ ಅಗಲಿರೋದು ಕೂಡ ನನ್ನಿಂದ ಸಾಧ್ಯವಿಲ್ಲ" ಕಣ್ಣಲ್ಲಿ ಕಣ್ಣಿಟ್ಟು ಹೇಳುತ್ತಿದ್ದ ಅವನ ತೋಳಲ್ಲಿ ಸುಖಿಯಾಗಿದ್ದಳು. ಯಾವ ಧೂಮಕೇತು ವಕ್ಕರಿಸಿತು ತಮ್ಮ ಸುಖೀ ದಾಂಪತ್ಯಕ್ಕೆ, ಎಂದು ಹೆದರಿದಳು.

ಕ್ಷಣಗಳು ನಿಮಿಷಗಳು ಗಂಟೆಗಳು ಕಳೆದರೂ ಅಲ್ಲಿಂದ ಅಲ್ಲಾಡಲಿಲ್ಲ. ಮುಂದೇನು ? ಬಹುಶಃ ನೀರದಾಗೆ ಇಂಥ ಮಾತು ಕಿವಿಗೆ ಬಿದ್ದರೇ - ಛೆ, ಯೆನಿಸಿತು.

ಕತ್ತಲು ಮುಸುಕುವ ಮುನ್ನ ಯುಗಂಧರ್ "ನಾಳಿದ್ದು ದಿನ ಚೆನ್ನಾಗಿದೆ, ನಿಶ್ಚಿತಾರ್ಥ ಇಟ್ಟುಕೊಳ್ಳೋಣ" ಸೂಚನೆ ನೀಡಿದರು ಸೊಸೆಗೆ "ಮಾವ, ಒಂದ್ಮಾತು...ಬಹುಶಃ ಈಗಾಗ್ಲೇ ಅವ್ನು ನೀರದಾನ ವಿವಾಹ ಮಾಡ್ಕೋ ಬೇಕೂಂತ ತೀರ್ಮಾನ ಮಾಡಿದ್ದಾನೆ. ನಾನು ಹೇಳಿದ್ರೂ...ಒಪ್ಪೋಲ್ಲ" ಎಂದಳು.

"ಒಪ್ಪಿಸೋದು ನಂಗೆ ಗೊತ್ತಿದೆ ! ಸುಮ್ನೇ ಹಟ ಮಾಡೋದ್ಬೇಡ. ಅತ್ತು ಕರ್ದು ಒಪ್ಸು. ಇಲ್ಲ ನಿನ್ನ ಬಾಳು ಬಿರುಗಾಳಿಗೆ ಸಿಕ್ಕಿದ ತರಗೆಲೆಯಾಗಿ ಬಿಡುತ್ತೆ" ಯುಗಂಧರ್ ಅಂದಾಗ ಸಿಡಿಲು ಬಡಿದಂತಾಯಿತು ಚಾರುಲತಗೆ. ತಾನು ತಿಳಿದ ವ್ಯಕ್ತಿಗಿಂತ ಭಿನ್ನವಾದ ವ್ಯಕ್ತಿತ್ವವಿದೆ, ಈ ಮನುಷ್ಯನಲ್ಲಿ ಎಂದು ಕೊಂಡಳು.

"ಏಯ್ ಮೂರ್ತಿ, ನಿನ್ನ ಹೆಂಡ್ತಿನ ಕರ್ಕೊಂಡ್ಹೋಗಿ ಅವ್ಳ ಅಪ್ಪನ ಮನೆಯಲ್ಲಿ ಬಿಟ್ಬಾ. ಒಂದಿಷ್ಟು ಬುದ್ಧಿ ಹೇಳ್ಲಿ. ಬರೀ ಈ ಯುಗಂಧರ್‌ನ ಒಳ್ಳೆಯತನ ಮಾತ್ರ ನೋಡಿದ್ದಾರೆ, ಇನ್ನೊಂದು ಮುಖದ ಪರಿಚಯವಾಗ್ಲಿ! ನಂಗೆ ನನ್ಮಗ್ಳು

ಮುಖ್ಯ. ಅವ್ರಿಗೆ ಹಾಗೇಂತ ಅನ್ನಿಸಿದ್ದರೇ...ಮದ್ವೆಗೆ ಒಪ್ಪಿಕೊಳ್ಳಿ" ಚಾಟಿಯೇಟುನಂತಿತ್ತು ಅವರ ಮಾತುಗಳು. ಮಗಳ ಮೇಲಿನ ಪ್ರೇಮ ಅವರ ವಿವೇಕವನ್ನ ಕಬಳಿಸಿ ಬಿಟ್ಟಿತ್ತು. ಮುಂದೆ ಎಂದಾದರೂ ತಾನು ಪಶ್ಚಾತ್ತಾಪ ಪಡಬಹುದೆನಿಸಲಿಲ್ಲ ಆ ಕ್ಷಣ.

ರೂಮಿಗೆ ಹೋದ ಚಾರುಲತ ಸುಮ್ಮನೆ ಕೂತಳು. ಇವಳು ಒತ್ತಾಯ ವೇರಿದರೂ ನಂಬಿದ ಹೆಣ್ಣಿಗೆ ಮೋಸ ಮಾಡುವಂಥ ಹೀನ ಸಂಸತಿ ನವೀನ್‌ದು ಅಲ್ಲ. ಅವಳು ಕೂಡ ಒತ್ತಾಯವೇರಿ ನೈತಿಕವಾಗಿ ಪಾತಾಳಕ್ಕೆ ಇಳಿಯಲು ಇಚ್ಛಿಸಳು.

"ಹೋಗೋಣ್ವಾ ?" ಕೇಳಿದ.

ಅತ್ಯಂತ ನಿಧಾನವಾಗಿ ನೋಟವೆತ್ತಿ ಅವನತ್ತ ಹರಿಸಿ ಹತ್ತಿರಕ್ಕೆ ಹೋಗಿ "ನವೀನ್ ಸಮ್ಮತಿಸೋಲ್ಲ. ಎಲ್ಲಾ ತಿಳ್ದು ಕೂಡ ನಾವು ಇಂಥ ಆಫರ್ ಒಯ್ದರೇ, ಅವ್ನ ದೃಷ್ಟಿಯಲ್ಲಿ ತೀರಾ ಕೆಳ್ಗೇ ಇಳ್ದು ಬಿಡ್ತೀನಿ. ಇವನೊಬ್ಬ ಆರ್ಡಿನರಿ ಡಾಕ್ಟ್ರು. ಪೂಜಾಗೆ ಫಾರಿನ್ ರಿಟರ್ನ್ಡ್ ಡಾಕ್ಟರನ್ನ ಹುಡ್ಕಬಹ್ದು." ತೀರಾ ಮೆಲುವಾದ ಸ್ವರದಲ್ಲಿ ಉಸುರಿದಳು. ಅವನ ಬಾಯಿಂದ ಮಾತುಗಳೇ ಹೊರಡಲಿಲ್ಲ. ತಲೆ ಕೊಡವಿದ "ಅವ್ನ ಜೊತೆ ಯಾಕೆ ಓಡಾಡ್ದ ?"

"ಬನ್ನಿ, ಅವ್ನ ಮುಂದೆನೇ ತೀರ್ಮಾನ ಮಾಡೋಣ. ಬೇಕಾದರೆ ನಿಮ್ತಂಗಿನ ಕೂಡ ಕರ್ದುಕೊಳ್ಳಿ" ರೂಮಿನಿಂದ ಹೊರಗೆ ಹೋದವಳು ಪೂಜಾಳ ಕೋಣೆಗೆ ಹೋಗಿ "ಪೂಜಾ, ನವೀನ್ ನಿನ್ನತ್ರ ಪ್ರೇಮದಿಂದ ನಡ್ಡು ಕೊಂಡ್ನಾ?"

ಅತ್ತಿಗೆಯ ಕೇಳಿಕೆಗೆ ಸಿಡಿದು ಬಿದ್ದವಳಂತೆ ಎದ್ದಳು. ತಕ್ಷಣ ಕೂತು ಮುಖ ಮುಚ್ಚಿಕೊಂಡು ಬಿಕ್ಕುವುದರ ಜೊತೆಗೆ ರಂಪಾಟ ಷುರು ಮಾಡಿದಾಗ ಉಳಿದ ಮೂವರು ರೂಮಿನೊಳಕ್ಕೆ ಬಂದರು.

"ಏನಾಯ್ತು ?" ಮಗಳ ಪಕ್ಕದಲ್ಲಿ ಕೂತ ಯುಗಂಧರ್ "ಯಾಕೆ, ಸುಮ್ನೇ ಅವಳ್ನ ನೋಯಿಸ್ತಿ ? ಅವ್ಳ ಕಣ್ಣಲ್ಲಿ ನೀರು ಕಂಡರೇ ನಾನು ಬೆಂಕಿಯಾಗ್ಬಿಡ್ತೀನಿ. ಏನಾದ್ರೂ ಬುದ್ಧಿ ಹೇಳೋದು ಇದ್ದರೆ ನಿನ್ನಣ್ಣನಿಗೆ ಹೇಳು" ಸ್ವರವೇರಿಸಿದರು. ಮೊದಲ ಸಲ ಸೊಸೆಯ ವಿಷಯದಲ್ಲಿ ಒಂದೇ ದಿನ ಎರಡು ಬಾರಿ ಕೂಗಾಡಿದ್ದು ದಾಖಲೆಯೇ. ಮದುವೆಯಂದಿನಿಂದ ಬಹಳ ಪ್ರೀತಿಯಿಂದ ಕಂಡಿದ್ದರು.

ಚಾರುಲತ, ಮೂರ್ತಿ ಇಬ್ಬರು ಆಟೋದಲ್ಲಿ ಬಂದು ಇಳಿದಾಗ ನಿಂಬೆ

ಹಣ್ಣು ಹಚ್ಚಿ ಸೀಸೆಗೆ ಹಾಕುತ್ತಿದ್ದ ವಾಸುದೇವಯ್ಯ ಕೈಯೊರೆಸಿಕೊಂಡು ಬಾಗಿಲು ತೆರೆದರು ನಗು ಮುಖದಿಂದ.

"ಬನ್ನಿ....ಬನ್ನಿ....ಹೇಗಿದ್ದೀರಾ ? ನಾನೇ ಫೋನ್ ಮಾಡೋಣಾಂತ ಇದ್ದೆ" ಕೈಯ್ಯೊರ್‍ಸಿಕೊಂಡು ಅಲ್ಲೇ ಕೂತರು. ಸರಾಗವಾಗಿ ಮಾತಾಡುತ್ತಿದ್ದ ಮೂರ್ತಿ ಕೂಡ ಮಾತಾಡಲು ಚಡಪಡಿಸಬೇಕಾಯಿತು "ನವೀನ್ ಎಷ್ಟೊತ್ತಿಗೆ ಬರ್ತಾನೆ?" ವಿಚಾರಿಸಿದ.

"ಇನ್ನೇನು ಬಂದ್ಬಿಡ್ತಾನೆ. ನೀರದ ಅಮ್ಮ ಆಸ್ಪತ್ರೆಯಲ್ಲಿ ಅಡ್ಮಿಟ್ ಆಗಿದ್ದಾರೆ. ಅವ್ರನ್ನ ನೋಡೋ ಸಲುವಾಗಿ ಹೋಗೋಣಾಂತ ಹೇಳಿ ಹೋಗಿದ್ದ" ಎಂದರು.

ಮೂರ್ತಿಯ ಮುಖ ಮತ್ತಷ್ಟು ಬಿಗಿದುಕೊಂಡಿತು. ನೀರದ ವಿಷಯ ಬಂದಿದ್ದು ಅವನಿಗೆ ಇಷ್ಟವಾಗಲಿಲ್ಲ. ತೀರಾ ಸಂಬಂಧಪಡದ ಅವಳನ್ನೇ ದ್ವೇಷಿಸುವಂತಾಗಿತ್ತು.

ಚಾರುಲತನೆ ಒಳಗೆ ಹೋಗಿ ಕಾಫಿ ಮಾಡಿ ತಂದಳು. ಕುಡಿ ನೋಟದಲ್ಲಿ ಅವಳ ತುಟಿಯ ಜೇನನ್ನ ಈರುತ್ತ ಕಾಫಿ ಕುಡಿಯುವ ಮೂರ್ತಿ ಇಂದು ಅತ್ತ ನೋಟ ಕೂಡ ಹರಿಸಲಿಲ್ಲ.

"ಯಾವಾಗ ನಿಶ್ಚಿತಾರ್ಥ ಇಟ್ಟುಕೊಳ್ಳೋಣಾಂತ ಅಮ್ಮ ಕೇಳೋಕೆ ಕಳಿಸಿದ್ಳು. ಪದೇ ಪದೇ ನಂಗೆ ರಜೆ ಸಿಗೋಲ್ಲ" ಉಪಾಯದಿಂದ ವಿಷಯ ಎತ್ತಿದಾಗ, ವಾಸುದೇವಯ್ಯ ಮಗಳ ಕಡೆ ನೋಡಿದರು. ಅವಳು ನಿರ್ಲಿಪ್ತ ಳಾಗಿದ್ದಳು.

ಪೂರ್ತಿ ವಿಷಯ ತಿಳಿಸಿ ಅಳಿಯನ ನೆರವು ಕೇಳುವುದು ಅವರಿಗೂ ಸರಿಯೆನಿಸಿತು. ನೀರದ ಮನೆಯವರು ಎದುರು ಮನೆಗೆ ವಾಸಕ್ಕೆ ಬಂದಾಗಿ ನಿಂದ ಇಂದಿನವರೆಗಿನ ಎಲ್ಲಾ ಸಂಗತಿಯನ್ನ ತಿಳಿಸಿದರು.

"ಆ ಹುಡ್ಗೀನೇ ನಾನು ಸೊಸೆ ಅಂದ್ಕೊಂಡಿದ್ದೀನಿ. ನವೀನ್ ಕೂಡ ಅವಳನ್ನೇ ವಿವಾಹವಾಗೋದೂಂತ ನಿಶ್ಚಯಿಸಿದ್ದಾನೆ. ಇದೇನು ಹೊಸತಲ್ಲ. ಹಳೆಯದೇ. ನಿಮ್ಮಂದೆ ಬಂದು ವಿಷ್ಯ ಪ್ರಸ್ತಾಪಿಸೋವರ್ಗೂ ನಮ್ಗೇ ಅಂತ ಕಲ್ಪನೆನೇ ಇರ್ಲಿಲ್ಲ. ಎಂದೂ ತಮಾಷೆಗೂ ಕೂಡ ನವೀನ್ ನಿಮ್ಮ ತಂಗಿಯ ಪ್ರಸ್ತಾಪವೆತ್ತಿಲ್ಲ. ಇದಿಷ್ಟು ವಿಷ್ಯ. ನಮ್ಮ ನವೀನ್‌ನ ಫ್ರೆಂಡ್ ಒಬ್ಬ ಇದ್ದಾನೆ. ಅವ್ನು ಓದಿರೋದು ಮೆಡಿಸಿನ್. ತುಂಬ ಅನ್ಕೂಲವಂತ ಜನ. ಆ ಸಂಬಂಧದ ಬಗ್ಗೆ ಮಾತಾಡೋಣಾಂತ ಇದ್ದೀನಿ."

ವಾಸುದೇವಯ್ಯನ ಮಾತುಗಳನ್ನು ಕೇಳಿದ ಕೂಡಲೇ ಅವನ ಸಿಟ್ಟು ನೆತ್ತಿಗೇರಿತು. ವಿವೇಕ ಎಲ್ಲಿ ಸತ್ತಿತ್ತೋ, "ಅಪ್ಪಿಗೆ ತುಂಬ ಜನ ಇದ್ದಾರೆ. ನಿಮ್ಗೇ ಗಂಡು ಹುಡ್ಕೋ ರಿಸ್ಕ್ ಬೇಡ" ಎಂದವನೇ ಹೊರಟೇ ಬಿಟ್ಟ.

ಅಪ್ಪ, ಮಗಳು ಹಿಂದೆಯೇ ಬಂದರು. ಅವನು ಆಟೋ ಏರಿ ಕಣ್ಮರೆಯಾಗಿ ಬಿಟ್ಟ.

ಆರಾಮಾಗಿ ತೇಲುತ್ತಿದ್ದ ಅವಳ ದಾಂಪತ್ಯದ ದೋಣಿ ಆಕಸ್ಮಿಕ ಬಿರುಗಾಳಿಗೆ ತುತ್ತಾಗಿತ್ತು. ಅದರ ಭವಿಷ್ಯವೇನು ? ಇದು ತೀರಾ ತಾತ್ಕಾಲಿಕ, ಆಮೇಲೆ ನಿಧಾನವಾಗಿಯಾದರೂ ನಾರ್ಮಲ್ ಸ್ಥಿತಿಗೆ ಬರುತ್ತದೆಯೆಂದು ಸಮಾಧಾನ ಪಟ್ಟುಕೊಂಡಳು, ಅದು ಅಗತ್ಯವಾಗಿತ್ತು ಅವಳು ಇರುವ ಸ್ಥಿತಿಯಲ್ಲಿ.

* * *

ಯುಗಂಧರ್ ನಿರೀಕ್ಷೆ ತಲೆಕೆಳಗಾಗಿತ್ತು. ತೀರಾ ಮೃದುವಾಗಿರುವ ವಾಸುದೇವಯ್ಯ ಇಷ್ಟು ಗಟ್ಟಿಯಾಗಿ ನಿಲ್ಲುತ್ತಾನೆಂದು ಕೊಂಡಿರಲಿಲ್ಲ ಇದು ತೀರಾ ಅಹಂಕಾರವಾಗಿ ಕಂಡಿತು.

"ನೋಡಿದ್ಯಾ, ಹಸುವಿನಂಥ ಜನ ಅಂದೇ. ಈಗ ಅನುಭವಿಸು" ಹೆಂಡತಿಯ ಕಡೆ ತಿರುಗಿ ಅಂದರು. ಜೋರು ಮನುಷ್ಯನ ಮುಂದೆ ವಿಧೇಯಳೇ "ಸುಮ್ನೇ ಯಾಕೆ ಇಲ್ದ ಪಂಚಾಯಿತಿ ? ನಮ್ಮ ಪೂಜಾಗೆ ಇದ್ಕಿಂತ ಒಳ್ಳೆ ಸಂಬಂಧ ಸಿಗುತ್ತೆ" ಆಕೆಯ ಸಲಹೆ ಮೂರ್ತಿಗೂ ಸರಿಯೆನಿಸಿತು. "ಹಾಗೇ ಮಾಡೋಣ, ನಾವು ಮನಸ್ಸು ಮಾಡಿದ್ರೆ ಹದಿನೈದು ದಿನದೊಳ್ಗೇ ಪೂಜಾ ಮದ್ವೆ ಮಾಡ್ಬಹುದು. ನವೀನ್ ಡಾಕ್ಟ್ರು ಅನ್ನೋದೊಂದ್ಬಿಟ್ರೆ ಮತ್ತೇನಿದೇ ಅವ್ರಿಗೆ ? ನಾವೇ ತುಂಬ ರಿಸ್ಕ್ ತಗೋಬೇಕಾಗುತ್ತೆ."

ಅಣ್ಣನ ಮಾತುಗಳಿಗೆ ಕೂತಿದ್ದ ಪೂಜಾ ಬಿಧೀರನೆ ಎದ್ದು ಹೋದಳು. ಮೃಣಾಲಿನಿ ನಿಟ್ಟುಸಿರು ದಬ್ಬಿದರು.

"ಪಾರ್ಕ್, ಸಿನಿಮಾಂತ ಜೊತೆಯಲ್ಲಿ ತಿರುಗಿದ್ದಾರೆ. ಅದೇ ಪ್ರೇಮಾಂತ ಬಡಬಡಿಕೆ. ಅವ್ಳ ಸ್ವಭಾವ ನಿಂಗೆ ಗೊತ್ತೇ ಇದೆ. ಮೊದ್ಲಿನಿಂದ್ಲೂ ಹಟವೇ. ಕೇಳಿದ್ದು ಕೊಡಿಸ್ಲಿಲ್ಲಾಂತ ಹತ್ತು ವರ್ಷದ ಹುಡ್ಗಿಯಾಗಿದ್ದಾಗ್ಲೇ, ಮನೆ ಬಿಟ್ಹೋಗಿ ನಮ್ಮನ್ನ ಕಂಗಾಲು ಮಾಡಿದ್ಳು. ಈಗ್ಲೂ ಅದೇ.....ಭಯ" ನೆನಪಿಸಿಕೊಂಡರು ಮೃಣಾಲಿನಿ.

ಅದು ಮೂರ್ತಿಗೆ ತಿಳಿಯದ್ದೇನಲ್ಲ. ಈಗಲೂ ಅವಳು ಹಿಡಿದಿದ್ದೇ ಹಟ. ಅತಿಯಾದ ಮುದ್ದಿನ ಪ್ರಭಾವವ್ರೋ ! ಅವನಿಗೂ ಭಯವೇ. ಅವಳೇನಾದರೂ ಹೆಚ್ಚುಕಡಿಮೆ ಮಾಡಿಕೊಂಡರೇ ಸುಖವೆನ್ನುವುದೇ ಮರೀಚಿಕೆಯಾಗಿ ಬಿಡುತ್ತದೆ. ಎಂದೂ ತಾಯ್ತಂದೆ ಕ್ಷಮಿಸರು. ಅದಕ್ಕೆ ಪೂರ್ತಿ ಚಾರುಲತ ಕಾರಣಳಾಗಿ ಬಿಡುತ್ತಾಳೆ. ಇಂಥ ಯೋಚನೆಗಳಿಂದ ಕಂಗೆಟ್ಟ.

"ಈಗೇನ್ಮಾಡೋದು ?" ತಂದೆಯನ್ನ ಕೇಳಿದವನು ಅವರ ಉತ್ತರಕ್ಕೂ ಕಾಯದೆ ತಂಗಿಯನ್ನರಸಿಕೊಂಡು ಹೋದ ರೂಮಿಗೆ. ದಿಂಬಿನಲ್ಲಿ ಮುಖವನ್ನ ಹುದುಗಿಸಿ ಅಳುತ್ತಿದ್ದ ಪೂಜಾನ ನೋಡಿ ಅವನ ಕರುಳು ಕಿತ್ತು ಬಂತು. "ಪೂಜಾ ಸಮಾಧಾನ ಮಾಡ್ಕೋ. ನವೀನ್‌ಗಿಂತ ಒಳ್ಳೆ ಗಂಡುನ ಹುಡ್ಕೀ ತರ್ತೀನಿ. ನಿಂಗೆ ಅವ್ನು ಜುಜುಬಿಯೇ" ಒಲೈಸಿದ. ಅವಳ ಅಳು ಕಮ್ಮಿಯಾಗಲಿಲ್ಲ.

"ನಾನು ನವೀನ್ ಬಿಟ್ಟು ಬೇರೆಯವ್ರನ್ನ ಮದ್ವೆಯಾಗೋಲ್ಲ" ಘೋಷಿಸಿದಳು. ಕೆನ್ನೆಗೆ ಬಾರಿಸಿ ಬಿಡಬೇಕೆನಿಸಿತು. "ಬೇಡ ಬಿಡು, ಎಜುಕೇಷನ್ ಮುಂದುವರ್ಸು" ರೇಗಿದ. ಕೆಲವು ನಿಮಿಷಗಳಲ್ಲಿ ಮೆತ್ತಗಾದ. ಬೇಗ ಎಮೋಷನ್‌ಗೆ ಒಳಗಾಗುತ್ತಿದ್ದ ಅವಳ ತಲೆಯಲ್ಲಿ ಸದಾ ಆತ್ಮಹತ್ಯೆಯ ಯೋಚನೆಗಳು ಇರುತ್ತದೆಯೆಂದು ಅವನಿಗೆ ಗೊತ್ತು.

ಎದೆಗಾನಿಸಿಕೊಂಡು ಕಣ್ಣೀರು ತೊಡೆದ "ನವೀನ್, ನೀರದ ನನ್ನ ವಿವಾಹದಲ್ಲಿ ಜೊತೆ ಜೊತೆಯಾಗಿ ಓಡಾಡ್ತಾ ಇದ್ದಿದ್ನ ನೋಡಿದ್ದಿ. ಅವರಿಬ್ರೂ ಇಷ್ಟ ಪಟ್ಟಿದ್ದಾರಂತೆ. ಈಗ ನಾವೇನು ಮಾಡೋಕೆ ಸಾಧ್ಯ ?" ಅನುನಯಿಸಿದ.

"ಇಲ್ಲ, ಎಲ್ಲಾ ಸುಳ್ಳು ! ನವೀನ್ ನನ್ನ ಪ್ರೀತಿಸೋದು. ನೀರದ ಬಡತನ, ಅವ್ರ ಅಮ್ಮನಿಗೆ ಮಾಡ್ದ ಕೃತಜ್ಞತೆಯ ಉರುಳಲ್ಲಿ ಸಿಕ್ಕಿ ಬಿದ್ದಿದ್ದಾನೆ. ನೀನು ಮನಸ್ಸು ಮಾಡ್ಬೇಕಣ್ಣ" ಎಲ್ಲ ಭಾರ ಅವನ ಮೇಲೆ ಹಾಕಿ ಕಣ್ಣೀರು ಸುರಿಸಿದಾಗ ನಿರ್ಧಾರಕ್ಕೆ ಬಂದ ಮೂರ್ತಿ "ಆಯ್ತು, ನೀನು ಅಳೋದು ಅಂಥದೆಲ್ಲ ಮಾಡ್ಬೇಡ" ತಲೆ ಸವರಿ ಹೊರಗೆ ಬಂದ.

ಮೃಣಾಲಿನಿ, ಯುಗಂಧರ್ ದಿಕ್ಕು ತೋಚದವರಂತೆ ಕೂತಿದ್ದರು.

"ನೀನು ಸ್ವಲ್ಪ ಬಿಗಿಯಾಗಿದ್ದರೇ ಅವರುಗಳು ಬಗ್ಗುತ್ತಾರೆ" ಮಗನಿಗೆ ಸಲಹೆ ಕೊಟ್ಟ ಯುಗಂಧರ್ "ನೀನೇ ಒಂದ್ಸಲ ನವೀನ್ ಹತ್ರ ಮಾತಾಡು. ಅಷ್ಟಿಗೆ ಏನಾದ್ರೂ ಸಮಸ್ಯೆ ಇದ್ದರೇ ಬಗೆ ಹರಿಸೋಣ. ಆ ಹುಡ್ಗೀ ವಿವಾಹಕ್ಕೂ

ಒಂದಿಷ್ಟು ಹಣ, ಕಾಸಿನ ಸಹಾಯ ಮಾಡೋಣ" ಧಾರಾಳತನ ತೋರಿದರು.

ರಾತ್ರಿ ನಿದ್ದೆ ಬರದೇ ಬಹಳ ಹೊತ್ತು ಒದ್ದಾಡಿದ. ಎರಡು ಸಲ ಚಾರುಲತಯಿಂದ ಫೋನ್ ಬಂದಾಗ, ಸುಮ್ಮನೆ ಇಟ್ಟ. ಮೂರನೆ ಸಲ ಮೃಣಾಲಿನಿ "ಅವ್ನು ಮಲ್ಗಿ ಬಿಟ್ಟಿದ್ದಾನೆ" ಎಂದರು.

"ಊಟ ಆಯ್ತು, ಅತ್ತೆ" ವಿಚಾರಿಸಿದಳು.

"ಯಾರ್ಗೂ ಹಸಿವಿಲ್ಲಾಂದ್ರು" ಫೋನಿಟ್ಟೇ ಬಿಟ್ಟರು ಆಕೆ.

ಅವಳಿಗೆ ಸ್ವಲ್ಪ ಬಿಸಿ ತಾಕಲಿಯೆನ್ನುವ ಉದ್ದೇಶವೇ ಆಕೆಯದು. ತಂಗಿಯ ಅಳು, ಮಾತಿಗೆ ಮಾತ್ರ ನವೀನ್ ಒಪ್ಪಬಹುದು, ಒಪ್ಪಬೇಕು ಎನ್ನುವ ನಿರ್ಧಾರಕ್ಕೆ ಬಂದಿದ್ದರು.

ಮಗನ ರೂಮಿನಲ್ಲಿ ಬಂದು ಕೂತ ಮೃಣಾಲಿನಿ "ಚಾರುಲತದು ಫೋನ್. ಅವ್ಳ ಮೇಲೇನು ನಮ್ಗೇ ಕೋಪ ಇರ್ಲಿಲ್ಲ. ಸೊಸೆನ ಮಗ್ಳೂಂತ ತಿಳಿದೆ. ಅವ್ಳು ಅದ್ನ ತಿಳ್ಕೋಬೇಕು. ಸ್ವಲ್ಪ ನಮ್ಮ ಪರವಹಿಸಿ ನಾಲ್ಕು ಮಾತು ಆಡಲಿ. ನಾದಿನಿಗಾಗಿ ಅಷ್ಟು ಮಾಡಲಾರಳ ? ಮಾಡ್ಬೇಕೂ, ನೀನು ಸ್ವಲ್ಪ ಗಟ್ಟಿಯಾಗಿ ಹೇಳು. ಇಲ್ಲದಿದ್ದರೇ, ಈ ಹಟದ ಹುಡ್ಗಿನ ನಾವು ಕಳ ಕೋಬೇಕಾಗುತ್ತೆ" ಆಕೆ ಅಳಲು ಷುರು ಮಾಡಿದರು.

ಮಲಗಿದ್ದ ಮೂರ್ತಿ ಎದ್ದು ಕೂತ "ಯಾಕಮ್ಮ ಅಳ್ತೀಯಾ ? ಖಂಡಿತ ಒಪ್ಪಿಸ್ತಾಳೆ. ಇಲ್ಲದಿದ್ದರೇ ಮುಂದೆ ಜೀವ್ನ ಪೂರ್ತಿ ನರಳಬೇಕಾಗುತ್ತೆ" ಹಲ್ಲುಮ್ಮಿಯನ್ನ ಕಚ್ಚಿಡಿದು ಉಸುರಿದ.

ಹಿಂದೆಯೇ ಬಂದು ನಿಂತಿದ್ದ ಯುಗಂಧರ್ ತಮ್ಮದೊಂದು ಮಾತು ಸೇರಿಸಿದರು. "ನವೀನ್, ಚಾರುಲತ ಅಣ್ಣ ಅನ್ನೋ ಕಾರಣಕ್ಕೇನೇ ನಾವು ಆತ್ಮೀಯತೆಯಿಂದ ನೋಡ್ತಾ ಇದ್ದಿದ್ದು. ಆದರೆ ಎಂದೂ ಪೂಜಾನ ಅವ್ನಿಗೆ ಕೊಡೋ ಉದ್ದೇಶವಿರ್ಲಿಲ್ಲ. ಪೂಜಾ ತಿಳಿಸಿದಾಗ ಮೊದ್ಲು ಬೇಸರವಾದರೂ ಆಮೇಲೆ ಸಂತೋಷಿಸಿದ್ವಿ. ನಮ್ಗೇ ಇನ್ಮೇಲೆ ಇಬ್ರೂ ಗಂಡು ಮಕ್ಳು. ವಾಸುದೇವಯ್ಯನ್ನ ಕೂಡ ನಮ್ಮಲ್ಲಿ ಒಬ್ಬಾಂತ ತಿಳ್ದೆ."

ತಂದೆಯ ಮಾತುಗಳನ್ನ ಮೂರ್ತಿ ಸಾವಧಾನದಿಂದ ಕೇಳಿದ. ಅವನಿಗೆ ತನ್ನ ಜವಾಬ್ದಾರಿಯ ಅರಿವಾಯಿತು. ದಕ್ಷತೆಯಿಂದ ಪ್ರಾಮಾಣಿಕತೆಯಿಂದ ನಿರ್ವಹಿಸುವ ತೀರ್ಮಾನ ಮಾಡಿದ.

"ಸುಮ್ನೇ ವರಿ ಮಾಡಿಕೊಳ್ಳೋದ್ಬೇಡ. ನಾನು ಬೆಳಿಗ್ಗೆ ನವೀನ್‌ನ ಮೀಟ್ ಮಾಡ್ತೀನಿ" ತುಂಬು ಭರವಸೆಯನ್ನ ನೀಡಿದ.

ಆಮೇಲೆ ಮೂರ್ತಿಗೆ ನಿದ್ದೆ ಬರಲಿಲ್ಲ. ಬಂದಾಗಲೆಲ್ಲ ಓಡಿಯಾಡುತ್ತಿದ್ದ ನೀರದಾನ ನೋಡಿದ್ದ. ಅಂಥ ಪ್ರಜ್ವಲ ಬೆಳಕಿನ ಹುಡುಗಿಯಲ್ಲ. ಸುಮಾರಾದ ಬಣ್ಣ, ಕಣ್ಣು ಮೂಗು ತಿದ್ದಿದಂತಿತ್ತು. ಆದರೆ ಪೂಜಾಳಿಗೆ ಹೋಲಿಸಲು ಸಾಧ್ಯವಿರಲಿಲ್ಲ. ಹತ್ತು ಜನರಲ್ಲಿ ಸಿಲ್ಲಿಸಿದರೂ ಅವಳು ಚೆಲುವೆಯೇ.

ಬೆಳಿಗ್ಗೆ ಇವನು ಸ್ನಾನ ಮುಗಿಸುವ ವೇಳೆಗೆ ಎರಡು ಸಲ ಚಾರುಲತಯಿಂದ ಫೋನ್ ಬಂದಿತ್ತು. ಮೂರನೆ ಸಲ ಆ ಕಡೆ ಇದ್ದವನು ನವೀನ್ "ಮಾರಾಯಾ, ಚಾರು ರಾತ್ರಿ ಕೂಡ ಊಟ ಮಾಡ್ಲಿಲ್ಲ. ಈಗ್ಲೂ ತಿಂಡಿ ತಿನ್ದೇ ಉಪವಾಸ ಮಾಡ್ಬಿಡ್ತಾಳೆ. ಆಂಟಿ, ಅಂಕಲ್ ಕ್ಷಮೆ ಕೇಳ್ತೀನಿ. ಎಲ್ಲರೂ ಕೂಡಿಯೇ ಬನ್ನಿ" ಪ್ರೀತಿಯ ಆಹ್ವಾನ ನೀಡಿದ.

ನಿಷ್ಕರ್ಷೆಯ ಹಂತಕ್ಕೆ ಬರುವವರೆಗೂ ಬಿಗುವು ಸಡಿಲವಾಗದು "ನಾನು ಈಗ ಬರ್‍ತಾ ಇದ್ದೀನಿ. ನವೀನ್, ನೀನು ಮನೆಯಲ್ಲೇ ಇರು" ಹೇಳಿ ಇಟ್ಟ ಫೋನ್.

ರೂಮಿಗೆ ಬಂದು ತಂಗಿಯ ಕೆನ್ನೆ ತಟ್ಟಿ "ನೀನು ಬರ್ತೀಯಾ, ನವೀನ್ ನಿಂದ ಫೋನ್ ಬಂದಿತ್ತು" ಎಂದ ಕೂಡಲೇ ಅವಳ ಕಣ್ಣಲ್ಲಿ ನೀರು ತುಂಬಿ ಕೊಂಡಿತು "ಒಂದ್ಸಲ ಆಹ್ವಾನ ಕೊಟ್ಬರೇ, ಹಾರಿ ಹೋಗ್ಬಲ್ಲೆ. ನಮ್ಮಿಬ್ರ ನಡ್ವೇ ನೀರದ ಇದ್ದಾಳೆ. ಅವ್ಳನ ನೀನು ಅತ್ತಗೆ ಸರಿಸ್ಬೇಕು" ಕಣ್ಣೀರಿಟ್ಟಳು.

"ಆಯ್ತು" ಹೊರಗೆ ಬಂದ ಕೂಡಲೇ ಯುಗಂಧರ್ "ಸರ್‍ಯಾಗಿ ಹೇಳು, ಮುಂದೆ ಪಶ್ಚಾತಾಪ ಪಡ್ಬೇಕಾಗುತ್ತೆ. ಅಂತು ನಿನ್ನ ತಂಗಿ ವಿವಾಹಕ್ಕೆ ಇದೊಂದು ಸಹಾಯ ಕೇಳ್ತಾ ಇದ್ದೀನಿ, ತಂದೆಯಾಗಿ" ಅವರ ಗಂಟಲು ಒದ್ದೆಯಾದ ಕೂಡಲೇ ಮೂರ್ತಿ ಎಕ್ಸೈಟ್ ಆದ. ಎರಡು ಕೈಗಳನ್ನು ಹಿಡಿದುಕೊಂಡು "ನೀವೇನು ಯೋಚ್ನೆ ಮಾಡ್ಬೇಡಿ. ಇಷ್ಟು ಮಾಡದಿದ್ದರೇ ನಾನು ಎಂಥ ಅಣ್ಣ" ತುಂಬು ಭರವಸೆ ನೀಡಿ ಹೊರಟ.

ಇದು ತೀರಾ ಸಾಧಾರಣ ವಿಷಯವೇ. ಅದನ್ನು ರಾಡಿ ಮಾಡುತ್ತಿರು ವುದು ನವೀನ್. ಅವನ ಸಪೋರ್ಟಿಗೆ ನಿಂತವರು ವಾಸುದೇವಯ್ಯ. ಹಿರಿಯರಾದ ಅವರಿಗೂ ಬುದ್ಧಿ ಇಲ್ಲ - ಹಲ್ಲು ಕಡಿದ.

ತಂದೆಯ ಪ್ರೀಮಿಯರ್ ಪದ್ಮಿನಿ ಏರಿದ. ಅವನೆಂದು ಇದನ್ನು ಉಪಯೋಗಿಸುತ್ತಿರಲಿಲ್ಲ. ಓದುತ್ತಿದ್ದಾಗ ಕೂಡ ಸ್ಕೂಟರ್ ಇತ್ತು, ಅದೇ ಅವನ ವಾಹನ. ಅದನ್ನ ಕೆಲಸ ಸಿಕ್ಕ ಮೇಲೆ ಅಲ್ಲಿಗೊಯ್ದಿದ್ದ.

ಕಾರು ನಿಂತ ಕೂಡಲೇ ನವೀನ್ ತಾನೇ ಬಂದು ಬರ ಮಾಡಿಕೊಂಡ. ಆದರೆ ಮೂರ್ತಿ ಎಂದಿನಂತಿರಲಿಲ್ಲ. ಬಾಗಿಲಲ್ಲಿ ನಿಂತೇ ಗಮನಿಸಿದಳು.

"ನಿಮ್ಮ ಶ್ರೀಮತಿಯವ್ರು ರಾತ್ರಿ ಪೂರ್ತಿ ಉಪವಾಸ ಮಹರಾಯ, ಇಷ್ಟೊಂದು ಹಚ್ಕೊಂಡ್ ಬಿಟ್ಟರೇ ಗತಿಯೇನು ?" ತಮಾಷೆಯಾಡಿದ. ಆಮೇಲೆ ಸ್ವಲ್ಪ ಹಗುರವಾಗಿಯು ಮಾತಾಡಿದ. ನಗು ನಗುತ್ತ ವಾಸುದೇವಯ್ಯ ಹಾಕಿ ಕೊಟ್ಟ ಬೆಣ್ಣೆ ಮಸಾಲೆದೋಸೆ ನಗು ನಗುತ್ತ ತಿಂದ ಕ್ಷಣಗಳು ಅಮೂಲ್ಯವೇ.

ಕಾಫಿ ಕುಡಿಯುವ ವೇಳೆಗೆ ನೀರದ ಅವಳತ್ತಿಗೆ ಮಾಡಿದ ಗುಲ್ ಪಾವಟೆಯನ್ನ ಮುಚ್ಚಿಕೊಂಡು ತಂದಳು "ಆಗ್ಲೇ ತಿಂಡಿ ಆಗಿ ಹೋಯ್ತಾ? ಒಂದಿಷ್ಟು ಸ್ವೀಟ್‌ನ ರುಚಿ ನೋಡಿ" ತಟ್ಟೆಗಳಲ್ಲಿ ಹಾಕಿಕೊಂಡು ತಂದಳು.

"ಬೇಡ" ನಿರಾಕರಿಸಿದ ಮೂರ್ತಿ.

ಅವನ ಮುಖದ ಬಣ್ಣ ಪೂರ್ತಿಯಾಗಿ ಬದಲಾದದ್ದು ಅಣ್ಣ, ತಂಗಿಯ ಅರಿವಿಗೆ ಬಂತು. ನವೀನ್ ನೊಂದ. ಹೇಗೆ ಸಂತೈಯಿಸುವುದು ?

"ಸ್ವಲ್ಪ....ಬಾ" ರೂಮಿಗೆ ಎದ್ದು ಹೋದ ಮೂರ್ತಿ.

ಚಾರುಲತ ಹಿಂಬಾಲಿಸಿದಳು. ಯಾಕೋ, ಏನೋ ಅಣ್ಣನ ಮೇಲೆ ಕನಿಷ್ಟ ಒತ್ತಾಯವೇರಲು ಅವಳಿಗೆ ಇಷ್ಟವಾಗಲಿಲ್ಲ. ಮುಂದೇನು ?

"ನಂಗೂ ರಜ ಇಲ್ಲ, ನಿಶ್ಚಿತಾರ್ಥ ಮುಗ್ಸಿಕೊಂಡೇ ಹೋಗ್ಬೇಕು. ವಿಚಾರಿಸಿದ್ಯಾ ?" ಕೇಳಿದ. ಅವನ ಕಿರಿದಾದ ಕಣ್ಣುಗಳನ್ನು ಎದುರಿಸಲು ಅವಳ ಅಗಲವಾದ ಕಪ್ಪು ಕಣ್ಣುಗಳು ಅಸಮರ್ಥವಾದವು. "ಹೇಗೆ ವಿಚಾರಿಸ್ಲಿ? ಆ ಮನೆಯವ್ರು ಈ ಮನೆಯವ್ರು ಕೂಡಿ ಲಗ್ನದ ಡೇಟ್ ಫಿಕ್ಸ್ ಮಾಡ್ಕೊಂಡಿದ್ದಾರೆ."

ಮಡದಿಯ ಮಾತಿಗೆ ಉರಿದು ಬಿದ್ದ ಮೂರ್ತಿ.

"ಬರೀ ಡೇಟ್ ತಾನೇ ಫಿಕ್ಸ್ ಆಗಿರೋದು, ಮದ್ವೆ ಆಗಿ ಹೋಗಿಲ್ವಲ್ಲ. ನವೀನ್‌ನ ನಿರ್ಣಯ ಬದಲಾಯ್ಸಿಕೊಳ್ಳೋಕೆ ಹೇಳು. ನಾನು ಅಪ್ಪನಿಗೆ,

ಪೂಜಾಗೆ ಹಾಗೆಂದು ಭರವಸೆ ಕೊಟ್ಟು ಬಂದಿದ್ದೀನಿ" ಜೋರು ಮಾಡಿದ ದನಿಯನ್ನು.

ಇನ್ನಷ್ಟು ಜೋರಾಗಿ ಅಳಿಯ ಸಿಡಿಯುವುದನ್ನ ನೋಡಿ ವಾಸುದೇವಯ್ಯ ಕೋಣೆ ಬಳಿಗೆ ಬಂದರು "ದಯವಿಟ್ಟು ಕ್ಷಮ್ಸಿ, ಗಂಡ - ಹೆಂಡತಿ ಮಧ್ಯದ ಮಾತಿನ ನಡ್ವೇ ತಲೆ ಹಾಕ್ಬಾರ್ದು. ಆದರೆ ವಿಷ್ಯ ನಿಮ್ಮಿಬ್ಬರಿಗೆ ಮಾತ್ರ ಸಂಬಂಧಿಸಿದ್ದಲ್ಲ. ಯಾಕೆ, ಇಷ್ಟೊಂದು ಹಟ ಮಾಡ್ತೀರಾ ? ಬಲವಂತದ ವಿವಾಹಗಳಿಂದ ಯಾರ್ಗೂ ಸುಖವಿಲ್ಲ" ಅರ್ಥಗರ್ಭಿತವಾಗಿ ಹೇಳಿದರು. ಅದನ್ನು ಅರಗಿಸಿಕೊಳ್ಳುವ ತಾಳ್ಮೆ ಮೂರ್ತಿಗೆ ಇರಲಿಲ್ಲ.

ನೇರವಾಗಿ ಅವರತ್ತ ತಿರುಗಿದ.

"ಪೂಜಾನ ನಿರಾಕರಿಸೋಕೆ ಕಾರಣವೇನು ? ನಮ್ತಂದೆ ತಾಯಿ ನಿಮ್ಮ ಮನೆಗೆ ಬಂದು ಹೆಣ್ಣುನ ಕೊಡ್ತೀನೀಂದ್ರು" ನಿಲ್ಲಿಸಿದ. ವಾಸುದೇವಯ್ಯ ಮತ್ತೇನೋ ಹೇಳಲು ಹೊರಟಾಗ "ದಯವಿಟ್ಟು ಮತ್ತೇನು ಹೇಳ್ಬೇಡಿ. ಈ ಮದ್ವೆ ಪಕ್ಕಾ ಆಗ್ಲೇಬೇಕು. ಪೂಜಾ, ನವೀನನ್ನ ವಿವಾಹವಾಗ್ಬೇಕೂಂತ ಹಟ ಹಿಡಿದಿದ್ದಾಳೆ. ಅವ್ಳ ಜೊತೆ ನವೀನ್ ಓಡಾಡಿದ. ಇದು ನಮ್ಮ ಮಾನ, ಮರ್ಯಾದೆಯ ಪ್ರಶ್ನೆ" ಸಹನೆ ಕಳೆದುಕೊಂಡು ಕೂಗಾಡಿದ. ಬಿಳುಚಿಕೊಂಡರು ವಾಸುದೇವಯ್ಯ. ಮೂರ್ತಿ ಎಂದೂ ಹೆಣ್ಣು ಕೊಟ್ಟ ಮಾವನ ಎದುರು ದನಿಯೇರಿಸಿರಲಿಲ್ಲ.

ಕಾಂಪೌಂಡ್‌ನಲ್ಲಿದ್ದ ನವೀನ್ ಒಳಕ್ಕೆ ಬಂದವನು ಮೂರ್ತಿಯ ಕೈ ಹಿಡಿದುಕೊಂಡು "ಬಿ ಕಾಮ್, ನೀನು ನನ್ನ ಸ್ಥಿತಿನ ಅರ್ಥ ಮಾಡಿಕೊಳ್ಳಬಲ್ಲೆ. ನಂಗೆಂದು ಪೂಜಾ ಬಗ್ಗೆ ಅಂಥ ಅಭಿಪ್ರಾಯ ಇರ್ಲಿಲ್ಲ. ಅಲ್ಲಿ ಇದ್ದಿದ್ದು ಬರೀ ಸ್ನೇಹ. ಈಗಾಗ್ಲೇ ನನ್ನ ಪ್ರೇಮ ಗಟ್ಟಿಯಾಗಿ ಹೋಗಿದ್ರಿಂದ...ಅಂಥ ಯಾವ್ದೇ ಉದ್ದೇಶ ನಂಗೆ ಇರ್ಲಿಲ್ಲ" ಸ್ಪಷ್ಟಪಡಿಸಿದ.

"ಇವೆಲ್ಲ ಕೇಳೋಕೆ ನಾನು ಸಿದ್ಧವಿಲ್ಲ" ನುಡಿದ ಮೂರ್ತಿ.

"ಇಂಥ ಒಂದು ಸಮಸ್ಯೆ ಉದ್ಭವವಾಗುತ್ತೇಂತ ತಿಳಿದಿದ್ದರೇ, ನಾನು ಪೂಜಾ ಮುಖ ನೋಡೋದು ಇರ್ಲಿ, ನಿಮ್ಮ ಮನೆ ಕಡೆ ತಿರ್ಗಿ ಕೂಡ ನೋಡ್ತಾ ಇರ್ಲಿಲ್ಲ. ಅವ್ಳಿಗೆ ಬುದ್ಧಿ ಕಮ್ಮಿ ಇರ್ಬಹ್ದು. ನೀವಾದ್ರೂ ಬುದ್ಧಿ ಹೇಳ್ಬೇಕಿತ್ತು" ಎಂದ ಕೂಡಲೇ ಮೂರ್ತಿ ತಾಳ್ಮೆ ಕಳೆದುಕೊಂಡು ಅವನ ಕುತ್ತಿಗೆ ಪಟ್ಟಿಗೆ ಕೈ

ಹಾಕಿದ. "ನಿನ್ತಂಗಿ ಈ ಮನೆ ಸೊಸೆ. ಅವ್ಳು ಸುಖವಾಗಿರ ಬೇಕೂಂದರೇ ನಿನ್ನ ನಿರ್ಧಾರ ಬದಲಾಯ್ಸಿಕೊಂಡು ಪೂಜಾನ ವಿವಾಹವಾಗೋಕೆ ಒಪ್ಕೋಬೇಕು. ಕೀಪ್ ಇನ್ ಯುವರ್ ಮೈಂಡ್" ಅಂದವನು ಕುತ್ತಿಗೆ ಪಟ್ಟಿ ಬಿಟ್ಟು ರಭಸವಾಗಿ ಹೋಗಿ ಕಾರಿನಲ್ಲಿ ಕೂತ. ಎರಡೇ ನಿಮಿಷದಲ್ಲಿ ಕಣ್ಮರೆಯಾಯಿತು.

ಇಡೀ ಮನೆಯನ್ನ ನಿಶ್ಶಬ್ದ ಆವರಿಸಿತು. ಮೂವರ ಉಸಿರಾಟ ಬಿಟ್ಟು ಮಿಕ್ಕಿದೆಲ್ಲ ಸ್ಥಬ್ಧ. ಮುಂದೇನು ? ಮುಂದೇನು ? ಮುಂದೇನು ? ಮೂವರ ಮುಂದೆ ಇದ್ದಿದ್ದು ಒಂದೇ ಪ್ರಶ್ನೆ.

"ಈಗೇನ್ಮಾಡೋದು ?" ವಾಸುದೇವಯ್ಯ ಮಗನನ್ನ ಕೇಳಿದರು.

"ನಾನೇನ್ಮಾಡ್ಲಿ ? ಇದೆಂಥ ಕೆಟ್ಟ ಹಟ. ಮನುಷ್ಯತ್ವವಿಲ್ದ ಜನ. ಸ್ವಲ್ಪನಾದ್ರೂ ಕಾಮನ್‌ಸೆನ್ಸ್ ಬೇಡ್ವಾ ?" ತಲೆಯ ಮೇಲೆ ಕೈಯೊತ್ತಾಗ ಚಾರುಲತ ಎದ್ದು ಹೋದಳು. ಮುಂದೇನು ? ತಂದೆ, ಮಗ ಬಹಳ ಹೊತ್ತು ಮಾತಾಡಿದರು. ಒಮ್ಮೆ ಜೊತೆಯಾಗಿ ಯುಗಂಧರ್‌ನ ಕಂಡು ಮತ್ತೊಮ್ಮೆ ಪರಿಸ್ಥಿತಿ ವಿವರಿಸಿ ಕ್ಷಮೆ ಕೇಳುವುದೆಂದು ನಿರ್ಧರಿಸಿದರು.

ಅಪ್ಪ, ಮಗ ಜೊತೆಯಾಗಿ ಹೊರಟು "ಚಾರು, ಹೋಗೋಣ ಬಾ. ಅನಗತ್ಯವಾಗಿ ನಿಂಗೆ ಶಿಕ್ಷೆ ಬೇಡ" ಎಂದರು ವಾಸುದೇವಯ್ಯ.

"ಈಗ ಬೇಡಪ್ಪ ! ಅನಗತ್ಯವಾಗಿ ಮಾತು ಬೆಳೆಯುತ್ತೆ. ಅವ್ರುಗಳು ಖಂಡಿತ ರಾಜಿಯಾಗೋಕೆ ಸಿದ್ಧವಿಲ್ಲ. ಬರೀ ಮಾತಿನ ಬೆಳವಣಿಗೆಯಿಂದ ಮತ್ತಷ್ಟು ಕಹಿಯಾಗುತ್ತೆ" ಅಂದು ತಡೆದಳು.

"ನನ್ನ ಕುತ್ತಿಗೆ ಪಟ್ಟಿ ಹಿಡ್ದು ಎಳಕೊಂಡ್ಹೋಗಿ ತಾಳಿ ಕಟ್ಟಿಸ್ತಾರ ? ಮತ್ತೊಮ್ಮೆ ಹುಟ್ಟಿ ಬರ್ಬೇಕು" ಎಂದು ವಿವೇಕ ಕಳೆದುಕೊಂಡು ಕೂಗಾಡಿದ ನವೀನ್. ಕುತ್ತಿಗೆ ಪಟ್ಟಿ ಹಿಡಿದ ಮೂರ್ತಿನ ಕ್ಷಮಿಸುವುದು ಕಷ್ಟವೆನಿಸಿತು.

"ಷ್ಯೂರ್, ಆ ಬಗ್ಗೆ ಯಾಕೆ ತಲೆ ಕೆಡಿಸ್ಕೋತೀಯಾ ?" ಉಸುರಿದಳು ಚಾರುಲತ. "ಹೌದೌದು, ನಿನ್ನ ಕುತ್ತಿಗೆ ಹಿಡಿದ್ರೆ ಇವ್ನು ಹೋಗಿ ತಾಳಿ ಕಟ್ಟ ಬೇಕಾಗುತ್ತೆ" ವಾಸುದೇವಯ್ಯನವರು ಸಂಕಟದಿಂದ ನುಡಿದರು. ಅವರಿಗೆ ದಿಗಿಲು ಆಗಿತ್ತು. ಈ ವಿಷಯದಿಂದ ಮಗಳ ಸುಖೀ ದಾಂಪತ್ಯ ಛಿದ್ರವಾಗು ವುದು ಅವರಿಗೆ ಸಮ್ಮತವಿಲ್ಲ.

"ಅಷ್ಟೊಂದು ಸುಲಭವಲ್ಲ ! ಮೂರ್ತಿಗೆ ಚಾರು ಅಂದರೇ ಪ್ರಾಣ. ಇದು ಬರೀ ತಾತ್ಕಾಲಿಕ ಕೋಪ ಅಷ್ಟೆ" ಉಸುರಿ ಎದ್ದು ಹೋದ.

ಮಗಳ ಮುಂದೆ ವಾಸುದೇವಯ್ಯನಿಗೆ ತಲೆ ಎತ್ತುವುದಾಗಲಿಲ್ಲ. ಅರ್ಥ ಮಾಡಿಕೊಂಡವಳಂತೆ ತಂದೆಯ ಬಳಿ ಬಂದು ಕೂತು.

"ಇವೆಲ್ಲ ಆವೇಶದ್ದು, ಬಿಡಪ್ಪ. ಅವ್ರೇ ಅರ್ಥ ಮಾಡ್ಕೋತಾರೆ. ಹೇಗೂ ಆಗೋಲ್ಲಾಂತ ತಿಳಿದ್ಮೇಲೆ...ಬೇರೆ ಗಂಡು ನೋಡ್ತಾರೆ. ಸಾಕಷ್ಟು ಸಂಬಂಧಗಳು ಅವ್ರ ಲಿಸ್ಟ್‌ನಲ್ಲಿದೆ. ಚೆಲುವೆ, ಲಕ್ಷಾಂತರ ಬಾಳುವ ಮನೆಯನ್ನ ಅಳಿಯನಿಗೆ ಉಡುಗೊರೆಯಾಗಿ ನೀಡಲು ಸಿದ್ಧವಾಗಿದ್ದಾರೆ. ನೀನು ಸುಮ್ನೇ ತಲೆ ಕೆಡಿಸ್ಕೋಬೇಡ" ತಂದೆಯನ್ನು ತಾನೇ ಸಂತೈಯಿಸಿದಳು. ಈ ವಯಸ್ಸಿನಲ್ಲಿ ಅವರ ನೆಮ್ಮದಿ ಹಾಳಾಗುವುದು ಅವಳಿಗೆ ಸುತರಾಂ ಇಷ್ಟವಿಲ್ಲ.

ಅಲ್ಲಿನ ಫೋನ್ ನಂಬರ್‌ಗಳನ್ನ ಒತ್ತಿದಳು. ಫೋನೆತ್ತಿದ್ದು ಮೂರ್ತಿಯೇ "ಸಾರಿ ಚಾರು, ನವೀನ್ ಪೂಜಾನ ಒಪ್ಪಿಕೊಳ್ಳಲೇಬೇಕು. ಬೇರೆ ದಾರಿನೇ ಇಲ್ಲ. ಇಲ್ಲದಿದ್ದರೇ ಅವ್ಳು ಆತ್ಮಹತ್ಯೆ ಮಾಡ್ಕೋತಾಳೆ. ಆಮೇಲೆ ನಾವು ಸುಖವಾಗಿರೋಕೆ ಸಾಧ್ಯನಾ ? ನೀನು ರಿಸ್ಕ್ ತಗೋಬೇಕು" ಎಂದ. ಅವಳ ಕಣ್ಣಾಲಿಗಳಲ್ಲಿ ನೀರು ತುಂಬಿತು. ಬಿಕ್ಕಿ ಬಿಕ್ಕಿ ಅಳಲೇ. ಮೂರ್ತಿಯ ಎದೆಯಾಸರೆಯಲ್ಲಿ ಕಣ್ಣೀರು ಸುರಿಸಬೇಕೆನಿಸಿತು.

"ಮಾತಾಡು ಚಾರು" ಎಂದ ಮೇಲೆ 'ಹಾ' ಎಂದಿದ್ದು. "ಪ್ಲೀಸ್ ನಂಗೆ ನಿಮ್ಮನ್ನ ಬಿಟ್ಟಿರೋಕೆ ಆಗೋಲ್ಲ. ನಮ್ಮಗಳ ಅವಿವೇಕದಿಂದ ಇಬ್ರೂ ಹೆಣ್ಣುಗಳ ಜೀವ್ನ ಹಾಳಾಗುತ್ತೆ. ನೀರದ ಕೂಡ ನವೀನ್ ಇಲ್ದೇ ಬದ್ಕಲಾರಳು. ಅವರಿಬ್ರ ಪ್ರೇಮ, ಪ್ರೀತಿ ಸಂಬಂಧದಲ್ಲಿ ಮಾತ್ರವಲ್ಲ ಸುತ್ತಮುತ್ತಲೆಲ್ಲ ಡಣಾಡಂಗೂರವಾಗಿದೆ. ಸಮಾಜಕ್ಕೆ ತುಂಬ ಹೆದರೋ ಜನ. ಇಡೀ ಕುಟುಂಬದ ಹಾಳಾಗುವಿಕೆಗೆ ನಾವು ಕಾರಣರಾಗ್ಬಿಡ್ತೀವಿ" ಹೇಳಿದಳು.

"ನಂಗೆ ಈ ಪುರಾಣ ಬೇಡ. ನಿನ್ನ ಭವಿಷ್ಯನ ದೃಷ್ಟಿಯಲ್ಲಿ ಇಟ್ಕೊಂಡ್ ಪ್ರಯತ್ನ ಮಾಡು. ಹೆದರಿಸು, ಬೆದರಿಸು, ನಾಳೆ ಡೈವೋರ್ಸ್ ಆಗುತ್ತೇಂತ ಹೇಳು. ತಾನಾಗಿ ಮೆತ್ತಗಾಗ್ತಾನೆ" ಉಪಾಯ ಹೇಳಿಕೊಟ್ಟ.

ಚಾರುಲತ ನಡುಗಿ ಹೋದಳು. 'ಡೈವೋರ್ಸ್' ಮದುವೆಯಾಗಿ ವರ್ಷ ತುಂಬದ ಮುನವೇ ಈ ಪದದ ಪ್ರಯೋಗ.

"ಫೋನ್ ಇಡ್ಲಾ ?" ಕೇಳಿದಳು.

"ಎಷ್ಟೊಂದು ಅಹಂಕಾರ ! ಎಚ್ಚರಿಕೆ ಅಲ್ಲ, ಸತ್ಯವಾಗಿ ಬಿಡುತ್ತೆ. ಜೀವನ ಪೂರ್ತಿ ನೋಯ್ತೀಯಾ ! ಇದೆಲ್ಲ ನಿನ್ನ ಮನಸ್ಸಿನಲ್ಲಿ ಇರ್ಲಿ. ನಾಳೆ ಬೆಳಿಗ್ಗೆ ಪಾಸಿಟಿವ್ ಆನ್ಸರ್ ನಿರೀಕ್ಷಿಸ್ತೀನಿ. ಆಲ್ ದಿ ಬೆಸ್ಟ್" ಫೋನಿಟ್ಟೆ ಬಿಟ್ಟ. ಅವಳು ಹಿಡಿದೇ ಇದ್ದಳು. ಬೆವರು ಇಡೀ ಮೈ ತುಂಬ ಹರಡಿ ಕೊಂಡಿತ್ತು. ಸಮುದ್ರದಾಳದಿಂದ ಆರಿಸಿ ತೆಗೆದಂಥ ಮುತ್ತುಗಳು ಅವಳ ಹಣೆ, ತುಟಿಯ ಕೆಳಗೆ ಆವರಿಸಿಬಿಟ್ಟಿತ್ತು.

ಅಷ್ಟರಲ್ಲಿ ಬಂದ ನೀರದ ಬಲವಂತದಿಂದ ಅವರ ಮನೆಗೆ ಕರೆದೊಯ್ದಳು. ಯಾವುದೇ ವಿಷಯ ಗೊತ್ತಿಲ್ಲದ ಜನ ಮಗಳ ಮದುವೆಗಾಗಿ ಮಾಡಿಸಿದ ಚೂರು, ಪಾರು ಒಡವೆಗಳನ್ನ ತೋರಿಸಿದರು.

"ನಮ್ಮ ನೀರದ ಪುಣ್ಯ ಮಾಡಿದ್ಲು. ನವೀನ್‌ನಂಥ ಗಂಡು ಯಾರ್ಗೇ ಸಿಕ್ಕಬೇಕು ? ದೇವರಂಥ ಜನ ನಿಮ್ತಂದೆ" ಬಾಯಿ ತುಂಬ ಹೊಗಳಿದಾಗ ತುಟಿ ಎರಡು ಮಾಡಲಿಲ್ಲ. ನಿಶ್ಚಿತಾರ್ಥದ ದಿನ ಕೂಡ ನಿಶ್ಚಯಿಸಿಕೊಂಡಿದ್ದ ಜನ "ಮಗ್ಳು, ಅಳಿಯ ಬರ್ಲಿ...ಅಂದಿದ್ರು, ಹೇಗೂ ಬಂದಿದ್ದೀರಾ, ದೊಡ್ಡ ಮನಸ್ಸು ಮಾಡಿ ನೀವುಗಳೇ ಹೇಳ್ಬೇಕು. ನಂಗೂ...ಹುಷಾರಿಲ್ಲ. ಇವ್ಳ ದೊಂದು ವಿವಾಹ ಮುಗ್ದು ಹೋಗ್ಲಿ" ಅವಳ ತಾಯಿ ಕಣ್ಣೊರೆಸಿಕೊಂಡರು.

"ಆಯ್ತು ಹೇಳ್ತೀನಿ" ಅಷ್ಟೇ ಅಂದಿದ್ದು.

ಅವರುಗಳು ಬಲವಂತ ಮಾಡಿ ಕೊಟ್ಟ ತಿಂಡಿ ತುಟಿಯುವರೆಗೂ ಒಯ್ಯುವುದಾಗಲಿಲ್ಲ ಅವಳಿಂದ. ಹೇಳಿದಕ್ಕೆಲ್ಲ ಹ್ಞೂಗುಟ್ಟಿದಳಷ್ಟೆ. ಬಹಳ ದೂರ ಹೋದ ಈ ಸಂಬಂಧವನ್ನು ಮುರಿದು ಹಾಕುವುದು ಸಾಧ್ಯವೇ ?

ಮನೆಗೆ ಬಂದವಳೇ ಮಲಗಿಬಿಟ್ಟಳು.

* * *

ಮನಸ್ಸು ತಡೆಯದೇ ಮರುದಿನ ತಂದೆ, ಮಗ ಯುಗಂಧರ್ ಮನೆಗೆ ಹೋದರು. ಸಾಕಷ್ಟು ಸಲ ಫೋನ್ ಮಾಡಿದ್ದರು ಡಿಸ್‌ಕನೆಕ್ಟ್ ಆಗಿತ್ತು ಮಾತಾಡದೇ.

ಮೊದಲು ನೋಡಿದ ಮೃಣಾಲಿನಿ ಆತ್ಮೀಯವಾಗಿ ಬರ ಮಾಡಿಕೊಂಡರು. "ಬನ್ನಿ, ಎಲ್ಲಾ ಹೇಗಿದ್ದೀರಿ ?" ಅವರ ಕೇಳುವಿಕೆ ನಾಟಕೀಯವಾಗಿತ್ತು.

ಕತ್ತಿಡಿದಂತಾಯಿತು ವಾಸುದೇವಯ್ಯನಿಗೆ. ಮಗನತ್ತ ನಿಸ್ಸಾಯಕತೆಯ ನೋಟ ಹರಿಸಿದರು. ಅವನು ತುಟಿ ಕಚ್ಚಿ ತಾರಸಿಯನ್ನ ದಿಟ್ಟಿಸುತ್ತಿದ್ದ. ಇಂಥದೊಂದು ಸಮಸ್ಯೆ ಎದುರಾಗಬಹುದೆಂಬ ಕಲ್ಪನೆ ಕೂಡ ಅವನಿಗೆ ಇರಲಿಲ್ಲ.

"ಯಾರು ಕಾಣ್ತಾ ಇಲ್ಲ" ಎಂದರು ಮೆಲ್ಲಗೆ ವಾಸುದೇವಯ್ಯ. "ಅವ್ರು ಹೊರ್ಗಡೆ ಹೋಗಿದ್ದಾರೆ. ಪೂಜಾ ಹುಷಾರಿಲ್ದೇ ಮಲ್ಗಿದ್ದಾಳೆ. ಮೂರ್ತಿ ಊರಿಗೆ ಹೋದ" ಎಂದ ಮೃಣಾಲಿನಿ ಕಿಚನ್‌ಗೆ ಹೋದರು.

"ಅಪ್ಪ, ಮಗ ಎಗರಿ ಬಿದ್ದರು. ಮೂರ್ತಿ ಊರಿಗೆ ಹೋದ ವಿಷಯ ಚಾರುಲತಗೆ ತಿಳಿಯದು. ಮಡದಿಯೆಂದರೆ ಪ್ರಾಣ ಬಿಡುವ ಒಂದು ದಿನ ಬಿಟ್ಟು ಹೋಗಿ ಎಂದರೇ 'ಆಗೋಲ್ಲ' ಎನ್ನುತ್ತಿದ್ದವನು ಹೇಳದೆ ಹೊರಟು ಹೋಗಿದ್ದು ಭಯವೆನಿಸಿತು ಅವರುಗಳಿಗೆ."

"ಇದು ಸುಲಭವಾಗಿ ಪರಿಹಾರವಾಗೋಲ್ಲ" ಎಂದರು ವಿಷಾದದಿಂದ ವಾಸುದೇವಯ್ಯ "ಹೋಗ್ಲಿ, ನೀನು ತಂಗಿ ಬಗ್ಗೆ ಯೋಚ್ಸು. ಸುಮ್ನೇ ಇವರುಗಳ ಅವಿವೇಕದಿಂದ ಅವ್ಳ ಸಂಸಾರ ಹಾಳಾಗಿ ಹೋಗುತ್ತೆ" ಎಂದರು ಮಗನಿಗೆ ಮಾತ್ರ ಕೇಳಿಸುವಂತೆ.

"ಹೇಗೆ ಸಾಧ್ಯ...ಅಪ್ಪ ? ಸುಮ್ನೇ ಹೆದರಿಸ್ತಾ ಇದ್ದಾರೆ, ನಾವು ಬಗ್ಗುತ್ತೀವೀಂತ! ನಾವೇನಾದ್ರೂ ಬೇರೆ ತೀರ್ಮಾನ ತಗೊಂಡರೇ, ಆ ಇಡೀ ಮನೆಯವ್ರು ಆತ್ಮಹತ್ಯೆ ಮಾಡ್ಕೋತಾರೆ" ಅಷ್ಟೇ ಮೆಲುವಾಗಿ ಉದ್ವೇಗ ದಿಂದ ಹೇಳಿದ. ಅವನು ಮಾತ್ರ ನೀರದಾನ ನಿರಾಕರಿಸಿ, ಪೂಜಾನ ವಿವಾಹವಾಗಲಾರ.

ಆ ವೇಳೆಗೆ ಕಾಫಿ ಹಿಡಿದು ಬಂದರು ಮೃಣಾಲಿನಿ.

"ತಗೊಳ್ಳಿ, ಮೂರ್ತಿ ತೀರಾ ಬೆಳಗಿನ ಬಸ್ಸಿಗೆ ಹೋದ. ನನಗೂ ಮೊದ್ಲಿನ ಹಾಗೇ ಕೆಲ್ಸ ಮಾಡೋಕ್ಕಾಗೋಲ್ಲ" ಎದುರಿನಲ್ಲಿ ಕೂತರು. ಅವರಲ್ಲು ಮೊದಲಿನ ಸ್ನೇಹಭಾವವಿರಲಿಲ್ಲ. ಬಹುಶಃ ತಂದೆ, ಮಗ ದುಷ್ಮನ್‌ಗಳಾಗಿ ಕಾಣುತ್ತಿರಬಹುದು.

ಕಹಿಯನ ಗುಟುಕರಿಸಿದಂತೆ ಲೋಟಗಳನ ಖಾಲಿ ಮಾಡಿದರು. ಬಹಳ

ಕಷ್ಟದಿಂದ ಗಂಟಲಲ್ಲಿ ಇಳಿದಿದ್ದು.

"ಏನಾಗಿದೆ ಪೂಜಾಗೆ ?" ಮೇಲೆದ್ದ ಡಾ|| ನವೀನ್.

ಆಕೆ ಮಾತೇ ಆಡಲಿಲ್ಲ. ಎಲ್ಲರಿಗಿಂತ ಅವಳನ್ನ ಮುಖ್ಯವಾಗಿ ಮನವೊಲಿಸುವುದು ಸರಿಯಾಗಿ ಕಂಡಿತು ಅವನಿಗೆ. ನಿಶ್ಶಬ್ದವಾಗಿ ರೂಮಿನೊಳಕ್ಕೆ ಹೋದ. ಮುಖದ ಮೇಲೆ ಅನಾರೋಗ್ಯದ ಚಿಹ್ನೆಗಳೇನು ಇರಲಿಲ್ಲ. ಅಸ್ತವ್ಯಸ್ತವಾದ ಕೂದಲು, ಮೇಕಪ್ ಇಲ್ಲದ ಮುಖ ಸ್ವಲ್ಪ ಮಂಕಾಗಿ ಕಾಣುತ್ತಿತ್ತು.

"ಪೂಜಾ...." ಎಂದ ಮೃದುವಾಗಿ.

ಕಣ್ಣು ಬಿಟ್ಟು ಅವನನ್ನ ನೋಡಿದವಳೇ ಅಳಲು ಷುರು ಮಾಡಿದಾಗ ಘಟಸ್ಫೋಟವೆನಿಸಿತು. ತಾಳ್ಮೆಯಿಂದ ಅಲ್ಲೇ ಕೂತ.

"ಹುಚ್ಚು ಹುಡ್ಗೀ ! ನನ್ನಂಥ ಒಬ್ಬ ಸಾಮಾನ್ಯನ್ನ ವಿವಾಹವಾಗ ಬಯಸೋದು ತಪ್ಪು. ನಿನ್ನಂಥ ಹುಡ್ಗಿಗೆ ಹೀರೋನೇ ಸಿಕ್ಕಬೇಕು ನೀನು, ನಾನು ಸೇರಿ ಹುಡ್ಕೋಣ. ನನ್ನ ವಿವಾಹವಾಗೋ ಅಪರಾಧ ಮಾಡ್ಬೇಡ" ದಯಾನೀಯವಾಗಿ ಹೇಳಿದ.

"ನೋ...ನೋ...ನೋ...ನಾನು, ನಿನ್ನ ಮದ್ವೆಯಾಗೋದು. ನಂಗೆ ನೀನು ಮೋಸ ಮಾಡ್ದೇ. ಐ ಲವ್ ಯು, ಐ ಅಡೋರ್ ಯು, ಐ ಮ್ಯಾರಿ ಯು" ಎಂದು ಚೀರಿದಳು.

ಸುಸ್ತಾದ ಡಾ|| ನವೀನ್. ಇವಳಿಗೇನಾದರೂ ತಲೆ ಕೆಟ್ಟಿದೆಯಾ ? ಬಹಳಷ್ಟು ಹೇಳಿ ಸೋತ. ಅವಳ ನಿರ್ಧಾರ ಬದಲಾಗಲಿಲ್ಲ. ಅನುನಯಿಸಿದ, ರಮಿಸಿ, ತನ್ನ ಮತ್ತು ನೀರದ ವಿಷಯ ತಿಳಿಸಿದ. ಅವಳು ಒಂದಿಂಚು ಅಲುಗಾಡಲಿಲ್ಲ.

"ಇದು ಶುದ್ಧ ಮೂರ್ಖತನ. ನೀನು ಬೇರೊಬ್ಬರನ್ನ ಪ್ರೇಮಿಸಿದ್ರೆ ಸಾಲ್ದು. ಅವ್ರು ಕೂಡ ನಿನ್ನ ಪ್ರೀತಿಸ್ಬೇಕು. ಇಲ್ಲಿ, ವಿರಸ ದಾಂಪತ್ಯವಾಗುತ್ತೆ. ಜೀವ್ನ ಪೂರ್ತಿ ಕೊರಗ್ತೀಯಾ" ಬುದ್ಧಿ ಹೇಳಿದ.

"ಏನಾದ್ರೂ ಪರ್ವಾಗಿಲ್ಲ, ನಿನ್ನನ್ನೇ ವಿವಾಹವಾಗೋದು."

ಅವಳ ನಿರ್ಧಾರ ತಿಳಿದ ಮೇಲೆ ಮೇಲೆದ್ದ "ಈ ಜನ್ಮದಲ್ಲಿ ಅಂಥ ಕನಸ್ಸು ಕಾಣ್ಬೇಡ. ಗುಡ್ ಬೈ" ಹೊರಗೆ ಬಂದ.

ಅಲ್ಪ ಸ್ವಲ್ಪ ಕೇಳಿಸಿಕೊಂಡಿದ್ದ ಮೃಣಾಲಿನಿ "ನವೀನಾ, ನಿನ್ನ ನಿರ್ಧಾರ

ಸರಿಯಲ್ಲ. ನಿನ್ತಂಗಿ ಈ ಮನೆ ಸೊಸೆ. ಅದ್ನ ಕೂಡ ನೆನಪಿನಲ್ಲಿ ಇಟ್ಕೋ. ಮುಂದೆ ಇದಕ್ಕಾಗಿ ತುಂಬ ಪಶ್ಚಾತ್ತಾಪ ಪಡ್ತೀಯಾ" ಎಚ್ಚರಿಸಿದರು ಉದ್ವೇಗ ದಿಂದ. ಸಭ್ಯ, ಸೌಜನ್ಯ ಮೂರ್ತಿಯೆಂದು ಕೊಂಡಿದ್ದ ನವೀನಾ ಇಂದು ಮಗಳ ಬಾಳಲ್ಲಿ ಇಣಕಿದ ಪೆಡಂಭೂತವಾಗಿ ಕಂಡ.

"ಅದಕ್ಕೂ, ಇದಕ್ಕೂ ತಾಳೇ ಹಾಕ್ಬೇಡಿ. ಚಾರುಲತಗೂ ಇದಕ್ಕೂ ಯಾವ್ದೇ ಸಂಬಂಧವಿಲ್ಲ. ಸುಮ್ನೇ ಬ್ಲಾಕ್‌ಮೇಲ್ ಮಾಡೋಕೆ ಹೋಗ್ಬೇಡಿ" ಎದುರು ತಿರುಗಿದ.

ವಿಕೋಪಕ್ಕೆ ಹೋಗುವುದು ಬೇಡವೆಂದು ಮಗನನ್ನ ಬಲವಂತದಿಂದ ಹೊರಗೆ ಕಳಿಸಿ ಬಂದ ವಾಸುದೇವಯ್ಯ ತಮ್ಮ ಪರಿಸ್ಥಿತಿಯನ್ನು ತೋಡಿ ಕೊಂಡರು.

"ಇಡೀ ಮನೆ ಜನ ನಮ್ಮನ್ನೆ ನಂಬಿಕೊಂಡಿದ್ದಾರೆ. ಈಗೇನಾದ್ರೂ ಅಪಸ್ವರ ತೆಗೆದ್ರೆ...ಆ ಹುಡ್ಗಿ ಆತ್ಮಹತ್ಯೆ ಮಾಡ್ಕೊಂಡ್ ಬಿಡ್ತಾಳೆ. ನೀವು ಹೆಣ್ಣು ಹೆತ್ತವರು. ದಯವಿಟ್ಟು ಯೋಚ್ಸಿ" ಕಳಕಳಿಯಿಂದ ಮನವಿ ಮಾಡಿ ಕೊಂಡರು.

ಆಕೆ ಮುಲಾಜಿಲ್ಲದೆ ತಳ್ಳಿ ಹಾಕಿದರು.

"ನಂಗೆ, ನನ್ನ ಮಗ್ಳು ಬದ್ಕು ಮುಖ್ಯ. ನಾನೇನು ಆದರ್ಶ ನಾರಿಯಲ್ಲ, ಸೋಷಿಯಲ್ ವರ್ಕರ್ ಅಲ್ಲ. ನನ್ನ ಸಂಸಾರ, ನನ್ನ ಮಕ್ಳೇ ನಂಗೆ ಮುಖ್ಯ."

ಜೋಲು ಮುಖ ಹಾಕಿಕೊಂಡು ಎದ್ದು ಬಂದರು ವಾಸುದೇವಯ್ಯ. ಗೇಟಿನಿಂದ ಹೊರಗೆ ಹೋಗಿ ನಿಂತಿದ್ದ ಡಾ|| ನವೀನ್. ಅವನಿಗೆ ಈ ಮನೆಯವರೆಲ್ಲ ಮೂರ್ಖರ ಹಿಂಡಾಗಿ ಕಂಡರು. ಮೂರ್ತಿಯನ್ನ ಮಾತ್ರ ಬೇರೆಯಾಗಿ ನೋಡಲು ಇಷ್ಟಪಟ್ಟ.

ಬಂದ ವಾಸುದೇವಯ್ಯ ತಲೆಯಾಡಿಸಿ ಬಿಟ್ಟರು "ನಂಗ್ಯಾಕೋ ಭಯ ವಾಗುತ್ತೆ. ಅನ್ಯಾಯವಾಗಿ ಹಟ ಮಾಡಿ ಚಾರುಲತ ಬದ್ಕನ್ನ ಹಾಳು ಮಾಡಿ ಬಿಡ್ತಾರೆ. ನೀನೇ ಮನಸ್ಸು ಬದಲಾಯಿಸ್ಕೋ" ಮಗನಿಗೆ ಬುದ್ಧಿ ಹೇಳಿದರು. ಅವನು ಮಾತೇ ಆಡಲಿಲ್ಲ.

ಇಬ್ಬರು ಮನೆಗೆ ಬಂದಾಗ ಚಾರುಲತ ಪೇಪರ್ ಹಿಡಿದು ಕೂತಿದ್ದಳು. ಅತ್ಯಂತ ಶಾಂತವಾಗಿದ್ದಳು. ಯಾವುದೇ ರೀತಿಯ ಉದ್ವೇಗವಿರಲಿಲ್ಲ. ಇದ್ದರೂ ಅದನ್ನ ಹತ್ತಿಕ್ಕುವಲ್ಲಿ ಸಮರ್ಥಳಾಗಿದ್ದಳೇನೋ !

ಮತ್ತೆರಡು ಸಲ ಫೋನ್ ಮಾಡಿದ್ದಳು. ಅವರುಗಳು ಯಾರು ಅವಳೊಂದಿಗೆ ಮಾತಾಡಲು ಇಚ್ಛಿಸಲಿಲ್ಲ. ಇವರುಗಳು ಅಲ್ಲಿಗೆ ತಿಳಿಸಿ ಹೋಗದಿದ್ದರೂ ಅವಳಿಗೆ ಗೊತ್ತಿತ್ತು.

"ಯಾಕೆ, ತುಂಬ ಡಲ್ ಆಗಿದ್ದೀರಾ ?" ಕೇಳಿದಳು ಇಬ್ಬರನ್ನ ಉದ್ದೇಶಿಸಿ. ನವೀನ್ ತಡೆಯದೆ ತಟಕ್ಕನೇ ಆಡಿ ಬಿಟ್ಟ "ತುಂಬ ವಲ್ಗರ್ ಜನ. ಸ್ವಲ್ಪ ಕೂಡ ಕಾಮನ್‌ಸೆನ್ಸ್ ಬೇಡ್ವಾ ? ನಂಗಿಷ್ಟವಿಲ್ಲಾಂದ್ರೂ ನನ್ತಲೆಗೆ ಕಟ್ಟೋ ಹಣೆಬರಹ ಅವರಿಗೇಕೆ ?"

ನೇರವಾಗಿ ಅಣ್ಣನನ್ನು ನೋಡಿದಳು.

"ವಿಪರೀತ ಭಾಷೆಯ ಪ್ರಯೋಗ ಬೇಡ. ನಿಂಗಿಷ್ಟವಿಲ್ಲಾಂದರೇ ಮುಗ್ದು ಹೋಯ್ತು. ಯಾರು ನಿನ್ನ ಕೈ ಹಿಡ್ದು ತಾಳಿ ಕಟ್ಟಿಸೋಕ್ಕಾಗೋಲ್ಲ. ಸುಮ್ನೇ ಯಾಕೆ ತಲೆ ಕೆಡಿಸ್ಕೋತೀಯಾ ?" ಶಾಂತವಾಗಿ ನುಡಿದು ಒಳಗೆದ್ದು ಹೋದಳು.

ಅವಳ ಕಣ್ಣಾಲಿಗಳು ತುಂಬಿದವು. ಮೂರ್ತಿ ಅವಳನ್ನ ಅತ್ಯಂತ ಪ್ರೀತಿಯಿಂದ ನೋಡಿಕೊಂಡಿದ್ದ. ಇತರರು ಕರುಬುವಂಥ ಅನ್ಯೋನ್ಯ ದಾಂಪತ್ಯ. ಆದರೆ ಬಡಿದಿದ್ದು ಬಲವಾದ ಸಿಡಿಲು.

ಕಣ್ಣೊರೆಸಿಕೊಂಡು ಕಿಟಕಿಯ ಬಳಿ ಹೋಗಿ ನಿಂತಳು. ರಪ್ಪನೆ ಬೀಸಿ ಬಂದ ಬಿಸಿ ಗಾಳಿ ತಟ್ಟಿತು "ಮೈ ಗಾಡ್, ನೀನಿಲ್ಲದಿದ್ದರೇ ಗಾಳಿಯಲ್ಲಿ ಬಿಸಿಯಾಗ್ಬಿಡುತ್ತೆ" ಕಿವಿಯ ಬಳಿ ಮೂರ್ತಿ ಪಿಸುಗುಟ್ಟಿದಂತಾಗಿ ಕೆಂಪು ಕೆಂಪಾದಳು.

ರೂಮಿನೊಳಗೆ ಬಂದ ಡಾ|| ನವೀನ್ ಅವಳ ಭುಜದ ಮೇಲೆ ಕೈಯಿಟ್ಟ "ನನ್ನಲ್ಲಿ ಏನು ನೋಡಿ ಮೆಚ್ಚಿಕೊಂಡ್ಲು, ನಿನ್ನ ನಾದಿನಿ ? ನಂಗಿಂತ ನೂರು ಪಟ್ಟು ಒಳ್ಳೆಯ ಗಂಡುಗಳು ಅವ್ಳಿಗೆ ಸಿಕ್ತಾರೆ" ಎಂದಾಗ ಅವನತ್ತ ತಿರುಗಿ ಕಣ್ಣು ಅಗಲಿಸಿ "ನಿಜ್ವಾಗ್ಲೂ ಹೆಮ್ಮೆ ಪಟ್ಕೋಬೇಕು. ನಮ್ಮಗಳ ಕಣ್ಣಿಗೆ ಕಾಣದ ಒಂದು ಅಂಶ ನಿನ್ನ ವ್ಯಕ್ತಿತ್ವದಲ್ಲಿ ಇರ್ಬೇಕು. ಹೇಗಿದ್ಲು ಪೂಜಾ?" ನಗುತ್ತ ಕೇಳಿದಳು.

ಎರಡು ಕೈಗಳಲ್ಲಿ ತಲೆ ಹಿಡಿದುಕೊಂಡು ಕೂತುಬಿಟ್ಟ.

"ಇನ್ನೆಂದೂ ಜೀವನದಲ್ಲಿ ಆ ಕಡೆ ತಲೆ ಹಾಕೋಲ್ಲ. ನಾಲ್ಕು ಕೆನ್ನೆ ಗೊಡೆದು ಬುದ್ಧಿ ಹೇಳೋ ಬದ್ಲು, ನನ್ನತ್ರ ಖಾಜಿ ನ್ಯಾಯ ಮಾಡ್ತಾರೆ. ಇವ್ರ ಹೆದರಿಕೆಗೆ

ನಾನೇನು ಬಗ್ಗೋಲ್ಲ. ಹಟ ಸಾಧಿಸಿದ್ದರೇ ಅವ್ರ ಮಗ್ನ ಸಂಸಾರ ಹಾಳಾಗುತ್ತೆ" ಬಡಬಡಿಸಿದ.

ತಣ್ಣಗೆ ಅವನ ಮುಂದೆ ಕೂತು "ಅವ್ರು ಹೆದರಿಸೋಕೆ ಕಾರಣ ಇದೆ. ಅವ್ರ ಮಗ್ನ ಸಂಸಾರದಲ್ಲಿ ಸಿಸ್ತಂಗಿ ಇದ್ದಾಳೆ, ಅದ್ನ ಎಚ್ಚರಿಕೆಯ ಗಂಟೆ ಮಾಡ್ಕೊಂಡಿದ್ದಾರಷ್ಟೆ" ಸ್ಪಷ್ಟಪಡಿಸಿದಳು.

"ಈಡಿಯಟ್ಸ್, ನಾನು ಕೋರ್ಟಿಗೆ ಹೋಗ್ತೀನಿ" ಜೋರು ಮಾಡಿದ. "ಈಗ ಆ ಪ್ರಮೇಯವೇನಿದೆ ? ನೀನಂತು ವಿವಾಹವಾಗೋಕೆ ಅವ್ರು ಅಡ್ಡ ಬರೋಕೆ ಸಾಧ್ಯವಿಲ್ಲ. ಎಲ್ಡು ಸಲ ನೀರದ ಬಂದ್ಹೋದ್ದು" ಎಂದವಳು ಹೊರಗೆ ಹೋದಳು.

ವಾಸುದೇವಯ್ಯ ಹತ್ತು ವರ್ಷ ಹೆಚ್ಚು ವಯಸ್ಸಾದವರಂತೆ ಕುಸಿದರು. ದಿಕ್ಕೇ ತೋಚದಂತಾಯಿತು. ನಿಶ್ಚಿತಾರ್ಥಕ್ಕೆ ದಿನ ಗೊತ್ತು ಮಾಡಿಕೊಂಡು ಎದುರು ಮನೆಯ ದಂಪತಿಗಳು ಬಂದು ಕೂತಾಗ ಅವರಿಗೆ ಉಸಿರು ನಿಂತಂತಾಯಿತು.

"ನಾಳಿದ್ದು ಶುಕ್ರವಾರ, ದಿನ ಒಳ್ಳೇದು. ಹೇಗೂ ಚಾರುಲತನು ಬಂದಿದ್ದಾಳೆ. ತಾಂಬೂಲ ಬದಲಾಯ್ಸಿಕೊಂಡ್ಬಿಡೋಣ" ಪಟ್ಟಾಗಿ ಕೂತರು.

"ಒಂದ್ಮಾತು ನವೀನ್ ಕೇಳಿ ಬಿಡ್ತೀನಿ" ಅವರನ್ನು ಸಾಗಾಕಿ ಬಿಟ್ಟು ಗೋಳೋ ಎಂದು ಅಳಲು ಶುರು ಮಾಡಿದರು.

ಅರ್ಥ ಮಾಡಿಕೊಂಡವಳು ತಂದೆಯ ಮುಂದೆ ಬಂದು ಕೂತು "ಅಳೋಂಥದೇನಾಯ್ತು ? ಇಲ್ಲಿ ನಿಮ್ಮದೇನು ತಪ್ಪಿಲ್ಲಪ್ಪ. ನಿಮ್ಮ ಅಳುಗೆ ಕರ್‍ಗೀ ಯಾರು ಅವರವ್ರ ನಿರ್ಣಯಗಳ್ನ ಬದಲಾಯಿಸ್ಕೋಳ್ಳೋಲ್ಲ. ನಾನು, ಅಣ್ಣನ ಜೊತೆ ಇಂದೆಯೇನು, ಈಗ್ಲೇ ಊರಿಗೆ ಹೋಗ್ತೀನಿ. ಅಕಸ್ಮಾತ್ ಬೇರೆ ಕೆಲ್ಸವಿದ್ದರೇ, ನಾನೇ ಹೋಗ್ತೀನಿ" ತನ್ನ ಬಟ್ಟೆಗಳನ್ನ ಬ್ಯಾಗ್‌ಗೆ ಹಾಕಿ ಕೊಂಡು ಹೊರಟು ನಿಂತಳು.

"ನವೀನ್ ಎಲ್ಲೋ ಹೊರ್ಗಡೆ ಹೋಗಿದ್ದಾನೆ" ಎಂದರು ವಾಸುದೇವಯ್ಯ.

"ಹೋಗ್ಲಿ ಬಿಡಿ, ನಂಗೆ ಹೋಗ್ಬಂದು ರೂಢಿ ಇದೆ."

ಆಟೋ ಹಿಡಿದು ಹೊರಟೇ ಬಿಟ್ಟಳು. ನಾಲ್ಕು ಗಂಟೆಗಳ ಪ್ರಯಾಣ ಇವಳು ಸಂಜೆ ತಲುಪುವ ವೇಳೆಗೆ ಮೂರ್ತಿ ಬಂದಿದ್ದ. ಅವನ ಕಣ್ಣಲ್ಲಿ ನೀರೇ ಇತು. ಎತಿ ಎರಡು ಸುತು ಹಾಕಿಸಿ ಮುದ್ದಾಡಿ ಬಿಟ್ಟ. .

"ಬೆಳಿಗ್ಗೆ ಅಡಿಗೆ ಮಾಡಿದ್ರಾ ?" ಕೇಳಿದಳು.

"ತುಂಬ ಸೋಮಾರಿತನ ! ಹಾಲು ಕಾಯ್ಸಿ ಕುಡ್ಕೋದೇ ಕಷ್ಟ. ಆರಾಮಾಗಿ ಹೋಟಲುಗೆ ಹೋಗೋಣ. ಆಮೇಲೆ ನಿಂಗೆ ಒಂದಿಷ್ಟು ಸಹಾಯ ಮಾಡ್ತೀನಿ" ಮಡದಿಯ ಮೃದು ಕೆನ್ನೆಯನ್ನ ಮೃದುವಾಗಿ ಕಚ್ಚಿ ನೋಯಿಸಿದ.

ಇಬ್ಬರು ಆರಾಮಾಗಿ ಹೋಟಲಿಗೆ ಹೋಗಿ ಬಂದರು.

ಇಡೀ ರಾತ್ರಿ ಅವಳ ಮೈನ ಕಣಕಣದ ಅಂದ ಸವಿದ. ಅಪರೂಪವಾದ ರಾತ್ರಿ ಆಯಿತು ಅವರ ಪಾಲಿಗೆ. ಬೆಳಿಗ್ಗೆ ಹಲ್ಲು ಬ್ರೆಷ್ ಮಾಡುತ್ತಿದ್ದಾಗ "ಮೂರ್ತಿ ಫೋನಿದೆ" ಪಕ್ಕದ ಮನೆಯವರು ಕರೆದೊಯ್ದರು.

ಹಿಂದಕ್ಕೆ ಬಂದವನು "ಅಪ್ಪನ ಫೋನ್, ತುಂಬ ಖುಷಿಯಾದ್ರು. ನೀನೇ ಒಮ್ಮೆ ಗುಡ್‌ನ್ಯೂಸ್ ತಿಳ್ಸಿ ಬಿಡು. ಅವ್ರಿಗೆ ಸೊಸೆಯ ಮೇಲೆ ತುಂಬ ಭರವಸೆ" ಎಂದು ಕೆನ್ನೆ ಸವರಿ ಸ್ನಾನಕ್ಕೆ ಹೋದ.

ಇಡೀ ಪೂರ್ತಿ ಕತ್ತಲು ಆವರಿಸಿದಂತಾಯಿತು. ಸುಮ್ಮನೆ ಒಂದು ಕಡೆ ಕೂತುಬಿಟ್ಟಳು. ಮೂರ್ತಿಯನ್ನು ಒಲಿಸಿಕೊಳ್ಳಬೇಕು. ಅವನ ತಟಸ್ಥ ಧೋರಣೆಯಿಂದ ಅಲ್ಪ ಸ್ವಲ್ಪ ಬದಲಾವಣೆ ಬರಬಹುದೆಂಬ ಆಸೆ. ಅದು ಸಣ್ಣ ಕ್ಯಾಂಡಲ್ ಆಗಿ ಇಡೀ ಕತ್ತಲೆಯನ್ನೆ ದೂರ ಮಾಡುವ ಪ್ರಯತ್ನ ಮಾಡುತ್ತಿತ್ತು.

ಟವಲು ಸುತ್ತಿಕೊಂಡು ಬಂದ ಮೂರ್ತಿ ಸಣ್ಣನೆಯ ದನಿಯಲ್ಲಿ ಹಾಡುತ್ತ ಮಡದಿಯನ್ನು ಅಪ್ಪಿಕೊಂಡ "ಯಾಕೆ ಕೂತೇ, ಏನಾದ್ರೂ ವಿಶೇಷನಾ ?" ಛೇಡಿಸಿದ. "ಏನಿಲ್ಲ..." ಎದ್ದು ಹೋಗಿ ಅಡಿಗೆ ಮುಗಿಸಿದಳು.

ಮೂರ್ತಿಯ ಊಟ ಮುಗಿಯುವವರೆಗೂ ಮಾತು ಬೇಡವೆನಿಸಿತು. ಸ್ಕೂಟರ್ ಹೊರಗೆ ನಿಲ್ಲಿಸಿ ಬಂದವನು "ನಮ್ಮ ಫೋನ್ ಬರೋವರ್ಗೂ ಪ್ರಾಬ್ಲಮ್. ಎಸ್.ಟಿ.ಡಿ. ಬೂತ್‌ನಲ್ಲಿ ಫೋನ್ ಮಾಡ್ಬಹ್ದು, ನಡೀ" ಎಂದ.

ಮೂರ್ತಿಯ ಕೈ ಹಿಡಿದು ಕೂಡಿಸಿ "ನವೀನ್‌ಗೆ ಸುತರಾಂ ಪೂಜಾನ ವಿವಾಹವಾಗೋ ಇಷ್ಟವಿಲ್ಲ. ಬಲವಂತದ ವಿವಾಹ ಯಾರ್ಗೂ ಸುಖ ತರೋಲ್ಲ" ಎಂದ ಕೂಡಲೇ ಅವನ ಮುಖ ಕೆಂಪಾಯಿತು. ಕಣ್ಣುಗಳಲ್ಲಿ ಕಿಡಿಗಳು ಇಣುಕಿತು.

"ನಿನ್ನ ಫಿಲಾಸಫಿ ನಂಗ್ಬೇಡ. ಯಸ್, ನೋ ಅಷ್ಟೇ ಬೇಕಾಗಿರೋದು. ಅವ್ನು ತೆಪ್ಪಗೆ ನನ್ತಂಗಿ ಕುತ್ತಿಗೆಗೆ ತಾಳಿ ಕಟ್ಟದಿದ್ದರೇ ಪರಿಣಾಮ ನೆಟ್ಟಗಾಗೋಲ್ಲ. ಅವ್ನ ಬಗ್ಗೆ ನಂಗೆಂದು ಸದಭಿಪ್ರಾಯವಿಲ್ಲಿಲ್ಲ" ದನಿಯೇರಿಸಿದ.

"ವಿರೋಧಾಭಾಸದ ಮಾತುಗಳು ಬೇಡ. ಸದಭಿಪ್ರಾಯವಿಲ್ದ ವ್ಯಕ್ತಿಗೆ ನಿಮ್ಮ ತಂಗಿನ ಕೊಡೋ ಪ್ರಯತ್ನ ಯಾಕೆ ?" ಸವಾಲ್ ಎಸೆದಳು.

ಅವನಿಗೆ ಮತ್ತಷ್ಟು ಉರಿದು ಹೋಯಿತು. ಅವನು ತಂದೆಗೆ ಬಹಳ ಹೆದರುತ್ತಿದ್ದ. ತನಗೇ ಜೀವನದಲ್ಲಿ ಮೊದಲ ಸಲ ವಹಿಸಿದ ಒಂದು ಪುಟ್ಟ ಕೆಲಸ ಮಾಡಲಾಗದಕ್ಕೆ ಅವನಿಗೆ ನಾಚಿಕೆಯೆನಿಸಿತು. ಇಲ್ಲಿ ಸೋಲು ಒಪ್ಪಿ ಕೊಳ್ಳಲಾರ.

"ನಂಗೆ ಪಾಠ ಮಾಡೋಕೆ ಇಷ್ಟವಿಲ್ಲ. ಅವ್ನು ಒಪ್ಪಿಕೊಂಡ್ನಾ ಇಲ್ವಾ?" ಕೇಳಿದ. ಇಲ್ಲವೆಂದು ತಲೆಯಾಡಿಸಿದಳು. "ಗೋ ಟು ಹೆಲ್, ಇಲ್ಲಿಗೆ ಎಲ್ಲಾ ಸಂಬಂಧಗಳು ಮುಗ್ದು ಹೋಗುತ್ತೆ. ಆರಾಮಾಗಿ ತವರಿಗೆ ಹೋಗ್ಬಿಡು" ಒಂದೇ ಮಾತಿನಲ್ಲಿ ಹೇಳಿದಾಗ ಶಿಲೆಯಾದಳು.

ಒಳಗೆ ಹೋದವನು ಬೀಗ, ಬೀಗದ ಕೈ ಹಿಡಿದು ಬಂದವನು "ಹತ್ತು ನಿಮಿಷದಲ್ಲಿ ಹೊರಟು ಬಿಡ್ಬೇಕು. ಇಲ್ಲದಿದ್ದರೇ ನಾನೇ ಹೊರ್ಗೆ ಹಾಕಿ ಬಾಗ್ಲು ಹಾಕ್ಕೊಂಡ್ ಹೋಗ್ತೀನಿ. ಅಷ್ಟಕ್ಕೆ ಅವಕಾಶ ಕೊಡ್ಬೇಡ" ರಾತ್ರಿಯೆಲ್ಲ ನೂರು ಪ್ರೇಮದ ಮಾತುಗಳನ್ನಾಡಿದ ವ್ಯಕ್ತಿ ಎಷ್ಟು ಬೇಗ ಬದಲಾಗಿದ್ದ.

ಕಣ್ತುಂಬಿ ಬಂದರೂ ತುಟಿ ಕಚ್ಚಿ ಸೂಟ್‌ಕೇಸ್‌ಗೆ ಬಟ್ಟೆ ಬರೆಗಳನ್ನ ತುಂಬಿಕೊಂಡು ಏಳು ನಿಮಿಷಗಳಲ್ಲಿಯೇ ಮನೆಯಿಂದ ಹೊರಗೆ ಅಡಿಯಿಟ್ಟಳು.

ಅವಳತ್ತ ತಿರುಗಿ ಕೂಡ ನೋಡದ ಮೂರ್ತಿ ಬೀಗ ಹಾಕಿ ಕೀ ಬಂಚ್‌ನ ಜೇಬಿನಲ್ಲಿ ಹಾಕಿಕೊಂಡು ಆರಾಮಾಗಿ ಸ್ಕೂಟರ್ ಹತ್ತಿದ. ಎರಡೇ ನಿಮಿಷದಲ್ಲಿ ಕಣ್ಮರೆಯಾಯಿತು.

ಪ್ರೇಮ, ಪ್ರೀತಿಯೆಂದರೇನು ? ಮೊದಲ ಸಲ ತನ್ನನ್ನು ಪ್ರಶ್ನಿಸಿಕೊಂಡಳು. 'ಚಿನ್ನ, ರನ್ನ ಎಂದು ಉಸುರಿದ ಗಂಡನ ಜೀವನದಲ್ಲಿ ತಾನು ಏನು ?' ಉಂಡು ಎಸೆದ ಬಾಳೆಯ ಎಲೆ. ಎಷ್ಟೋ ಹೆಣ್ಣುಗಳು ಬಯಕೆಯನ್ನೇ ಭ್ರಮೆಯೆಂದು ತಿಳಿದು ಬದುಕಿದ್ದಾರೇನೋ.

ಆಟೋ ಹತ್ತುವ ಬದಲು ಸಿಟಿ ಬಸ್ಸು ಹತ್ತಿದ್ದಕ್ಕೆ ಕಾರಣ ಇತ್ತು. ಗಂಡ ಪಶ್ಚಾತಾಪಪಟ್ಟು ಹುಡುಕಿಕೊಂಡು ಬಸ್ಸು ಸ್ಟಾಂಡ್‌ಗೆ ಬರಬಹುದೆಂಬ ಆಸೆ. ರೆಡಿಯಾಗಿದ್ದ ಬಸ್ಸು ಬಿಟ್ಟು ಒಂದೆರಡು ಗಂಟೆಗಳು ಕಾದು ನಂತರ ಬಸ್ಸು ಹತ್ತಿದಾಗ ಒಂದು ಪರಿಛೇದಕ್ಕೆ ತೆರೆ ಬಿದ್ದಂತಾಯಿತು. ಮುಂದೇನು? ಬಹುಶಃ ಯುಗಂಧರ್ ಮನೆಯವರು ಪಟ್ಟು ಬದಲಾಯಿಸಲಾರರೆನಿಸಿದಾಗ ಅವಳೆದೆಯ ಮೇಲೆ ದೊಡ್ಡ ಬಂಡೆ ಬಿದ್ದಂಥ ಭಾರ. ಬಹುಶಃ ಅದರ ಪರಿಜ್ಞಾನ ಕೃಷ್ಣಮೂರ್ತಿಗೆ ಇರಲಿಲ್ಲ!

ಮಗಳು ಹಿಂದಿರುಗಿದ್ದು ನೋಡಿ ವಾಸುದೇವಯ್ಯ ಹೌಹಾರಿದರು. ಮುಂದೇನು? ಎದುರು ಮನೆಯಲ್ಲಿ ಈಗಾಗಲೇ ಮದುವೆಯ ಏರ್ಪಾಟುಗಳು ಷುರುವಾಗಿತ್ತು. ಬೆಳಿಗ್ಗೆ ಹೋಗಿ ಛತ್ರಕ್ಕೆ ಅಡ್ವಾನ್ಸ್ ಕೊಟ್ಟು ಬಂದ ಸುದ್ದಿ ನೀರದ ತಂದೆ ಬಂದು ತಿಳಿಸಿ ಹೋಗಿದ್ದರು.

"ಏನು ವಿಷ್ಯ ?" ಗಾಬರಿಯಿಂದ ಮೇಲೆದ್ದರು.

ಸೂಟುಕೇಸ್ ರೂಮಿನಲ್ಲಿ ಇಟ್ಟು ಬಂದ ಚಾರುಲತ ತಗ್ಗಿದ ದನಿಯಲ್ಲಿ "ಅಂಥದೇನಿಲ್ಲ! ಅವ್ರ ನಾಳೆ ನಾಳಿದ್ದರಲ್ಲಿ ಬರ್‍ತಾ ಇದ್ದಾರಷ್ಟೆ" ಟವಲಿಡಿದು ಬಾತ್‌ರೂಂಗೆ ಹೋದವಳು ಗೋಡೆಗೊರಗಿ ಬಿಕ್ಕಳಿಸಿದಳು. ಒಂದಿಷ್ಟು ಸಮಾಧಾನ ಸಿಗಬಹುದೇ ವಿನಃ ಅಳು ಪರಿಹಾರ ಸೂಚಿಸದೆಂದು ಕೊಂಡಾಗ ಮುಖ ತೊಳೆದು ಹೊರಗೆ ಬಂದಳು.

ತೀರಾ ಸೋತವರಂತೆ ಕೂತಿದ್ದರು ವಾಸುದೇವಯ್ಯ.

"ನೀನು ನಿಜಾ ಹೇಳೋದು ಒಳ್ಳೇದು. ಮಗ್ನ ಮೂಲಕ ತಮ್ಮ ಹಟ ಸಾಧಿಸ್ತಾ ಇದ್ದಾರೆ ಬೀಗರು. ಇದು ಯಾವ ನ್ಯಾಯ ?" ಹತ್ತು ಜನಾನ ಕರ್ಕೊಂಡ್ಹೋಗಿ ಕೇಳ್ತೀನಿ. ಆವೇಗದಿಂದ ಬಡಬಡಿಸಿದರು.

"ದಯವಿಟ್ಟು ಬೇಡಿ. ಮತ್ತಷ್ಟು ಹದಗೆಡುತ್ತೆ" ರೂಮಿಗೆ ಹೋದಳು. ಅವಳ ಪ್ರಕಾರ ನವೀನ್ ನಾದಿನಿಯನ್ನ ಮದುವೆಯಾಗುವ ಸಾಧ್ಯತೆ ಇರಲಿಲ್ಲ. ಅವರುಗಳು ಕೂಡ ಅದೇ ಹಟದಲ್ಲಿ ನಿಂತಿದ್ದರು. ಇಲ್ಲಿ ಬಲಿಪಶು ಅವಳು!

ಹಿಂದಿನ ರಾತ್ರಿಯವರೆಗೂ ಅವಳೊಂದು ರೀತಿಯ ಭ್ರಮೆಯಲ್ಲಿದ್ದಳು. ಮೂರ್ತಿ ಬೆಳಿಗ್ಗೆ ಜ್ಞಾನೋದಯಕ್ಕೆ ಕಾರಣವಾಗಿದ್ದ. ಒಂಟಿಯಾಗಿ ಹೊರಟವಳನ್ನ

ಕನಿಷ್ಟ ಹಿಂದಿರುಗಿ ನೋಡುವ ಕರುಣೆಯನ್ನ ತೋರಿಸಿರಲಿಲ್ಲ.

ರಾತ್ರಿ ನವೀನ್ ಬರುವ ಮುನ್ನ ಅವಳಿಗೆ ಫೋನ್ ಬಂತು. "ಚಾರು ತಾನೇ, ಸ್ವಲ್ಪ ಕೇಳು. ನೀನು ಹಟ ಮಾಡಿಯಾದ್ರೂ ನವೀನ್‌ನ ಒಪ್ಸು. ಇಲ್ಲದಿದ್ದರೇ ನಿನ್ನ ಬದ್ಕು ನರ್ಕ ಸದೃಶವಾಗುತ್ತೆ. ಎಂದೂ ನೀನು ಮೂರ್ತಿ ಜೊತೆ ಸಂಸಾರ ಮಾಡೋಕ್ಕಾಗೋಲ್ಲ. ಬೆಳಿಗ್ಗೆ ನಿನ್ನ ಫೋನ್‌ಗಾಗಿ ಕಾಯ್ತಾ ಇರ್ತೀನಿ" ಅವಳ ಪ್ರತಿಕ್ರಿಯೆಗಾಗಿ ಕಾಯದೆ ಫೋನಿಟ್ಟ.

ಚಾರುಲತಳ ಕೈಯಲ್ಲಿದ್ದ ಫೋನ್ ಬಹಳ ಹೊತ್ತು ಕೆಳಗಿಳಿಯಲಿಲ್ಲ.

"ಯಾರದಮ್ಮ ಫೋನ್ ?" ಅಡಿಗೆ ಮನೆಯಲ್ಲಿದ್ದ ವಾಸುದೇವಯ್ಯ ಕೈಯೊರೆಸುತ್ತ ಬಂದು ಕೇಳಿದಾಗ, ಫೋನಿಟ್ಟು ಭಾರವಾದ ಉಸಿರು ದಬ್ಬಿ "ಅವರದ್ದೇ ಫೋನ್" ಎನ್ನುವ ವೇಳೆಗೆ ನವೀನ್, ನೀರದಳೊಂದಿಗೆ ಒಳಗೆ ಬಂದ. ಮುಂದಿನ ಮಾತುಗಳು ಅವಳ ನಾಲಿಗೆಯಲ್ಲಿಯೇ ಉಳಿಯಿತು.

"ಅರೇ, ಯಾವಾಗ್ಬಂದೆ ?" ನವೀನ್ ಆತಂಕದಿಂದ ವಿಚಾರಿಸಿದ.

ಬಲವಂತದಿಂದ ಮುಗುಳ್ನಗೆಯನ್ನು ಎಳೆ ತಂದ ಚಾರುಲತ "ಸ್ವಲ್ಪ ಹೊತ್ತಾಯಿತಷ್ಟೆ" ಎಂದು ನೀರದ ಕಡೆ ತುಂಟ ನೋಟ ಬೀರಿದಳು "ಇನ್ನೇನು ತೊಂದರೆ ಇಲ್ಲ, ಅತ್ತಿಗೆಂತ ಕೂಗಬಹುದಲ್ಲ" ಅವಳು ನಾಚಿ ನೀರಾಗಿ ತಮ್ಮ ಮನೆಗೆ ಓಡಿದಳು. ಸುಂದರ ಲೋಕದಲ್ಲಿ ವಿಹರಿಸುತ್ತಿದ್ದ ಅವಳಿಗೆ ಯಾವ ಬಿಸಿಯ ಶಾಖವು ತಟ್ಟಿರಲಿಲ್ಲ.

ತಂಗಿಯ ಬಳಿ ಕೂತ ನವೀನ್ ಬಲವಂತದಿಂದ ಸತ್ಯವನ್ನು ಹೊರಡಿಸಿ ದವನು ಭುಸುಗುಟ್ಟಿದ. ಹಸುಪಿನಂತೆ ಕಾಣುವ ಮೂರ್ತಿಯ ಬಣ್ಣ ಸ್ಪಷ್ಟವಾಗಿದ್ದು ಇಂದೇ.

"ನಾನ್ಹೋಗಿ ಮಾತಾಡ್ತೀನಿ" ಮೇಲೆದ್ದ.

"ಏನಂತ ?" ಕೇಳಿದಳು ತಣ್ಣಗೆ.

ನವೀನ್ ಅಯೋಮಯದಿಂದ ತಂಗಿಯನ್ನ ನೋಡಿದ. ಅತ್ಯಂತ ಶಾಂತವಾಗಿ ಕಂಡಳು. "ಯಾಕೆ ಕೇಳ್ಬಾರ್ದಾ ?" ಎಂದ ಮೆಲ್ಲಗೆ.

"ಪ್ರಯೋಜನವಿಲ್ಲ. ಮತ್ತಷ್ಟು ಮಾತುಕತೆ ಜಗಳ ಅಷ್ಟೆ. ಅದ್ರಿಂದ

ಯಾರು ಸುಖಿಗಳಾಗೋಲ್ಲ. ಸಧ್ಯಕ್ಕೆ ಆ ಪ್ರಯತ್ನ ಬಿಡಿ" ಅತ್ಯಂತ ಸ್ಪಷ್ಟವಾಗಿ ಉಸುರಿದಳು.

ತಂದೆ, ಮಗ ಮುಖ ಮುಖ ನೋಡಿಕೊಂಡರು. ಮಗನ ವಿವಾಹದಿಂದ ಮಗಳ ದಾಂಪತ್ಯ ಛಿದ್ರ ಛಿದ್ರ. ವಾಸುದೇವಯ್ಯನಿಗೆ ಸಹಿಸಲಸಾಧ್ಯವೆನಿಸಿತು. ಕುಸಿದು ಕೂತರು.

"ನವೀನ್, ಸಧ್ಯಕ್ಕೆ ನಿನ್ನದ್ದೆ ಮುಂದೆ ಹಾಕು." ಸಲಹೆ ಇತ್ತರು ದಿಕ್ಕು ತೋಚದಂತೆ. ಅವನು ಎರಡು ಕೈಯಲ್ಲು ತಲೆ ಹಿಡಿದುಕೊಂಡ. "ಅದ್ರಿಂದ ಸಮಸ್ಯೆಯೇನು ಪರಿಹಾರವಾಗೋಲ್ಲ. ಹೀಗೆಯೇ ಮುಂದುವರಿಯುತ್ತೆ. ನನ್ನ ವಿವಾಹ ಬೇಗ ಮುಗಿದ್ರೆ...ವಿಷ್ಯಕ್ಕೆ ಒಂದು ಮುಕ್ತಾಯ ಸಿಗುತ್ತೆ. ಆಮೇಲೆ ಎಲ್ಲಾ ಸರಿ ಹೋಗುತ್ತೆ."

ನವೀನ್ ಮಾತು ಅವಳಿಗೂ ಸರಿಯೆನಿಸಿತು.

"ಹೌದಪ್ಪ, ಅಣ್ಣ ಹೇಳೋದ್ರಲ್ಲಿ ಅರ್ಥವಿದೆ. ಯಾವ್ದೇ ಕಾರಣಕ್ಕೂ ವಿವಾಹ ಮುಂದೂಡೋದ್ಬೇಡ" ಒಪ್ಪಿಗೆ ಸೂಚಿಸಿದಳು.

ಆದರೂ ವಾಸುದೇವಯ್ಯನವರಿಗೆ ಭಯವೇ. ಸ್ವಲ್ಪ ದೈನ್ಯತೆಯಿಂದ ಮಗನತ್ತ ನೋಡಿದರು. "ನಿನ್ನ ತಂಗಿಗೋಸ್ಕರ ಒಂದಿಷ್ಟು ತ್ಯಾಗ ಮಾಡ್ಬಾರ್ದೇನೋ" ಎಂದರು. ಅವರಿಗೆ ಎದುರು ಮನೆ ನೀರದಾಗಿಂತ ಮಗಳ ಭವಿಷ್ಯ ಮುಖ್ಯವಾಗಿತ್ತು.

ತೀರಾ ಖಿನ್ನತೆ ಕಾಣಿಸಿಕೊಂಡಿತು ನವೀನ್‌ನ ಮುಖದ ಮೇಲೆ. ಸರ್ವಥಾ ಒಪ್ಪಲಾರ.

"ಹೇಗೆ ಸಾಧ್ಯ ? ಈ ವಿಷ್ಯ ನೀರದ ಕಿವಿಗೆ ಬಿದ್ದರೇ ಮೊದ್ಲು ಅವ್ಳು ಆತ್ಮಹತ್ಯೆ ಮಾಡ್ಕೋತಾಳೆ. ಈಗಾಗ್ಲೇ ನಮ್ಮಿಬ್ರ ವಿಷ್ಯ ಸಮಾಜಕ್ಕೆ ಡಣಾ ಡಂಗೂರವಾಗಿದೆ. ಮೊದ್ಲೇ ಮಾನ ಮರ್ಯಾದೆ ಅಂತ ಸಾಯೋ ಜನ, ಅವ್ಳ ಮನೆಯವ್ರು. ಒಂದು ಕುಟುಂಬದ ಸರ್ವನಾಶಕ್ಕೆ ನಾವು ಕಾರಣರಾಗಿ ಬಿಡ್ತೀವಿ. ಆಮೇಲೆ ನಾನು ತಾನೇ ಒಪ್ಪದ ಹಟಮಾರಿ ಹೆಣ್ಣನ್ನ ಕಟ್ಕೊಂಡ್ ನೆಮ್ದಿಯಾಗಿ ಇರ್ತೀನಾ ? ಆಮೇಲೆ ಇನ್ನೊಂದು ಕಾರಣ ಹೇಳ್ಕೊಂಡ್ ಹೆಂಡತಿ ಹೀಗೇ ಹಿಂಸಿಸ್ತಾನೆ. ಇದು ಹೀಗೇ ಮುಂದುವರಿಯುತ್ತೆ. ಬಗ್ಗಿದೋರ ಬೆನ್ನ

ಮೇಲೆ ಗುದ್ದೋರು ಜಾಸ್ತಿ. ಈ ಹಾರಾಟ ವಿವಾಹವಾದ ಕೂಡ್ಲೇ ನಿಂತ್ಹೋಗುತ್ತೆ." ಆಮೇಲೆ ತಗ್ಗಿಸಿಕೊಂಡು ವಿಸ್ತಾರವಾಗಿ ಹೇಳಿದ.

"ಹೌದಪ್ಪ, ಹತ್ತಿರದ ಲಗ್ನದಲ್ಲೇ ಅಣ್ಣನ ವಿವಾಹ ಮುಗ್ಸಿಬಿಡೋಣ" ಸಮ್ಮತಿ ಸೂಚಿಸಿದಳು.

ತರಾತುರಿಯಲ್ಲಿ ನಿಶ್ಚಿತಾರ್ಥದ ದಿನ ಗೊತ್ತಾದ ಮೇಲೆ ಡಾ|| ನವೀನ್ ವಿಷಯ ಹೊತ್ತು ಮೂರ್ತಿಯ ಬಳಿಗೆ ಹೋದ. ಆ ಸಮಯದಲ್ಲಿ ಕಾಲೇಜಿನಲ್ಲಿದ್ದ ಭಾವನಿಂದ ನಗು ಮುಖದ ಸ್ವಾಗತವೇನು ಸಿಗಲಿಲ್ಲ.

"ಏನು... ಬಂದಿದ್ದು ?" ಸ್ವಲ್ಪ ಅಸಹನೆಯಿಂದಲೇ ಪ್ರಶ್ನಿಸಿದ.

"ಸ್ವಲ್ಪ ಕ್ಯಾಂಟೀನ್‌ನಲ್ಲಿ ಕೂತು ಮಾತಾಡ್ಬಹುದಲ್ಲ" ಎಂದ ತಾಳ್ಮೆಯಿಂದ ನವೀನ್ "ಸಾರಿ, ನಂಗೆ ಮತ್ತೊಂದು ಪಿರಿಯಡ್ ಇದೆ. ಅದೇನು ಇಲ್ಲೇ ಹೇಳ್ಬಹ್ದು" ಎಂದ ವಾಚ್ ಕಡೆ ನೋಡುತ್ತ.

ತುಂಬು ಸ್ನೇಹದಿಂದ ಆತ್ಮೀಯ ಗೆಳೆಯನಂತೆ ಕಾಣುತ್ತಿದ್ದ ವ್ಯಕ್ತಿ, ಇಂದು ಅವನ ಮಾತುಗಳನ್ನು ಕೇಳಲೇ ಇಷ್ಟವಿಲ್ಲವೆನ್ನುವಂತೆ ಮುಖ ಮಾಡಿದ್ದ.

"ನಾಳಿದ್ದು ವಿವಾಹದ ನಿಶ್ಚಿತಾರ್ಥ. ನಿಮ್ಮನ್ನ ಕರ್ರ್ಕೊಂಡ್ಹೋಗೋಕೆ ಬಂದೆ. ನಾನು ಎಂದೂ ಪ್ರೀತಿ ಪ್ರೇಮದ ದೃಷ್ಟಿಯಿಂದ ನೋಡಿಲ್ಲ. ಒತ್ತಡ ಮದ್ವೆಗಳು ಯಾರ್‍ಗೂ ಸುಖ ತರೋಲ್ಲ" ಎಂದ ಅತ್ತಿತ್ತ ನೋಡುತ್ತ ಮೆಲುವಾಗಿ.

ದೂರದಲ್ಲಿ ಬರುತ್ತಿದ್ದ ಸಹೋದ್ಯೋಗಿಯ ಕಡೆ ಕೈಯಾಡಿಸಿದ ಮೂರ್ತಿ ಇವನಿಂದ ಬೇಗ ಬೇಗ ಸರಿದು ಮಾಯವಾದ, ಯಾವ ಪ್ರತಿಕ್ರಿಯೆಯನ್ನು ತೋರದೆ. ಅಂತು ಪೂರ್ತಿಯಾಗಿ ತೆರೆ ಎಳೆದುಬಿಟ್ಟ.

ನವೀನ್ ಕಾಲೇಜಿನಲ್ಲಿ ಹುಡುಕಾಡಿ ಸಂಜೆ ಮನೆಗೆ ಹೋದಾಗ ಬೀಗ ಹಾಕಿತ್ತು.

"ಅಂಕಲ್, ಊರಿಗೆ ಹೋದ್ರು" ಎದುರು ಮನೆಯ ಹುಡುಗ ಬಂದು ತಿಳಿಸಿ ಹೋದ.

ಸೋತವನಂತೆ ಅವನು ಮನೆಗೆ ಬಂದಾಗ ಮಧ್ಯರಾತ್ರಿ ದಾಟಿತ್ತು. ಚಾರುಲತ ಮಲಗಿದ್ದರೂ ನಿದ್ರಿಸಿರಲಿಲ್ಲ. ವಾಸುದೇವಯ್ಯ ಹಾಸಿಗೆಯ ಮೇಲೆ ಎದ್ದು ಕೂತು ದೇವರ ಧ್ಯಾನ ಮಾಡುತ್ತಿದ್ದರು.

ಮಗನ ಮುಖ ನೋಡಿದ ಕೂಡಲೇ ಹೌಹಾರಿದರು.

"ಮೂರ್ತಿ ಸಿಗ್ಲಿಲ್ಲ" ಎಂದವನು ಷೂ ಕಳಚಿ ರೂಮಿಗೆ ಹೋಗಿ ಬಿಟ್ಟ. ಅವನ ತಲೆ ಬಡಿಗೆಯಲ್ಲೊಡೆದಂತೆ ಸಿಡಿಯುತ್ತಿತ್ತು. ಒಂದಲ್ಲ ಹತ್ತು ನೋವು ನಿವಾರಕ ಗುಳಿಗೆಗಳನ್ನು ನುಂಗಿದರೂ ನೋವು ಕಡಿಮೆಯಾಗದು. 'ಚಾರು, ನಾನು ಈಗ ಏನ್ಮಾಡ್ಲಿ ?' ಮುಷ್ಟಿ ಬಿಗಿ ಹಿಡಿದು ಗಾಳಿಯಲ್ಲಿ ಗುದ್ದಿದ.

ಬೆಳಿಗ್ಗೆಯು ವೇಳೆಗೆ ತೀರಾ ಬಳಲಿದ. ಮೂರ್ತಿ ತಂಗಿಗಾಗಿ ತನ್ನ ದಾಂಪತ್ಯವನ್ನು ಬಲಿ ಕೊಡಲು ಸಿದ್ಧನಿದ್ದ. ಅವನು ತೀರಾ ಮೂರ್ಖನಂತೆ ಕಂಡ. ತಂದೆ,ತಾಯಿ ತಂಗಿಯನ್ನು ಬೆಂಗಾವಲಿಗೆ ಇಟ್ಟುಕೊಂಡು ಯುದ್ಧ ಸಾರಿದ್ದ. ತಂಗಿಯನ್ನು ನೆನೆದು ಅವನ ಕಣ್ತುಂಬಿತು. 'ಚಾರು, ಖಂಡಿತ ನಿಂಗೆ ಅನ್ಯಾಯ ಮಾಡಲಾರೆ' ಕಣ್ಣೀರು ಸುರಿಸಿದ.

"ಅಣ್ಣ....." ಚಾರುಲತ ಅವನನ್ನು ಅರಸಿಕೊಂಡು ಬಂದಾಗ ಕಣ್ಣು ತೊಡೆದು ಕೊಂಡು ನಗೆ ಬೀರಿದ. ಅವಳಿಗೆ ಅರ್ಥ ಮಾಡಿಕೊಳ್ಳಲು ಸಮಯ ಬೇಕಾಗಲಿಲ್ಲ. "ಇದು ಅನಿರೀಕ್ಷಿತವಲ್ಲ. ಕೆಲವು ಸಲ ವಿನಾಕಾರಣ ವಾಗಿ ಶಿಕ್ಷೆ ಅನುಭವಿಸ್ಬೇಕಾಗುತ್ತೆ. ನೀನೇನು ತಲೆ ಕೆಡಿಸ್ಕೋಬೇಡ. ನೀರದ ಒಂದ್ಸಲ ಬಂದ್ಹೋದ್ಳು. ತಿಂಡಿ ಕೂಡ ಅಲ್ಲಿಂದ್ಲೇ ಬಂದಿದೆ" ನಗೆಯಾಡಿದಳು.

ಮೂರ್ಖತನದಿಂದ ಅಣ್ಣನ ಬಗ್ಗೆ ಕೋಪಿಸಿಕೊಳ್ಳಲಾರಳು.

"ಚಾರು, ಪ್ಲೀಸ್ ದಿಕ್ಕು ತೋಚದಂತಾಗಿದೆ. ಈಗೇನು ಮಾಡ್ಲಿ ? ಮೂರ್ತಿ ನಡವಳಿಕೆ ನೋಡಿದ್ರೆ ನಂಗೆ ಭಯವಾಗುತ್ತೆ. ನಿನ್ನ ಕರೆಸಿ ಕೊಳ್ಳದಿದ್ದರೇ ?" ಭಯ ವ್ಯಕ್ತಪಡಿಸಿದ.

ಈ ಪ್ರಶ್ನೆಯನ್ನ ಸಾವಿರ ಸಲವಾದರೂ ತನಗೆ ತಾನು ಹಾಕಿಕೊಂಡಿದ್ದಳು. ನಾಲ್ಕರ ಚಳಿ ಬಂದಂತಾಗುತ್ತಿತ್ತು. ಸಪ್ತಪದಿ ತುಳಿದು ಜೀವನ ಪೂರ್ತಿ ಅವನೊಂದಿಗಿನ ಕನಸ್ಸನ್ನು ಕಂಡವಳಿಗೆ ವರ್ಷ ತುಂಬುವ ಮುನ್ನವೇ ಬೇರೆ ಬೇರೆಯಾಗಿ ಬದುಕುವುದೆಂದರೇನು ? ಅದೊಂದು ದುಸ್ವಪ್ನವೇ. ಮೂರ್ತಿ ಇಲ್ಲದೆ ತಾನು ಬದುಕುವುದು ಸಾಧ್ಯವೇ ? ಸಾಧ್ಯ, ಅಸಾಧ್ಯಗಳ ನಡುವೆ ಅಂತರವೆಷ್ಟು, ಮನ ಲೆಕ್ಕ ಹಾಕಿತು ಆಳವಾಗಿ.

ತಂಗಿಯ ಮ್ಲಾನವದನ ನೋಡಿ ಇನ್ನಷ್ಟು ಬೆಚ್ಚಿದ.

"ಚಾರು, ನಿಂಗೋಸ್ಕರ ನಾನು ಮೂರ್ತಿ ತಂಗಿನ ವಿವಾಹವಾಗ್ತೀನಿ"

ಬಡಬಡಿಸಿದ ತಂಗಿಯ ಕೈ ಹಿಡಿದುಕೊಂಡು. ಇಂಥ ನಿರ್ಧಾರದಿಂದ ಮತ್ತಷ್ಟು ಹಿಂಸೆ, ತೊಳಲಾಟವೇ ಅನಿಸಿತು. "ಬೇಡ, ಇದ್ರಿಂದ ಏನು ಪ್ರಯೋಜನವಾಗೋಲ್ಲ. ವಿವಾಹವೊಂದು ಮೆಟ್ಟಿಲಾಗಿ ಹಾಗೇ ಮುಂದು ವರಿಯುತ್ತೆ. ನಾಳೆ ನಿಂಗೂ ಪೂಜಾ ಮಧ್ಯೆ ಪ್ರೀತಿ ಬೆಳೆಯಲ್ಲಿಲ್ಲಾಂದರೇ ನಾನು ಹೊಣವಾಗ್ತೀನಿ. ಇದೆಲ್ಲ ಯಾಕೆ ? ದಿನಗಳು ಕಳೆಯುವುದು ಹಿಂಸೆಯಾಗ್ಬಿಡುತ್ತೆ. ನೀನು ಆರಾಮವಾಗಿ ನಿರ್ಯೋಚನೆಯಿಂದ ನೀರದಾನ ಮದುವೆಯಾಗು. ಸಧ್ಯಕ್ಕೆ ಅದೊಂದೇ ಉತ್ತಮ ದಾರಿ" ಮನಸ್ಸಿನಲ್ಲಿದ್ದುದ್ದನ್ನು ಅತ್ಯಂತ ಸ್ಪಷ್ಟವಾಗಿ ಉಸುರಿದಳು.

ಮತ್ತೆ ಮತ್ತೆ ಅಪ್ಪ ಮಕ್ಕಳು ಕೂತು ಎಷ್ಟು ಯೋಚಿಸಿದರೂ ಇದು ಬಿಟ್ಟು ಬೇರೆ ದಾರಿ ಇಲ್ಲಿಲ್ಲ.

"ನಾನೇ ಹೋಗಿ ಒಂದ್ಮಾತು ಹೇಳ್ಬರ್ತೀನಿ" ವಾಸುದೇವಯ್ಯ ಹೊರಟಾಗ, ಚಾರುಲತ ತಡೆದಳು "ಬೇಡಪ್ಪ, ನಾನು ಅಣ್ಣ ಹೋಗ್ಬರ್ತೀವಿ. ಒಂದಿಷ್ಟು ಪೂಜಾ ಕೈಯಲ್ಲಿ ಪರ್ಸನಲ್ಲಾಗಿ ಮಾತಾಡಿದಂತಾಗುತ್ತೆ."

ಅದಕ್ಕೆ ಮುಖ್ಯ ಕಾರಣವಿತ್ತು. ಯುಗಂಧರ್ ಅತ್ಯಂತ ಕಟುವಾಗಿ ಮಾತನಾಡಬಲ್ಲರು. ಅವರಿಂದ ತಂದೆ ಈ ವಯಸ್ಸಿನಲ್ಲಿ ಅವಮಾನಿತರಾಗಿ ನೋಯುವುದು ಬೇಡವಾಗಿತ್ತು.

ಸಂಜೆಯು ಸುಮಾರಿಗೆ ಅಣ್ಣ, ತಂಗಿ ಅವರ ಮನೆ ತಲುಪಿದಾಗ, ಮ್ಯಾಗಝೀನ್ ನೋಡುತ್ತಿದ್ದ ಪೂಜಾ ತಟ್ಟನೇ ಮೇಲೆದ್ದು "ಅಮ್ಮ ಯಾರೋ ಬಂದಿದ್ದಾರೆ" ಎಂದು ಹೇಳಿ ಕಣ್ಮರೆಯಾದಳು. ಸ್ವಲ್ಪ ಸ್ವಪ್ರತಿಷ್ಠೆ ಬೆಳೆಸಿಕೊಂಡಿದ್ದ ಅವಳಿಗೆ ಡಾ|| ನವೀನ್‌ನ ನಿರಾಕರಣೆ ದೊಡ್ಡ ಪೆಟ್ಟಾಗಿತ್ತು. ಅದಕ್ಕಾಗಿ ತನ್ನ ಪ್ರೀತಿಯ ಅತ್ತಿಗೆಯನ್ನು ದ್ವೇಷಿಸಲಾರಂಭಿಸಿದ್ದು ಮಾತ್ರ ಮೂರ್ಖತನ.

ಡಾ|| ನವೀನ್ ತುಟಿ ಕಚ್ಚಿ ಕೂತ. ಸದ್ದಿಲ್ಲದೆ ಸೋಫಾ ತುದಿಗೆ. ಆತ್ಮೀಯವಾಗಿ ಕಾಣುತ್ತಿದ್ದ ಜನ ಹೇಗೆ ದೂರ ಸರಿದರು. ಇದು ಅವನ ಪಾಲಿಗೂ ಅತ್ಯಂತ ನೋವಿನ ವಿಷಯವೇ. ತಮ್ಮ ಪ್ರೀತಿ, ಪ್ರೇಮ ಮದುವೆಗೆ ಅಡ್ಡವಾದವರು ತಂದೆಯಲ್ಲ, ತಂಗಿಯಲ್ಲ ನೀರದಳ ಮನೆಯವರಲ್ಲ, ಈ ಮೂರನೆಯ ಜನ ವೇದನೆಯಿಂದ ಮುಖ ಹಿಂಡಿದ.

ಅಡಿಗೆಯ ಮನೆಯಲ್ಲಿದ್ದ ಪೂಜಾಳ ತಾಯಿ ನಿರೀಕ್ಷಣೆಯಲ್ಲಿಯೇ ಇದ್ದುದರಿಂದ,

ಅಂಥ ಭಾವವೇಗವೇನು ಇರಲಿಲ್ಲ.

"ಚೆನ್ನಾಗಿದ್ದೀಯಾ ?" ವ್ಯವಹಾರಿಕ ಪ್ರಶ್ನೆ.

ಚಾರುಲತಳ ಸ್ವರ ಉಡುಗಿದಂತಾಯಿತು. ಅಲ್ಲಿ ಸಂಬಂಧದ ಮೇಲೆ ಚಪ್ಪಡಿಯೆಳೆದು ನಿಂತಿದ್ದರು. ದನಿಯೆತ್ತುವುದಾಗಲಿಲ್ಲ. ಕಣ್ತುಂಬಿತು. ಸರಸರನೆ ಹೊರ ಬಂದು ರೂಮಿಗೆ ಹೋದಳು. ಅವಳ ಮೂರ್ತಿಯ ಬೆಡ್ ರೂಂ ಸುಖದ ಕ್ಷಣಗಳು ನೆನಪಾದವು. ಮಂಚದ ಮೇಲೆ ಬಿಚ್ಚಿ ಎಸೆದ ಬಟ್ಟೆಗಳನ್ನು ಹ್ಯಾಂಗರ್‌ಗೆ ಹಾಕಿ ಕುಸಿದಳು. ಅಳು ತಡೆಯಲಾಗ ಲಿಲ್ಲ. ಬಿಕ್ಕಿ ಬಿಕ್ಕಿ ಅತ್ತು ಕಣ್ಣೊರೆಸಿಕೊಂಡು ಹೊರಗೆ ಬಂದಾಗ, ಮುಖದ ಮುಂದೆ ಪೇಪರ್ ಹಿಡಿದು ಕೂತಿದ್ದ ಡಾ॥ ನವೀನ್.

"ಯಾರು ಇಲ್ವಾ ಮನೆಯಲ್ಲಿ ?" ಕೇಳಿದ ಮೆಲ್ಲಗೆ.

"ಅತ್ತೆ ಇದ್ದಾರೆ, ಪೂಜಾನು ರೂಮಿಗೆ ಹೋಗಿ ಬಾಗ್ಲು ಹಾಕ್ಕೊಂಡಿದ್ದಾರೆ. ಅವ್ರಿಗೆ ನಮ್ಮ ಮೇಲೆ ಕೋಪ ಕಡ್ಮೆಯಾಗಿಲ್ಲ. ಮಾತಿಗೆ ಮಾತು ಸೇರಿಸೋ ದ್ರಿಂದ ರಾದ್ಧಾಂತವಾಗುತ್ತೇ ವಿನಃ ಯಾವ್ದೇ ಪ್ರಯೋಜನವಿಲ್ಲ." ಬುದ್ಧಿ ಹೇಳಿದಳು. ಅವಳಲ್ಲಿನ ಉದ್ವೇಗವೇ ತಗ್ಗಿರಲಿಲ್ಲ. ಎದೆ ಢವಗುಟ್ಟುತ್ತಿತ್ತು "ಬರ್ತೀನಿ..." ಮತ್ತೆ ಅಡಿಗೆ ಮನೆಗೆ ಹೋದಾಗ ಆಕೆ ಆರಾಮಾಗಿ ತರಕಾರಿ ಹೆಚ್ಚುತ್ತಿದ್ದಳು.

"ಅತ್ತೆ, ನಾಳೆ ನಮ್ಮಣ್ಣನ ಮದ್ವೆಯ ನಿಶ್ಚಿತಾರ್ಥ. ನೀವುಗಳೆಲ್ಲ.... ಬರ್ಬೇಕು" ಕುಂಕುಮದ ಬಟ್ಟಲನ್ನ ಆಕೆಯ ಮುಂದಿಡಿದಳು. "ಹೌದೇನು, ನಾಳೆಯಂತು ಖಂಡಿತ ಬರೋಕ್ಕಾಗೋಲ್ಲ ಬಿಡು. ಮೂರ್ತಿನು ಬಂದಿದ್ದಾನೆ, ಅವ್ನ ಸ್ನೇಹಿತನ ಮನೆಯಲ್ಲಿ ಸತ್ಯನಾರಾಯಣ ಪೂಜೆನಂತೆ." ಸ್ವಲ್ಪ ಒರಟಾಗಿಯೆ ನುಡಿದಿದ್ದು. ತಾಯಿಯಂತೆ ತುಂಬು ಅಂತಃಕರಣ ತೋರುತ್ತಿದ್ದ ಆಕೆ ಎಷ್ಟು ಬೇಗ ಕಟುವಾಗಿ ಬಿಟ್ಟರು. ಇಲ್ಲಿ ನನ್ನ ತಪ್ಪೇನು ?

"ಅವ್ರು ಎಲ್ಲಿಗೆ ಹೋಗಿದ್ದಾರೆ ?" ವಿಚಾರಿಸಿದಳು.

"ಅಪ್ಪ, ಮಗ ಎಲ್ಲಿಗೋ ಹೋಗಿದ್ದಾರೆ. ನಮ್ಗೂ ಹೋಗೋದಿದೆ. ಪೂಜಾ...." ಎನ್ನುತ್ತ ಹೊರಗೆ ಹೋದಾಗ, ತನ್ನ ವ್ಯಕ್ತಿತ್ವದ ಅರಿವಾಯಿತು ಅವಳಿಗೆ. ಉಕ್ಕುತ್ತಿದ್ದ ಹಾಲನ್ನ ಇಳಿಸಿಟ್ಟು ಹೊರಗೆ ಬಂದಳು "ಹೋಗೋಣ, ಅವ್ರುಗಳು ಹೊರ್ಗೇ ಹೊರಟಿದ್ದಾರೆ, ನಮ್ಮಿಂದ ತೊಂದರೆಯಾಗೋದ್ಬೇಡ"

ಎಂದಳು. ಅವಳ ಕಣ್ಣಂಚಿನಿಂದ ಕಂಬನಿ ಹೊರ ಚಿಮ್ಮಿಯೇ ಬಿಟ್ಟಿತು.

"ಕೂತ್ಕೋ, ಚಾರು" ಅವಳನ್ನ ಕೈ ಹಿಡಿದು ಕೂಡಿಸಿದ.

ಮಗಳೊಂದಿಗೆ ಬಂದ ಆಕೆ "ಹೇಗಿದ್ದೀರಾ ? ನಾವುಗಳು ಎಲ್ಲೋ ಹೊರಟಿದ್ದೀವಿ" ಇನ್ನ ತಾವು ಹೋಗಬಹುದೆಂದು ಪರೋಕ್ಷವಾಗಿ ಹೇಳಿದಾಗ ಒಮ್ಮೆ ಪೂಜಾ ಕಡೆ ನೋಟ ಹರಿಸಿದ ಡಾ॥ ನವೀನ್ ಮೇಲೆದ್ದ "ಅವ್ರಿಗೆ ತೊಂದರೆಯಾಗೋದ್ಬೇಡ. ನಾವು ಹೋಗೋಣ."

"ನೀನ್ಹೋಗು, ನಿಮ್ಮ ಭಾವ ಬಂದಿದ್ದಾರಂತೆ, ಅವ್ರ ಜೊತೆಯಲ್ಲಿ ಬರ್ತೀನಿ" ಸ್ವಾಭಿಮಾನ ಹತ್ತಿಕ್ಕಿ ಭಂಡತನ ತೋರಿದಳು. ತಕ್ಷಣ ಪೂಜಾ "ಇಲ್ಲಿಗಿಂತ ನಿಮ್ಮ ಅಗತ್ಯ ಹೆಚ್ಚಿಗಿದೆ. ಅಣ್ಣಾ ಬಂದ್ಮೇಲೆ ಫೋನ್ ಮಾಡೋಕೆ ಹೇಳ್ತೀನಿ" ಎಂದಳು. ಅಲ್ಲಿ ಅವಳನ್ನ ಉಳಿಸಿಕೊಳ್ಳುವುದು ಅವರಿಗೆ ಬೇಕಿರಲಿಲ್ಲ.

"ಹೋಗೋಣ, ಚಾರು" ಡಾ॥ ನವೀನ್ ನುಡಿದ ಕೋಪದಿಂದ.

ತಾನೇ ಹೋಗಿ ಕುಂಕುಮ ಹಚ್ಚಿಕೊಂಡು ಬಂದ ಚಾರುಲತ ಅಕ್ಷತೆಯನ್ನು ಟೇಬಲ್ಲು ಮೇಲಿಟ್ಟು "ಎಲ್ಲಾ ಬರ್ಬೇಕು ಅತ್ತೆ, ಮಾವನವ್ರಿಗೆ ಹೇಳಿ, ನಾನು ಫೋನ್ ಮಾಡ್ತೀನಿ" ಎಂದಿದ್ದಕ್ಕೆ ಅವರಿಬ್ಬರ ಪ್ರತಿಕ್ರಿಯೆ ಸೊನ್ನೆ.

ಚಾರುಲತ, ಡಾ॥ ನವೀನ್ ಹೊರಗೆ ಬಂದು ನಿಶ್ಚಿಂತೆಯಿಂದ ಉಸಿರಾಡಿದರು. ನವೀನ್ ಕೋಪದಿಂದ ಕುದಿಯುತ್ತಿದ್ದರೇ, ದಿಕ್ಕು ತೋಚ ದಂತಾಗಿತ್ತು ಚಾರುಲತಗೆ. ನಾಲ್ಕು ಹೆಜ್ಜೆ ಮುಂದಿಟ್ಟದ್ದು ಆಗಿತ್ತು. ಈಗ ಹಿಂದೆಗೆದರೂ ಪರಿಣಾಮ ಅಷ್ಟೆ. ನೋಯುವವರ ಸಂಖ್ಯೆಯಾದರೂ ಕಡಿಮೆಯಾಗಲಿಯೆಂದು ಗಟ್ಟಿ ನಿರ್ಧಾರಕ್ಕೆ ಬಂದಳು.

"ಬೀ ಕಾಮ್, ಈಗೇನು ಮಾಡೋ ಸ್ಥಿತಿಯಲ್ಲಿಲ್ಲ. ನೋಡೋಣ, ಬೇಗ ಮನೆಗೆ ಹೋಗ್ಬಿಡೋದು ವಾಸಿ" ಅವಸರಿಸಿದಳು.

ಇಬ್ಬರು ಮನೆಗೆ ಬಂದಾಗ ವಾಸುದೇವಯ್ಯ ಹೊರಗಡೆಯೇ ಇದ್ದರು. ಅವರಿಗೆ ಎಲ್ಲಕ್ಕಿಂತ ಬೀಗರು, ಅಳಿಯ ಬರುವುದು ಮುಖ್ಯವಾಗಿತ್ತು. ಈಗ ಅವರುಗಳೇ ಬರಲಿಲ್ಲವೆಂದರೆ ಬೇರೆಯವರಿಗೆ ಹೇಗೆ ಮುಖ ತೋರಿಸುವುದು ?

"ಎಲ್ಲಾ ಸಿಕ್ಕಿದ್ರಾ ?" ಆತುರದಿಂದ ಪ್ರಶ್ನಿಸಿದರು.

"ಕೆಲವರು ಸಿಕ್ಕಿದ್ರು, ಕೆಲವರು ಸಿಗ್ಲಿಲ್ಲ. ಅವ್ರು ಬರೋ ನಿರೀಕ್ಷೆಯೇನು

ಇಟ್ಟುಕೊಳ್ಳೋದ್ಬೇಡ. ಮೂರ್ತಿ ಕೂಡ ಇಲ್ಲೇ ಇದ್ದಾರೆ. ಈಗಾಗ್ಲೇ ಸಾಕಷ್ಟು ಅವಮಾನಿತರಾಗಿದ್ದೀವಿ. ನೋಡಿ...ನೋಡಿ...ಇಂಥ ಜನರ ಸಂಬಂಧ ಮಾಡಿದಂಗಾಯ್ತು" ಅಸಹನೆಯನ್ನು ಕಕ್ಕಿದ. 'ಏನು ಬೇಡ' ವೆಂದ ಮೂರ್ತಿ ಅವನ ದೃಷ್ಟಿಯಲ್ಲಿ ಅಂದು ಆದರ್ಶ ಪುರುಷನಾಗಿದ್ದ. ಇಂದು ತೀರಾ ಅವಿವೇಕಿಯಾಗಿ ಕಂಡಿದ್ದ.

ಚಾರುಲತ ತನ್ನ ಪಾಡಿಗೆ ತಾನು ರೂಮಿಗೆ ಹೋದಳು.

ಮೂರ್ತಿ ಬೇರೆಯವರ ದೃಷ್ಟಿಯಲ್ಲಿ ತೀರಾ ಚಿಕ್ಕವನಾಗುವುದು ಅವಳಿಗೆ ಕಷ್ಟವೆನಿಸಿತು. ಅತ್ತು ಸಮಾಧಾನ ಮಾಡಿಕೊಂಡಳು. ಮದುವೆಗೆ ಮುನ್ನ ಹಲವು ಸಲ ಮಾತುಕತೆಯಲ್ಲಿ ಮೂರ್ತಿ ತೀರಾ ಒಳ್ಳೆಯವನಾಗಿ ಕಂಡ. ಅವಳಿಗಾಗಿಯೇ ಹುಟ್ಟಿದ್ದು, ಮುಂದೆ ಅವಳಿಗಾಗಿಯೇ ಬದುಕುವುದು ಎನ್ನುವ ಭರವಸೆ ಅವನ ದನಿಯಲ್ಲಿತ್ತು. ಆಗ ಅವಳು ವಿಹರಿಸಿದ್ದು ಆಕಾಶದಲ್ಲಿ.

ರೂಮಿನೊಳಕ್ಕೆ ಬಂದ ವಾಸುದೇವಯ್ಯ ಮಗಳ ಬಳಿ ಕೂತರು. "ಈಗೇನು ಮಾಡೋದು ?" ಅವರ ಸ್ವರ ಒದ್ದೆಯಾಗಿತ್ತು.

ಬಹಳ ಬೇಗ ಚೇತರಿಸಿಕೊಂಡ ಚಾರುಲತ "ಏನಿದೆ ಮಾಡೋಕೆ ? ಬಹುಶಃ ಅವ್ರುಗಳು ನಿಶ್ಚಿತಾರ್ಥಕ್ಕೆ ಬರೋಲ್ಲ. ಹಾಗಂತ ತೀರಾ ತಲೆ ಕೆಡ್ಸಿಕೊಳ್ಳೋದ್ಬೇಡ. ನಾವು ಈಗ ಏನು ಮಾಡೋ ಸ್ಥಿತಿಯಲ್ಲಿಲ್ಲ" ಧೈರ್ಯ ಹೇಳಿದಳು. ಸಧ್ಯಕ್ಕೆ ಅವರು ಕುಸಿಯದಂತೆ ಅಷ್ಟನ್ನ ಮಾಡಬೇಕಿತ್ತು.

"ಮುಂದೆ ನಿನ್ನ ಗತಿ ?" ಎಂದರು ಆತಂಕದಿಂದ.

ಚಾರುಲತಾಗೆ ಷಾಕಾಯಿತು. ಹೃದಯದ ಬಡಿತವೇರಿ ಎರಡೇ ಕ್ಷಣದಲ್ಲಿ ಬೆವತುಬಿಟ್ಟಳು. ಪ್ರಯಾಸದಿಂದ ತುಸು ಚೇತರಿಸಿಕೊಂಡಳು.

"ಏನು ಆಗೋಲ್ಲ ! ಅವರದು ಹುಸಿ ಬೆದರಿಕೆ. ವಿವಾಹ ಮುಗ್ದ ಮೇಲೆ ಸ್ವಲ್ಪ ದಿನ ಸಂಬಂಧಗಳು ಬಿಗಿಯಾಗಿರುತ್ತೆ. ಆಮೇಲೆ ತಾನಾಗಿ ಸರ್ಹೋಗುತ್ತೆ" ಆಶ್ವಾಸನೆ ನೀಡಿದಳು. ಅವರುಗಳ ವರ್ತನೆ ನೋಡಿದ ಮೇಲೆ ಆ ನಂಬಿಕೆ ಅವಳಿಗೆ ಇರಲಿಲ್ಲ.

"ಇದ್ನ ನಂಬಲಾ ?" ಕೇಳಿದರು ದೀನತೆಯಿಂದ.

"ನಂಬದೇ ಇರೋಕೆ ಏನಿದೆ ? ತಾನಾಗಿ ಎಲ್ಲಾ ಸರ್ಹೋಗುತ್ತೆ. ನೀವು

ಧೈರ್ಯವಾಗಿರಿ" ಭರವಸೆಯ ಮಾತುಗಳನ್ನಾಡಿದಳು.

ಇವರುಗಳ ನಿರೀಕ್ಷೆಯಂತೆ ನಿಶ್ಚಿತಾರ್ಥದ ದಿನ ಯಾರು ಬರಲಿಲ್ಲ. ತೀರಾ ಹತ್ತಿರವಲ್ಲೇ ಇಷ್ಟ ಲಗ್ನವ ಫಿಕ್ಸ್ ಮಾಡಿದರು. ಸರಳವಾಗಿ ಒಂದು ಆಡಿಟೋರಿಯಂನಲ್ಲಿ ನಡೆಯಬೇಕೆಂದು ಡಾ॥ ನವೀನ್ ಗಲಾಟೆ ಮಾಡಿದ. ಸಧ್ಯಕ್ಕೆ ಟೆನ್‌ಷನ್‌ನಿಂದ ಪಾರಾಗಲು ವಿವಾಹ ಮುಗಿಯಬೇಕಿತ್ತು.

ಹತ್ತು ಸಲವಲ್ಲ ನೂರು ಸಲವಾದರೂ ಅತ್ತೆಯ ಮನೆಗೆ ಫೋನ್ ಮಾಡಿದಳು ಚಾರುಲತ. ಇವಳ ದನಿ ಕೇಳಿದ ಕೂಡಲೇ 'ಹಲೋ' ಎಂದವರು ರಾಂಗ್‌ನಂಬರ್ ಎಂದು ಇಡುತ್ತಿದ್ದರು. ಅಪ್ಪ, ಮಗಳು, ಅಣ್ಣ, ತಂಗಿ ಒಂದೆರಡು ಸಲ ಹೋಗಿ ಸಾಂತ್ವನಿಸುವ ಪ್ರಯತ್ನ ಮಾಡಿದರು.

"ಯಾಕೆ, ನಮ್ಮ ಸಮಯನ ಹಾಳು ಮಾಡ್ತೀರಾ ?" ಯುಗಂಧರ್ ಕೇಳಿದಾಗ ವಾಸುದೇವಯ್ಯ "ದಯವಿಟ್ಟು ಕ್ಷಮ್ಸಿ...." ಎಂದು ಎದ್ದು ಬಂದಿದ್ದರು. ಆ ಕ್ಷಣ ಇನ್ನ ಆ ಮನೆಯ ಕಡೆ ತಲೆ ಹಾಕಬಾರದೆಂದು ನಿರ್ಧರಿಸಿ ಕೊಂಡರಷ್ಟೆ. ಆದರೆ ಮಗಳು ನೆನಪಾದ ಕೂಡಲೇ ಪಾತಾಳಕ್ಕೆ ಇಳಿದು ಹೋದರು.

ಅಂತು ಅವರುಗಳು ಬರದಂತೆಯೇ ಮದುವೆ ಆಯಿತು. ಮೇಲ್ಮುಖವಾಗಿ ಉತ್ಸಾಹದಿಂದ ಚಾರುಲತ ಭಾಗವಹಿಸಿದರೂ ಅವಳ ಮನ ಮೂರ್ತಿಗಾಗಿ ತವಕಿಸುತ್ತಿತ್ತು. ಅವನ ಮಟ್ಟಿಗೆ ಇದೊಂದು ದೊಡ್ಡ ಅಪರಾಧ ಕ್ಷಮಿಸಲಾರ!

ವರಪೂಜೆಯ ದಿನ ಮೂರ್ತಿ ತಂದೆಯ ಅಭಿಪ್ರಾಯ ಕೇಳಲು ಬಂದ "ಡಾ॥ ನವೀನ್ ಲಗ್ನಪತ್ರಿಕೆ ಹಿಡಿದುಕೊಂಡು ಬಂದಿದ. ಬಹಳ ರಿಕ್ವೆಸ್ಟು ಮಾಡಿಕೊಂಡ. ಈ ವಿವಾಹ ನಡೆಯದೇ ಹೋದರೇ ನೀರದ ಇಡೀ ಕುಟುಂಬ ಆತ್ಮಹತ್ಯೆ ಮಾಡ್ಕೊತ್ತಾರಂತೆ" ಉಸುರಿದ.

ಅವನ ಕೈ ಹಿಡಿದು ದರದರ ಎಳೆದೊಯ್ದರು ಪೂಜಾಳ ರೂಮಿಗೆ "ನೋಡು, ಅವ್ರುಗಳು ಆತ್ಮಹತ್ಯೆ ಮಾಡ್ಕೊತಾರೆ. ಇದ್ದ ನಾವು ನಂಬಿ ಬಿಡ್ಬೇಕು. ಇಲ್ಲಿ ನೋಡು, ನಿನ್ತಂಗಿ ಸ್ಥಿತಿ. ಸರ್ಯಾದ ಸಮಯಕ್ಕೆ ಡಾಕ್ಟ್ರು ಬರದಿದ್ದರೇ ಪೂಜಾನ ಮರ್ತು ಬಿಡ್ಬೇಕಿತ್ತು. ಇದ್ನ ಯಾರ್ಗೆ ಹೇಳ ಕೊಳ್ಳೋಣ" ದಬ ದಬ ಹುಚ್ಚಹಿಡಿದವರಂತೆ ತಲೆ ಚಚ್ಚಿಕೊಂಡರು. ನಿದ್ದೆಯ ಮಾತ್ರೆ ನುಂಗಿ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸಿದ್ದ ಮಗಳನ್ನ ಉಳಿಸಿಕೊಳ್ಳಲು ನಾನಾವಸ್ಥೆ ಪಟ್ಟಿದ್ದರು.

ಇಂದೇ ಡಿಸ್ಚಾರ್ಜ್ ಮಾಡಿಸಿ ಅವಳನ್ನ ಮನೆಗೆ ಕರೆತಂದಿದ್ದು. ಅವಳಿಗಿನ್ನು ನಿದ್ದೆಯ ಮಂಪರು. ತಂದೆಯ ಕೈಗಳನ್ನ ಹಿಡಿದುಕೊಂಡ ಮೂರ್ತಿ ಹೊರಗೆ ಕರೆದೊಯ್ದ. ಅವರು ಇಷ್ಟು ದಿಕ್ಕೆಟ್ಟಿದ್ದನ್ನ ಅವನೆಂದು ನೋಡಿರಲಿಲ್ಲ.

"ಏನು ಅನಾಹುತವಾಗ್ಲಿಲ್ವಲ್ಲ, ಸಮಾಧಾನ ಮಾಡ್ಕೊಳ್ಳಿ" ಕುಸಿದು ಕೂತ. "ನಮ್ಮ ಮನೆ ನೆಮ್ದೀ ಹಾಳು ಮಾಡಿಬಿಟ್ಲು. ಇವ್ಳು ಪಟ್ಟು ಹಿಡಿದಿದ್ರೆ....ನವೀನ್ ಯಾಕೆ ನಿರಾಕರಿಸುತ್ತಿದ್ದ ? ನಿರಾಕರಿಸೋಂಥ ಹುಡ್ಗೀನ ನಮ್ಮ ಪೂಜಾ" ಬಂದ ಅವನ ತಾಯಿ ಅತ್ತುಕೊಂಡು ಕೂತರು.

ಸಂತೈಯಿಸಲಾರದೇ, ಸಮಾಧಾನಿಸಲಾರದೆ ಹೋದ. ಈಗ ಚಾರುಲತ ದೊಡ್ಡ ತಪ್ಪಿತಸ್ಥಳಾಗಿ ಕಂಡಳು. ಖಂಡಿತ ಅವಳು ಪಟ್ಟು ಹಿಡಿದಿದ್ದರೇ ನವೀನ್, ನೀರದಾನ ಮದುವೆಯಾಗುತ್ತಿರಲಿಲ್ಲ. ಇದು ನೂರಕ್ಕೆ ನೂರರಷ್ಟು ಸತ್ಯವಾಗಿ ಕಂಡಾಗ, ಅವನ ಮೈ ಬೆಂಕಿಯಾಯಿತು. ಮುಂದೆ ಅವಳೊಂದಿಗಿನ ಬದುಕು ಬೇಡವೇ ಬೇಡವೆಂಬ ನಿರ್ಧಾರಕ್ಕೆ ಬಂದ.

"ಹಾಳಾಗ್ಲಿ ಬಿಡೀ, ಅವ್ನ ಯಾವ ದೊಡ್ಡ ಮನುಷ್ಯಾಂತ ಕಾಲು ಕಟ್ಟಿಕೊಂಡು ಕನ್ಯೆನ ಕೊಡೋದು. ಪೂಜಾ ಈ ಅಪಾಯದಿಂದ ಪಾರಾದಳಲ್ಲ, ಸ್ವಲ್ಪ ಸುಧಾರ್ಸಿಕೊಳ್ಳಿ. ಒಳ್ಳೆ ಕಡೆ ಹುಡ್ಗೀ ಮಾಡೋಣ" ಎಂದವ ಮುಖ ತೊಳೆಯಲು ಬಾತ್‌ರೂಮಿಗೆ ಹೋದ.

ಬೆಡ್‌ರೂಂನ ಫ್ರೇಮ್‌ನಲ್ಲಿದ್ದ ಚಾರುಲತ ಫೋಟೋ ಹರಿದು ಕಸದ ಬುಟ್ಟಿಗೆ ಹಾಕಿದ. ಅವಳ ನೆನಪು ಕೂಡ ಬೇಡವೆನಿಸಿತು. ಅವಳ ನೋಟ, ಮಾತು, ನಡತೆಯನ್ನು ತುಂಬ ಮೆಚ್ಚುತ್ತಿದ್ದ ಮೂರ್ತಿಗೆ ಇಂಥ ಪ್ರತಿ ಯೊಂದರಲ್ಲು ತಪ್ಪು ಕಂಡಿತು.

ಊಟಕ್ಕೆ ಕೂತಾಗ ಕೂಡ ಅವನ ಮುಖದ ಗಂಟು ಸಡಿಲವಾಗಲಿಲ್ಲ. ಬಡಿಸುತ್ತ ಅವನ ತಾಯಿ "ಈಗೇನ್ಮಾಡೋದು ? ಇಲ್ಲಿಗೂ ಬಂದು ಕರೆದ್ರು. ಈಗಾಗ್ಲೇ ವಿಷ್ಯ ಡಣಾಡಂಗೂರವಾಗ್ಬಿಟ್ಟಿದೆ. ನಾವಾಗಿ ಹೆಣ್ಣು ಕೊಡೋಕೆ ಹೋದ್ವಿ, ಅವ್ರಿಗೆ ಇಷ್ಟವಾಗ್ಲಿಲ್ಲಾಂತ ಇನ್ವಿಟೇಷನ್ ಹಂಚಿದ ಕಡೆಯಲ್ಲೆಲ್ಲ ಹೇಳ್ಕೊಂಡ್ ಬಂದಿದ್ದಾರೆ. ಯಾವ ಮುಖ ಇಟ್ಕಂಡ್ ಹೋಗೋಣ" ಕಣ್ಣೀರಿಟ್ಟರು.

"ಪ್ಲೀಸ್, ನೀನು ಅಳ್ಬೇಡಮ್ಮ. ಇನ್ನ ನಾವ್ಯಾಕೆ ಆ ಮದ್ವೆಗೆ ಹೋಗೋಣ?

ಇದರೊಂದಿಗೆ ಅವ್ಳ ಜೊತೆಗಿನ ಸಂಬಂಧ ತೊಡೆದು ಹೋಯ್ತು. ನಿಶ್ಚಿಂತೆಯಾಗಿ ಬಿಡ್ಲು. ನಂಗೆ ಪೂಜಾ ಚೇತರ್ಸ್ಕೊಂಡರೇ ಸಾಕು" ಎಂದ ಉಪ್ಪಿನಕಾಯಿಯನ್ನು ತಟ್ಟೆಯ ಅಂಚಿಗೆ ದಬ್ಬುತ್ತ.

ಆಕೆ ಸುಮ್ಮನಾದರು. ಅಪ್ಪ, ಮಗ ಊಟ ಮಾಡಿದ್ದು ಅಷ್ಟಕಷ್ಟೆ. ಸಾವು ಬದುಕಿನ ಹೋರಾಟದಿಂದ ಹೊರ ಬಿದ್ದ ಪೂಜಾ ಸರಿಯಾಗಿ ಚೇತರಿಸಿ ಕೊಳ್ಳಲು ಇನ್ನ ಕೆಲವು ದಿನ ಬೇಕಿತ್ತು. ಈಗಲು ಅವಳು ತೆಗೆದು ಕೊಳ್ಳುತ್ತಿದ್ದುದು ಲಿಕ್ವಿಡ್ ಆಹಾರವೇ. ಖಾರ, ಎಣ್ಣೆಯ ತಿಂಡಿಗಳನ್ನ ಅರಗಿಸಿಕೊಳ್ಳುವ ಸ್ಥಿತಿಯಲ್ಲಿರಲಿಲ್ಲ ಅವಳ ಜಠರ.

ರೂಮಿಗೆ ಬಂದವನು ಹಾಸಿಗೆಯ ಮೇಲೆ ಬಿದ್ದುಕೊಂಡ ಮೂರ್ತಿ. ಪೂಜಾ ಸತ್ತಿದ್ದರೇ, ಆ ಪ್ರಶ್ನೆಯೇ ಅವನನ್ನು ಎತ್ತಿ ಕುಕ್ಕಿತು. ಆ ಅಪರಾಧದಿಂದ ಅವನಿಗೆ ವಿಮುಕ್ತಿ ಇರಲಿಲ್ಲ.

ಅಲ್ಲಿ ವರಪೂಜೆಯ ಸಂಭ್ರಮ. ಇಲ್ಲಿ ಇವರ ಮನೆಯಲ್ಲಿ ಕತ್ತಲು ಮುಸುಕಿದಂತಾಗಿತ್ತು. ಮನೆಯಿಂದ ಒಬ್ಬರು ಹೊರ ಬರಲಿಲ್ಲ. ಒಬ್ಬರ ಮುಖವನ್ನ ಮತ್ತೊಬ್ಬರು ನೋಡಲು ಹಿಂಜರಿದರು. ಪೂಜಾಳಂತು ಮೇಲಕ್ಕೇಳಲಿಲ್ಲ. ಮುಂದೇನು ? ಈ ಪ್ರಶ್ನೆ ಕಾಡಿದ್ದು ಕೆಲವರನ್ನು. ಆದರೆ ಮೂರ್ತಿ ಇದ್ದ ಆವೇಶದಲ್ಲಿ ಚಾರುಲತಳೊಂದಿಗಿನ ಸಂಬಂಧ ಮುರಿದು ಕೊಳ್ಳಲು ಸಿದ್ಧವಿದ್ದ. ಯಾರ ತಪ್ಪಿಗೆ ಯಾರಿಗೆ ಶಿಕ್ಷೆ ?

ಮರುದಿನ ಬೆಳಗ್ಗೆ ಎದ್ದವನೇ ಹೊರಟು ನಿಂತ.

"ಅಮ್ಮ ಊರಿಗೆ ಹೋಗ್ತೀನಿ. ಸುಮ್ನೇ ಯಾಕೆ ಕಾಲೇಜ್‌ನ ಮಿಸ್ ಮಾಡ್ಕೋಬೇಕು" ಎಂದ.

ಕಾಫಿಯ ಲೋಟ ಮಗನ ಕೈಗೆ ಕೊಟ್ಟು "ಬೇಡ ಕಣೋ, ನೂರು ಪ್ರಶ್ನೆಗೆ ಸಮಾಧಾನ ಹೇಳ್ಬೇಕಾಗುತ್ತೆ. ನಿನ್ನ ಕೊಲೀಗ್ಸ್‌ರಲ್ಲಿ ಕೆಲವರಿಗಾದ್ರೂ ನವೀನ್ ವಿವಾಹದ ಇನ್ವಿಟೇಷನ್ ಕೊಟ್ಟಿರುತ್ತಾನೆ. ಇಂದು ಹೋದರೇ, ಅವ್ರ ಕಣ್ಣಲ್ಲಿನ ಪ್ರಶ್ನೆ ನಿನ್ನ ಕಾಡುತ್ತೆ. ಸತ್ಯ ಏನೇ ಇರಲೀ, ಅವ್ರುಗಳಿಗೆ ತೋಚಿದಂತೆ ಮಾತಾಡ್ಕೋತಾರೆ. ನೀನು ಅಪರಾಧಿ ಆಗ್ಬಿಡ್ತೀಯ" ಮುಂದಿನ ಚಿತ್ರವನ್ನ ಮಗನ ಮುಂದೆ ಬಿಡಿಸಿಟ್ಟರು.

ಛೆ.....ಎನಿಸಿತು. ಕೈಯಲ್ಲಿನ ಬ್ಯಾಗ್‌ನ ರೂಮಿಗೆ ತಂದು ಎಸೆದ. ಕೂದಲಲ್ಲಿ

ಕೈ ಹಾಕಿ ಕಿತ್ತ. ಎದ್ದು ಪೂಜಾಳ ರೂಮಿಗೆ ಬಂದ. ಹತ್ತಿಯಂತೆ ಬಿಳಿಚಿಕೊಂಡು ಹಾಸಿಗೆಗೆ ಅಂಟಿಕೊಂಡು ಮಲಗಿದ್ದ ಅವಳನ್ನು ನೋಡಿ ಅವನ ಹೃದಯ ಕಿತ್ತು ಬಾಯಿಗೆ ಬಂದಂತಾಯಿತು. 'ನವೀನ್, ನೀನು ಇದೇ ಶಿಕ್ಷೆ ಅನುಭವಿಸಬೇಕು' ಹಲ್ಲುಗಳನ್ನ ಕಡಿದ.

ಬಂದ ಯುಗಂಧರ್ ಮಗನ ಪಕ್ಕ ನಿಂತರು. ಅವರ ಕಣ್ಣಲ್ಲಿ ಕಂಬನಿ ಇತ್ತು. ಅಕ್ಕರೆಯ ಗೊಂಬೆಯಾಗಿ ಮಗಳನ್ನು ಬೆಳೆಸಿದ್ದರು. ಮಗನ ಭುಜದ ಮೇಲೆ ಕೈಯಿಟ್ಟರು.

ಇಬ್ಬರು ರೂಮಿನಿಂದ ಹೊರಗೆ ಬಂದಾಗ ಹನಿಗಣ್ಣಾಗಿದ್ದರು.

"ಪೂಜಾ, ಚೇತರ್ಸಿಕೊಳ್ಳೋಕೆ ಕೆಲವು ತಿಂಗಳುಗಳೇ ಆಗುತ್ತೆ" ಎಂದು ಗದ್ಗದಿತರಾದಾಗ ತಂದೆಯ ಕೈ ಹಿಡಿದುಕೊಂಡ ಮೂರ್ತಿ "ನಾನು ಅವ್ವನ ಅಲ್ಲಿಗೆ ಕರ್ಕೊಂಡ್ಹೋಗ್ತೀನಿ. ಸ್ಥಳ ಬದಲಾವಣೆಯಿಂದ ಬೇಗ ಚೇತರಿ ಸ್ಕೋತಾಳೆ" ಅಂದ. ಯುಗಂಧರ್ ಮೌನವಹಿಸಿದರು.

ಮೂರ್ತಿ ಬಂದು ರೂಮಿನಲ್ಲಿ ಕೂತ. ಅವನ ಮುಂದೆ ಲಗ್ನಪತ್ರಿಕೆ ಇತ್ತು. ಒಂಬತ್ತು ಗಂಟೆಗೆ ಹತ್ತು ನಿಮಿಷವಿತ್ತು. ಅಣ್ಣನ ವಿವಾಹದ ಸಂಭ್ರಮದಲ್ಲಿ ಭಾಗವಹಿಸುವ ಚಾರುಲತಳನ್ನು ನೆನಸಿಕೊಂಡು ಅವನೆದೆಯ ರಕ್ತ ಕುದಿಯಿತು.

ಇನ್ವಿಟೇಷನ್‌ನ ಚೂರು ಚೂರು ಮಾಡಿ ಕಸದ ಬುಟ್ಟಿಗೆ ಹಾಕಿದ. ಮಡದಿ ತೀರಾ ನಿರ್ದಯಿಯಾಗಿ ಕಂಡಳು. ಇಲ್ಲಿನ ನೋವು, ಕಷ್ಟಕ್ಕೆ ಅವಳು ಮಿಡಿಯಬೇಕಿತ್ತು. ಆ ಇಚ್ಛೆ ಅವಳಿಗಿಲ್ಲ. ಪಾಷಾಣ ಹೃದಯದ ಹೆಣ್ಣು ! ಹಲ್ಕುಡಿ ಕಚ್ಚಿಡಿದ.

ಅಲ್ಲಿ ಲಡ್ಡು, ಚಿರೋಟಿಯ ಊಟವಾದರೆ, ಇಲ್ಲಿ ಬರೀ ತಿಳಿಸಾರು, ಪಲ್ಯ, ಒಂದನ್ನ ಮಾಡಿಟ್ಟಿದ್ದರು.

ಈ ದಿನ ಇಡೀ ಕುಟುಂಬಕ್ಕೆ ಬಹಳ ದೀರ್ಘವಾಗಿ ಕಂಡಿತು. ಆದರೆ ಸಂಜೆ ಮುಂದು ಮೂರ್ತಿಯ ಕಾಲೇಜ್ ಸಹಪಾಠಿ ದಿನಕರ್ ಬಂದಾಗ ಅವನು ಹೊರಗಿನ ವಾರಂಡದಲ್ಲಿ ಇದ್ದಿದ್ದು ದೊಡ್ಡ ತಪ್ಪಾಗಿ ಹೋಯಿತು.

"ಏನೋ ಮೂರ್ತಿ ಮದುವೆ ಮನೆಯಲ್ಲಿ ಕಾಣಲೇ ಇಲ್ಲ. ನಾನೇ ಎದ್ದು

ಸಲ ಚಾರುಲತನ ಕೇಳ್ದೆ. ಸರ್‍ಯಾಗಿ ಏನು ಹೇಳ್ಲಿಲ್ಲ. ಏನಾದ್ರೂ ಮನಸ್ತಾಪನೇನೋ ?" ಫ್ರಾಂಕಾಗಿ ಕೇಳಿಯೇ ಬಿಟ್ಟ.

"ಅಂಥದ್ದೇನಿಲ್ಲ !" ಎಂದ ಚುಟುಕಾಗಿ.

ಅವನು ಸಾಮಾನ್ಯದ ಪಿಂಡವಲ್ಲ. ಬೇರೆಯವರ ವೈಯಕ್ತಿಕ ವಿಷಯಗಳಲ್ಲಿ ಅವನದು ವಿಪರೀತ ಕುತೂಹಲ. ಒಂದಿಷ್ಟು ವಿಷಯ ಹೊರಡಿಸಬೇಕೆಂದೇ ಅಲ್ಲಿಂದ ನೇರವಾಗಿ ತಾಂಬೂಲ ಹಿಡಿದು ಬಂದಿದ್ದ.

"ಸಾಕು ಸುಮ್ಮನಿರೋ ! ಸ್ವಂತ ಭಾವ ಮೈದುನ, ಮಡದಿಯ ಏಕೈಕ ಅಣ್ಣನ ವಿವಾಹದಲ್ಲಿ ನೀನು ಇರ್‍ಲಿಲ್ಲಾಂದರೇ ಅರ್ಥವೇನು ? ಇದು ಖಂಡಿತ ಸಾಮಾನ್ಯದ ವಿಷ್ಯವಲ್ಲ. ಎಲ್ಲೋ ಯಡವಟ್ಟು ಮಾಡ್ಕೊಂಡಿದ್ದೀಯಾ !" ಅವನು ಮಾತಿನಲ್ಲಿ ನಗೆ ಹಾರಿಸಿದಾಗ ಪಟಪಟ ನಾಲ್ಕು ಬಾರಿಸಿ ಬಿಡಬೇಕೆನಿಸಿತು. ಹಾಗೆಂದು ಮನಸ್ಸಿಗೆ ಬಂದಿದ್ದೆಲ್ಲ ಕಾರ್ಯರೂಪಕ್ಕೆ ತರಲು ಸಾಧ್ಯವೇ ?

"ಅಂಥದೇನಿಲ್ಲ ಕಣೋ" ಸಿಡುಕಿದ ಮೂರ್ತಿ.

"ಬುರುಡೆ ಬಿಡ್ಬೇಡ ! ನೀನು ಹೋಗ್ಲಿಲ್ಲಾಂದರೇ ಏನು ಅರ್ಥ ಏನೇ ಇರ್‍ಲಿ...ಇಂಥ ಸಂದರ್ಭಗಳಲ್ಲಿ ಅದ್ನೆಲ್ಲ ಮರ್‍ತು ಹೋಗಿ ಭಾಗವಹಿಸ್ಬೇಕು. ಜನ ಏನಂದ್ಕೋತಾರೆ. ನಾವು ಅವ್ರನ್ನ ಗಮನದಲ್ಲಿ ಇಟ್ಕೊಂಡ್ ಬದ್ಕಬೇಕು. ಬರ್ತೀನಪ್ಪ, ನಂಗೇನೋ ಸರಿ ಕಾಣ್ಲಿಲ್ಲ. ನಿಮ್ಮಪ್ಪ, ಅಮ್ಮನಾದ್ರೂ ನಿಂಗೆ ಬುದ್ಧಿ ಹೇಳ್ಬೇಕಿತ್ತು" ಅಂಥದೊಂದು ಮಾತನ್ನ ಸೇರಿಸಿಯೇ ಅವನು ಹೋಗಿದ್ದು.

ಈ ಮಾತು ಯುಗಂಧರ್ ಕಿವಿಯ ಮೇಲೆ ಬಿತ್ತು. ಮೊದಲೇ ಸುಪೀರಿಯಾರಿಟಿ ಕಾಂಪ್ಲೆಕ್ಸ್ ಇದ್ದ ಮನುಷ್ಯ ಒಳಗೊಳಗೆ ಒದ್ದಾಡಿಬಿಟ್ಟ.

ಎರಡು ದಿನದಿಂದ ಫೋನ್ ಡಿಸ್‌ಕನೆಕ್ಟ್ ಮಾಡಿದವರು ಇಂದು ಸಂಜೆಯ ನಂತರ ತಾವೇ ಕನೆಕ್ಟ್ ಮಾಡಿದರು. ಎಲ್ಲಾ ಮುಗಿದಿತ್ತು. ಎರಡು ಮನೆಗಳ ನಡುವಿನ ಸಂಬಂಧದ ಕೊಂಡಿ ಕಳಚಿಬಿತ್ತು. ಬೆಸೆಯುವುದು ಬಹಳ ಕಷ್ಟ. ಎರಡು ಕಡೆಯವರು ದೃಢವಾಗಿ ನಿಂತ ಹಿನ್ನೆಲೆಯಲ್ಲಿ ದೊಡ್ಡ ಕಂದಕವೇರ್ಪಟ್ಟಿತ್ತು. ಒಮ್ಮೆ ಏರ್ಪಟ್ಟ ಕಂದಕ ಮುಚ್ಚಲು ಸಾಧ್ಯವೇ ?

* * *

ಮದುವೆ ಮುಗಿದು ನಾಲ್ಕು ದಿನವಾಗಿತ್ತು. ಎರಡು ದಿನದ ಮಟ್ಟಿಗೆ

ದಂಪತಿಗಳು ಹೋಗಿ ಸುತ್ತಾಡಿ ಬಂದರು. ಆಗಾಗ ಬಂದು ಹೋಗುತ್ತಿದ್ದ ನೀರದ ಇಲ್ಲಿ ಬಂದು ಉಳಿದಿದ್ದು ಮಾತ್ರ ಸಣ್ಣ ಬದಲಾವಣೆ ಅಷ್ಟೆ.

ತಂದೆ ದೇವರ ಮನೆಯಿಂದ ಹೊರ ಬರುವುದನ್ನೇ ಕಾಯುತ್ತಿದ್ದ ಚಾರುಲತ "ಅಪ್ಪ, ಆ ಮನೆಗೆ ಹೋಗ್ತಿರ್ತೀನಿ" ಎಂದಳು ನೆರಿಗೆಗಳನ್ನ ಸರಿಪಡಿಸಿ ಕೊಳ್ಳುತ್ತ.

ವಾಸುದೇವಯ್ಯ ನೆಟ್ಟ ನೋಟದಿಂದ ಮಗಳನ್ನು ನೋಡಿದರು. ಮದುವೆಯ ದಿನ ಮೂರ್ತಿ ಇಲ್ಲಿಯೇ ಇದ್ದನೆಂದು ತಿಳಿದಿತ್ತು. ಇಡೀ ಕುಟುಂಬದಿಂದ ಇವರು ಬಹಿಷ್ಕೃತರಾಗಿದ್ದರು.

"ನಂಗೆ ಏನು ಹೇಳ್ಬೇಕೋ ತೋಚ್ತಾ ಇಲ್ಲ. ಅವ್ರು ಅಂದು ಆಡಿ ಅವಮಾನಿಸ್ಬಹುದು, ನಂಗ್ಯಾಕೋ ಭಯ ಕಣೇ, ಚಾರು. ಕೈಯಾರ ನಿನ್ನ ಭವಿಷ್ಯನ ಬಲಿ ಕೊಟ್ಟು ಬಿಟ್ಟೆವೇನೋ" ಕಣ್ಣೀರಿಟ್ಟರು.

"ಅಂಥದೇನಿಲ್ಲ, ನೀವು ಮಾತ್ರ ನವೀನ್ ಕೈಯಲ್ಲಿ ಬಲವಂತದಿಂದ ತಾಳಿ ಕಟ್ಟಿಸೋಕೆ ಆಗ್ತಾ ಇತ್ತಾ ? ಅಕಸ್ಮಾತ್ ಕಟ್ಟಿಸಿದ್ರೂ ಮುಂದೆ ಅವ್ರುಗಳು ಸುಖವಾಗಿ ಇರ್ತಾ ಇದ್ರಾ ? ಆಗ ನಾನಾ ಸಮಸ್ಯೆಗಳು ಷುರುವಾಗ್ತಾ ಇತ್ತು. ಈ ತರಹ ನಡೆದಿದ್ದೇ, ಸರಿ. ಪೂಜಾಗೆ ಅನುರೂಪನಾದ ಗಂಡೇ ಸಿಕ್ತಾನೆ" ಸಮಾಧಾನದ ಮಾತುಗಳನ್ನಾಡಿದಳು.

ಯಾಕೋ, ಏನೋ ವಾಸುದೇವಯ್ಯ ಮಗಳೊಬ್ಬಳನ್ನೆ ಕಳಿಸೋಕೆ ಇಷ್ಟಪಡದೇ ತಾವು ಹೊರಟರು. ಲಾಡು ಜೊತೆಗೆ ಮದುವೆಯ ತಿಂಡಿಗಳು, ಉಡುಗೊರೆ ಎಲ್ಲಾ ತೆಗೆದುಕೊಂಡು ಆಟೋದಲ್ಲಿ ಹೊರಟರು.

ಅವರ ಮನೆಯ ಮುಂದೆ ಆಟೋ ನಿಂತಾಗ ಇಬ್ಬರ ಎದೆಯ ಬಡಿತಗಳು ಹತ್ತು ಪಟ್ಟು ಹೆಚ್ಚಾಯಿತು. ಯುದ್ಧದ ಅಂಚಿನಲ್ಲಿ ನಿಂತ ಸೈನಿಕರ ಸ್ಥಿತಿ ಅವರದಾಗಿತ್ತು.

"ಅಪ್ಪ, ಅವ್ರು ಏನಾದ್ರೂ ಅಂದ್ಕೊಳ್ಳಿ, ನೀವು ಸುಮ್ನೇ ಇದ್ಬಿಡಿ. ಇಲ್ಲ, ನೀವು ಹಾಗೆಯೇ ಹೊರಟುಬಿಡಿ" ಎಂದಳು ಆವೇಗದಿಂದ. ಅವಳೆದೆ ಹಾರುತ್ತಿತ್ತು. ಮುಖದ ಮುಂದೆ ಬಾಗಿಲು ಹಾಕಿದರೂ ಹೆಚ್ಚಲ್ಲ.

ಮುಚ್ಚಿದ್ದ ಬಾಗಿಲನ್ನ ಕಾಲಿಂಗ್ ಬೆಲ್ ಒತ್ತಿದಾಗ ತೆರೆದಿದ್ದು ಮೃಣಾಲಿನಿಯವರೇ. "ಯಾರು..." ಅಂದವರು ಮಾತು ನಿಲ್ಲಿಸಿ ಒಳಗೆ ಹೋಗಿ

ಬಿಟ್ಟರು. ಪೂಜಾಳಿಗೆ ಒಂದೇ ಸಮ ನಾಲ್ಕು ದಿನದಿಂದ ಬರುತ್ತಿದ್ದ ಜ್ವರ, ಅವರುಗಳ ಕೋಪ, ಅಸಹನೆಯ ಬೆಂಕಿಯ ಮೇಲೆ ತುಪ್ಪ ಸುರಿದು ಮತ್ತಷ್ಟು ಪ್ರಜ್ವಲಿಸುವಂತೆ ಮಾಡಿತ್ತು.

ತಂದೆ, ಮಗಳು ಒಳಗೆ ಅಡಿಯಿಟ್ಟಾಗ "ಯಾರೋ....ಬಂದಿದ್ದಾರೆ ನೋಡಿ" ಕೂಗಿ ಹೇಳಿದರು ಮೂರ್ತಿಯ ತಾಯಿ.

ತಮ್ಮ ರೂಮಿನಿಂದ ಹೊರಗೆ ಬಂದ ಯುಗಂಧರ್ ನೋಡ ಬಾರದವರನ್ನ ನೋಡಿದಂತೆ ಮುಖ ಮಾಡಿದರು. ತಟ್ಟನೇ ಕೋಣೆಯೊಳಕ್ಕೆ ಹೋದವರು ಹಿಂದಕ್ಕೆ ಬಂದು ಉರಿಯುವ ಕಣ್ಣುಗಳಿಂದ ನೋಡಿದರು.

"ಸ್ವಲ್ಪ ಬನ್ನಿ...." ವಾಸುದೇವಯ್ಯನ ರಟ್ಟೆ ಹಿಡಿದು ಪೂಜಾಳ ಕೋಣೆಗೆ ಎಳೆದೊಯ್ದು ನಿಲ್ಲಿಸಿ "ನೋಡಿ, ಇನ್ನ ಸತ್ತಿಲ್ಲ. ನಮ್ಮ ಎದೆಯಲ್ಲಿ ಬೆಂಕಿ ಉರಿತಾ ಇದೆ. ದಯಪಿಟ್ಟು ಹೊರಟ್ಹೋಗಿ" ಎರಡು ಕೈಗಳನ್ನು ಜೋಡಿಸಿದರು.

ಬಿಳಲಿ ಬೆಂಡಾಗಿ ಮಲಗಿದ ಪೂಜಾನ ನೋಡಿದ ಅಪ್ಪ, ಮಗಳು ಸ್ತಬ್ಧರಾದರು. "ನೀವುಗಳು ಯಾರು ನಮ್ಮ ಮನೆ ಬಾಗ್ಲಿಗೆ ಬರ್ಬೇಡಿ. ಇಲ್ಲಿಗೆ ನಮ್ಮ ನಿಮ್ಮ ಸಂಬಂಧ ಮುಗ್ದೋಯ್ತು" ಎಂದು ಎಚ್ಚರಿಕೆ ನೀಡಿದಾಗ ವಾಸುದೇವಯ್ಯ ಮಗಳೊಂದಿಗೆ ಹೊರಗೆ ಬಂದರು. ಅವರಿಗೆ ದಿಕ್ಕು ತೋಚದಂತಾಯಿತು. ಕೈಕಾಲುಗಳು ಕಂಪಿಸುತ್ತಿತ್ತು.

"ನಮ್ಮ ನಿಮ್ಮ ಸಂಬಂಧ ತೊಡೆದುಹೋದ್ರೂ ಪರ್ವಾಗಿಲ್ಲ. ಇದ್ರಲ್ಲಿ ಚಾರುಲತದು ತಪ್ಪಿಲ್ಲ. ಅವ್ಳಿಗೆ ಶಿಕ್ಷೆ ವಿಧಿಸ್ಬೇಡಿ" ವಿನಂತಿಸಿದರು ನಡುಗುವ ದನಿಯಲ್ಲಿ.

ಯುಗಂಧರ್ ಕಣ್ಣುಗಳು ಕೆಂಪಗಾಯಿತು.

"ಮೊದ್ಲು ಹೋಗಿ, ನಾನೆಲ್ಲಿ ತಾಳ್ಮೆ ಕಳೆದುಕೊಳ್ಳುತ್ತೀನೋ ಅಂತ ಭಯವಾಗ್ತಾ ಇದೆ. ನಿಮ್ಮ ಮಗ್ಳು...ನಿಮ್ಮ ಹಣೆಬರಹ" ಎಂದವರು ಕೆಲಸದವನನ್ನ ಕೂಗಿ "ಇವನ್ನೆಲ್ಲ ಹೊರ್ಗಡೆ ಇಟ್ಟು, ಇವ್ರುಗಳ್ನ ಕಳ್ಸಿ ಬಾಗ್ಲು ಹಾಕ್ಕೊಂಡ್ಬಾ" ಜೋರು ದನಿಯಲ್ಲಿ ಹೇಳಿ ರೂಮಿನೊಳಕ್ಕೆ ಹೋಗಿ ಸದ್ದಾಗುವಂತೆ ಬಾಗಿಲೊಡೆದು ಹೋಗುವಂತೆ ಬಾಗಿಲನ್ನ ದೂಡಿದರು.

ಕೊಂಡೊಯ್ದುದನ್ನ ತಗೊಂಡು ತಂದೆ ಮಗಳು ಹೊರಗೆ ಬಂದರು.

ಒಂಬತ್ತೂವರೆ ತಿಂಗಳ ಹಿಂದೆ ಅಕ್ಕ ಚೆಲ್ಲಿ ಸಂಭ್ರಮ ಸಂತೋಷದಿಂದ ಒಳಗಡಿಯಿಟ್ಟ ಸೊಸೆ ಬೇಡವಾಗಿದ್ದಳು.

ಸುಸ್ತಾಗಿ ಬೀಳುವಂತಿದ್ದ ತಂದೆಯ ತೋಳನ್ನ ಹಿಡಿದುಕೊಂಡು "ನೀವು ಇಲ್ಲೇ ಇರೀ, ನಾನ್ಹೋಗಿ ಆಟೋ ತರ್ತೀನಿ" ಅವರತ್ತ ನೋಡಿದಳು. ತೀರಾ ಗಟ್ಟಿ ಮುಟ್ಟಾಗಿದ್ದ ವ್ಯಕ್ತಿ ತೀರಾ ವೃದ್ಧಾಪ್ಯದ ಅಂಚನ್ನ ತಲುಪಿದಂತೆ ಕಂಗೆಟ್ಟಿದ್ದರು. "ಬೇಡಮ್ಮ, ನಾನು ಬಂದ್ಬಿಡ್ತೀನಿ" ಎಂದರು ಕ್ಷೀಣವಾಗಿ.

ಅವರನ್ನ ನಡೆಸಿಕೊಂಡು ಗೇಟಿನಿಂದ ಹೊರ ಬಂದು ಗೇಟು ಹಾಕಿ ಅಲ್ಲಿಯೇ ನಿಂತಳು. ಅವಳದೇ ಮನೆ ! ಈಗ ದೂಡಲ್ಪಟ್ಟಿದ್ದಳು.

ಅಷ್ಟು ದೂರ ಬಂದವರೇ ವಾಸುದೇವಯ್ಯ ಕುಸಿದಾಗ ಪಕ್ಕಕ್ಕೆ ಕರೆದೊಯ್ದು ಒಂದು ಕಡೆ ಕೂಡಿಸಿ "ಒಂದ್ನಿಮ್ಷ....ಬರ್ತೀನಪ್ಪ" ಓಡಿ ಹೋಗಿ ಡಾ॥ನವೀನ್ ಕೆಲಸ ಮಾಡುತ್ತಿದ್ದ ನರ್ಸಿಂಗ್‌ಹೋಂಗೆ ಫೋನ್ ಮಾಡಿ ಎಳೆ ನೀರಿನೊಂದಿಗೆ ಆಟೋದಲ್ಲಿ ಬಂದಳು.

ಸ್ವಲ್ಪ ಎಳೆನೀರು ಕುಡಿದ ಮೇಲೆ ವಾಸುದೇವಯ್ಯ ತುಸು ಮಟ್ಟಿಗೆ ಚೇತರಿಸಿಕೊಂಡರು. ಆಟೋದಲ್ಲಿ ಕೂಡಿಸಿಕೊಂಡು ಮನೆ ತಲುಪುವ ವೇಳೆಗೆ ಸ್ಕೂಟರ್ ಹೊರಗೆ ನಿಲ್ಲಿಸಿಕೊಂಡು ಡಾ॥ ನವೀನ್ ನಿಂತಿದ್ದ ಆತಂಕದಿಂದ.

"ಏನಾಯ್ತು ?" ಆಟೋ ಬಳಿಗೆ ಧಾವಿಸಿದ.

"ಏನಿಲ್ಲ, ಒಂದಿಷ್ಟು ಸುಸ್ತಾದ್ರು. ಸುಮ್ನೇ ಗಾಬ್ರಿಯಿಂದ ಫೋನ್ ಮಾಡ್ದೆ" ತಂದೆಯನ್ನ ನಿಧಾನವಾಗಿ ಇಳಿಸಿಕೊಂಡು ಒಳಗೆ ಕರೆದೊಯ್ದಳು.

ಮಲಗಿಸಿದ ಮೇಲೆ ಡಾ॥ ನವೀನ್ ಪರೀಕ್ಷಿಸಿದ. ಬರೀ ಷಾಕಾಗಿತ್ತು. ಏನು ಅನಾಹುತವಾಗದಿದ್ದರೂ ಅನಾಹುತದ ಮುನ್ಸೂಚನೆಯೆನಿಸಿತು.

"ರೆಸ್ಟ್ ತಗೊಳ್ಳಿ, ಸಾಕು" ಹೊರಗೆ ಹೋದ ನವೀನ್ ಸಪ್ಪಗೆ ಒಂದು ಕಡೆ ಕೂತುಬಿಟ್ಟ. ತಂಗಿಯನ್ನ ಪ್ರಶ್ನಿಸಬೇಕೆನಿಸಲಿಲ್ಲ. ಎಲ್ಲ ತೆರೆದ ಚಿತ್ರದಂತಿತ್ತು. ಒಂದು ರೀತಿಯಲ್ಲಿ ಮೂರ್ತಿ ಸಂಗಾತಿಗೆ ಬಿಡುಗಡೆ ಘೋಷಿಸಿದ್ದ. ಮುಂದೇನು ? ಚಾರುಲತಳ ವೈವಾಹಿಕ ಜೀವನಕ್ಕೆ ಬೆಂಕಿ ಇಟ್ಟ ಮೊದಲ ಅಣ್ಣ ತಾನೇ ! ನೊಂದ, ಮುಷ್ಟಿ ಬಿಗಿ ಹಿಡಿದು ಗಾಳಿಯಲ್ಲಿ ಗುದ್ದಿದ. ತನಗೇ ಸ್ವಥಃ ತಂಗಿಗಿಂತ ನೀರದ ಹೆಚ್ಚಾದಳೇ ? ಹುಚ್ಚು ಹಿಡಿದಂತಾಯಿತು.

"ಏನಾಯ್ತು, ಮಾವನವ್ರಿಗೆ ?" ಬಂದ ನೀರದ ಕೇಳಿದಳು.

"ಏನಾದ್ರೂ ಕೆಲ್ಸವಿದ್ದರೇ ನೋಡ್ಕೋಗು" ಎದ್ದು ಹೋದ ಮುಖ ತಿರುಗಿಸಿಕೊಂಡು. 'ಇವಳ್ಯಾಕೆ ತನ್ನ ಬಾಳಿನಲ್ಲಿ ಬಂದಳು ?' ನಾಲ್ಕು ದಿನದ ಹಿಂದೆ ವಿವಾಹವಾದ ಸಂಗಾತಿಯನ್ನು ದೂಷಿಸಿದ.

ಎರಡು ದಿನವಲ್ಲಿ ವಾಸುದೇವಯ್ಯ ಒಂದಿಷ್ಟು ಚೇತರಿಸಿಕೊಂಡಾಗ, ಮಗನನ್ನ ಕರೆಸಿಕೊಂಡರು ರೂಮಿಗೆ.

"ಈಗ ಚಾರುಲತ ವಿಷ್ಯ ಏನ್ಮಾಡೋದು ?" ಏಸು ದನಿಯಲ್ಲಿ ಕೇಳಿದಾಗ ನಿಟ್ಟುಸಿರು ಚೆಲ್ಲಿದ "ಏನೂ ಗೊತ್ತಾಗ್ತಾ ಇಲ್ಲ. ಒಂದು ಹತ್ತು ಸಲ ಅವ್ರ ಕಾಲೇಜಿಗೆ ಫೋನ್ ಮಾಡಿರಬೇಕು. ಮೂರ್ತಿಗೆ ಮಾತಾಡೋಕೆ ಇಷ್ಟವಿಲ್ಲ. ಬಹುಶಃ ಅವನಾಗಿ ಬಂದು ಚಾರುಲತನ ಸಫೃಕ್ಕೆ ಕರ್ಕೊಂಡ್ಹೋಗೋಲ್ಲ. ಅವ್ನ ಇರೋ ಸ್ಥಿತಿಯಲ್ಲಿ ನಾವಾಗಿ ಕರ್ಕೊಂಡ್ ಹೋದ್ರೂ...ಗೆಟ್‌ಔಟ್ ಅನ್ನಬಲ್ಲ. ಈ ವಿಷ್ಯದಲ್ಲಿ ಕಾನೂನಿನ ಮೊರೆ ಹೋಗ್ಬೇಕು." ತನ್ನ ನಿಸ್ಸಹಾಯಕತೆ ವ್ಯಕ್ತಪಡಿಸಿದ.

"ಸಾಕು ಸುಮ್ಮನಿರು ! ಕೋರ್ಟು ಮೆಟ್ಟಿಲು ಹತ್ತಿದ್ಮೇಲೆ ಮಿಕ್ಕೆಲ್ಲ ಬಾಗಿಲು ಮುಚ್ಚಿದಂಗೆ. ಎಂಥ ಮಾತು ಆಡ್ತೀಯಾ ? ಏನು ನಿನ್ನ ಉದ್ದೇಶ ? ಎಷ್ಟೊಂದು ಚೆನ್ನಾಗಿದ್ದರು, ಗಂಡ ಹೆಂಡ್ತಿ" ವಾಸುದೇವಯ್ಯ ಅತ್ತೇ ಬಿಟ್ಟರು. ಅವೆಲ್ಲ ಬರೀ ನೆನಪುಗಳೇ ಆಗಿಬಿಡುತ್ತವೆಯೇನೋ ಎನ್ನುವ ಭಯ. ಮೊದಲೇ ನೊಂದ ಅವನಿಗೆ ಮುಖದ ಮೇಲೊಡೆದಂತಾಯಿತು.

"ನೀವೇನು ಹೇಳ್ತಾ ಇದ್ದೀರಾ ?" ಎಂದ ಗಾಬರಿಯಿಂದ.

"ಏನಿದೆ ಹೇಳೋಕೆ ? ನಿನ್ನಿಂದ್಩ಲೇ ತಾನೇ, ಇಂಥ ಪರಿಸ್ಥಿತಿ ಉದ್ಭವವಾಗಿದ್ದು" ಅಂದ್ಬೇ ಬಿಟ್ಟರು. ಅವರ ವಿವೇಕ ಆ ಕ್ಷಣ ಸತ್ತಿತ್ತು.

ಡಾ॥ ನವೀನ್ ಕೂತಲ್ಲಿಯೇ ವಿಗ್ರಹವಾದ. ಇದು ಸತ್ಯವೇ ಅದನ್ನ ಅರಗಿಸಿಕೊಳ್ಳಬೇಕಾದರೇ ಕಷ್ಟವೇ. ಅವರದು ಮೂರ್ಖತನವಿರಬಹುದು. ಅಪರಾಧಿಗಳು ಆಗಿರಬಹುದು. ಆದರೆ ಅದರಲ್ಲಿ ತನ್ನ ಪಾಲು ಕೂಡ ಇದೆಯೆನಿಸಿದಾಗ, ಭೂಮಿಗೆ ಕುಸಿದಂತಾಯಿತು.

ತಾನು ಆತುರಪಟ್ಟು ವಿವಾಹವಾದೆ. ಪೂಜಾಳ ವಿವಾಹವಾಗುವವರೆಗೆ ಕಾಯಬೇಕಿತ್ತು. ಅದಕ್ಕೆ ನೀರದ ಆಗಲೀ, ಅವರ ಮನೆಯವವರಾಗಲೀ ಸಿದ್ಧರಾಗಿರಲಿಲ್ಲವೆಂದು ಅವನಿಗೆ ಗೊತ್ತು.

ತೆಪ್ಪಗೆದ್ದು ಹೊರಗೆ ಬಂದ. ಮುಂದಿನ ವರಾಂಡದಲ್ಲಿ ಕೂತು ಪೇಪರ್ ತಿರುವುತ್ತಿದ್ದ ಚಾರುಲತ ತಲೆಯೆತ್ತಿದಳು.

"ಚಾರು, ನನ್ನಿಂದ ನಿಂಗೆ ಅನ್ಯಾಯವಾಯ್ತು" ಅವಳ ಎರಡು ಕೈಗಳನ್ನ ಹಿಡಿದುಕೊಂಡ. "ಹಾಗಂತ ಯಾರು ಹೇಳಿದ್ದು ? ಪರಿಸ್ಥಿತಿ ಹಾಗೇ ನಿರ್ಮಾಣವಾಯ್ತು. ಪೂಜಾ ನಿನ್ನ ಸ್ನೇಹ, ಆತ್ಮೀಯತೆಯ ನಡತೆಯನ್ನ ತಪ್ಪಾಗಿ ತಿಳ್ಕೊಂಡಳಷ್ಟೆ. ಅದ್ಕೆ ನೀನೇನು ಮಾಡ್ತೀಯಾ ?" ಉದ್ವೇಗ ಗೊಳ್ಳದೇ ಮಾತಾಡಿದಳು. ಖಂಡಿತ ಅಣ್ಣನನ್ನ ಅಪರಾಧಿಯನ್ನಾಗಿ ಮಾಡಲು ಅವಳ ಮನಸ್ಸು ಒಪ್ಪದು.

"ಮುಂದೇನು ?" ಕೇಳಿದ.

"ನೋಡೋಣ" ಅಂದಳಷ್ಟೆ.

ಆ ಪ್ರಶ್ನೆಯೇ ಅವಳನ್ನ ಹೆದರಿಸುತ್ತಿತ್ತು.

"ನಾಳೆ ಲಾಯರ್‌ನ ಕಂಡು ಬರೋಣ" ಸೂಚಿಸಿದ.

ಚಾರುಲತ ಬೆಚ್ಚಿಬಿದ್ದಳು. ಇಷ್ಟು ಸುಲಭವಾಗಿ ಕಾನೂನಿನ ಮೂಲಕ ಪರಿಹಾರಗೊಳ್ಳುವಂತಾಗಿದ್ದರೇ, ವಿಧಿ, ವಿಧಾನ, ಸಮಾರಂಭ, ಹಿರಿಯರು, ನೆಂಟರಿಷ್ಟರು - ಅವರೆಲ್ಲ ಯಾಕೆ ಬೇಕಿದ್ದರು ?

"ಏನಣ್ಣ, ಹೀಗೇ ಮಾತಾಡ್ತೀಯಾ ? ನಮ್ಮಿಬ್ರ ಮಧ್ಯೆ ಅಂಥ ಜಗಳವೇನಿದೆ? ಡೈವೋರ್ಸ್‌ಗೆ ಕೆಲವು ಕಾರಣಗಳಾದ್ರೂ ಬೇಕಾಗುತ್ತೆ. ದಯವಿಟ್ಟು ಕ್ಷಮ್ಸು" ಎದ್ದು ಹೋದಳು.

ಯಾಕೋ, ಏನೋ ಪರಕೀಯತೆ ಬಾಧಿಸಿತು ಅವಳನ್ನ. ಹುಟ್ಟಿ ಇಲ್ಲೇ ಬೆಳೆದಿದ್ದರೂ ವಿವಾಹದ ನಂತರ ಇಲ್ಲಿ ಉಳಿಯುವುದು ಸಮಂಜಸವಾಗಿ ಕಾಣಲಿಲ್ಲ.

ಮದುವೆಯಲ್ಲಿ ಕೇಳಿದವರಿಗೆಲ್ಲ ಉತ್ತರಿಸಿ ಸಾಕಾಗಿತ್ತು. ಕೆಲವರಿಗಂತು ಏನೋ ಗುಮಾನಿ.

"ಇದ್ದ ಊರು, ನಿನ್ನ ಅತ್ತೆ ಮಾವ ಬರಲಿಲ್ಲಾಂದರೇ ಏನು ಅರ್ಥ? ನಿನ್ನ ಗಂಡನು ಕಾಣ್ಲಿಲ್ಲ" ಕೆಲವರಂತು ನೇರವಾಗಿಯೇ ಕೇಳಿದ್ದರು.

ಜೊತೆಗೆ ಹಲವಾರು ಕತೆಗಳು ಹರಡಿ ಬಿಟ್ಟವು. ಪ್ರತಿಯೊಬ್ಬರು ತಮ್ಮ ಕಲ್ಪನೆಗಳಿಗೆ ಅನುಸಾರವಾಗಿ ಚಿತ್ರ ಬಿಡಿಸಿದರು. ಅವಕ್ಕೇನು ತಲೆ, ಬುಡವಿರಲಿಲ್ಲ.

ಎಲ್ಲಾ ಬಿಟ್ಟು ನೀರದ ಮಂಚವಿಡಿದ ತಾಯಿಯೇ ಕೇಳಿದರು "ಯಾಕೆ, ಯಾರು....ಬರ್ಲಿಲ್ಲ ? ಅವ್ರ ಅಂತಸ್ತಿಗೆ ಏನೇನು ಸಾಲದ ಜನ ನಾವು. ಇಂಥ ಆರೋಗ್ಯವಲ್ಲ ನಾನು, ಅವ್ರು ಲಗ್ನಪತ್ರಿಕೆ ಹಿಡಿದು ಹೋದಾಗ ಒಬ್ರೂ ಮಾತಾಡ್ಲಿಲ್ಲ. ಕನಿಷ್ಟ ಹೊರಟಾಗ ಕುಂಕುಮ ಕೊಡೋ ಸೌಜನ್ಯ ಕೂಡ ತೋರ್ಲಿಲ್ಲ." ಆಕೆಯ ನೊಂದ ಮಾತುಗಳಿಗೆ ಪ್ರತಿಕ್ರಿಯಿಸಿರಲಿಲ್ಲ.

ಬಹಳ ಹೊತ್ತು ಹೊರಗಡೆಯೇ ನಿಂತಳು. ಅಣ್ಣನ ಬಾಯಿ ಮುಚ್ಚಿಸಿದ್ದಳು. ಆವರೆ ಮೂರ್ತಿಯ ಕತೆಯಿಂದಲೇ ಡೈವೋರ್ಸ್ ಪೇಪರ್ಸ್ ಬಂದರೇ, ಕಷ್ಟವೆನಿಸಿದರೂ ಬೇಡದ ವ್ಯಕ್ತಿಯಾಗಿ ಅವನ ಜೀವನದಲ್ಲಿ ಇರಲು ಇಷ್ಟಪಡಳು.

"ಚಾರು, ಹನ್ಮಾತ್ರಾ ಇದ್ದೀಯಾ ?" ನೀರದ ಬಂದು ಅವಳ ಭುಜದ ಮೇಲೆ ಕೈಯಿಟ್ಟಾಗ ಪ್ರಯತ್ನ ಪೂರ್ವಕವಾಗಿ ನಗುವನ್ನ ಎಳೆ ತಂದಳು ಮುಖದ ಮೇಲೆ "ಸುಮ್ನೇ ನಿಂತೇ ?" ಒಳಗಿನ ಸೆಕೆಯ ಧಗೆಗಿಂತ ಇಲ್ಲಿ ಆರಾಮಾಗಿದೆ. ಹನ್ಮಾತ್ರಾ ಇದ್ದಾರೆ, ನಿಮ್ಮ ರಾಜಕುಮಾರ ? ಹಾಸ್ಯ ಮಾಡಿದಳು ಕೆನ್ನೆ ತಟ್ಟಿ.

ಅವಳ ಮುಖ ಮಂಕಾಯಿತು. ವಿವಾಹವಾದ ವಾರದಲ್ಲಿಯೇ ಕರಗಿ ಹೋಯಿತೇ ಪ್ರೀತಿಯ ಉದ್ವೇಗ, ಪ್ರಣಯದ ಆವೇಗ ? ನವೀನ್ ಗದರಿದ್ದ ಮುಲಾಜಿಲ್ಲದೆ.

"ಯಾಕೋ, ನವೀನ್ ಒಂದು ತರಹ ಇದ್ದಾರೆ ?" ಎಂದಳು ಸಪ್ಪಗೆ.

"ಅಪ್ಪ, ಸ್ವಲ್ಪ ಹುಷಾರು ತಪ್ಪಿದರಲ್ಲ ಅದಕ್ಕೋಸ್ಕರ ಅಷ್ಟೆ. ಒಂದಿಷ್ಟು ಓಡಾಡಿದ ಆಯಾಸ ಅಪ್ಪಿಗೂ ಕೂಡ" ಎಂದು ನುಡಿದಳು.

ನೀರದ ಅವಳ ಕೈಯನ್ನ ತನ್ನ ಕೈಯೊಳಗೆ ತಗೊಂಡು "ನೀವುಗಳು ತಗೊಂಡ್ಹೋಗಿದ್ನ ವಾಪಸ್ಸು ತಂದಿದ್ದೀರಾ. ಅವ್ರುಗಳ ಕೋಪ ಕಮ್ಮಿ ಆಗಿಲ್ವಾ ?" ಅಷ್ಟಿಷ್ಟು ಸಂಗ್ರಹಿಸಿದನ್ನ ಅಂದಾಜಿಗಿಟ್ಟುಕೊಂಡು ಕೇಳಿದ್ದು.

ಚಾರುಲತ ಸಣ್ಣಗೆ ನಗೆ ಬೀರಿದಳು. ಆದರಲ್ಲಿ ಇದ್ದಿದ್ದು ಬರೀ ನೋವೆ. ನೀರದನ ದೂರುವಷ್ಟು ಅವಿವೇಕಿಯೇನಲ್ಲ.

"ಸಮಯ ಬೇಕಾಗುತ್ತೆ. ಅದಕ್ಕಾಗಿ ನೀವು ತಲೆ ಕೆಡ್ಸಿಕೊಳ್ಳೋದ್ಬೇಡ.

ಅಣ್ಣನ ಹತ್ರನು ಈ ಪ್ರಸ್ತಾಪವೆತ್ತಿ ನಿಮ್ಮಗಳ ಮಧುರ ಕ್ಷಣಗಳನ್ನ ಹಾಳು ಮಾಡ್ಕೋಬೇಡಿ. ಒಂದಿಷ್ಟು ಬೇಜಾರಿದೆ. ದಿನ ಕಳೆದಂತೆ ಕಡ್ಮೇ ಆಗುತ್ತೆ."

ಚಾರುಲತಳ ಮಾತುಗಳಿಗೆ ಮೌನವಾದಳು ನೀರದ. ತಾಳಿ ಕುತ್ತಿಗೆಗೆ ಬೀಳುವವರೆಗೂ ಚಡಪಡಿಸಿತ್ತು ಅವಳ ಇಡೀ ಕುಟುಂಬ. ಅವರುಗಳ ಸ್ಥಿತಿಯಲ್ಲಿ ಡಾಕ್ಟರನ್ನ ಅಳಿಯನಾಗಿ ಪಡೆದಿದ್ದು ಅದೃಷ್ಟವೇ. ಕೆಲವು ವಿಷಯಗಳು ಗೊತ್ತಿದ್ದರೂ ಗೊತ್ತಿಲ್ಲದಂತೆ ವರ್ತಿಸಿದ್ದಳು.

ಒಳಕ್ಕೆ ಹೋದ ನೀರದ ಹೊರಗೆ ಬಂದು 'ಮುಂದೇನು ?' 'ಮುಂದೇನು?' ಎನ್ನುವಂತೆ ನೋಡಿದಳು.

"ಪ್ಲೀಸ್, ನೀರದ ಸಧ್ಯಕ್ಕೇನು ಕೇಳ್ಬೇಡಿ" ಎಂದಳು.

ಹಿಂದಿನ ರಾತ್ರಿ ಹತ್ತಿರ ಬಂದ ಮಡದಿಯನ್ನ ನವೀನ್ ದೂರ ಸರಿಸಿ "ಸುಮ್ನೇ ಮಲಕ್ಕೋ, ನಂಗೆ ಓದೋದಿದೆ" ಎಂದಿದ್ದ. ಬೆಳಗಿನಿಂದ ಎಷ್ಟೋ ಅಷ್ಟು ಮಾತು. ಈಗಾಗಲೇ ಹತ್ತಾರು ವರ್ಷ ದಾಂಪತ್ಯ ಜೀವನ ನಡೆಸಿ ಸಾಕಾದವನಂತೆ ಕಂಡಿದ್ದ. 'ಮುಂದೇನು ?' ಈ ಪ್ರಶ್ನೆ ಇನ್ನ ಹೆಚ್ಚಾಗಿ ಅವಳನ್ನ ಕಾಡಿತು.

ಮಾರನೆ ದಿನ ಬೆಳಿಗ್ಗೆ ಎದ್ದವನೇ ಯಾರಿಗೂ ಹೇಳದೇ ನವೀನ್ ಬಸ್ಸು ಹತ್ತಿದ. ಇನ್ನ ನಸುಕಿನ ಚಳಿ ಇತ್ತು. ಹೇಗಾದರೂ ಮೂರ್ತಿಯ ಕಾಲು ಹಿಡಿದಾದರೂ ತಂಗಿಯ ಜೀವನ ಸರಿಪಡಿಸಬೇಕಿತ್ತು.

ಇವನು ಹೋದಾಗ ಮೂರ್ತಿ ಸ್ನಾನ ಮುಗಿಸಿ ಬ್ರೇಕ್‌ಫಾಸ್ಟ್‌ಗೆ ಕೂತಿದ್ದ. ಅಡಿಗೆ ಮಾಡುವುದರಲ್ಲಿ ಅವನಿಗೆ ಸೋಮಾರಿತನವಿರಲಿಲ್ಲ. ಅವನೇ ಬೇಕೆನಿಸಿದನ್ನ ಮಾಡಿಕೊಳ್ಳುತ್ತಿದ್ದ.

ಮುಖ ನೋಡಿದ ಕೂಡಲೇ "ಹಲೋ...." ಎಂದಿದ್ದು ನವೀನ್. ಕೆಟ್ಟ ಮುಖ ಮಾಡಿಕೊಂಡೇ ಬೇಕೋ, ಬೇಡವೋ ಎನ್ನುವಂತೆ ಮೂರ್ತಿ 'ಹಲೋ...' ಎಂದ ಮೆಲ್ಲಗೆ. ಡಾ|| ನವೀನ್ ಅವನ ಪ್ರಕಾರ ದೊಡ್ಡ ಅಪರಾಧಿ ಅವನಲ್ಲಿ ಇವನಿಗಾಗಿ ಕ್ಷಮೆ ಇಲ್ಲ.

"ಆಗ್ಱೕ, ರಾಯರು ಬ್ರೇಕ್‌ಫಾಸ್ಟ್ ಮುಗಿಸುವಂತಿದೆ" ಎಂದ ತಮಾಷೆ ಯಾಗಿ ಅತ್ಯಂತ ತಾಳ್ಮೆಯಿಂದ ಡಾ|| ನವೀನ್. ಅವನು ಅದಕ್ಕೆ 'ಉಭ-ಶುಭ' ಎನ್ನಲಿಲ್ಲ. ಸುಮ್ಮನೆ ಕೂತ.

ಅತ್ಯಂತ ಸಹನೆಯಿಂದ ಡಾ|| ನವೀನ್ ಅವನ ಎದುರು ಕೂತ. ಮಾತು ಹೇಗೆ ಪ್ರಾರಂಭಿಸುವುದೆಂದು ಯೋಚಿಸಿದ.

"ಏನು ಬಂದಿದ್ದು ? ನಂಗೆ ಕಾಲೇಜಿಗೆ ಹೊತ್ತಾಗುತ್ತೆ."

"ಪ್ಲೀಸ್, ನಿಂಗೆ ತಪ್ಪು ಅನ್ನಿಸಿದರೇ...ನನ್ಮೇಲೆ ಕೋಪ ಮಾಡ್ಕೋ. ಇದ್ರಲ್ಲಿ ಚಾರು ತಪ್ಪೇನು ಇಲ್ಲ. ಸುಮ್ನೇ ಅನಗತ್ಯ ಮನಸ್ತಾಪದಿಂದ ನಿನ್ನ ಸಂಸಾರ ಹಾಳು ಮಾಡ್ಕೋಬೇಡ" ಬುದ್ಧಿ ಹೇಳಿದ.

ಮೇಲೆದ್ದ ಮೂರ್ತಿ "ನಿನ್ನ ಬುದ್ಧಿವಾದ ನಂಗೆ ಅಗತ್ಯವಿಲ್ಲ. ಅನಗತ್ಯ ಮಾತುಗಳಿಂದ ಮತ್ತಷ್ಟು ವಿರಸ, ಗೆಟ್ ಔಟ್ ಅನ್ನೋಕೆ ಮೊದ್ಲೇ ಹೋಗ್ಬಿಡೋದು ಒಳ್ಳೇದು. ಕೋಪದ ಸಮಯದಲ್ಲಿ ಓದು, ಸಂಸ್ಕಾರ ಸತ್ತು ಹೋಗುತ್ತೆ" ರೂಮಿಗೆ ಹೋಗಿ ಎರಡೇ ನಿಮಿಷದಲ್ಲಿ ಬಟ್ಟೆ ಬದಲಾಯಿಸಿಕೊಂಡು ಬಂದವನೇ ಷೂ ಕಟ್ಟಿಕೊಂಡು "ಇನ್ಮೇಲೆ ಎಂದೂ ರಾಯಭಾರಕ್ಕೆ ಬರೋದ್ಬೇಡ. ನನ್ನ ಒಳಿತು ಕೆಡುಕು ನಂಗೆ ಗೊತ್ತು" ತೀಕ್ಷ್ಣವಾಗಿ ಹೇಳಿ ಕೀ ಬಂಚನ್ನ ಎತ್ತಿಕೊಂಡ.

"ಚಾರು, ನಾಳೆ ಇಲ್ಲಿಗೆ ಬರ್ತಾಳೆ" ಹೇಳಿದ.

"ಬರೋದ್ಬೇಡ..." ಎಂದು ಸ್ಕೂಟರ್ ತಳ್ಳಿಕೊಂಡು ಹೊರಗೆ ಹೋದ ಮೂರ್ತಿ ಪಕ್ಕದ ಮನೆಯ ಹುಡುಗನನ್ನ ಕರೆದು "ಒಳಗಿದ್ದವ್ರು ಹೋದ ಕೂಡ್ಲೇ...ಬೀಗ ಹಾಕಿಕೋ" ಅಷ್ಟು ಹೇಳಿ ಸ್ಕೂಟರ್ ಏರಿದ.

ಗಾಜಿನ ಹೂಜಿಯಲ್ಲಿದ್ದ ನೀರನ್ನ ಗ್ಲಾಸ್‌ಗೆ ಬಗ್ಗಿಸಿಕೊಂಡು ಕುಡಿದ ಡಾ|| ನವೀನ್ ಹೊರಗೆ ಬಂದ. ಪಕ್ಕದ ಮನೆ ಹುಡುಗ ಬೀಗ ಹಾಕಿ ಕೊಂಡು ಹೋದ.

ಆವರೆ ಅವನ ತಾಯಿ ಕುತೂಹಲಕ್ಕೆ ಹೊರಗೆ ಬಂದವರು "ಚಾರುಲತ ಎಂದು ಬರ್ತಾರೆ ?" ವಿಚಾರಿಸಿದ ನಂತರ ಪೂಜಾಳ ಬಗ್ಗೆ ಒಂದು ವಿಷಯ ತಿಳಿಸಿದರು "ಆ ಹುಡ್ಗೀ ನಿದ್ದೆ ಮಾತ್ರೆಗಳ್ನ ನುಂಗಿ ಬಿಟ್ಟಿದ್ಲಂತೆ. ಬದ್ಕಿದ್ದೆ ಹೆಚ್ಚೊಂದ್ರು. ಈಗ ಹೇಗಿದ್ದಾಳೆ ?" ಅವನನ್ನ ಕೇಳಿದರು.

"ಈಗ ಪರ್ವಾಗಿಲ್ಲ" ಎಂದು ಮುಖದ ಬೆವರನ್ನೊರೆಸಿಕೊಂಡ.

ನಿಧಾನವಾಗಿ ಬಸ್‌ಸ್ಟಾಂಡ್‌ನ ಕಡೆ ಹೆಜ್ಜೆ ಹಾಕಿದ. ಆತ್ಮಹತ್ಯೆ ಮಾಡಿಕೊಳ್ಳುವಷ್ಟು ಅವಳ ಪ್ರೀತಿ ಪ್ರಬಲವಾಗಿದೆಯೆಂದುಕೊಂಡಿರಲಿಲ್ಲ

ಹನಿಗಣ್ಣಾದ. ತನ್ನನ್ನ ಅಷ್ಟೊಂದು ಪ್ರೇಮಿಸುವ, ಬಯಸುವ ಹೆಣ್ಣನ್ನ ನಿರಾಕರಿಸಬಾರದೆಂದುಕೊಂಡ. ಪೂಜಾಳಿಗಾಗಿ ಅವನ ಮನ ಮರುಗಿತು.

ಬಸ್‌ಸ್ಟಾಂಡ್ ಹೋಟಲ್‌ನಲ್ಲಿ ತಿಂಡಿ ಮುಗಿಸಿದ.

ಎಲ್ಲಾ ವಿಚಿತ್ರವೆನಿಸಿತು. ಅವಳ ನಗೆ ಚಾಟಿಕೆಗಳಲ್ಲಿ ಪ್ರೇಮವಿದೆಯೆಂದು ಅವನು ಗುರ್ತಿಸಿರಲಿಲ್ಲ.

"ಸೋ ಸಾರಿ, ಎಕ್ಸ್‌ಕ್ಯೂಜ್ ಮಿ ಪೂಜಾ" ಎಂದು ಮನದಲ್ಲಿಯೇ ಹೇಳಿಕೊಂಡು ಬಸ್ಸಿಗಾಗಿ ಕಾದು ನಿಂತ. ಆದರೆ ವಾಸುದೇವಯ್ಯ ಮತ್ತೊಂದು ಬಸ್ಸಿನಿಂದ ಇಳಿದಾಗ ದಿಗ್ಭ್ರಾಂತನಾದ.

"ಅಪ್ಪಾ..." ಧಾವಿಸಿದ ಅವರ ಬಳಿಗೆ.

ಮೊದಲೇ ಸುಸ್ತಾಗಿದ್ದವರು ಮಗನ ಮುಖ ನೋಡಿ ಯಾವುದೇ ಭಾವನೆಗಳನ್ನ ವ್ಯಕ್ತಪಡಿಸಲಾರದೆ ಹೋದರು.

"ಮೂರ್ತಿನ ನೋಡೋಕೆ ಬಂದ್ರಾ ? ಅವ್ರು ಊರಿನಲ್ಲಿ ಇಲ್ಲ. ಟೂರ್‌ಗೆ ಹೋಗಿದ್ದಾರೆಂದು ಅವ್ರ ಪಕ್ಕದ ಮನೆಯವ್ರು ಹೇಳಿದ್ರು. ಈ ಸ್ಥಿತಿಯಲ್ಲಿ ನೀನ್ಯಾಕೆ...ಬಂದೆ ?" ತಂದೆಯ ಮೇಲೆ ನಸುಗೋಪ ಬೀರಿದ.

ಕರೆದುಕೊಂಡು ಹೋಗಿ ಆಸನದ ಮೇಲೆ ಕೂಡಿಸಿ ಬಿಸಿ ಹಾಲು ತಂದು ಕೊಟ್ಟ. ತಂದೆಯ ಬಗ್ಗೆ ಅಯ್ಯೋ ಅನಿಸಿತು. ಮಗಳ ಜೀವನದ ಬಗ್ಗೆ ಸಂತೃಪ್ತಿಯಿಂದ ಇದ್ದವರಿಗೆ ವಕ್ಕರಿಸಿದ್ದು ಪೆಡಂಭೂತ.

"ಚಾರುಲತನ ನೋಡಿದ್ರೆ ಹೊಟ್ಟೆಯಲ್ಲಿ ಬೆಂಕಿ ಬಿದ್ದಂಗಾಗುತ್ತೆ. ನಿನ್ನದ್ದೆ ಆಗಿ ಸೊಸೆ ಮನೆಗೆ ಬಂದಳಲ್ಲ ಅನ್ನೋ ಸಂತೋಷ, ಸಮಾಧಾನ ಒಂದು ಇಲ್ಲದಂಗಾಗಿದೆ" ಕೊರಗಿದರು.

ಭಾರವಾದ ಉಸಿರನ್ನೆಳೆದುಕೊಂಡು ದಬ್ಬಿದ ಡಾ।। ನವೀನ್ ಸದ್ಯಕ್ಕಂತೂ ರಾಜಿಯಾಗೋಲ್ಲ. ಕೋರ್ಟಿಗೆ ಹೋಗುವುದು ಯಾರಿಗೂ ಇಷ್ಟವಿಲ್ಲ. ಸ್ವಾಭಿಮಾನಿ ಚಾರುಲತ ಇಷ್ಟವಿಲ್ಲದ ಗಂಡನ ಜೊತೆ ಬಾಳಲು ಸಿದ್ಧವಿಲ್ಲ.

"ಎಲ್ಲಾ ಸರಿಹೋಗುತ್ತೆ. ಬಸ್ಸುನ ನೋಡ್ಕೊಂಡ್ಬರ್ತೀನಿ" ತಂದೆಯನ್ನ ಅಲ್ಲಿಯೇ ಬಿಟ್ಟು ಹೋದ. ತಂದೆ ಬೇಟಿಯಾದರೂ ಭಿನ್ನವಾಗೇನೂ ಮೂರ್ತಿ

ಪ್ರತಿಕ್ರಿಯಿಸಲಾರ. ನಿದ್ದೆ ಮಾತ್ರೆ ನುಂಗಿ ಸಾವು- ಬದುಕುಗಳ ತೂಗುಯ್ಯಾಲೆಯಲ್ಲಿ ನರಳಿದ ಪೂಜಳ ಚಿತ್ರ ಇನ್ನಷ್ಟು ಅವನನ್ನು ರೊಚ್ಚಿಗೆಬ್ಬಿಸಬಹುದು. ಕಾಲವೇ ಕೆಲವಕ್ಕೆ ಪರಿಹಾರವೆಂದುಕೊಂಡ.

ಬಸ್ಸಿನಲ್ಲಿ ಕೂತ ನಂತರ ವಾಸುದೇವಯ್ಯ ಮಗನನ್ನು ಕೇಳಿದರು. "ಮೂರ್ತಿ ನಿಜ್ವಾಗ್ಲೂ ಟೂರ್ ಹೋಗಿದ್ದಾರ ?" ಅವರ ಸ್ವರದಲ್ಲಿದ್ದ ದಟ್ಟವಾದ ಅನುಮಾನ ಗುರ್ತಿಸಿ "ನಾನ್ಯಾಕೆ ಸುಳ್ಳು ಹೇಳ್ಲಿ ? ನಾನು ಕೂಡ ಅವ್ನ ಭೇಟಿ ಮಾಡೋ ಉದ್ದೇಶದಿಂದ್ಲೇ ಬಂದಿದ್ದು. ನಂಗೂ ಚಾರು ಭವಿಷ್ಯದ ಬಗ್ಗೆ ಚಿಂತೆ ಇದೆ. ಆದರೂ ಅಷ್ಟೊಂದು ಪರದಾಟ ಬೇಕಿಲ್ಲ. ಜೀವನದಲ್ಲಿ ಒಮ್ಮೆ ಕಳೆದುಕೊಂಡರೇ ಚಾರು ಅಂಥ ಹುಡ್ಗೀನ ಮತ್ತೆ ಪಡೆಯಲು ಕೆಲವು ಜನ್ಮಗಳಾದ್ರೂ ಬೇಕಾಗುತ್ತೆ" ತುಸು ಗುಡುಗಿದ.

ವಾಸುದೇವಯ್ಯ ಮಾತಾಡಲಿಲ್ಲ. ಸಂಪ್ರದಾಯಿಕ ಮನಸ್ಸು, ಹೆಣ್ಣು ಹೆತ್ತ ತಂದೆ-ಅವರ ಭಯವೇ ಬೇರೆ.

ನೀರದ, ಚಾರುಲತ-ಬಿಡಿ ಬಿಡಿಯಾಗಿ ಹೋದ ತಂದೆ, ಮಗ ಒಟ್ಟಿಗೆ ಬಂದಿದ್ದನ್ನು ನೋಡಿ ಆಶ್ಚರ್ಯಗೊಂಡರು.

"ನೀವೆಲ್ಲಿ ಹೋಗಿದ್ರಿ, ಅಪ್ಪ ? ನಿಮ್ಗೇ ರೆಸ್ಟ್ ಬೇಕಿತ್ತು" ಚಾರುಲತ ಮುಖ ಸಣ್ಣಗೆ ಮಾಡಿದರೂ, ಅವರಿಬ್ಬರು ಬಿಡಿಬಿಡಿಯಾಗಿಯಾದರೂ ಮೂರ್ತಿಯನ್ನು ನೋಡಲು ಹೋಗಿರಬೇಕು, ಅಥ್ವಾ ಯುಗಂಧರ್ ಬಳಿ ತಪ್ಪೊಪ್ಪಿಗೆ ನೀಡಲು ಹೋಗಿರಬೇಕೆಂದುಕೊಂಡಳು.

"ಫ್ರೆಂಡ್ಸ್‌ನ ನೋಡೋಕೆ ಹೋಗಿ, ನನ್ನೆಗೆ ಸಿಕ್ಕಿ ಹಾಕ್ಕೊಂಡ್ರು" ಎಂದ ಡಾ।। ನವೀನ್ ತಂದೆಯನ್ನ ರೂಮಿಗೆ ಕರೆದೊಯ್ದು ತಾನೇ ಮಲಗಿಸಿ "ಅಪ್ಪ, ವಿಷ್ಯ ಚಾರುಲತಗೆ ಗೊತ್ತಗೋದ್ಬೇಡ."

"ಗೊತ್ತಾಗೋದ್ರಿಂದ ಏನು ಪ್ರಮಾದವಿಲ್ಲ" ಹಿಂದಿನಿಂದ ಚಾರುಲತಳ ದನಿ ಹರಿದು ಬಂತು. "ಈ ರಿಸ್ಕ್ ಬೇಕಿರ್ಲಿಲ್ಲ."

ಅಪ್ಪ, ಮಗ ಮುಖ ಮುಖ ನೋಡಿಕೊಂಡರು.

ತಂದೆಯ ಪಕ್ಕ ಬಂದು ಕೂತ ಚಾರುಲತ "ಯಾವ್ದೇ ಪ್ರಯತ್ನ ಬೇಡ. ಸಧ್ಯಕ್ಕಂತು ಅವ್ರ ಕೋಪ ಕಮ್ಮಿ ಆಗೋಲ್ಲ. ಇನ್ನ ಚೇತರಿಸಿಕೊಳ್ಳದ ಪೂಜಾನ

ನೋಡ್ತಾ ನೋಡ್ತಾ ನನ್ಮುಖ ನೋಡೋಕೂ ಅವ್ರಿಗೆ ಇಷ್ಟವಾಗ್ದು. ಹತ್ತಿರವಿದ್ದು ನರ್ಕ ಅನುಭವಿಸುವ ಬದ್ಲು ದೂರವಿರೋದೇ ವಾಸಿ. ಅವ್ರ ತೀರ್ಮಾನಕ್ಕೆ ನಂದು ಎರಡು ಮಾತಿಲ್ಲ, ಸಧ್ಯಕ್ಕೆ ಯಾವುದಾದ್ರೂ ಕೆಲ್ಸಕ್ಕೆ ಪ್ರಯತ್ನ ಮಾಡ್ಬೇಕು. ಅದ್ಕೇ ಒಂದಿಷ್ಟು ಸಹಾಯ ಮಾಡಣ್ಣ" ನಿಖರವಾಗಿ ನುಡಿದಳು.

ವಾಸುದೇವಯ್ಯ ಬೆಚ್ಚಿ ಬಿದ್ದರು. ಅವರ ಮಟ್ಟಿಗೆ ಇದು ಸಹಿಸಲು ಸಾಧ್ಯವಿಲ್ಲ.

ಡಾ॥ ನವೀನ್ ಹೌಹಾರಿದರೂ ತಂಗಿಯ ಮನಸ್ಥೈರ್ಯವನ್ನು ಮೆಚ್ಚಿ ಕೊಂಡ. "ಐಯಾಮ್ ಪ್ರೌಡಾಫ್ ಯು. ಅವ್ರೇ ಪಶ್ಚಾತಾಪ ಪಡ್ತಾರೆ. ನೀನು ಮಾನಸಿಕವಾಗಿ ಇಷ್ಟು ಬೆಂಬಲ ಸೂಚಿಸಿದರೇ ನಾವೆಲ್ಲ ಬೇಗ ಚೇತರ್ಸಿಕೊಳ್ತೀವಿ" ಹೊರಗೆ ಹೋದ.

ಮಗಳ ಕೈ ಹಿಡಿದುಕೊಂಡ ವಾಸುದೇವಯ್ಯ ಕಣ್ಣೀರು ಸುರಿಸಿದರು "ಸುಮ್ನೇ ನಿನ್ನ ಬಾಳನ್ನ ನಾವು ಬಲಿಕೊಟ್ವಿ. ಒಬ್ಬ ತಂದೆಗೆ ಸ್ವಂತ ಮಗ್ಳ ಭವಿಷ್ಯ ಮುಖ್ಯವಾಗ್ಬೇಕಿತ್ತು. ಇಲ್ಲಿ ನಾನೊಬ್ಬ ಮೂರ್ಖ" ತಲೆ ಚಚ್ಚಿಕೊಂಡರು.

ಅವರನ್ನ ಸಂತೈಯಿಸುವ ವೇಳೆಗೆ ಅವಳಿಗೆ ಸಾಕು ಸಾಕಾಯಿತು.

ನಾಲ್ಕು ದಿನಗಳ ನಂತರ ಅನಿರೀಕ್ಷಿತವಾಗಿ ಅವಳ ಗೆಳತಿಯ ಮದುವೆಯಲ್ಲಿ ಯುಗಂಧರ್, ಮೃಣಾಲಿನಿಯನ್ನು ಭೇಟಿಯಾದಳು ಆಕಸ್ಮಿಕವಾಗಿ. ಅವರುಗಳು ಮುಖ ತಿರುಗಿಸಿದರೂ ತಾನೇ ಹೋಗಿ ಮಾತಾಡಿಸಿದಳು.

"ಹೇಗಿದ್ದೀರಾ ?" ಮೃದುವಾಗಿ ವಿಚಾರಿಸಿದಳು.

ಯುಗಂಧರ್ ಮುಖ ತಿರುಗಿಸಿದರೂ ಮೃಣಾಲಿನಿ ಮಾತ್ರ "ಚೆನ್ನಾಗಿದ್ದೀವಿ" ಎಂದರಷ್ಟೆ. ಅವರುಗಳಿಗೆ ಮಾತಾಡುವುದು ಇಷ್ಟವಿಲ್ಲವೆಂದು ಅರಿವಾದ ಕೂಡಲೇ ಜನರ ನಡುವೆ ಸೇರಿ ಹೋದಳು.

ಮಧ್ಯೆ ಬಂದವರಿಗೆ ಪಾನೀಯ ಸಪ್ಲೇ ಆಗುತ್ತಿತ್ತು. ಅದರ ಜವಾಬ್ದಾರಿ ಯನ್ನು ಅವಳೇ ವಹಿಸಿಕೊಂಡಿದ್ದಳು.

ಒಂದು ಸಣ್ಣ ಹುಡುಗಿ ಎರಡು ಗ್ಲಾಸ್ ಪಾನೀಯವನ್ನು ತಂದು ದಂಪತಿಗಳ ಮುಂದಿಡಿದಳು "ಇದ್ನ ತಗೋಬಹುದಂತೆ. ಅಕ್ಕ ಹೇಳಿದ್ರು" ತಿಳಿಸಿದಳು.

ಅವರಿಗೆ ಕುಡಿಯಲು ಏನಾದರೂ ಬೇಕಿದರಿಂದ ಎತಿಕೊಂಡರು.

"ಬಲಗಡೆದು ಹಿರಿ ಅಂಕಲ್‌ಗೆ, ಎಡಗಡೆದು ಹಿರಿ ಆಂಟಿಗೆ" ಎಂದವಳು ಅವರಿಗೆ ವಿಭಾಗಿಸಿಯೇ ಕೊಟ್ಟದ್ದು.

ಯುಗಂಧರ್‌ಗೆ ಡಯಾಬಿಟಿಸ್ ಇದ್ದುದ್ದರಿಂದ ಕಳಿಸಿದ್ದು ಮಜ್ಜಿಗೆ. ಆಕೆಗೆ ಮಾತ್ರ ಕಿತ್ತಲೆ ಹಣ್ಣಿನ ರಸ.

"ನನ್ನ ಸೊಸೆ ಜಾಣೆ" ಅಂದೇ ಬಿಟ್ಟರು ಯುಗಂಧರ್.

ನಂತರವೇ ಅವರು ಮಾಮೂಲಿಯಾಗಿದ್ದು. ಶುಂಠಿ, ಕೊತ್ತಂಬರಿ ಸೊಪ್ಪಿನ ಜೊತೆ ಹದವಾಗಿ ಹಿಂಗಿನ ಒಗ್ಗರಣೆ ಹಾಕಿದ ಮಜ್ಜಿಗೆ ಎಷ್ಟೋ ತಂಪೆನಿಸಿತು ತುಂಬ...ತುಂಬ ಮೆಚ್ಚಿಕೊಂಡಿದ್ದರು ಸೊಸೆಯ ಗುಣ, ನಡತೆಯನ್ನು. ಈಗ ಮೆಚ್ಚಲಾರರು.

ಗಂಡ, ಹೆಂಡತಿ ಊಟ ಮುಗಿಸಿಕೊಂಡು ತಾಂಬೂಲದೊಂದಿಗೆ ಮನೆಗೆ ಬಂದಾಗ ಮ್ಲಾನವದನರಾಗಿದ್ದರು. ಆಮೇಲೆ ಚಾರುಲತ ಅವರ ಕಣ್ಣಿಗೆ ಬಿದ್ದಿರಲಿಲ್ಲ.

"ನೋಡಿದ್ರಾ, ಏಷ್ಟೊಂದು ಗೆಲುವಾಗಿದ್ಲು. ಅಣ್ಣ, ಅಪ್ಪನೇ ಅವ್ಳಿಗೆ ಸರ್ವಸ್ವವಾಗ್ಬಿಟ್ಟಿದೆ." ಮೌನವಾಗಿದ್ದ ಮನೆಯನ್ನು ನೋಡಿ ಅಂದೇ ಬಿಟ್ಟರು.

ಸದಾ ನಗುತ್ತಾ ಹಾಸ್ಯ ಮಾಡುತ್ತ ಬಡಬಡ ಓಡಾಡುತ್ತಿದ್ದ ಪೂಜಾಳ ಮುಖದಲ್ಲಿ ನಗು ಕಂಡು ಎಷ್ಟೋ ದಿನವಾಗಿತ್ತು. ಇದನ್ನ ಯಾವುದೇ ತಾಯ್ತಂದೆ ಸಹಿಸರು.

"ಹೌದು, ವಿವಾಹವಾದ್ಮೇಲೆ ಹೆಣ್ಣು ಗಂಡನ ಮನೆ ಸೊತ್ತು ಆಗ್ತಾಳೆ. ಅಲ್ಲಿನ ಲಾಭ-ನಷ್ಟ, ನೋವು-ನಲಿವುಗಳ ಬಗ್ಗೆ ಚಿಂತಿಸ್ತಾಳೆ ಅದ್ಕೊಂಡೆ. ಆದರೆ ನಿನ್ನ ಸೊಸೆ ಪೂರ್ತಿ ಡಿಫರೆಂಟ್. ಇಲ್ಲಿನ ಬಗ್ಗೆ ಅಲ್ಪ ಸ್ವಲ್ಪ ಕಾಳಜಿ ಇದ್ದಿದ್ದರೇ ಆ ಮದ್ವೆ ಆಗೋಕೆ ಬಿಡ್ತಾ ಇದ್ದಳಾ ? ಸ್ವಲ್ಪ ಪಟ್ಟಾಗಿ ಕೂತಿದ್ದರೇ, ಅವ್ನು ಎದುರು ಮನೆ ಹುಡ್ಗಿಯ ಕುತ್ತಿಗೆಯಲ್ಲಿ ತಾಳಿ ಕಟ್ತಾ ಇದ್ದನಾ ? ಅವ್ಳಿಗೆ ಬೇಕಿಲ್ಲ. ಆ ಬೇವರ್ಸಿ ಸಂಬಂಧನೇ ಇಷ್ಟವಾಯ್ತು. ಮುಂದೆ ಅನುಭವಿಸ್ಲಿ" ಕಿಡಿಕಿಡಿಯಾದರು ಯುಗಂಧರ್.

ಆದರೆ ಅಷ್ಟು ಜನ ಓಡಾಡುವ ಹೆಂಗಳೆಯರಲ್ಲಿ ತನ್ನ ಸೊಸೆ ಎದ್ದು

ಕಾಣುತ್ತಿದ್ದಳೆಂಬ ಹೆಮ್ಮೆ ಕೂಡ ಜೊತೆಗೆ, ಆ ಚೆಲುವನ್ನು ನೋಡಿಯೇ ಒಪ್ಪಿಗೆ ಸೂಚಿಸಿದ್ದು.

"ವಾಸುದೇವಯ್ಯನವ್ರೆ ಏನು ತಾಪತ್ರಯ ಮಾಡ್ಕೋಬೇಡಿ. ಕೊಡೋದು ಬಿಡೋದು ಅಂಥದೇನ್ಬೇಡ. ಲಕ್ಷಣವಾಗಿ ನಿಮ್ಮ ಮಗ್ಳುನ ನನ್ನ ಮಗನಿಗೆ ಧಾರೆಯೆರೆದು ಕೊಡಿ" ಎಂದಿದ್ದರು ನೋಡಿದ ದಿನವೇ.

ಅದೆಲ್ಲ ನೆನಪಾದಾಗ ಅವರೆದೆ ಭಾರವಾಯಿತು.

ನೇರವಾಗಿ ಮಗಳ ರೂಮಿಗೆ ಬಂದರು. ಎತ್ತಲೋ ನೋಡುತ್ತ ಮಲಗಿದ್ದ ಪೂಜಾಳ ಕಣ್ಣುಗಳಲ್ಲಿ ಬೆಳಕು ಇರಲಿಲ್ಲ.

"ಮಮ್ಮಿ....ನೀರು" ಎಂದಳು ಕ್ಷೀಣವಾಗಿ.

ಗಾಜಿನ ಹೂಜಿಯಲ್ಲಿದ್ದ ನೀರನ್ನ ಬಗ್ಗಿಸಿ ಅವಳ ಮುಂದಿಡಿದವರು "ಪೂಜಾ, ನೀನು ಮನಸ್ಸು ಮಾಡದೇ ನಿನ್ನ ದೇಹದಲ್ಲಿ ಶಕ್ತಿ ತುಂಬೋಲ್ಲ. ನವೀನ್ ವಿವಾಹವಾದ. ಇನ್ನ ಅವ್ನ ಬಗ್ಗೆ ಯೋಚ್ಸಿ ಪ್ರಯೋಜನವೇನು? ಮುಗ್ದು ಹೋದ ಕತೆ" ತಲೆ ಸವರಿದರು.

ಸದಾ ಅಳುತ್ತಿದ್ದ ಪೂಜಾಳ ಕಣ್ಣುಗಳಿಂದ ಕಂಬನಿ ಹರಿಯಲಿಲ್ಲ. ಅದೊಂದು ಸಣ್ಣ ಬದಲಾವಣೆ. ಹಾಗೆಯೇ ಕಣ್ಮುಚ್ಚಿಕೊಂಡಳು. ಡಾಕ್ಟರ್ ಪ್ರಕಾರ ಅವಳಾಗಿ ಪೇಷಂಟ್ ಆಗಿದ್ದಳು.

"ಮದ್ವೆ ಚೆನ್ನಾಗಿ ಆಯ್ತ ?" ವಿಚಾರಿಸಿದಳು.

"ಎಲ್ಲಾ ನಿನ್ನನ್ನು....ಕೇಳಿದ್ರು" ಎಂದರು ಆಕೆ.

ನಿಧಾನವಾಗಿ ಕಣ್ಣು ತೆರೆದು ಪೂಜಾ "ಅಮ್ಮ, ನಾನು ಚೆನ್ನಾಗಿಲ್ವಾ?" ಅವಳ ಪ್ರಶ್ನೆಗೆ ಬೆಚ್ಚಿ "ಯಾರು ಹಾಗೇ ಹೇಳಿದ್ದು ? ದಂತದ ಗೊಂಬೆ. ನಿನ್ನ ಶುಭ್ರ ಬಣ್ಣ ಸಾವಿರದಲ್ಲಿ ಒಬ್ಬರಿಗೆ ಇರೋಲ್ಲ, ಹಾಗೆಲ್ಲ ಮಾತಾಡ್ಬೇಡ" ನೊಂದರು.

"ನನ್ನ ಓದು ಕಡಿಮೇನಾ ?" ಮತ್ತೊಂದು ಪ್ರಶ್ನೆ.

"ಏನಿದೆಲ್ಲ, ಎಂ.ಎಸ್ಸಿ ಎಷ್ಟು ಜನ ಮಾಡೋಕೆ ಸಾಧ್ಯ ? ಅವ್ನ ಕಟ್ಟಿಕೊಂಡಿದ್ದು ಪಿ.ಯು.ಸಿ. ಮಾಡ್ದ ನೀರದಾನ. ನಿಮ್ಮಪ್ಪ ಮನೆ ಕೊಡೋಕೆ ತಯಾರಿದ್ರು.

ನರ್ಸಿಂಗ್ ಹೋಂ ಮಾಡಲು ಬಂಡವಾಳ ಕೊಡ್ತಾ ಇದ್ದರು. ಆ ಪುಣ್ಯ ಅಪ್ಪಿಗೆ ಇರ್ಬೇಕಲ್ಲ. ಇನ್ನ ಅವ್ನ ಸುದ್ದಿ ಮನೆಯಲ್ಲಿ ಬೇಡ" ಸಿಡಿದರು. ಡಾ॥ ನವೀನ್ ಮೇಲೆ ಅವರಿಗೆಷ್ಟು ಕೋಪವಿತ್ತೋ ಅದರ ಹತ್ತರಷ್ಟು ಸಿಟ್ಟು ಚಾರುಲತ ಮೇಲಿತ್ತು.

"ನನ್ಗೆ ಮೋಸ ಮಾಡ್ಬಿಟ್ರು. ನನ್ನ ಫ್ರೆಂಡ್ಸ್‌ಗೆಲ್ಲ ಡಾ॥ ನವೀನ್ ನನ್ನ ವುಡ್‌ಬೀ ಅಂತ ತೋರಿಸಿದ್ದೆ" ಮತ್ತೆ ಕಣ್ಣೀರು ಮಗಳ ಕಣ್ಣಲ್ಲಿ ಕಂಡು ರೋಸಿ "ಬೇಡ ಕಣೇ, ಇನ್ನ ಕಣ್ಣೀರು ಸುರಿಸ್ಬೇಡ. ನಮ್ಗೆ ನೋಡಿ ನೋಡಿ ಸಾಕಾಗಿದೆ. ಕಳ್ದು ಹೋದ್ನ ನೆನಪಿನಿಂದ ತೆಗ್ದು ಹಾಕ್ಬಿಡು" ಸಮಾಧಾನ ಹೇಳಿದರು.

.ಹೊರಗೆ ಗಂಡನನ್ನ ಅರಸಿಕೊಂಡು ರೂಮಿಗೆ ಹೋಗಿ "ಪೂಜಾಗೆ ಬದಲಾವಣೆ ಬೇಕು. ಮೂರ್ತಿ ಕರ್ಕೊಂಡ್ಹೋಗ್ತೀನಿ ಅಂದ. ನಾಲ್ಕು ದಿನ ಕಳಿಸೋಣ್ವಾ?" ಕೇಳಿದರು.

ಯುಗಂಧರ್ ತಲೆ ಅಡ್ಡಡ್ಡ ಆಡಿಸಿದರು. ಅಲ್ಲಿನ ವಾತಾವರಣ ಚಾರುಲತನ ನೆನಪಿಸುತ್ತೆ. ಅದು ಬಹಳ ಅಪಾಯವೆಂದು ಅವರಿಗೆ ಗೊತ್ತು.

"ಬೇಡ, ಹೇಗೂ ನಿನ್ನ ಚಿಕ್ಕಪ್ಪ ಮುಂಬಯಿನಲ್ಲಿ ಇದ್ದಾರಲ್ಲ. ಆಗಾಗ ಆಹ್ವಾನ ಕೊಡ್ತಾನೆ ಇದ್ದರಲ್ಲ, ನೀನು ಮೂರ್ತಿ ಅವ್ಳು ಹೋಗಿ. ಅಪ್ಪಿಗೆ ರಜ ಇಲ್ಲದಿದ್ದರೆ ನಾವೇ ಹೋಗೋಣ. ನಮ್ಗೂ ಈ ವಾತಾವರಣದಿಂದ ಒಂದಿಷ್ಟು ಬದಲಾವಣೆ ಬೇಕು."

ಗಂಡ, ಹೆಂಡತಿ ಕೂಡಿ ಹತ್ತು ನಿಮಿಷ ಮಾತಾಡಿದರು. ಈಗ ಮೂರ್ತಿ ಮನೆಗೆ ಫೋನ್ ಬಂದಿದ್ದರಿಂದ ನೇರವಾಗಿ ಸಂಪರ್ಕಿಸಿದರು.

"ನಿಂಗೇನಾದ್ರೂ ರಜಾ ಸಿಗುತ್ತಾ ?" ವಿಚಾರಿಸಿದರು.

"ಸಧ್ಯಕ್ಕೆ ಇಲ್ಲ. ನನ್ನ ಪೋಷನ್ ಕೂಡ ಮುಗಿಲ್ಲ. ಇಲ್ಲಿ ಬೇರೆ ಬೇರೆ ಕೆಲ್ಸಗಳು ವಹಿಸಿಕೊಂಡಿದ್ದೀನಿ" ಅವನು ಅಪಸ್ವರ ಹಾಡಿದ.

"ನಿಮ್ಮಮ್ಮ ಮಾತಾಡ್ತಾಳೆ, ನೋಡು" ಹೆಂಡತಿಗೆ ಫೋನ್ ಕೊಟ್ಟರು. ಆಕೆ ಅಳುತ್ತಲೇ ಒಂದಿಷ್ಟು ತಿಳಿಸಿ "ಕೆಲವು ದಿನ ಪೂಜಾನ ಹೊರ್ಗಡೆ ಕರ್ಕೊಂಡ್ಹೋಗ್ಬೇಕು."

ಮೂರ್ತಿಗೂ ಕೂಡ ಅದು ಸರಿಯೆನಿಸಿತು. ಪೂಜಾಳ ಪರಿಸ್ಥಿತಿಗೆ ತಾನು

ಬಹಳ ಮಟ್ಟಿಗೆ ಕಾರಣವೆಂದು ವಿಷಾದ ವ್ಯಕ್ತಪಡಿಸಿದ. ಆದಷ್ಟು ಬೇಗ ಅವಳ ಮದುವೆ ಮಾಡುವುದು ಉತ್ತಮವೆಂದು ಸೂಚಿಸಿದ.

ಅಂತು ಪೂಜಾಳೊಂದಿಗೆ ಯುಗಂಧರ್ ಮತ್ತು ಮೃಣಾಲಿನಿ ಮುಂಬಯಿಗೆ ಹೋಗುವುದೆಂದು ನಿಶ್ಚಯವಾಯಿತು.

ಅಂದು ಡಾ|| ನವೀನ್ ನರ್ಸಿಂಗ್ ಹೋಂಗೆ ಹೊರಟಾಗ ಬಂದ ಚಾರುಲತ "ಅಣ್ಣಾ, ನೀನು ತಪ್ಪು ತಿಳ್ಕೋಬಾರ್ದು. ಸುಮ್ನೇ ಮನೆಯಲ್ಲಿ ಕೂಡೋದುಂದರೇ ಮಾನಸಿಕವಾಗಿ ಮತ್ತು ಭವಿಷ್ಯದ ದೃಷ್ಟಿಯಿಂದ ಏನೇನು ಒಳ್ಳೇದಲ್ಲ. ವಳ್ಳಿಯಮ್ಮ ಬರೀ ಹೆಣ್ಣು ಮಕ್ಕಳ ಇಟ್ಕೊಂಡ್ ನಡುಸ್ತಾ ಇರೋ ಲೇಡೀಸ್ ಡ್ರೆಸ್ ಷೋ ರೂಂನಲ್ಲಿ ಅಕೌಂಟ್ ಸೆಕ್ಷನ್‌ನಲ್ಲಿ ಕೆಲ್ಸ ಮಾಡೋಕೆ ನಿಶ್ಚಯಿಸಿದ್ದೀನಿ. ಸುಮ್ನೇ ಅಪ್ಪನ ಮುಂದೆ ಕೂತರೇ, ಅವ್ರ ತಲೆನೋವು ಜಾಸ್ತಿ ಆಗುತ್ತೆ" ಹೇಳಿದಳು ನಿಧಾನವಾಗಿ.

ಡಾ|| ನವೀನ್ ಷಾಕಾದ. ಇಷ್ಟು ಬೇಗ ನಿರ್ಧಾರಕ್ಕೆ ಬರುತ್ತಾಳೆಂದು ತಿಳಿದಿರಲಿಲ್ಲ. ಅವನ ಬಾಯಿಂದ ಮಾತು ಹೊರಡುವುದೇ ಕಷ್ಟವಾಯಿತು. ಚಡಪಡಿಸಿದ.

"ಡೋಂಟ್‌ಬಿ ಎಕ್ಸೈಟೆಡ್, ಆಕೆ ಷೋ ರೂಂ ಇರೋದು ಊರಿನಿಂದ ಇಪ್ಪತ್ತು ಮೈಲಿಗಳ ಆಚೆ ಇರುವ ಮೈಲಾಪುರದ ಬಳಿ. ಸಿಟಿಯಲ್ಲಿ ಒಂದು ಬ್ರಾಂಚ್ ಇರೋದ್ರಿಂದ, ಅಲ್ಲಿಗೆ ಬರೋ ಜನ ಕಡ್ಮೇನೇ, ಅದು ಎಕ್ಸ್‌ಕ್ಲೂಸಿವ್ ಲೇಡಿಸ್ ವೇರ್ ಷೋ ರೂಂ. ಅದ್ರಿಂದ ಏನು ತೊಂದರೆ ಇಲ್ಲ" ಎಂದು ಅರ್ಥಗರ್ಭಿತವಾಗಿ ನುಡಿದಳು. ಯಾರಿಗೂ ಹರ್ಟ್ ಮಾಡುವುದು ಅವಳ ಉದ್ದೇಶವಾಗಿರಲಿಲ್ಲ.

"ಅಪ್ಪನ ಹತ್ರ ಹೇಳ್ದ ?" ಕೇಳಿದ.

"ಹೇಳ್ಬೇಕು, ಸಧ್ಯಕ್ಕೆ ಸಮಯ ನೋಡಿ ಹೇಳ್ಬೇಕು. ಸಾಧ್ಯವಾದರೇ ನೀನೇ ಹೇಳು" ಎಂದ ಕೂಡಲೇ ಮೆಟ್ಟಿಬಿದ್ದ "ನಾನು ಈಗಾಗ್ಲೇ ಅಪರಾಧಿ ಸ್ಥಾನದಲ್ಲಿದ್ದೀನಿ. ಅಂಥ ಧೈರ್ಯ ನಂಗಿಲ್ಲ" ಅಪರಾಧ ಪ್ರಜ್ಞೆಯಿಂದ ನರಳಿದ.

"ಪ್ಲೀಸ್, ಹಾಗೆಲ್ಲ ಮಾತಾಡ್ಬೇಡ. ನಿನ್ನದೇನು ಅಪರಾಧ ? ಮಹರಾಯ

ನೀರದ ಮುಂದೆ ಹಾಗೆಲ್ಲ ಮಾತಾಡ್ಬೇಡ. ಈಗ ಹೋಗಿ ಬರೋಕೆ ಪರ್ಮೀಷನ್ ಕೊಡು. ನಾನೇ ಅಪ್ಪನಿಗೆ ಹೇಳ್ಕೋತೀನಿ" ಎಂದಳು. ತಂದೆಯ ರೂಮಿಗೆ ಹೋದವಳು ಹತ್ತು ನಿಮಿಷದ ನಂತರ ಹೊರಗೆ ಬಂದು ಚಪ್ಪಲಿ ಮೆಟ್ಟಿ "ಬರ್ತೀನಿ, ಅಣ್ಣ...ಸಂಜೆ ಮೀಟ್ ಆಗೋಣ" ಹೊರಟೇ ಬಿಟ್ಟಳು.

"ಚಾರು, ಎಲ್ಲಿಗೆ ಹೋಗಿದ್ದು ?" ನೀರದ ಕೇಳಿದಾಗ ಮುಖ ತಿರುಗಿಸಿ ಕೊಂಡು ಸ್ಕೂಟರ್ ಹತ್ತಿದ. ಬಸ್‌ಸ್ಟಾಪ್ ಬಳಿ ಹೋಗುತ್ತಿದ್ದ ತಂಗಿಯ ಪಕ್ಕ ಸ್ಕೂಟರ್ ನಿಲ್ಲಿಸಿ "ಪ್ಲೀಸ್, ಇನ್ನಷ್ಟು ಯೋಚ್ಸು. ಮುಂದೆ ಇದೊಂದು ದೊಡ್ಡ ತಪ್ಪಾಗ್ಬಹ್ದು. ಒಂದ್ಸಲ ಮೂರ್ತಿಯ ಹತ್ರ ಮಾತಾಡ್ಬೇಕಿತ್ತು" ಹೇಳಿದ.

ಅಣ್ಣನ ಕಡೆ ನೇರವಾಗಿ ನೋಡಿ "ಆಯ್ತು, ನಿನ್ನಿಷ್ಟ ಎಂದಿದ್ದಾರೆ. ಅನಗತ್ಯವಾಗಿ ಬೇರೆಯವ್ರಿಗೆ ನಾವು ತಲೆ ನೋವಾಗ್ಬಹ್ದು. ಅದೆಲ್ಲ ಬೇಡ" ಸ್ಪಷ್ಟಪಡಿಸಿದಳು.

"ನಾನು ಡ್ರಾಪ್ ಮಾಡ್ತೀನಿ" ಎಂದ ಮೆಲ್ಲಗೆ.

"ಬೇಡ, ಬಸ್ಸಿದೆ. ಸುಮ್ನೇ ಯಾಕೆ ನಿನ್ನ ವೇಳೆ ಹಾಳು ಮಾಡ್ಕೋ ತೀಯಾ? ಮಿಸ್ಟರ್ ನವೀನ್‌ಕುಮಾರ್, ಡೋಂಟ್ ವರಿ. ತಾವು ಹೋಗಿ ಬರಬಹ್ದು" ನಾಟಕೀಯ ನಗುತ್ತ ನುಡಿದಳು.

ಅರೆ ಮನಸ್ಸಿನಿಂದಲೇ ಹಿಂದಿರುಗಿದ ಡಾ|| ನವೀನ್. ಅವನಿಗೆ ಎದೆ ಭಾರವಾಗಿ ದುಃಖ ಒತ್ತರಿಸಿಕೊಂಡು ಬರುತ್ತಿತ್ತು. ತನಗೇಕೆ ಬೇಕಿತ್ತು, ಈ ಅಮರ ಪ್ರೇಮಿಯ ಪಟ್ಟ ? ಒಡಹುಟ್ಟಿದ ತಂಗಿಯ ಬಾಳಿಗಿಂತ ನೀರದ ಮುಖ್ಯವಾದಳೇ ?

ರೂಮಿಗೆ ಹೋದವನೇ ಬಾಗಿಲು ಹಾಕಿಕೊಂಡು ಕೂತ. ಮನಃ ಪೂರ್ವಕವಾಗಿ ಬಿಕ್ಕಿ ಬಿಕ್ಕಿ ಅತ್ತ ಎದೆಯ ಭಾರ ಕಮ್ಮಿ ಆಗುವವರೆಗೆ.

ಹೊರಗೆ ನಿಂತ ನೀರದ ವಿಗ್ರಹವಾದಳು. ಪ್ರಾರಂಭದಲ್ಲಿಯೇ ಅಪಸ್ವರ. ಅವಳಿಗೆ ದಿಕ್ಕು ತೋಚದಂತಾಯಿತು. ಪೂಜಾ ಅವಳಿಗಿಂತ ಚೆನ್ನಾಗಿದ್ದಳು. ಹೆಚ್ಚು ಓದಿದವಳು. ಚೆನ್ನಾಗಿದ್ದ ಕುಟುಂಬದ ಮಗಳು... ವರದಕ್ಷಿಣೆ, ವರೋಪಚಾರ ಕೊಡಬಲ್ಲವರಾಗಿದ್ದರು. ಜೊತೆ ತಂಗಿಯ ನಾದಿನಿ ಇದೆಲ್ಲ ಬಿಟ್ಟು ಡಾ|| ನವೀನ್ ಅವಳನ್ನ ಮದುವೆಯಾಗಿದ್ದ.

ಡಾ|| ನವೀನ್ ತಾನೇ ಸಮಾಧಾನವಾಗಿ ಹೊರಗೆ ಬಂದಾಗ ನೀರದ

ಗೊಂಬೆಯಂತೆ ನಿಂತಿದ್ದಳು "ಒಂದು ಕಪ್ ಕಾಫಿ ಮಾಡ್ಕೊಂಡ್ಬಾ. ಅಡಿಗೆ ಬಿಸಿ ಇರುವಾಗ್ಲೇ ಅಪ್ಪನಿಗೆ ಬಡಿಸು" ಎಂದು ಬಾತ್‌ರೂಮಿಗೆ ಹೋಗಿ ಮುಖ ತೊಳೆದು ಬಂದ.

ಕಾಫಿ ಹಿಡಿದು ಬಂದ ನೀರದ "ತಟ್ಟೆ ಹಾಕಿದೆ" ಅಂದಾಗ ದುರುಗುಟ್ಟಿ ಕೊಂಡು ಅವಳತ್ತ ನೋಡಿ "ಬೇಡ, ಬರೀ ಕಾಫಿ ಸಾಕು. ಎದುರು ಮನೆ ಅಮ್ಮನ ಮನೇಂತ ಹೋಗಿ ಕೂತ್ಕೋಬೇಡ. ಅಪ್ಪನಿಗೆ ಹುಷಾರಿಲ್ಲ. ಇಲ್ಲೇ ಇದ್ದು ನೋಡ್ಕೋ" ಬಿರುಗಾಳಿಯಂತೆ ನುಡಿದು ಷೂ ತೊಟ್ಟು ಹೊರಟೇ ಹೋದ. ಕನಿಷ್ಟ ಕಾಫಿ ಕುಡಿಯುವ ಮನಸ್ಸು ಕೂಡ ಮಾಡಲಿಲ್ಲ.

ಚಾರುಲತ ಐದರ ಸುಮಾರಿಗೆ ಹಿಂದಿರುಗಿದಾಗ ನೀರದ ಮಂಕಾಗಿ ಕೂತಿದ್ದಳು. ಮುಖ ತೊಳೆದು ಬರುವವರೆಗೂ ಚಾರುಲತ ಏನು ಕೇಳಲಿಲ್ಲ.

"ಏನು ತಗೋತೀರಾ ?" ನೀರದ ಕೇಳಿದಳು.

"ಅಪ್ಪ, ಹೇಗಿದ್ದಾರೆ ? ನಾನೇ ಕಾಫಿ ಮಾಡ್ಕೊಂಡ್ಬರ್ತೀನಿ" ಅಡಿಗೆ ಮನೆಗೆ ಹೋದಳು.

ಅಲ್ಲಿ ಪುಟ್ಟ ಕ್ಯಾಂಟಿನ್ ವ್ಯವಸ್ಥೆ ಇದ್ದುದ್ದರಿಂದ ಮಧ್ಯಾಹ್ನದ ಉಪಹಾರವಾಗಿತ್ತು. ದೊಡ್ಡ ಅಧಿಕಾರಿಯಿಂದ ಹಿಡಿದು ಪಾತ್ರೆ ತೊಳೆಯುವ ವವರೆಗೂ ಎಲ್ಲಾ ಮಹಿಳೆಯರೇ. ಪ್ರತಿಯೊಂದು ಸೆಕ್ಷನ್‌ನಲ್ಲಿಯು ಅವರೇ ಕೆಲಸ ಮಾಡುತ್ತಿದ್ದರು. ಒಂದು ರೀತಿಯ ರಿಲ್ಯಾಕ್ಸ್.

ಮೂರು ಕಪ್ ಕಾಫಿ ಮಾಡಿಕೊಂಡು ಬಂದು ನೀರದಾಗೆ ಒಂದು ಕಪ್ ಕೊಟ್ಟು ತಂದೆಯ ರೂಮಿಗೆ ಹೋದಳು. ಅವರು ಯಾವುದೋ ಹಳೆಯ ಕಡತಗಳನ್ನು ಮುಂದೆ ಹಾಕಿಕೊಂಡು ಕೂತಿದ್ದವರು ತಲೆಯೆತ್ತಿ.

"ಈಗ ಬಂದ್ಯಾ ? ತೀರಾ ಬೇಸರವಾಯ್ತು. ಇದ್ನೆಲ್ಲ ತೆಗೆದಿಟ್ಕೊಂಡ್ ಕೂತೆ. ಇವನ್ನೆಲ್ಲ ಜೋಪಾನ ಮಾಡಿಟ್ಕೊಂಡಿದ್ಲು. ಎಲ್ಲಾ ಅವ್ಳ ಆಸ್ತೀನೇ. ಅವ್ಳು ಎತ್ತಿಟ್ಟ ಸಣ್ಣ, ಪುಟ್ಟ ಸಾಮಾನುಗಳೆಲ್ಲ ಇದೆ. ಆದರೆ ಅವಳೇ...ಇಲ್ಲ. ಇದೆಂಥ ವಿಪರ್ಯಾಸ ನೋಡು" ವಿಷಾದದ ನುಡಿಗಳನ್ನಾಡಿದರು.

ಅವರ ಎದುರಿನಲ್ಲಿಯೇ ಕೂತು ಕಾಫಿ ಕಪ್ ಕೊಟ್ಟು ಕುತೂಹಲ ದಿಂದ ಅವನ್ನೆಲ್ಲ ಕೆದಕಿದಳು. ಮದುವೆಯಾದ ಹೊಸವರಲ್ಲಿ, ಆಮೇಲೆ ಅವಳಮ್ಮ

ಅವರಿಗೆ ಬರೆದ ಹಳೆಯ ಇನ್‌ಲ್ಯಾಂಡ್ ಲೆಟರ್ಸ್‌ಗಳು, ಕವರ್‌ಗಳು ಮತ್ತು ವಾಸುದೇವಯ್ಯ ಬರೆದ ಪತ್ರಗಳು ಕೂಡ ಇತ್ತು. ಬ್ಲಾಕ್ ಅಂಟ್ ವೈಟ್ ಜಾಮಾನಾದ ಕೆಲವು ಫೋಟೋಗಳಿತ್ತು ಕವರ್‌ನಲ್ಲಿ. ಹಳೆಯ ನೆನಪುಗಳನ್ನ ಮರುಕಳಿಸುವಂಥದ್ದೇ.

ಕಾಫಿ ಕುಡಿದಿಟ್ಟ ಚಾರುಲತ ಅವನ್ನೆಲ್ಲ ಎತ್ತಿಟ್ಟು "ಸ್ವಲ್ಪ ರೂಮಿನಿಂದ ಹೊರ್‍ಗೆ ಬನ್ನಿ, ಅಪ್ಪ. ಆರಾಮಾಗಿ ನೀರದ ಜೊತೆ ಕೇರಂ ಆಡಬಹುದಲ್ಲ. ಹೇಗೂ ಸಂಜೆ, ಮಾವ ಸೊಸೆ ಸುತ್ತಾಡಿಕೊಂಡು ಒಂದಿಷ್ಟು ತರಕಾರಿ ತನ್ನಿ" ಬಲವಂತದಿಂದ ಹೊರಗೆ ಎಬ್ಬಿಸಿಕೊಂಡು ಬಂದಳು.

ಅಂತು ಪ್ರಯಾಸದಿಂದ ಅವರಿಬ್ಬರನ್ನ ಹೊರಡಿಸಿ ಕೂತಳು ಒಂದೆಡೆ.

ಹತ್ತು ಸಲ ಮಾಡಿದ ನಂತರ ಮೂರ್ತಿಯನ್ನ ಸಂಪರ್ಕಿಸಲು ಸಾಧ್ಯವಾಗಿದ್ದು "ಫೋನಿಡ್ಬೇಡಿ. ಒಂದಿಷ್ಟು ಮಾತಾಡೋದಿದೆ" ಎಂದಾಗ ಸಿಡುಕಿದ "ನನ್ನ ಟೈಮ್ ಹಾಳು ಮಾಡ್ಬೇಡ, ನಿನ್ನ ಜೀವನ ನಿಂದು. ನನ್ನ ಸಲಹೆ, ಸೂಚನೆ ನಿಂಗೆ ಬೇಕಿಲ್ಲ'' ಪುಟಿದ ಪೇಲೊಡೆದಂತೆ ಫೋನಿಟ್ಟಿದ್ದ. ಬೆಳಕಿದೆಯೆಂದುಕೊಂಡವಳನ್ನ ಅವನ ಮಾತುಗಳು ಕತ್ತಲೆಯ ನಡುವೆ ನಿಲ್ಲಿಸಿತು.

ಸುಂದರ ದಾಂಪತ್ಯದಲ್ಲಿ ಎಷ್ಟೊಂದು ದೊಡ್ಡ ಬಿರುಕು. ಹಟದಿಂದ ಅವನೊಂದಿಗೆ ವಾಸಿಸಿ ನರಕಸದೃಶವಾಗಿ ಬದುಕುವುದಕ್ಕಿಂತ, ದೂರವಿದ್ದು ಬಿಡುವುದೇ ಶ್ರೇಯಸ್ಕರವಾಗಿ ಕಂಡಿತು.

ಅಷ್ಟರಲ್ಲಿ ನೀರದಳ ಅಮ್ಮ ಬಂದು ಕೂತರು ಅವಳ ಮುಂದೆ. "ಬೆಳಗ್ಗಿಂದ ಕಾಣಲೇ ಇಲ್ಲ" ಎಂದರು ಅತ್ತಿತ್ತ ನೋಡಿ. "ಇಲ್ಲಿಲ್ಲ..." ಅಷ್ಟೇ ನುಡಿದಿದ್ದು. ಈಗ ಅವಳಿಗೆ ಮಾತು ಬೇಕಿರಲಿಲ್ಲ. ಅವರಿಗೆ ಅರ್ಥವಾಗಬೇಕಲ್ಲ. ಆಕೆ ಮಾತನಾಡಲೆಂದೇ ಬಂದಿದ್ದರು.

"ಅಪ್ಪ, ಮನೆಯಲ್ಲಿದ್ದಾರೆ" ಎಂದಳು ಚಾರುಲತ.

ಆಕೆ ಹೆಚ್ಚು ಕಡಿಮೆ ಮಾತಾಡುವುದು ಬೇಕಿರಲಿಲ್ಲ.

"ನಿನ್ನ ಕರ್ಕೊಂಡ್ಹೋಗೋಣಾಂತ ಬಂದೆ" ಅಂದರು ಆಕೆ.

"ಅಯ್ಯೋ, ಅದೇನು ದೊಡ್ಡ ವಿಷ್ಯ ? ನಾನು ನಿಮ್ಮ ಮನೆಗೆ ಬರೋಕೆ,

ಕರೀಬೇಕಾ ? ದಿನಕ್ಕೆ ಒಂದೆರಡು ಸಲ ಬರ್‍ತಾ ಇದ್ದೆ. ಇರೀ, ನೀರದಾನ ಕರೀತೀನಿ" ಬಿಡಿಸಿಕೊಂಡು ಎದ್ದು ಹೋದಳು.

ಅಡಿಗೆ ಮನೆಯಲ್ಲಿದ್ದ ನೀರದಾನ ಹೊರಗೆ ಕಳಿಸಿ ತಾನು ಅಲ್ಲೆ ಉಳಿದಳು. ಅವರು ಕೇಳೋ ಕೆಲವು ಪ್ರಶ್ನೆಗಳಿಗೆ ಉತ್ತರಿಸಲಾರಳು. ಮದುವೆಯಾದ ಕೆಲವು ದಿನಗಳವರೆಗಾದರೂ ಸಂಭ್ರಮ ಉಳಿಯಬೇಕಿತ್ತು. ಈಗಾಗಲೇ ಕತ್ತಲೆ - ಬೆಳಕಿನಾಟ.

ಒಂದು ಲೋಟ ಹಾರ್ಲಿಕ್ಸ್ ಬೆರೆಸಿ ಆಕೆಯ ಮುಂದಿಟ್ಟು ಕೈಯೊರೆಸಿ ಕೊಳ್ಳುತ್ತ ರೂಮಿಗೆ ಹೋದಳು. ಸಧ್ಯಕ್ಕೆ ತಾತ್ಕಾಲಿಕವಾಗಿ ಒಂದು ಕೆಲಸ ಸಿಕ್ಕಿತ್ತು. ಸಮಯ ಕಳೆಯಲು ಮಾತ್ರವಲ್ಲ, ತಿಂಗಳಿಗೊಮ್ಮೆ ಅವಳದೇ ಆದ ಸಂಪಾದನೆ ಕೈ ಸೇರುತ್ತಿತ್ತು. ವಿವಾಹವಾದ ಹೆಣ್ಣು ತವರು ಮನೆಗೆ ಪರಕೀಯಳಾಗಿ ಬಿಡುತ್ತಾಳೆ. ಇದು ಅವಳಿಗೆ ಗೊತ್ತು. ಈಗ ಮೊದಲಿನ ಹಕ್ಕು, ಸ್ವತಂತ್ರ ಎರಡು ಇಲ್ಲ.

ಕಣ್ಣಿಂದ ಹರಿದ ಕಂಬನಿಯ ಬಿಂದುಗಳು ಅತ್ತಿತ್ತ ಸರಿದುಹೋದವು.

"ಚಾರು, ನಿನ್ನ ಫ್ರೆಂಡ್ಸ್ ಬಂದಿದ್ದಾರೆ" ನೀರದ ಬಂದು ವಿಷಯ ಮುಟ್ಟಿಸಿ ದಾಗ ಹೊರಗೆ ಬಂದಳು. ಕಮಲ ಇವಳ ಸಹಪಾಠಿ ಮಾತ್ರವಲ್ಲ, ಮೂರ್ತಿಯ ತಾಯಿಯ ಕಡೆಯ ದೂರದ ಸಂಬಂಧಿ. ಆಗಾಗ ಆ ಮನೆಗೆ ಬಂದು ಹೋಗುವಷ್ಟು ನೆಂಟಸ್ತಿಕೆ ಇತ್ತು.

"ಕಮಲ...ಬಾ....ಬಾ..." ಎಂದು ರೂಮಿಗೆ ಕರೆದೊಯ್ದು ಕೂಡಿಸಿ "ಅಪರೂಪಕ್ಕೆ ಬಂದಿದ್ದೀಯ. ಮದ್ವೇಂತ ಬಂದೋಳು ಕಣ್ಣಿಗೆ ಕಾಣ್ದೇ ಪರಾರಿಯಾಗ್ಬಿಟ್ಟೆ."

ಕಮಲ ಮಾತಾಡದೇ ಅವಳ ಮುಖ ನೋಡಿ, ಮೊದಲಿನ ಕಳೆ ಇಲ್ಲವೆಂಬ ನಿರ್ಧಾರಕ್ಕೆ ಬಂದಳು. "ಇನ್ನ ಅವ್ರ ಸಂಸಾರ ನೆಟ್ಟಗಾಗೋಲ್ಲ ಬಿಡು. ಇವಳಾದ್ರು ಬುದ್ಧಿವಂತಿಕೆಯಿಂದ ತನ್ನ ಸಂಸಾರನ ಉಳ್ಸಿಕೊಳ್ಳ ಬೇಕಿತ್ತು. ಅಣ್ಣ, ಅನ್ನಿಸಿಕೊಂಡೋನಿಗೆ ಬುದ್ಧಿ ಬೇಡ್ವಾ ?" ಅವಳಮ್ಮ ಪೂಜಾಳನ್ನು ನೋಡಲು ಹೋಗಿ ಬಂದಾಗಿನಿಂದ ಸಾಕಷ್ಟು ಸಲ ಅಂದಿದ್ದರು.

"ಅದೇನು, ಹಾಗೇ ಕೂತೇ ?" ಎಚ್ಚರಿಸಿದಳು ಚಾರುಲತ.

"ಏನಿಲ್ಲ, ಯಾಕೋ ಬೇಜಾರಾಯ್ತು. ನಾನು ಕೇಳಿದ್ದು ಸುಳ್ಳಾಗ್಩ಲಿಂತ

ದೇವ್ರಲ್ಲಿ ನನ್ನ ಬೇಡಿಕೆ. ಪೂಜಾನ ಈಚೆಗೆ ನೋಡಿದ್ಯಾ ? ಹೇಗಿದ್ದೋಳು ಹೇಗಾಗ್ಬಿಟ್ಟಿದ್ದಾಳೆ. ಅವ್ಳ ಮುಖದ ಕಾಂತಿ, ಬಣ್ಣ ಎಲ್ಲೋಯ್ತೋ ಅವ್ಳು ಉಳ್ಸಿಕೊಂಡಿದ್ದೇ ಹೆಚ್ಚು."

ಕಮಲಳ ಮಾತಿಗೆ ಪ್ರತಿಕ್ರಿಯಿಸಲು ಅವಳ ಸ್ವರವೇಳಲಿಲ್ಲ. ಸ್ವಲ್ಪ ತುಂಟತನ, ಹಟವಿದ್ದರೂ ಪೂಜಾ ಅವಳ ಪ್ರೀತಿಯ ನಾದಿನಿಯೇ. ಛೇಡಿಸಿ, ಛೇಡಿಸಿ ಗೋಳೊಯ್ದುಕೊಳ್ಳುತ್ತಿದ್ದ ಅವಳ ನೆನಪಿನಿಂದ ಹನಿಗಣ್ಣಾದಳು.

"ಈಗ ಪೂಜಾ ಹೇಗಿದ್ದಾಳೆ ?" ವಿಚಾರಿಸಿದಳು.

"ಏನೇನು ಚೇತರಿಸಿಕೊಳ್ಳಿಲ್ಲ. ಮುಂಬಯಿಗೆ ಕರ್ಕೊಂಡ್ಹೋಗಿದ್ದಾರೆ. ಅಲ್ವೇ, ನಿಮ್ಮಣ್ಣನಿಗೆ ಏನಾಗಿತ್ತು. ಪೂಜಾ ಅಷ್ಟು ನಿಸ್ವಾರ್ಥಿಗೆ ಚೆನ್ನಾಗಿದ್ಲಾ? ಮದ್ವೆನ ಹಬ್ಬದಂಗೆ ಮಾಡ್ಬಿಟ್ಟಿರಲ್ಲ. ಸ್ವಲ್ಪನಾದ್ರೂ ದೂರದೃಷ್ಟಿ ಬೇಡ್ವಾ? ಯುಗಂಧರ್ ಮಾವ ಬಾಡಿಗೆಗೆ ಕೊಟ್ಟಿದ್ದ ಮನೆನ ನರ್ಸಿಂಗ್ ಹೋಂ ಮಾಡೋಕೆ ಬಿಟ್ಟಿ ಕೊಡ್ತೀನಿ ಅಂದರಂತಲ್ಲ. ಇನ್ನು ಸಾಕಷ್ಟು ಕೊಟ್ಟಿರೋರು. ಅದು ಅಲ್ದೇ, ನಿನ್ನ ಭವಿಷ್ಯದ ದೃಷ್ಟಿಯಿಂದಲಾದ್ರೂ ಪೂಜಾನ ಈ ಮನೆಗೆ ತಂದ್ಕೋಬೇಕಿತ್ತು." ಅವಳು ಸ್ವಲ್ಪ ನಾಲಿಗೆ ಉದ್ದಕ್ಕೆ ಚಾಚಿದಳು. ಮನಸ್ಸಿನಲ್ಲಿ ದ್ವುದ್ದನ್ನು ಅದಿಮಿಹಿಡಿದಳು.

ಚಾರುಲತ ತಾಳ್ಮೆ ಕಳೆದುಕೊಳ್ಳಲಿಲ್ಲ.

"ಸಪ್ನಾ, ನೀರದ ಮಧ್ಯೆ ಲವ್ ಅಫೇರ್ಸ್ ಇತ್ತು. ಅವ್ರ ಮನೆಯವ್ರು ನಮ್ಮ ತಾಯಿ ಸತ್ತಾಗ ಸಾಕಷ್ಟು ಮಾಡಿದ್ರು. ಅದೊಂದು ಕೃತಜ್ಞತೆ ಕೂಡ ನಮ್ಮ ಮೇಲಿತ್ತು" ಸ್ಪಷ್ಟಪಡಿಸಿದಳು.

ವ್ಯವಹಾರಿಕವಾಗಿ ಈ ಜನ ಸ್ವಲ್ಪ ಡಲ್ ಎನಿಸಿತು ಕಮಲಾಗೆ. ಅಂಥ ಉತ್ತಮ ಸಂಬಂಧ ಸಿಗೋವಾಗ, ಎದುರು ಮನೆ ಹುಡುಗಿಗಾಗಿ ನೇತು ಬೀಳಬೇಕಿತ್ತೆ.

"ಚಾರು, ನೀನು ಹೇಳೋದು ವ್ಯವಹಾರಿಕವಾಗಿ ಏನೇನು ಸರಿಯಿಲ್ಲ. ನಿಮ್ಮಣ್ಣ ಮಾಡಿರೋದು ಬರೀ ಎಂ.ಬಿ.ಬಿ.ಎಸ್. ಇಷ್ಟಕ್ಕೆ ಮುಗಿದ್ರೆ ಏನೇನು ಭವಿಷ್ಯವಿಲ್ಲ. ಇದ್ನೆಲ್ಲ ಯೋಚ್ಸಬೇಕಿತ್ತು. ನಿಮ್ಮಣ್ಣ ಮಜ್ಜು ಬಿಡಮ್ಮ. ಈಗ ನಿನ್ನ ಭವಿಷ್ಯದ ಬಗ್ಗೆ ಏನು ಹೇಳ್ತಾನೆ. ಆರಾಮಾಗಿ ಡೈವೋರ್ಸ್ ತಗೋತಾರೆ.

ಇನ್ನೊಂದು ಹೆಣ್ಣನ್ನ ತಂದ್ಕೋತಾರೆ. ನಿನ್ತಲೆ ಮೇಲೆ ನೀನು ಕಲ್ಲು ಎತ್ತಿ ಹಾಕ್ಕೊಂಡೆ" ಸ್ವಲ್ಪ ಉದ್ವೇಗದಿಂದ ಕಮಲ ನುಡಿದಾಗ ಆರಾಮಾಗಿ ನಕ್ಕುಬಿಟ್ಟಳು ಚಾರುಲತ. "ಅವರಾಗಿ ಕಲ್ಲು ಎತ್ಕೊಂಡ್ ಅವ್ರ ತಲೆ ಮೇಲೆ ಹಾಕಿಕೊಳ್ಳೋದು ಕಷ್ಟ. ಬೇಕಾದ್ರೆ ಕಾಲು ಮೇಲೆ ಹಾಕ್ಕೋಬಹ್ದು. ನೀನು ಚಿಂತಿಸೋ ರೀತಿಯಲ್ಲಿ ನಾನು ಚಿಂತಿಸ್ಲಿಲ್ಲ. ಅದಕ್ಕಾಗಿ ಖಂಡಿತ ಪಶ್ಚಾತ್ತಾಪವಿಲ್ಲ. ಒಂದಿಷ್ಟು ಸಮಸ್ಯೆಗಳು ಕಮ್ಮಿ ಆಯ್ತು, ಅಷ್ಟೆ. ಏನಾದ್ರೂ ತರ್ತೀನಿ....ಕೂತ್ಕೊಂಡಿರು" ಮೇಲೆದ್ದು ಹೋದಳು.

ನೀರದ, ಅವಳ ತಾಯಿ ಇನ್ನ ದನಿ ತಗ್ಗಿಸಿ ಮಾತಾಡುತ್ತಿದ್ದರು. ಅವಳ ಕೆನ್ನೆಗಳ ಮೇಲೆ ಅತ್ತ ಗುರುತಿತ್ತು. ನೀರದಾಳ ಕೈ ಹಿಡಿದು ಒಳಗೆ ಕರೆದೊಯ್ದು.

"ಸಣ್ಣ, ಪುಟ್ಟ ವಿಷ್ಯಗಳ್ನ ದೊಡ್ಡ ಸಮಸ್ಯೆಯನ್ನಾಗಿ ಮಾಡ್ಕೊಂಡ್ ಆಂಟೀಗೆ ಹೇಳ್ತೀರಾ ? ಕೌಂಟಿಂಗ್ ಡೇಸ್ ಅಂತ ಡಾಕ್ಟ್ರು ಹೇಳಿದ್ದಾರೆ. ಒಂದಿಷ್ಟು ನೆಮ್ದಿಯಾಗಿರೋಕೆ ಬಿಡಿ. ಅದೂ ಅಲ್ದೇ, ನಿಮ್ಗೇ ಅಂಥದೇ ನಾಗಿದೆ ? ಕನಸು ಕಂಡ ರಾಜಕುಮಾರ ನಿಮ್ಮ ಕೈ ಹಿಡಿದಿದ್ದಾನೆ. ಅತ್ತೆ ಮನೆ ಅಪರಿಚಿತ ಸ್ಥಳವಲ್ಲ. ಇಲ್ಲಿನವ್ರು ಕೂಡ ಕಾಣದ ಜನವಲ್ಲ. ನೀವು ಸುಖೀ. ಇಲ್ಲದೆಲ್ಲ ಕಲ್ಪಿಸಿಕೊಳ್ಳಬೇಡಿ." ಬುದ್ಧಿ ಹೇಳಿದಳು.

ನೀರದ ಇನ್ನಷ್ಟು ಕಣ್ಣೀರು ಸುರಿಸಿ ತೊಡೆದುಕೊಂಡು ಹೋದಳು.

ಡಬ್ಬಿಯಲ್ಲಿದ್ದ ಚಕ್ಕುಲಿಯನ್ನ ತಟ್ಟೆಗೆ ಹಾಕಿಕೊಂಡು ನೀರಿಡಿದು ಹೋದಳು. ಅವಳಲ್ಲಿನ ಅಳುಕು ಒಂದಿಷ್ಟು ಕಮ್ಮಿ ಆಗಿತ್ತು. ಸಮಸ್ಯೆಗಳು ಹೇಗೆ ಬಂದರೂ ಎದರಿಸುವ ಆತ್ಮವಿಶ್ವಾಸ ಅವಳದು.

"ತಗೋ, ಇಷ್ಟೊತ್ತು ನನ್ನ ವಿಷ್ಯ ಮಾತಾಡ್ದೆ, ಸಾಕು ಬಿಡು. ಈಗ ಬೇರೆನಾದ್ರೂ ಮಾತಾಡು. ನೀನೇನ್ಮಾಡ್ತೀಯಾ ?" ಕೇಳಿದಳು. ಸ್ವಂತ ವಿಷಯ ಬೇರೆಯವರು ಹಿಗ್ಗಾ ಮುಗ್ಗಾ ಎಳೆದಾಡುವುದು ಬೇಕಿರಲಿಲ್ಲ.

ಒಂದು ಚಕ್ಕುಲಿ ಖಾಲಿಯಾದ ನಂತರವೇ ಕಮಲ ಷುರು ಮಾಡಿದ್ದು "ಮನೆಯಲ್ಲಿ ನೂರೆಂಟು ಸಮಸ್ಯೆ. ಅಮ್ಮ ಅಪ್ಪ ಸದಾ ಕಿತ್ತಾಡುತ್ತಾರೆ. ಅವ್ರಿಗೆ ಚೆನ್ನಾಗಿ ಸಂಪಾದ್ನೆ ಇದ್ದಾಗ ಸ್ವಂತಕ್ಕೆ ಒಂದು ಮನೆ ಕೂಡ ಮಾಡ್ಲಿಲ್ಲ. ಸ್ವಪ್ರತಿಷ್ಠೆಗಾಗಿ ಸಿಕ್ಕಿದವ್ರಿಗೆಲ್ಲ ಮಾಡಿದ್ರು. ಈಗ ಎರಡು ಹೆಣ್ಣು ಮಕ್ಳಿಗೆ ವಿವಾಹವಾಗ್ಬೇಕು.

ನಮ್ಮಣ್ಣನದು ಟೆಂಪರರಿ ನೌಕರಿ. ನನ್ನ ಮದ್ವೆಗೆ ಯಾರು ಕೈ ಹಾಕ್ತೀಡಿ. ನೆಮ್ಮಿಯಿಂದ ಬಿಟ್ಟಿಡಿ. ನನ್ನ ಸಂಬಳದಲ್ಲಿ ಎಪ್ಪತ್ತೈದು ಪರ್ಸೆಂಟ್ ಮನೆಗೆ ಕೊಡ್ತೀನಿ. ಒಪ್ಪತ್ತು ಊಟ, ಮಲಗೋಕೆ ಒಂದಿಷ್ಟು ಜಾಗ ಕೊಡ್ತೀಂತಾನೇ. ಇಷ್ಟೇ ನೋಡು ನಮ್ಮ ಮನೆ ವಿಷ್ಯ" ಬೇಸರ ವ್ಯಕ್ತಪಡಿಸಿದಳು.

"ಮಹರಾಯ್ತಿ, ಇದು ನೂರಕ್ಕೆ ತೊಂಬತ್ತು ಮನೆಗಳಲ್ಲಿನ ಸಾಧಾರಣ, ಸಾಮಾನ್ಯ ವಿಷ್ಯ. ಇದ್ರಲ್ಲಿ ಅತಿಶಯವೇನಿಲ್ಲ. ಸುಮ್ನೇ ಪರಿಹಾರ ಹುಡುಕಿದರೇ ತಲೆ ಕೆಡುತ್ತೆ ವಿನಃ ಸಾಲ್ವ್ ಆಗೋಲ್ಲ. ಹೀಗೆಯೇ ಉರುಳ್ಕೊಂಡು ಹೋಗುತ್ತೆ. ಸಧ್ಯಕ್ಕೆ ಅಪ್ಪನ ಪ್ರತಿಷ್ಠೆಗೆ ಜೋತು ಬೀಳದೇ ನೀನು, ನಿನ್ನಕ್ಕ ಒಂದ್ಕೆಲ್ಸ ಹುಡ್ಕಿಕೊಂಡರೇ ಮನೆಗೆ ಸಹಾಯವಾಗಿದ್ರೂ ನಿಮ್ಮ ಸ್ವಂತ ಖರ್ಚು ವೆಚ್ಚಗಳ್ನ ನೀವು ನೋಡ್ಕೋಬಹ್ದು."

ಚಾರುಲತಳ ಮಾತುಗಳು ಸರಿಯೆನಿಸಿದರೂ ಅವಳ ಜನ್ಮದಾತರ ಒಪ್ಪಿಗೆ ಸಿಗುವುದಿಲ್ಲವೆಂದು ಅವಳಿಗೆ ಗೊತ್ತು.

"ಒಪ್ಪೋಲ್ಲ ಕಣೇ, ಅಪ್ಪನ ಮುಂದೆ ಅಪ್ಪಿ ತಪ್ಪಿ ಇಂಥ ಸುದ್ದಿ ಎತ್ತಿದರೇ, ಅವರು ತಮ್ಮ ಕಳೆದು ಹೋದ ಮೂರು ಜನರೇಷನ್ನ ವೈಭವ ನೆನಪಿಸ್ಕೊಂಡು ಹಲುಬೋಕೆ ಶುರು ಮಾಡ್ತಾರೆ. ಏನ್ಮಾಡೋದು ಒಂದು ತೋಚೋಲ್ಲ" ಬಿಕ್ಕುಲಿ ತಟ್ಟೆ ಕೆಳಗಿಟ್ಟಳು. ತಲೆ ಕೆಟ್ಟಂತಾಯಿತು ಕಮಲೆಗೆ.

ಕಾಫಿಯ ನಂತರ ಕಮಲಳ ಬಸ್ಸು ಹತ್ತಿಸಲು ಚಾರುಲತ ಅವಳೊಂದಿಗೆ ಹೊರಟಾಗ ಮಧ್ಯ ದಾರಿಯಲ್ಲಿ ನಿಂತು ಕಮಲ "ಮುಂದೇನು ಮಾಡ್ತೀಯಾ? ಬಹುಶಃ ಇಷ್ಟೆಲ್ಲ ಆದ್ಮೇಲೆ ಮೂರ್ತಿ ಅಣ್ಣ ನಿನ್ಜೊತೆ ಸಂಸಾರ ಮಾಡೋಕೆ ಇಷ್ಟಪಡೋಲ್ಲ" ಅವಳ ದನಿಯಲ್ಲಿ ವಿಷಾದ ಇಣಕಿತು.

"ಆಯ್ತು, ಆಗ್ಲಿ! ಅದ್ಕೇನು ಮಾಡೋಕ್ಕಾಗುತ್ತೆ. ಕಾಲ ಅದ್ಕೆಲ್ಲ ಪರಿಹಾರ ಸೂಚಿಸುತ್ತೆ. ಈಗ ಪೂಜಾ ಹುಷಾರಾಗಿದ್ದಾಳಂಥ ? ಆ ಉದ್ದೇಶ ಇಟ್ಕೊಂಡ್ ನವೀನಣ್ಣನ ಜೊತೆಯಲ್ಲಿ ಓಡಾಡ್ತಾ ಇದ್ದಾಳೆಂದು ಗೊತ್ತಾಗಿದ್ದರೇ, ಮೊದಲೇ ಎಚ್ಚರಿಸ್ತಾ ಇದ್ದೆ. ಅವೆಲ್ಲ ಕಳೆದು ಹೋದದ್ದಲ್ವಾ !" ಎಂದವಳು "ಬಸ್ಸು ರೆಡಿಯಾಗಿದೆ, ನೋಡು. ಮುಂದಿನ ಬಸ್ಸು ಅಂದರೇ ಇನ್ನರ್ಧಗಂಟೆ ಕಾಯ್ಬೇಕು. ಯಾವಾಗ್ಲಾದ್ರೂ...ಬಾ" ಬೀಳ್ಕೊಟ್ಟಳು.

ಎದುರಿನಿಂದ ಬಂದ ಡಾ|| ನವೀನ್ ಅವಳ ಪಕ್ಕ ಸ್ಕೂಟರ್ ನಿಧಾನಿಸಿ "ಇವ್ರು ಯಾವಾಗ್ಬಂದ್ಲು ?" ಎಂದವನು "ಬೇಗ ಹತ್ಕೋ" ಹೇಳಿದ.

ಸ್ಕೂಟರ್ ಮುಂದಕ್ಕೆ ಹೋಗುವ ಬದಲು ಹಿಂದಕ್ಕೆ ತಿರುಗಿಸಿಕೊಂಡಾಗ ಅವಳಿಗೆ ಆಶ್ಚರ್ಯವಾದರೂ ಕೇಳಲಿಲ್ಲ. ಒಂದು ರೆಸ್ಟೋರೆಂಟ್‌ನ ಮುಂದೆ ನಿಂತಿತು.

"ಹೊಟ್ಟೆ ಹಸೀತಾ ಇದೆ. ಒಂದಿಷ್ಟು ಏನಾದ್ರೂ ಹಾಕ್ಕೊಂಡ್ ಹೋಗೋಣ" ನಗುತ್ತ ಅಂದು ಒಳ ನಡೆದಾಗ ಹಿಂಬಾಲಿಸಿದಳು ಮೌನವಾಗಿ. ಮದುವೆಯಾಗಿ ಕನಿಷ್ಠ ತಿಂಗಳು ಕಳೆಯುವ ಮುನ್ನವೇ ಮನೆಯ ಬಗ್ಗೆ ಇಷ್ಟೊಂದು ಉದಾಸ ಭಾವ ಒಳ್ಳೆಯದಲ್ಲವೆನಿಸಿತು.

ಬಾಂಬೆ ಬಜ್ಜಿ, ಮಸಾಲೆ ದೋಸೆಗೆ ಆರ್ಡರ್ ಮಾಡಿ ಕೈ ತೊಳೆದು ಬಂದು ಕೂತ. ನೇರವಾಗಿ ಅವನನ್ನ ನೋಡಿದಳು.

"ಅದೇನು, ಹಾಗೇ ನೋಡ್ತೀಯಾ ?" ಕೇಳಿದ ಹುಬ್ಬೆತ್ತಿ.

"ವಿವಾಹ ನಿನ್ನ ವ್ಯಕ್ತಿತ್ವ, ನಿನ್ಮುಖದ ಮೇಲೆ ಎಂಥ ಪರಿಣಾಮ ಬೀರಿದೇಂತ ಟೆಸ್ಟ್ ಮಾಡ್ತಾ ಇದ್ದೀನಿ."

ಕ್ರಾಪ್‌ನ ಒರಟಾಗಿ ಎಡಗೈಯಿಂದ ಹಿಂದಕ್ಕೆ ತಳ್ಳಿಕೊಂಡ "ಮಣ್ಣಾಗಟ್ಟೆ ಬೀರಿದೆ." ನಿಟ್ಟುಸಿರು ದಬ್ಬಿದ "ಎಷ್ಟೊತ್ತಿಗೆ ಬಂದೆ ?"

"ನಾನೇನೋ ಬೇಗ್ನೆ ಬಂದೆ. ನೀನೇ ಲೇಟು."

"ನಮ್ಗೇನು ಟೈಮಿಂಗ್ಸ್ ಇಲ್ಲ. ಟೆನ್ ಟು ಫೈವ್ ಸರ್ಕಾರಿ ಜಾಬ್ ಅಲ್ಲ. ಮಾಡಿದಷ್ಟೇ ಕೆಲ್ಸ, ಕೊಟ್ಟಷ್ಟೇ ಸಂಬಳ ಇವತ್ತು ನೈಟ್ ಕೂಡ ಮಾಡ್ಬೇಕು. ನನ್ನ ಕೊಲಿಗ್ ಡಾ|| ಹರೀಶ್ ಮುಂಬಯಿಗೆ ಹೋಗಿದ್ದಾರೆ. ಇಲ್ಲಿ ಹೊಟ್ಟೆ ತುಂಬ ತಿಂಡಿ ತಿಂದರೇ, ನರ್ಸಿಂಗ್ ಹೋಂಗೆ ಹೋಗೋ ಮೊದ್ಲು ಊಟ ಮಾಡ್ಕೊಂಡ್ ಹೋಗ್ಬಹುದು" ಎಂದ ಕರ್ಚೀಪ್‌ನಿಂದ ಮುಖ ವನ್ನೊರೆಸಿಕೊಳ್ಳುತ್ತ.

ಡಾ|| ನವೀನ್‌ಗೂ ನೈಟ್ ಡ್ಯೂಟಿ ಇರುತ್ತಿತ್ತು.

"ನೀನೇ ಏನಾದ್ರೂ ನೈಟ್ ಡ್ಯೂಟಿ ಹಾಕ್ಸಿಕೊಂಡ್ಯಾ ?" ಪ್ರಶ್ನಿಸಿದಳು.

"ಅದೆಲ್ಲ ಬಿಡು, ಹೇಗಿತ್ತು ಕೆಲ್ಸ ?" ವಿಚಾರಿಸಿದ.

ಇದು ಮೇಲ್ಮುಖಕ್ಕೆ ಬಂದ ಪ್ರಶ್ನೆಯೇ. ಅವನಿಂದು ನರ್ಸಿಂಗ್ ಹೋಂಗೆ ಹೋಗಿಯೇ ಇಲ್ಲ. ನಿವೇದಿತಾ ಲೇಡಿಸ್ ವೇರ್ ಷೋರೂಂ ಬಗ್ಗೆ ಸಾಕಷ್ಟು ವಿಚಾರಿಸಿಕೊಂಡಿದ್ದ. ತೃಪ್ತಿಯಾಗಿತ್ತು.

"ಎಲ್ಲಾ ಚೆನ್ನಾಗಿದೆ. ಕ್ಯಾಂಟೀನ್ ಸೌಲಭ್ಯವಿದೆ. ಅಲ್ಲಿ ಎಂ.ಡಿ. ಯಿಂದ ಅಟೆಂಡರ್‌ವರ್ರೂ ಲೇಡಿಸೇ. ಒಂದು ಆದರ್ಶ ಇಟ್ಕೊಂಡ್ ಪ್ರಾರಂಭಿಸಿದ ಉದ್ಯಮ. ಎಷ್ಟೋ ಜನ ಮಹಿಳೆಯರ ಜೀವನಕ್ಕೆ ಒಂದು ದಾರಿಯಾಗಿದೆ" ಇದ್ದುದ್ದನ್ನ ಸ್ಪಷ್ಟವಾಗಿ ಉಸುರಿದಳು.

ಬಾಂಬೆ ಬಜ್ಜಿ, ದೋಸೆ ಮುಗಿದ ಮೇಲೆ ವೆಯಿಟರ್‌ನ ಕಾಫಿ ನಿಧಾನವಾಗಿ ತರಲು ಹೇಳಿ "ಮೂರ್ತಿಗೆ ಫೋನ್ ಮಾಡಿದ್ಯಾ ? ಅವ್ರು ನಿಜವಾಗ಼್ೂ ಫೋನ್‌ನಲ್ಲಿ ಸಿಕ್ಕರಾ ?" ಕೇಳಿದ.

ಹೌದೆಂದು ತಲೆದೂಗಿದಳು. ಮುಚ್ಚಿಡುವುದರಿಂದ ಮತ್ತಷ್ಟು ಸಮಸ್ಯೆಗಳೆಂದು ಅವಳಿಗೆ ಗೊತ್ತು.

"ಹೌದು, ನನ್ನ ಮಾತು ಕೇಳೋ ಆಸಕ್ತಿ ಅಪ್ರಿಗೆ ಇರ್ಲಿಲ್ಲ. ನಿನ್ನ ಬದ್ಕನ ಹೇಗೆ ಬೇಕಾದ್ರೂ ರೂಪಿಸ್ಕೋ, ಅದ್ಕೇ ನನ್ನ ಸಲಹೆ ಸೂಚನೆಯೇನ್ಬೇಡ ಅನ್ನೋ ತರಹ ಮಾತಾಡಿದ್ರು."

ಹಲ್ಲುಗಿಡಿ ಕಚ್ಚಿ ಮುಷ್ಟಿ ಬಿಗಿ ಹಿಡಿದು ಟೇಬಲ್ಲು ಮೇಲೆ ಒತ್ತಿಡಿದ "ಅವ್ರಿಗೆ ಒಂದು ಕೈ ತೋರಿಸ್ತೀನಿ" ಕನಲಿದ.

"ಏನು ತೋರಿಸ್ತೀಯಾ ?" ಶಾಂತವಾಗಿ ಕೇಳಿದಳು.

"ಆಮೇಲೆ ಗೊತ್ತಾಗುತ್ತೆ" ಸಿಡಿದ.

"ಸುಮ್ನೇ ವಿವೇಕ ಕಳ್ಕೋಬೇಡ. ಯಾರಾದ್ರೂ ಮುಖ ತಿರುಗಿಸ್ಕೊಂಡ್ರೆ ಹತ್ತು ನಿಮಿಷ ಅಲ್ಲಿ ಕೂಡೋಕ್ಕಾಗೋಲ್ಲ. ಅಂಥದ್ದರಲ್ಲಿ ಇಷ್ಟವಿಲ್ಲದವ ರೊಂದಿಗೆ ಸಂಸಾರ ಮಾಡೋಕ್ಕಾಗುತ್ತ, ಹೆಣ್ಣಿಗೂ ಸ್ವಾಭಿಮಾನ ಇರುತ್ತೆ. ದಯವಿಟ್ಟು ಇನ್ನ ಯಾವ ಪ್ರಯತ್ನಗಳು ಬೇಡ. ವೆಯಿಟರ್‌ಗೆ ಕಾಫಿಗೆ ಹೇಳು. ಪಾಪ, ನೀರದ ಕಾಯ್ತ ಇರ್ತಾಳೆ" ಅವಸರಿಸಿದಳು. ಪ್ರಸನ್ನವಾಗಿಯೇ.

ತಂಗಿಯ ಕಣ್ಣುಗಳನ್ನು ನೋಡಿದ ಪ್ರಶಾಂತವಾಗಿತ್ತು. ಅಸಹನೆ ಆಕ್ರೋಶ ಅಂಥದೇನಿರಲಿಲ್ಲ. ಈಗ ಅವನಿಗೆ ತನ್ನ ತಪ್ಪಿನ ಪ್ರಮಾಣ ಇನ್ನು ಹೆಚ್ಚೆನಿಸಿತು, ನೋಟ ನೆಲ ನೋಡಿತು.

"ನಾನು ದೊಡ್ಡ ತಪ್ಪು ಮಾಡ್ದೇ" ಮುಖ ಹಿಂಡಿದ.

ಚಾರುಲತ ಬೆಚ್ಚಿಬಿದ್ದಳು. "ಅದೊಂದು ಅನಿಸಿಕೆಯೇ ಸಾಕಷ್ಟು ನಿನ್ನ ಚಿತ್ರವಧೆ ಮಾಡೋಕೆ. ಇದೊಂದು ರೀತಿಯ ಅಗ್ನಿಪರೀಕ್ಷೆ. ಸೋಲು, ಗೆಲುವು ಫಿಫ್ಟಿ ಫಿಫ್ಟಿ. ಇಲ್ಲಿ ಲಾಭ, ನಷ್ಟಗಳು ನಮ್ಗೂ, ಅವ್ರಿಗೂ ಸಮಸಮ ವಾಗಿಯೇ ಇರುತ್ತೆ. ಯಾವುದನ್ನು ಛಾಲೆಂಜಾಗಿ ಸ್ವೀಕರಿಸಿದಾಗ್ಲೇ ಜೀವನ ಕ್ಕೊಂದು ಅರ್ಥ" ಮಾತು ಸಾಕು ಸಾಕೆನಿಸಿತು.

ಮನೆಗೆ ಹಿಂದಿರುಗಿದಾಗ ನೀರದ ಮಂಕಾಗಿ ನಿಂತಿದ್ದಳು. ಅವಳು ಪದೇಪದೇ ತಾಯಿ ಮನೆಗೆ ಹೋಗಿ ಬರುವುದಿತ್ತು. ಅವರಿಗೆ ಆತಂಕ. ನೂರೆಂಟು ಪ್ರಶ್ನೆಗಳನ್ನು ಸುತ್ತಿಕೊಂಡು ಕಂಗೆಡಿಸುತ್ತಿತ್ತು.

"ಒಪ್ಪಿಕೊಳ್ಳಿ" ಎಂದವಳು ಒಳಗೋದಳು.

ಚಾರುಲತಗೆ ಒಂದು ರೀತಿಯ ಹಿಂಸೆಯೆನಿಸಿತು. ಅವರಿಬ್ಬರ ಮಧ್ಯೆ ಮೌನವಾಗಿ ಹೊಗೆಯಾಡುವ ಬೇಸರಕ್ಕೆ ತಾನು ಸ್ವಲ್ಪ ಮಟ್ಟಿಗೆ ಕಾರಣವೆನಿ ಸಿತು. 'ನಿವೇದಿತಾ ನ್ಯೂ ಲೇಡಿಸ್ ವೇರ್' ಸಂಸ್ಥೆಯ ಒಂದು ವರ್ಕಿಂಗ್ ವುಮೆನ್ಸ್ ಹಾಸ್ಟಲ್ ಇತ್ತು. ಅಲ್ಲಿ ಯಾಕೆ ತಾನು ಜಾಯಿನ್ ಆಗಿಬಿಡ ಬಾರದು ಎಲ್ಲಾ ಕಗ್ಗಂಟಾಗಿಯೇ ಕಂಡಿತು.

* * *

ತಂದೆ, ತಾಯಿ ತಂಗಿಯ ಜೊತೆ ಮುಂಬಯಿಗೆ ಹೋದ ಮೇಲೆ ಮೊದಲ ಸಲ ಊರಿಗೆ ಬಂದಿದ್ದ ಮೂರ್ತಿ. ಅವನ ಕೊಲೀಗ್ಸ್ ಒಂದಲ್ಲ ಒಂದು ಕಾರಣ ಮುಂದು ಮಾಡಿಕೊಂಡು 'ಏನು ಕಾರಣ ?' ಕೆಲವರು ಹುಬ್ಬು ಹಾರಿಸಿ ಕಾರಣ ಕೇಳಿದರೇ, ಮತ್ತೆ ಕೆಲವರು ರೀಸನ್‌ಗಾಗಿ ಹುಡುಕಾಡುತ್ತಿದ್ದರು.

ಅಕ್ಕಪಕ್ಕದ ಮನೆಯವರು, ಎದುರುಮನೆಯಲ್ಲೇ ವಾಸವಾಗಿದ್ದ ಓನರ್ "ಯಾಕೆ, ಶ್ರೀಮತಿಯವ್ರನ್ನ ಕರ್ಕಂಡ್ ಬರ್ಲಿಲ್ಲ ? ಒಂದ್ತಿಂಗ್ಳು ಆಯಿತಲ್ಲ ಹೋಗಿ, ಎಷ್ಟು ದಿನ ಮಾರಾಯರೇ ಅಣ್ಣನ ವಿವಾಹದ ಸಂಭ್ರಮ ? ಮದ್ವೆಯಾದ್ಮೇಲೆ ಒಂಟಿತನ ಕಷ್ಟ. ಈ ರೀತಿಯಲ್ಲಿ ಮಾತುಕತೆ ಷುರು ಮಾಡುತ್ತಿದ್ದರು. ಆಗ ಹಿಂಸೆಯೆನಿಸುತ್ತಿತ್ತು. ಹುಚ್ಚಿಡಿದಂತಾಗುತ್ತಿತ್ತು. ಬದುಕಿನ ಬೆಳದಿಂಗಳು ಇಷ್ಟು ಬೇಗ ಕತ್ತಲಾಯಿತಲ್ಲ."

ಎದುರು ಮನೆ ಹುಡುಗ ಬಂದು ಮಲಗುತ್ತಿದ್ದ. ಪ್ರತಿದಿನ ಕೆಲಸದವಳು ಗುಡಿಸಿ, ಸಾರಿಸಿ ಚೊಕ್ಕಟ ಮಾಡುತ್ತಿದ್ದರಿಂದ ಮನೆ ಕ್ಲೀನಾಗಿಯೇ ಇತ್ತು.

ಬಂದವನು ಸ್ನಾನ ಮುಗಿಸಿ ಸಂಜೆಯವರೆಗೂ ಮಲಗಿದ. ಅವರದು ಅರೇಂಜ್ಡ್ ಮ್ಯಾರೇಜಾದರೂ ಚಾರುಲತ, ಅವನಲ್ಲಿ ಬಹಳ ಅನ್ಯೋನ್ಯತೆ ಇತ್ತು. ಅವಳೆಂದು ಕಾಡುವ ಹೆಣ್ಣಾಗಿರಲಿಲ್ಲ. ಹಾಲು-ಜೇನು ಬೆರತಂಥ ಸಂಸಾರ.

ಮಲಗಿದ್ದವನು ಎದ್ದು ಕೂತ. ಅಂಥ ಭ್ರಮೆಯಲ್ಲಿ ತಾನಿದ್ದೇ ಅಷ್ಟೆ. ಎಷ್ಟು ಆರಾಮಾಗಿ ತನ್ನ ಮಾತನ್ನ ಉತ್ಪ್ರೇಕ್ಷಿಸಿಬಿಟ್ಟಳು ?

ಬಾತ್‌ರೂಂಗೆ ಹೋಗಿ ಮುಖ ತೊಳೆದು ಬಂದ. ಎದುರು ಮನೆಯ ಹುಡುಗ ಬಂದು "ಸರ್, ಅಲ್ಲೇ ಟೀಗೆ ಬರ್ಬೇಕಂತೆ" ಕರೆದ.

"ಅದೆಲ್ಲ ಬೇಡ ! ನಾನು ಹೊರಗಡೆ ಹೊರಟಿದ್ದೀನಿ" ನಿರಾಕರಿಸಿದ.

"ಖಂಡಿತ ಬರ್ಬೇಕಂತೆ" ಎಂದು ಹೇಳಿ ಓಡಿ ಹೋದ.

ಅವನ ತಾಯಿ ಮತ್ತು ಎದುರು ಮನೆಯ ಒಡತಿಯೊಂದಿಗೆ ಹೆಚ್ಚಿನ ದೋಸ್ತಿ ಇತ್ತು. ಎರಡು ಮನೆಗಳ ಮಧ್ಯೆ ಹೆಚ್ಚಿನ ಓಡಾಟ ಕೂಡ ಇದ್ದುದ್ದರಿಂದ ನಿರಾಕರಿಸಲಾಗಲಿಲ್ಲ.

"ಯಾವಾಗ್ಬಂದಿದ್ದು ?" ವಿಚಾರಿಸಿದರು.

ಕೂತು ಟೀಪಾಯಿ ಮೇಲಿದ್ದ ಪತ್ರಿಕೆಯನ್ನು ತೆಗೆದುಕೊಂಡ ನಂತರವೇ ಉತ್ತರಿಸಿದ್ದು "ಮಧ್ಯಾಹ್ನ ಬಂದೆ."

ಬಿಸಿ ಅವಲಕ್ಕಿಯ ಜೊತೆ ಅಕ್ಕಿಯ ಕಡುಬನ್ನು ತಂದಿಟ್ಟು ಉಪಚರಿಸಿದರು. ಅವನು ತಿಂದು ಕಾಫಿ ಕುಡಿಯುವವರೆಗೂ ತಮ್ಮ ಸಂಸಾರದ ಮಾತುಗಳನ್ನು ಆಡಿದವರು ನಂತರ ಷುರು ಮಾಡಿದರು. ಅವರಿಗೂ ಕೂಡ ಚಾರುಲತ ಮೇಲೆ ಬೇಸರವಿತ್ತು.

"ನಮ್ಗೂ ಪೂಜಾ ಉಳಿಯೋ ನಂಬ್ಕೇ ಇರ್ಲಿಲ್ಲ. ಏನು ಕರ್ಮ ಆಗಿತ್ತು ಬೇಡ ಅನ್ನೋಕೆ ? ಚಾರುಲತ ಸ್ವಲ್ಪ ಗಟ್ಟಿಯಾಗಿ ಕೇಳಿದ್ರೆ ತಂದೆ, ಮಗ ಮೆತ್ತಗಾಗಿ ಹೇಳ್ದಂಗೆ ಕೇಳ್ತೋರು. ಅರ್ಥ ಈ ಹುಡ್ಗೀದೇ ಸಪೋರ್ಟ್" ಎಂದರು ಜಿಗುಪ್ಸೆಯಿಂದ.

ಬಹುಶಃ ಪೂಜಾಳ ಅಂದಿನ ಸ್ಥಿತಿ ನೋಡಿದವರು ಯಾರೇ ಆದರೂ ಈ ತರಹ ಮಾತಾಡುವುದು ಸಹಜ. ಆಕೆಗೇನು ಚಾರುಲತ ಮೇಲೆ ವೈಯಕ್ತಿಕ

ದ್ವೇಷವಿರಲಿಲ್ಲ.

ಮೂರ್ತಿಯ ಬಾಯಿಂದ ಮಾತೇ ಬರಲಿಲ್ಲ. ತಿಂದಿದ್ದೆಲ್ಲ ಕಕ್ಕುವಂತಾಯಿತು. ಯಾಕಾದರೂ ಬಂದೆನೋ, ಎಂದು ಯೋಚಿಸಿದ.

"ಮೂರ್ತಿ ಈ ತರಹ ಹೇಳ್ತೀನೀಂತ ಏನು ತಿಳ್ಕೋಬೇಡ. ಆ ಪ್ರಕರಣಾನ ಎಷ್ಟೇ ಮುಚ್ಚಿಟ್ಟರೂ ಜನಕ್ಕೆ ತಿಳಿದಿದೆ. ಏನೇನೋ ಮಾತಾಡ್ಕೋತಾ ಇದ್ದಾರೆ. ಡಾ|| ನವೀನ್ ನಿರಾಕರಿಸೋಕೆ ಒಂದು ಕಾರಣಾನೇ ಹುಟ್ಟು ಹಾಕಿದ್ದಾರೆ. ಆ ಮಾತುಗಳ್ನ ಕೇಳಿದ್ರೆ ಯಾಕಪ್ಪ ಹೆಣ್ಣು ಮಕ್ಳನ ಹೆತ್ತೆವಿ ಅನ್ನೋಂಗೆ ಆಗಿದೆ. ಸ್ವಲ್ಪ ದೂರದಲ್ಲೇ ವರಾನ್ವೇಷಣೆ ಪ್ರಾರಂಭಿಸಿ ಬೇಗ ಪೂಜಾಗೆ ವಿವಾಹ ಮಾಡ್ಬಿಡಿ. ಇಲ್ಲದಿದ್ದರೇ, ಬಗೆಯರಿಲಾರ್ದ ಸಮಸ್ಯೆಯಾಗ್ಬಿಡುತ್ತೆ. ನೀನು ಸರ್ರ್ಯಾಗಿ ಅರ್ಥಮಾಡಿಕೊಳ್ಳಬಲ್ಲೇಂತ ನಿಂಗೆ ಹೇಳ್ತಾ ಇದ್ದೀನಿ. ದಯವಿಟ್ಟು ಏನು ತಿಳ್ಕೋಬೇಡ. ನಂಗೆ ಎರ್ಡು ಹೆಣ್ಣು ಮಕ್ಳು. ಅವ್ರ ಜೊತ ಆಡಿ ಬೆಳೆದೋಳು ಪೂಜಾ. ನಂಗೆ ಅವ್ಳು ಎಂದೂ ಬೇರೆ ಅನ್ನಿಸಿದ್ದೇ ಇಲ್ಲ" ಓತ್ಸೆಷಿಯಾಗಿ ಕೆಲವು ಮಾತುಗಳನ್ನ ಹೇಳಿದರು.

ಉದ್ವೇಗಗೊಳ್ಳದಂತೆ ಅವನಲ್ಲಿನ ವಿವೇಕ ಎಚ್ಚರಿಸಿತು.

"ಆಯ್ತು, ನನ್ನ ಮಿದುಳು ನಿಷ್ಕ್ರಿಯವಾಗಿದೆ. ನೀವು ಇಷ್ಟು ಹೇಳಿದ್ದು ಒಳ್ಳೆದಾಯ್ತು" ಎಂದು ಕೃತಜ್ಞತೆ ಸೂಚಿಸಿದ.

ಮನೆಗೆ ಬಂದವನೇ ತಲೆಯ ಮೇಲೆ ಕೈಯೊತ್ತು ಕೂತ. ಅವನಿಗೆ ಪೂಜಾ ಮೇಲೆ ಸ್ವಲ್ಪ ಹೆಚ್ಚೆನಿಸುವಷ್ಟು ಪ್ರೀತಿ. ತಂದೆ, ತಾಯಿ ಬೇಡವೆಂದರೂ ಕೆಲವೊಂದು ಸಾಮಾನು, ಡ್ರೆಸ್‌ಗಳನ್ನ ಕೊಡಿಸಿದ್ದ. ಆದರೆ ಅವನ ಕೈಯಿಂದ ಆಗದೇ ಹೋಗಿದ್ದು, ಬಯಸಿದ ಡಾ|| ನವೀನ್ ಜೊತೆ ಅವಳ ವಿವಾಹ ಮಾಡದೇ ಹೋಗಿದ್ದು.

"ಪೂಜಾ, ಕ್ಷಮ್ಸಿ ಬಿಡಮ್ಮ" ಎಂದ ಗದ್ಗದಿತ ಸ್ವರದಲ್ಲಿ.

ಪೂರ್ತಿ ಕತ್ತಲಾಗುವವರೆಗೂ ಮನೆಯಿಂದ ಹೊರ ಬೀಳಲಿಲ್ಲ. ರಾತ್ರಿಯ ಊಟಕ್ಕೆ ಎದುರು ಮನೆಯವರ ಆಹ್ವಾನವಿದ್ದರೂ, ಸಧ್ಯಕ್ಕೆ ಅವರೊಂದಿಗಿನ ಮಾತು ಬೇಡವೆನಿಸಿ ಬೀಗ ಹಾಕಿಕೊಂಡು ಹೊರ ನಡೆದ.

ಹೆಚ್ಚು ಪರಿಚಯವಿಲ್ಲದ ಹೋಟಲ್‌ಗೆ ಹೋಗಿ ಊಟ ಮಾಡಿದ. ಈಗ ಅವನ ತಲೆಯಲ್ಲಿದ್ದಿದ್ದು ಒಂದೇ ವಿಚಾರ. ಆದಷ್ಟು ಬೇಗ ಪೂಜಾಳಿಗೆ ವಿವಾಹ ಮಾಡಬೇಕು. ಅದಕ್ಕೆ ಸರಿಯಾದ ವ್ಯಕ್ತಿಯ ತಲಾಶೆ ಮಾಡಬೇಕು.

ಮುಂಬಯಿನಲ್ಲಿನ ಚಿಕ್ಕಪ್ಪನ ಮನೆಗೆ ಎಸ್. ಟಿ. ಡಿ. ಮಾಡಿದ.

"ಹೇಗಿದ್ದಾಳೆ, ಪೂಜಾ ?" ವಿಚಾರಿಸಿದ.

"ಈಗ ಸ್ವಲ್ಪ ಪರ್ವಾಗಿಲ್ಲ, ಎಲ್ಲಾ ಹೊರ್ಗಡೆ ಹೋಗಿದ್ದಾರೆ. ನಾನೊಬ್ಬ ಮನೆ ಕಾಯ್ಕೊಂಡ್ ಇದ್ದೀನಿ" ಅವನ ಚಿಕ್ಕಪ್ಪ ಉತ್ತರಿಸುವುದರೊಂದಿಗೆ "ಎಲ್ಲಿಂದ ಫೋನ್ ಮಾಡ್ತಾ ಇರೋದು ? ಏನಾಗಿತ್ತು ನಮ್ಮ ಹುಡ್ಗೀನ ವಿವಾಹವಾಗೋಕೆ ಅಯೋಗ್ಯನಿಗೆ ? ನಿನ್ನ ಹೆಂಡ್ತಿಗಾದ್ರೂ ಬುದ್ಧಿ ಬೇಡ್ವಾ?" ಜೋರು ದನಿಯಲ್ಲಿಯೇ ಕೇಳಿದರು.

"ಅದೆಲ್ಲ, ಮುಗ್ದ ವಿಷ್ಯ ಚಿಕ್ಕಪ್ಪ. ಈಗ ಪೂಜಾಗೆ ಒಂದು ಒಳ್ಳೆ ಸಂಬಂಧ ನೋಡಿ ಅವ್ಳ ವಿವಾಹವಾಗ್ದ ಹೊರ್ತು ಯಾರ್ಗೂ ನೆಮ್ದೀ ಇರೋಲ್ಲ . ಅದ್ಕೇ ನೀವೇನು ಹೇಳ್ತೀರಾ ?" ಅವರನ್ನ ಕೇಳಿದ.

"ನೀನು ಹೇಳೋದು ಹಂಡ್ರೆಡ್ ಪರ್ಸೆಂಟ್ ಸರಿ. ಹೇಗೂ ಎಲ್ಲಾ ಬಂದಿದ್ದಾರೆ. ಪೂಜಾ ಇಲ್ಲೇ ಇರ್‍ಲಿ. ಯಾವುದಾದ್ರೂ ಒಳ್ಳೆ ಸಂಬಂಧ ನೋಡೋಣ. ಚಿನ್ನದಂಥ ಹುಡ್ಗಿ. ಅವ್ಳಿಗೆ ಗಂಡಿನ ಕೊಂತೇನಾ ? ಆದರೆ ಅವ್ಳು ವಿವಾಹಕ್ಕೆ ಒಪ್ಪಬೇಕು. ಅಂತು ನಮ್ಮ ಪ್ರಯತ್ನ ನಾವು ಮಾಡೋಣ" ಉಸುರಿದರು.

ಕಡೆಯಲ್ಲಿ "ಚಾರುಲತನ ಕರ್ಕಂಡ್ ಬಂದಿಲ್ವಾ ?" ವಿಚಾರಿಸಿದಾಗ "ಗುಡ್‌ನೈಟ್ ಅಂಕಲ್. ಫೋನ್ ಇಡ್ತಾ ಇದ್ದೀನಿ" ಫೋನ್ ಇಟ್ಟೇಬಿಟ್ಟ. ಸಧ್ಯಕ್ಕೆ ಈಗ ಅವನಿಗೆ ಯಾರ ಸುದ್ದಿಯು ಬೇಕಿರಲಿಲ್ಲ.

ಒಂದು ವಾರ ರಜ ಹಾಕಿ ಬಂದಿದ್ದರಿಂದ ಇಲ್ಲೇ ಉಳಿಯಬೇಕಿತ್ತು. ಆರಾಮಾಗಿ ಕಳೆದ. ಚಾರುಲತಳೊಂದಿಗೆ ಕಳೆದ ರಾತ್ರಿಗಳ ನೆನಪಾದಾಗ ಅವನೆದೆಯ ರಕ್ತ ಕುದಿಯಿತು. ನೆನಪುಗಳು ಮಧುರವಾಗಲಿಲ್ಲ.

'ಛಿ....' ಅವಳ ನೆನಪೇ ಬೇಡ. ಎದ್ದು ಹಳೆಯ ಪತ್ರಿಕೆಗಳಲ್ಲಿ ವಿಶೇಷ ಲೇಖನಗಳನ್ನ ಆರಿಸಿಕೊಂಡು ಬಂದು ಕೂತ. ತಿರುವಿದ. ಓದಬೇಕೆನಿಸಲಿಲ್ಲ. ಮುಂದಿನ ಹೆಜ್ಜೆ ಯಾವುದು ? ಅವನ ಪ್ರಕಾರ ತಂಗಿಯ ವಿವಾಹ. ಚಾರುಲತ ಏನು ಮಾಡಬಹುದು ? ಆರಾಮಾಗಿ ಅಪ್ಪನ ಮನೆಯಲ್ಲಿ ಉಳೀತಾಳೆ. ಅಕ್ಕರೆಯ ಅತ್ತಿಗೆ, ಅಣ್ಣ ಇರೋವಾಗ ಮಿಕ್ಕವರು ಯಾಕೆ ಬೇಕು ?

ಬಂದು ಮಲಗಿದ. ನೆನಪುಗಳು ಬಹಳಷ್ಟು ಘಾಸಿಗೊಳಿಸಿತು.

ಬೆಳಿಗ್ಗೆ ಎದ್ದವನೇ ತಾನೇ ಹಾಲಿನ ಬೂತ್‌ಗೆ ಹೋಗಿ ಹಾಲಿಡಿದು ಬಂದ. ಕಾಫಿ ಮಾಡಿ ಕುಡಿದ. ಸ್ನಾನಕ್ಕೆ ಹೋಗುವ ಮುನ್ನ ಫೋನ್ ಬಂತು.

"ಹಲೋ....." ಎತ್ತಿದ.

ತಂದೆಯ ಹಳೆಯ ಸ್ನೇಹಿತರು "ಯುಗಂಧರ್ ಬರ್ಲಿಲ್ವಾ ? ಯಾಕೆ ಹೋಗಿ ಮುಂಬಯಿನಲ್ಲಿ ಕೂತ. ನಿನ್ತಂಗಿ ಬಗ್ಗೆ ಏನೇನೋ ಹೇಳೋಕೆ ಷುರು ಮಾಡಿದ್ದಾರಲ್ಲ ! ಏನು.....ಕಾಯಿಲೆ ?" ಕಟಕಟೆಯಲ್ಲಿ ನಿಲ್ಲಿಸಿ ಕೇಳಿದರು. ಉತ್ತರಿಸಲು ಚಡಪಡಿಸಿದ "ಸಾರಿ, ಅಂಕಲ್...ಅಂಥದ್ದೇನಿಲ್ಲ! ಗಂಡಿನ ತಲಾಶೆಯಲ್ಲಿದ್ದಾರೆ. ಅವ್ಳಿಗೆ ವಿದೇಶದಲ್ಲಿರೋ ಗಂಡಿನ ಕೈ ಹಿಡ್ಯೋ ಆಸೆ, ಇದೊಂದು ಸಣ್ಣ ಪ್ರಾಬ್ಲಮ್ ಅಷ್ಟೆ. ನಿಮ್ಗೇ ಕಾಯಿಲೇಂತ ಯಾರು ಹೇಳಿದ್ದು?" ಅವನ ಹುಬ್ಬುಗಳು ಗಂಟಾಯಿತು.

"ಯಾರೋ ಹೋಗ್ಲಿ ಬಿಡು. ನಂಗೆ ಗಾಬ್ರಿ ಆಯ್ತು. ನಿಮ್ಮಪ್ಪ ಫೋನ್ ಮಾಡಿದ್ರೆ ನಾನು ಕೇಳ್ದೇಂತ ಹೇಳು" ಫೋನಿಟ್ಟರು.

ಮೂರ್ತಿಯ ಉಸಿರು ಬಿಸಿಯಾಯಿತು.

"ಛಿ, ಅವ್ರ ಜೊತೆ ಸಂಬಂಧ ಬೆಳೆಸಿದ್ದೇ ತಪ್ಪಾಯ್ತು. ಎದುರು ಮನೆ ಹುಡ್ಗೀಗಾಗಿ ನನ್ತಂಗಿ ಭವಿಷ್ಯ ಬಲಿ ಕೊಟ್ರು" ಜೋರಾಗಿಯೇ ಕೂಗಾಡಿದ. ಗೋಡೆಗಳು ಆಲಿಸಬೇಕು ಅವನ ಮಾತುಗಳನ್ನ.

ಬಹಳ ಹೊತ್ತಿನ ಮೇಲೆ ನಿದ್ದೆ ಬಂತು.

ತಂದೆಯ ಕಾರನ್ನು ತೆಗೆದು ಹೊರಗೆ ನಿಲ್ಲಿಸಿದ. ಆರಾಮಾಗಿ ಪೈಪ್‌ನಲ್ಲಿ ನೀರು ಬಿಟ್ಟುಕೊಂಡು ತೊಳೆದ. ಆಮೇಲೆ ಅರ್ಧಗಂಟೆಯೊರೆಸಿದ. ಎದುರು ಗಡೆ ಮನೆ ಹುಡುಗ ಪಾತ್ರೆಯಲ್ಲಿ ತಿಂಡಿಯನ್ನು ಮುಚ್ಚಿ ತಂದು ಒಳಗಿಟ್ಟು ಹೋದನಂತರ.ಹಸಿವೆಯೆನಿಸಿತು.

ಆರಾಮಾಗಿ ಹೋಗಿ ಸ್ನಾನ ಮಾಡಿ ಬಂದು ತಿಂಡಿ ತಿಂದು ಮಾರ್ಕೆಟ್‌ಗೆ ಹೊರಟ ಹತ್ತು ತಿಂಗಳ ಹಿಂದೆ ಚಾರುಲತ ತನ್ನ ಬದುಕಿನಲ್ಲಿ ಇರಲಿಲ್ಲ. ಹಿಂದೆ ತಾನು ಎಷ್ಟೊಂದು ಚಟುವಟಿಕೆಯಿಂದ ಇದ್ದೆ. ಈಗಲೂ ಅಷ್ಟೆ ಉತ್ಸಾಹದಿಂದ ಬದುಕಬೇಕು. ಅನಗತ್ಯವಾಗಿ ಅವಳಿಗಾಗಿ ಕೊರಗಬಾರದು ಒಂದು ಗಟ್ಟಿ

ನಿರ್ಧಾರಕ್ಕೆ ಬಂದ.

ಹಳೇ ಜಾಮಾನ್‌ದ 'ಆವಾರ' ಹಾಡನ್ನ ಹಾಡುತ್ತ ಕಾರನ್ನು ಓಡಿಸಿದ. ಇಲ್ಲದ ಸಾಮಾನುಗಳ ಪಟ್ಟಿ ಹಿಡಿದು ಜನರಲ್ ಸ್ಟೋರ್‌ಗೆ ಹೋದ. ಬಿಲ್ ಕೌಂಟರ್‌ನಲ್ಲಿ ಬರೀ ಟೂತ್‌ಪೇಸ್ಟ್, ಸೋಪು ಮಾತ್ರ ಹಿಡಿದ ಡಾ|| ನವೀನ್‌ನ ನೋಡಿ ಮುಖ ತಿರುಗಿಸಿದ ಪರಿಚಯ ಇಲ್ಲದವನಂತೆ.

"ಹಲೋ, ಮೂರ್ತಿ" ತಾನಾಗಿಯೇ ಹತ್ತಿರಕ್ಕೆ ಬಂದು ಮಾತಾಡಿಸಿದ.

"ಹಲೋ...." ಎಂದವನು ಕೌಂಟರ್‌ನಲ್ಲಿ ತನ್ನ ಸಾಮಾನುಗಳ ಬಿಲ್ ರೆಡಿ ಮಾಡಿಸಿ ಅವನನ್ನ ಸವರಿಕೊಂಡೇ ತನ್ನ ಪಾಡಿಗೆ ತಾನು ಹೋದ. ಅವನಿಗೆ ಡಾ|| ನವೀನ್‌ನಲ್ಲಿ ಮಾತು ಬೇಕಿರಲಿಲ್ಲ. ಈಗಿನ ಎಲ್ಲಾ ಸಂಕಷ್ಟ ಗಳಿಗೂ ನೇರವಾಗಿ ಅವನೇ ಕಾರಣ !

ಡ್ರೈವ್ ಮಾಡಿಕೊಂಡು ಮಾರ್ಕೆಟ್‌ಗೆ ಹೋದ. ತರಕಾರಿ ಖರೀದಿಸಿ ತಂದು ಕಾರಿನಲ್ಲಿ ಇಡುವಾಗ ಅವನ ಕಣ್ಣುಗಳು ಡಾ|| ನವೀನ್‌ನ ಹುಡುಕಿ ಯಾಡಿದವು. ಅದು ಅವನ ಮೇಲಿನ ಪ್ರೀತಿಯಿಂದ ಅಲ್ಲ, ದ್ವೇಷದಿಂದ.

ಮನೆಗೆ ಬಂದವನೇ ತರಕಾರಿ ಬಿಡಿಸಿ ಬೇಳೆ, ತರಕಾರಿ ಹಾಕಿ ಕುಕ್ಕರಿ ನಲ್ಲಿಟ್ಟ. ಫ್ರಿಜ್ ಎಲ್ಲಾ ಖಾಲಿ ಮಾಡಿ ಕ್ಲೀನ್ ಮಾಡಿದ. ಎಷ್ಟೋ ಸಣ್ಣ ಪುಟ್ಟ ಕೆಲಸಗಳನ್ನ ಮಾಡಿದ. ಅದನ್ನೆಲ್ಲ ಅವನು ಮೊದಲು ತಾನೇ ಮಾಡುತ್ತಿದ್ದ. ಚಾರುಲತ ಅವನ ಬದುಕಿನಲ್ಲಿ ಅಡಿಯಿಟ್ಟ ಮೇಲೆ ಒಂದಿಷ್ಟು ಸೋಮಾರಿತನ ಕಲಿಸಿದ್ದಳು. ಅವಳನ್ನು ಜಾಡಿಸಿ ಒದ್ದಂತೆ, ಈ ಸೋಮಾರಿ ತನವನ್ನು ತನ್ನ ದಿನಚರಿಯಿಂದ ಹೊರದೂಡಿಸಿ ಬಿಡಬೇಕೆನಿಸಿತು.

ಮಧ್ಯಾಹ್ನ ಊಟ ಮಾಡಿ ಮಲಗಿದ್ದಾಗ ಕಾಲಿಂಗ್‌ಬೆಲ್ ಸದ್ದಾಯಿತು. ಬೇಸರದಿಂದಲೇ ಮೈ ಮುರಿಯುತ್ತ ಬಂದು ಬಾಗಿಲು ತೆಗೆದಾಗ ಎದುರಿಗೆ ನಿಂತಿದ್ದವರು ವಾಸುದೇವಯ್ಯ. ಮಾತಾಡಲು ಅವನಿಗೆ ಇಷ್ಟವಿಲ್ಲ. ಹಾಗೆಂದು ಮುಖದ ಮುಂದೆ ಹೇಳಲು ಅವರ ವಯಸ್ಸು ಅಡ್ಡಿ ಬಂತು.

"ಬನ್ನಿ..." ಎಂದ ಮುಖ ಗಂಟಾಕಿಯೇ.

ಅತ್ಯಂತ ತಾಳ್ಮೆಯಿಂದ ವಾಸುದೇವಯ್ಯ ಒಳ ಬಂದು ಸೋಫಾ ಅಂಚಿಗೆ ಕೂತರು. ಅವರಿಗೆ ಮಗಳ ಬದುಕು ಮುರಾಬಟ್ಟೆಯಾಗುವುದು ಬೇಕಿರಲಿಲ್ಲ.

"ಯಾವಾಗ್ಬಂದಿದ್ದು ?" ಮೃದುವಾಗಿ ವಿಚಾರಿಸಿದರು.

"ನೆನ್ನೆ ಬಂದಿದ್ದು. ಬೇಜಾರು ಮಾಡ್ಕೋಬೇಡಿ. ಸ್ಪಷ್ಟವಾಗಿ ಹೇಳ್ಬೇಕೂಂದರೇ ನಿಮ್ಮೊಂದಿಗಿನ ಸಂಬಂಧ ನನ್ನ ಪಾಲಿಗೆ ಮರೆತಂತೆ. ಸುಮ್ನೇ ಆ ವಿಷ್ಯನ ಎತ್ತಿ ಕಹಿ ಮಾಡಿಕೊಳ್ಳೋದ್ಬೇಡ" ಸ್ಪಷ್ಟವಾಗಿಯೇ ಅಂದ.

ಮಾತಾಡದೇ ಸುಮ್ಮನೇ ಕೂತರು ವಾಸುದೇವಯ್ಯ. ಬದುಕನ್ನ ಬಲ್ಲವರು. ಎಷ್ಟೋ ಬದಲಾವಣೆ ಬಂದಿದ್ದರೂ ಹೆಚ್ಚಿನ ನೋವು, ಸಮಸ್ಯೆ, ಅವಮಾನ ಹೆಣ್ಣಿಗೆಂದು ಗೊತ್ತು.

"ಇದ್ರಲ್ಲಿ ಚಾರುಲತ ತಪ್ಪಿಲ್ಲ !" ಎಂದರು.

"ನಿಮ್ದೆ ತಪ್ಪು ? ನನ್ತಂಗಿ ಯಾವುದ್ರಲ್ಲಿ ಕಡ್ಮೇ ಇದ್ಲು ? ನನ್ನ ಕುಟುಂಬನ ಅವಮಾನಿಸಿ ಬಿಟ್ರಿ !" ಉದ್ವೇಗದಿಂದ ಭುಸುಗುಟ್ಟಿದ.

ವಾಸುದೇವಯ್ಯನ ಗಂಟಲು ಹಿಡಿದಂತಾಯಿತು.

"ದಯವಿಟ್ಟು ತಪ್ಪು ತಿಳ್ಕೋಬೇಡ, ಮೂರ್ತಿ. ಎದುರು ಬದುರು ಮನೆಗಳು. ನೀರದ, ನವೀನ್ ಒಬ್ಬರನ್ನೊಬ್ರು ಮೆಚ್ಚಿಕೊಂಡಿದ್ರು. ನಂಗೂ ಇಷ್ಟವಾಯ್ತು. ನಿನ್ತಂಗಿ ಯಾವುದ್ರಲ್ಲೂ ಕಡ್ಮೇ ಇಲ್ಲ. ನಿಮ್ಮ ಕುಟುಂಬನ ಅವಮಾನಿಸೋ ಇರಾದೆ ನಮ್ಗೇ ಇರ್ಲಿಲ್ಲ. ಅದು ನಿಶ್ಚಯವಾದ ಸಂಬಂಧ ಬಿಡೋ ಹಂಗಿರ್ಲಿಲ್ಲ" ನಮ್ರತೆಯಿಂದ ತಿಳಿ ಹೇಳಿದರು. ಮಗಳು ಗಂಡ ಬಿಟ್ಟ ಹೆಣ್ಣಾಗಿ ಬದುಕುವುದು ಅವರಿಗೆ ಸುತರಾಂ ಬೇಕಿರಲಿಲ್ಲ.

ತೀಕ್ಷ್ಣವಾಗಿ ಅವರತ್ತ ನೋಡಿದ, ಹಿಂದೆ ಗೌರವಿಸುತ್ತಿದ್ದ ಮನುಷ್ಯ. ಈಗ ಅಂಥ ಭಾವವಿಲ್ಲದಿದ್ದರೂ ಅಗೌರವ ತೋರಲಾರ.

"ನಿಮ್ಗೆ ಇಷ್ಟವಾಯ್ತು. ನಿಮ್ಮ ಮಗ್ಳಿಗೆ ಮತ್ತಷ್ಟು ಇಷ್ಟವಾಯ್ತು. ಅವ್ಳಿಗೆ ಅವ್ಳ ತವರು ಮನೆ ಸುಖ, ಸಂತೋಷ, ನೆಮ್ದಿ ಮುಖ್ಯವಾಗಿತ್ತು. ನಂಗೂ ಅಷ್ಟೆ, ನನ್ನಪ್ಪ, ಅಮ್ಮ ತಂಗಿಯ ನಂತರವೇ ಮಿಕ್ಕೆಲ್ಲ ಸಂಬಂಧಗಳು. ಈ ತಿಳುವಳಿಕೆ ನಿಮ್ಗೆ ಮಾತ್ರವಲ್ಲ, ನಿಮ್ಮ ಮಗ್ಳಿಗೆ ಹೆಚ್ಚಿಗೆ ಇರ್ಬೇಕಿತ್ತು. ಸ್ವಂತ ನಾದಿನಿನ ಸಾವಿನ ದವಡೆಗೆ ನೂಕಿಬಿಟ್ಳು. ನಂಗೆ ಹೆಚ್ಚಿಗೆ ಮಾತಾಡೋಕೆ ಇಷ್ಟವಿಲ್ಲ" ಹಲ್ಮುಡಿಯನ್ನ ಕಚ್ಚಿಡಿದು ಹೇಳಿದ. ಅವನು ಪೂರ್ತಿ ತಾಳ್ಮೆ ಕಳೆದುಕೊಳ್ಳುವ ಮುನ್ನ ಅಲ್ಲಿಂದ ಹೋಗುವ ಅಗತ್ಯವಿತ್ತು.

ವಾಸುದೇವಯ್ಯ ಅಳುವುದೊಂದು ಬಾಕಿ ಇತ್ತು.

"ಖಂಡಿತ ಇಲ್ಲ, ಇದ್ರಲ್ಲಿ ಅವ್ನ ತಪ್ಪೇನಿಲ್ಲ" ಎಂದರು.

"ನನ್ನ ಒಂದು ಮಾತಿಗೆ ಉತ್ತರ ಹೇಳಿ. ಚಾರುಲತ ಬೇಡವೆಂದು ಹಟ ಮಾಡಿದ್ದರೇ, ನೀವು ಮಗನ ವಿವಾಹ ಮಾಡೋ ಸಾಧ್ಯತೆ ಇತ್ತಾ. ಆಗ ನಿಮ್ಗೆ ಮಗ್ಳು, ಅಳಿಯ ಅವ್ರ ಭವಿಷ್ಯ ಮುಖ್ಯವಾಗ್ತಾ ಇತ್ತು. ಈಗ್ಹೇಳಿ..." ಕೇಳಿದ.

ಆ ಮನುಷ್ಯನ ತಲೆ ತಗ್ಗಿತು. ಹೌದು, ಚಾರುಲತ ಹಟ ಹಿಡಿದಿದ್ದರೇ ಖಂಡಿತ ನಿಲ್ಲುತ್ತಿದ್ದುದ್ದು ಮಗಳ ಪರವೇ. ಮುಂದಿನ ದಿನಗಳ ಬಗ್ಗೆ ತಲೆ ಕೆಡಿಸಿಕೊಳ್ಳದೇ ಡಾ|| ನವೀನ್ ಕೂಡ ತೆಪ್ಪಗೆ ಪೂಜಾ ಕುತ್ತಿಗೆಗೆ ತಾಳಿ ಕಟ್ಟುತ್ತಿದ್ದ. ಇದು ಸತ್ಯವೇ ? ಅಳಿಯನ ಕೋಪಕ್ಕೆ ಅರ್ಥವಿತ್ತು.

ಹಾರ್ಲಿಕ್ಸ್ ಮಾಡಿಕೊಂಡು ಅವರ ಮುಂದಿಟ್ಟ ಮೂರ್ತಿ "ಕುಡೀರಿ, ಇನ್ನ ಯಾವ್ದೇ ಮಾತುಗಳು ಬೇಡ. ನಂಗೆ ಬೇರೆ ಕೆಲ್ಸವಿದೆ" ಹೊರಗೆ ಹೋದವನು ನಲ್ಲಿ ಆನ್ ಮಾಡಿ ಪೈಪ್‌ನಿಂದ ನೀರು ಹಾಕತೊಡಗಿದ. ಅವನ ಮಿದುಳು, ಮನಸ್ಸು, ಮೈ ಕೋಪದಿಂದ ಭುಸುಗುಟ್ಟುತ್ತಿತ್ತು.

ಹಾರ್ಲಿಕ್ಸ್ ಕಪ್ ಎತ್ತಲಾಗಲಿಲ್ಲ ವಾಸುದೇವಯ್ಯನಿಂದ. ಸೋತವರಂತೆ ನಿಧಾನವಾಗಿ ಹೊರಗೆ ಬಂದಾಗ, ಆರಾಮಾಗಿ ತನ್ನ ಪಾಡಿಗೆ ತಾನು ನೀರು ಹಾಕುತ್ತಿದ್ದ ಮೂರ್ತಿ ಪೈಪ್‌ನ ಕೆಳಗೆ ಹಾಕಿ ಹೋಗಿ ಗೇಟು ತೆರೆದ.

ಅವರು ಹೊರಗೆ ಹೋದ ಮೇಲೆ ಗೇಟು ಹಾಕಿ ಅವರತ್ತ ಕೂಡ ನೋಡದೇ ಬಂದು ತನ್ನ ಕೆಲಸದಲ್ಲಿ ಮಗ್ನನಾದ. ಮನಸ್ಸುಗಳು ಸಂಬಂಧಗಳು ಹೇಗೆ ಮುರಿದು ಹೋಗುತ್ತೆ.

ನಲ್ಲಿ ನಿಲ್ಲಿಸಿ ಒಳಗೆಬಂದ. ಚಾರುಲತನ ಬಾಯಿಗೆ ಬಂದಂತೆ ಬೈಯ್ಯ ಬೇಕೆನಿಸಿತು. ತಂಗಿಯ ಬಗೆಗಿನ ಪೂರ್ಣ ಪ್ರಮಾಣದ ಸಹಾನುಭೂತಿ ಅವಳ ಹಟವನ್ನ ಮರೆಸಿತ್ತು.

ಸಂಜೆ ನಡದೇ ವಾಕ್ ಹೊರಟಾಗ ತಿರುವಿನಲ್ಲಿ ಸಿಕ್ಕ ಕಮಲ ಒಂದು ಹೊಸ ವಿಷಯ ತಿಳಿಸಿದಳು "ಚಾರುಲತ ಅಪಾಯಿಂಟ್‌ಗೆ ಸೇರ್ಕೊಂಡಿದ್ದಾಳೆ" ಉದ್ವೇಗಗೊಳ್ಳದೇ ಬಲವಂತದ ಮುಗುಳ್ನಗೆಯನ್ನ ಮುಖದ ಮೇಲೆ ಎಳೆ ತಂದ.

"ಗೊತ್ತು, ಇದೇನು ಇಲ್ಲಿ ?" ಎಂದ.

"ನಿಮ್ಮ ಮನೆಗೆ ಬರೋ ಪ್ರೋಗ್ರಾಂ ಇತ್ತು. ಅಂಕಲ್, ಆಂಟೀ ಇಲ್ವಲ್ಲ. ಬಂದು ಪ್ರಯೋಜನವಿಲ್ಲ. ಚಾರುಲತಗೆ ಡೈವೋರ್ಸ್ ಕೊಡ್ತೀಯಾ?" ಬೀದಿಯೆಂಬುದು ಮರೆತು ವಿಚಾರಿಸಿದಾಗ ಕೆನ್ನೆಗೊಂದು ಬಾರಿಸಬೇಕೆನಿಸಿತು.

"ನೀನಿನ್ನ ಚಿಕ್ಕೋಳು. ಅವೆಲ್ಲ ದೊಡ್ಡ ವಿಷ್ಯಗಳು. ಇನ್ನು ವಿವಾಹವಾಗದ ನಿನ್ನಂಥವ್ರು ಡೈವೋರ್ಸ್ ಬಗೆಯಲ್ಲಿ ಮಾತಾಡೋದು ಒಳ್ಳೇದಲ್ಲ. ಕಾಫಿ ಕುಡೀತೀಯಾ ?" ವಿಚಾರಿಸಿದ ನೆಂಟಸ್ಥಿಕೆಯ ಸಲಿಗೆಯಿಂದ.

"ಖಂಡಿತ ! ನೀನು ಸಿಕ್ಕಿಯೇ ಬಹಳ ದಿನವಾಯ್ತು. ಮದ್ವೆಯಾದ್ಮೇಲೆ ಸಿಕ್ಕಿಯೇ ಇಲ್ಲ. ಇವತ್ತು ಎಲ್ಲಾ ಕಕ್ಕಿಸ್ತೀನಿ" ಉತ್ಸಾಹ ತೋರಿದಳು.

ಹತ್ತಿರದ ಹೋಟಲ್‌ಗೆ ಹೋದರು. ಮೆನು ಕಾರ್ಡ್ ತಗೊಂಡ ಕಮಲ ಬೇಕೆನಿಸಿದಕ್ಕೆ ಆರ್ಡರ್ ಮಾಡಿದಳು. ಅವಳ ಸ್ವಭಾವ ಹೊಸದಲ್ಲ. ಹತ್ತಿರದ ನೆಂಟಸ್ಥಿಕೆಯೇ.

"ಹೇಗಿದ್ದಾಳೆ ಪೂಜಾ ?" ಕೇಳಿದಳು.

"ಅವ್ಳಿಗೇನು, ಚೆನ್ನಾಗಿದ್ದಾಳೆ. ನಿನ್ನ ವಿಷ್ಯವೇನು ?" ಪ್ರಶ್ನೆ ಹಾಕಿದ ಟೇಬಲ್ ಮೇಲೆ ತಾಳ ಹಾಕುತ್ತ.

"ಅಂಥದೇನಿಲ್ಲ ! ಇದೇನು...ಇಲ್ಲಿ ?" ಎಂದಳು.

ಮೂರ್ತಿ ಸುತ್ತಮುತ್ತಲು ನೋಡಿಕೊಂಡು ಆಶ್ಚರ್ಯದಿಂದ "ಇದೇನಾದ್ರೂ, ಚಂದ್ರಮಂಡಲನಾ ? ಹೊಸ ಗ್ರಹದ ಅನ್ವೇಷಣೆಯಲ್ಲಿ ಇಲ್ಲಿಗೆ ಬಂದಿದ್ದೀವಾ ? ನಂಗೇನು, ಹಾಗೇ ಕಾಣೋಲ್ಲ" ಅಂದ ತಮಾಷೆ ಯಾಗಿ.

ಪಕಪಕನೆ ನಕ್ಕಳು ಕಮಲ. ಅವಳ ಪ್ರಕಾರ ಮೂರ್ತಿ ಬಹಳ ಒಳ್ಳೆಯವ. ಅವಳಿಗೆ ಈಗ ಕೋಪ ಬಂದಿದ್ದು ಚಾರುಲತ ಮೇಲೆ, 'ಅನ್ಯಾಯವಾಗಿ ಮೂರ್ಖತನದಿಂದ ತನ್ನ ವೈವಾಹಿಕ ಜೀವನ ಬಲಿಕೊಟ್ಟಳು' ಅದು ಅಹಂಕಾರವಾಗಿ ಕಂಡಿತು.

"ಬರೀ ತಮಾಷೆ ಮಾಡ್ತೀಯಾ ! ನೀನು ಏನೇನು ಬದಲಾಗಿಲ್ಲ. ರಜ ಹಾಕಿ ಬಂದಿದ್ದೀಯಾ ? ಇಲ್ಲ ಚಾರುಲತಳೊಂದಿಗೆ ಸಂಧಾನ ಆರಂಭಿಸಲು

ಸೂಕ್ತ ಸಮಯಕ್ಕಾಗಿ ಅವ್ರನ್ನೆಲ್ಲ ಮುಂಬಯಿಗೆ ಕಳಿಸಿದ್ಯಾ ?" ಕೇಳಿದ ಕೂಡಲೇ, ಮೂರ್ತಿಯ ಕೋಪ ನೆತ್ತಿಗೇರಿತು. "ನಿಂಗೆ ತಿಂಡಿ ತಿಂದು ಶಾಂತವಾಗಿ ಹೊರ್ಗೆ ಹೋಗೋ ಆಸೆ ಇದ್ದರೆ ತೆಪ್ಪಗಿರು. ಹುಚ್ಚುಚ್ಚಾಗಿ ಏನೇನೋ ಮಾತಾಡ್ಬೇಡ" ಮುಖ ಗಂಟಿಕ್ಕಿ ಗದರಿದ.

ತೀರಾ ಸಪ್ಪಗಾಗಿ ಬಿಟ್ಟಳು ಕಮಲ. ಚಾರುಲತ ಮೇಲೆ ಕೋಪ ತಗ್ಗಿಲ್ಲವೆನಿಸಿತು. ಇದು ಎಲ್ಲಿಗೆ ತಲುಪುತ್ತೋ - ಕ್ಷಣ ನೊಂದಳು ಕೂಡ.

"ಎಕ್ಸ್‌ಕ್ಯೂಜ್ ಮಿ, ಇನ್ನೊಂದ್ಮಾತು ಆಡೋಲ್ಲ. ನಿನ್ನ ಮನಸ್ಸು ಇಷ್ಟೊಂದು ಕೆಟ್ಟಿದೇಂತ ಅಂದುಕೊಳ್ಳಿಲ್ಲ" ಕ್ಷಮೆ ಯಾಚಿಸಿದಳು.

ಅವನು ತಿಂದಿದ್ದು ಬರೀ ಒಂದು ವಡೆ ಮಾತ್ರ. ಹಲ್ವಾ, ಮೈಸೂರ್ ಪಾಕ್‌ನ ನಂತರ ಪರೋಟ ತರಿಸಿಕೊಂಡು ತಿಂದನಂತರವೇ ಬಿಲ್ ಬಂದಿದ್ದು. ಕಮಲ ಮತ್ತು ಚಾರುಲತ ನಡವಳಿಕೆಯನ್ನು ತಕ್ಷಣ ಮೂರ್ತಿಯ ಮನಸ್ಸು ತೂಗಿ ನೋಡಿತು. ನಗು, ಮಾತು ಎಲ್ಲಾ ಮೃದುವೇ. ನೋವಿನಿಂದ ಅವನ ಮನ ಒದ್ದಾಡಿತು. 'ಚಾರು...ಚಾರುಲತ' ಅವನ ಹೃದಯ ಪಿಸುಗುಟ್ಟಿ ದಾಗ ಗಟ್ಟಿಯಾದ.

"ಮನೆಗೆ ಬರ್ತೀಯಾ ?" ಬಿಲ್ ಕೊಟ್ಟ ನಂತರ ಕೇಳಿದರೂ ಹೊರಗೆ ಬಂದನಂತರ ಎಚ್ಚರಿಸಿದ "ಅಪ್ಪಿ ತಪ್ಪಿ ಕೂಡ ನೀನು ಚಾರುಲತ ಸುದ್ದಿ ಎತ್ತಬಾರ್ದು. ಅದು ತೊಡೆದು ಹೋದ ಸಂಬಂಧ. ಕಟುಕ ಹೃದಯದವ್ಳು" ಕಿಡಿ ಕಾರಿದ.

ಕಮಲ ಮುಖ ತೀರಾ ಸಪ್ಪಗಾಯಿತು "ಏನು ತಿಳ್ಕೋಬೇಡ. ಇನ್ನೊಂದ್ಸಲ ಬರ್ತೀನಿ. ಅಂಕಲ್, ಆಂಟೀ ಬಂದ್ಮೇಲೆ ಫೋನ್ ಮಾಡ್ತೋಳ್ತೀಳು. ಅಮ್ಮ ಒಂದ್ಮಾತು ಹೇಳ್ಬಂದ್ರು. ಗಂಡು ಪೈಲೆಟ್, ನೋಡೋಕೂ ಹ್ಯಾಂಡ್‌ಸಮ್ ಆಗಿದ್ದಾರಂತೆ. ಐದು ಜನ ತಂಗೀರು. ಐದರಿಂದ...ಹತ್ತು ಲಕ್ಷ ಆಫರ್ ಮಾಡ್ತಾ ಇದ್ದಾರೆ. ನಮ್ಮಂಥವ್ರಿಗೆ ನಿಲುಕೋದಲ್ಲ. ಬೇಕಾದ್ರೆ ಪೂಜಾಗೆ ನೋಡ್ಲೀಂತ ಹೇಳಿ ಕಳ್ಸಿದ್ರು" ಎಂದು ತನ್ನ ಪರ್ಸ್‌ನಿಂದ ಜಾತಕ, ಫೋಟೋ ತೆಗೆದುಕೊಟ್ಟಳು.

ನೋಡಿ ಜೇಬಿಗೆ ಸೇರಿಸಿದ ಮೂರ್ತಿ "ಆಯ್ತು, ಅಮ್ಮ ಅಪ್ಪ ಬರ್ಲಿ. ಅವ್ಳು ಸ್ವಲ್ಪ ಚೇತರಿಸ್ಕೋಬೇಕು. ಆಮೇಲೆ ವಿವಾಹದ ಪ್ರಸ್ತಾಪ ಮಾಡಬಹುದೇನೋ, ನೋಡೋಣ" ಎಂದ ದೂರಕ್ಕೆ ನೋಟ ಹರಿಸುತ್ತ.

ವಾತಾವರಣದಲ್ಲಿ ಕತ್ತಲು ಸೇರ್ಪಡೆಯಾಗಿ ಮಂಕು ಕವಿದಾಗ ಸ್ಟ್ರೀಟ್‌ನ ದೀಪಗಳು ಹತ್ತಿಕೊಂಡವು. ನೀರದ, ಚಾರುಲತ ಫುಟ್‌ಪಾತ್‌ನ ಅಂಗಡಿಯಲ್ಲಿ ಏನೋ ವ್ಯಾಪಾರ ಮಾಡುತ್ತಿದ್ದುದ್ದು ಅವನ ಕಣ್ಣಿಗೆ ಬಿತ್ತು. ಆರಾಮಾಗಿ ಸಂತೋಷವಾಗಿದ್ದಂತೆ ಕಂಡಳು 'ನೀವು ಇಲ್ದೇ ಕ್ಷಣ ಕೂಡ ಇರೋಕ್ಕಾಗೋಲ್ಲ' ಅವನೆದೆಯಲ್ಲಿ ಮುಖವಿಟ್ಟು ಉಸುರಿದ ಕ್ಷಣ ಉಬ್ಬಿ ಹೋಗಿದ್ದ. 'ತಾನು ಇಲ್ಲದೇ ಚಾರುಲತ ಬದುಕಲಾರಳು' ಎನ್ನುವ ಮಾತೇ ಅವನನ್ನ ಆಕಾಶದಲ್ಲಿ ವಿಹರಿಸುವಂತೆ ಮಾಡಿತ್ತು. ಅದೆಲ್ಲ ಬರೀ ಭ್ರಮೆಯೆನಿಸಿ ದಾಗ ಹುಚ್ಚಿಡಿದಂತಾಯಿತು.

"ಬರ್ತೀನಿ ಕಮಲ, ಬೇರೆ ಯಾರನ್ನೋ ನೋಡೋದಿದೆ" ಅದೃಶ್ಯನಾದ.

ಎದುರಿನ ಮೆಡಿಕಲ್ ಸ್ಟೋರ್‌ನಲ್ಲಿ ನಿಂತು ಮೂರು ನಾಲ್ಕು ಸಲ ಹಿಂದಿರುಗಿ ನೋಡಿದ. ಎದೆ ಹಿಂಡಿದಂತಾಯಿತು. 'ಚಾರು' ಸಿಡಿಲೊಂದು ಭೋರ್ಗರೆದು ಅಪ್ಪಳಿಸಿದಂತಾಯಿತು. ಏನೇನೋ ಖರೀದಿಸಿ ಹೊರಗೆ ಬಂದಾಗ ಅವರುಗಳು ಇರಲಿಲ್ಲ.

ಮೂರ್ತಿ ಕಾಲೆಳೆಯುತ್ತ ಮನೆಯ ಕಡೆ ಹೊರಟ. ರಾತ್ರಿಯ ಬೀದಿ ದೀಪಗಳು ಝುಗಝುಗಿಸುತ್ತಿದ್ದರೂ ಲೋಕವೇ ಕತ್ತಲಲ್ಲಿ ಮುಳುಗಿದೆಯೆನಿಸಿತು. ಅದು ಇಷ್ಟವೆನಿಸಿತು ಕೂಡ. ಸದಾ ಈ ಕತ್ತಲೆ ಇದ್ದರೇ ? 'ತಮಸೋಮಾ ಜ್ಯೋತಿರ್ಗಮಯ ?' ಕತ್ತಲಿನಿಂದಲೇ ಬೆಳಕು ಹುಟ್ಟುವುದು.

ಬಾಗಿಲು ತೆರೆದ ಕೂಡಲೇ ತಂದೆಯ ಫೋನ್ ಅವನನ್ನ ಕಾಯುತ್ತಿತ್ತು "ಹೇಗಿದ್ದಿ ? ಮಧು ಹೇಳ್ದ ನೀನು ಫೋನ್ ಮಾಡ್ದ ವಿಷ್ಯ. ಆಗ್ನಿಂದ ಟ್ರೈ ಮಾಡ್ತಾ ಇದ್ದೀನಿ, ಬರೀ ಎಂಗೇಜ್" ಗುರುಗುಟ್ಟಿದರು.

"ಚೆನ್ನಾಗಿದ್ದೀನಿ. ನಿಮ್ಮ ಫ್ರೆಂಡ್ ಕೃಷ್ಣಮೂರ್ತಿ ಫೋನ್ ಬಿಟ್ಟರೇ ಅಂಥ ಫೋನ್ ಕಾಲ್ಸ್ ಏನಿಲ್ಲ. ನಾನು ಬಂದ್ಮೇಲೆ. ಹೋಗ್ಲಿ, ಅಲ್ಲಿ ಎಲ್ಲಾ ಹೇಗಿದ್ದೀರಿ ? ಪೂಜಾ ಹೇಗಿದ್ದಾಳೆ" ಎಂದ ಕೂಡಲೇ ಅವರಿಂದ ಮೂಡ್‌ನಲ್ಲಿ ಹೆಚ್ಚು ಕಡಿಮೆ ಮಾತಾಡಬಹುದೆಂದು "ನಿಮ್ಮಮ್ಮ ಮಾತಾಡ್ತಾಳೆ ನೋಡು" ಹೆಂಡತಿ ಕೈಗೆ ಫೋನ್ ಕೊಟ್ಟು ಪ್ಲ್ಯಾಟ್ ಬಾಲ್ಕಾನಿಯಲ್ಲಿ ಹೋಗಿ ನಿಂತರು.

"ಹೇಗಿದ್ದೀಯಾ ? ಊಟಕ್ಕೇನು ಮಾಡ್ದೇ ?" ಆ ಕುತೂಹಲಕ್ಕೆ ಕಾರಣವಿತ್ತು. "ಚೆನ್ನಾಗಿದ್ದೀನಿ. ನಾಲ್ಕು ದಿನ ಇಲ್ಲೇ ಇರ್ತೀನಿ. ನಾನೇ ಅಡ್ಗೆ ಮಾಡ್ಕೊಂಡೆ.

ಯಾವಾಗ ಬರ್ತೀರಾ ? ಪೂಜಾ ಆರೋಗ್ಯ ಸುಧಾರಿ ಸಿದ್ಯಾ ?" ಎಲ್ಲಾ ಕೇಳಿ ಮುಗಿಸಿದ ಒಂದೇ ಸಮ.

"ನೀನೇ ಅಡ್ಗೆ ಮಾಡ್ಕೊಂಡ್ಯಾ ? ಹೋಟೆಲ್ ಊಟಕ್ಕಿಂತ ಅದೇ ಒಳ್ಳೇದು. ನಿನ್ನ ಅಂಕಲ್ ಪೂಜಾಗೆ ಟ್ರೀಟ್‌ಮೆಂಟ್ ಕೊಡಿಸ್ತಾ ಇದ್ದಾರೆ. ಕನಿಷ್ಟ ಇನ್ನ ಮೂರು ತಿಂಗ್ಳಾದ್ರೂ ಟ್ರೀಟ್‌ಮೆಂಟ್ ಬೇಕೂಂತಾರೆ. ಏನು ತಿಂದರೂ ವಾಂತಿ ಮಾಡ್ಕೋತಾಳೆ. ಹೊಟ್ಟೆ ಉರೀ ಅಂತಾಳೆ. ನಾನೇನು ಪಾಪ....ಮಾಡಿದ್ನೋ ?" ಆಕೆಯ ಕಣ್ಣೀರು ಅಲ್ಲಿಂದ ಹರಿದು ಬಂದು ಅವನನ್ನು ತೋಯಿಸಿದಂತಾಯಿತು.

"ಅಮ್ಮ ಸಮಾಧಾನ ಮಾಡ್ಕೋ. ಸ್ವಲ್ಪ ಜಾಗ್ರತೆಯಿಂದ ನೋಡ್ಕೊಳ್ಳಿ ಪೂಜಾನಾ. ಇಲ್ಲಿನ ಯೋಚ್ನೇ ಬೇಡ. ಬೇರೆ ಕಡೆ ಗಂಡು ನೋಡಿ, ಬೇಗ ವಿವಾಹ ಮಾಡೋಣ. ಚಿಕ್ಕಪ್ಪನಿಗೂ ಹೇಳಿದ್ದೀನಿ. ಪೂಜಾಗೆ ಕೊಡು....ಫೋನ್" ಎಂದ. ಯಾಕೋ, ಏನೋ ಅವನ ಮೈಯೆಲ್ಲ ಬೆವರತೊಡಗಿತು.

"ಅವ್ಳು ಪಕ್ಕದ ಫ್ಲ್ಯಾಟ್‌ಗೆ ಹೋಗಿದ್ದಾಳೆ. ಕರೀಲಾ. ಗುಜರಾತಿ ಜನ ಬಹಳ ಒಳ್ಳೆಯವ್ರು" ಎಂದಾಗ "ಬೇಡಮ್ಮ ನಾನೇ ನಾಳೆ ಬೆಳಿಗ್ಗೆ ಫೋನ್ ಮಾಡ್ತೀನಿ. ಸುಮ್ನೇ ಏನೇನೋ ಯೋಚ್ಸಬೇಡಿ. ಡಾ|| ನವೀನ್, ಪೂಜಾಗೆ ಸರ್‍ಯಾದ ಗಂಡೇನಲ್ಲ. ಅವ್ನು ತಪ್ಪಿ ಹೋಗಿದ್ದಕ್ಕೆ ದುಃಖಪಡ್ಬೇಕಾ ದುದ್ದೇನಿಲ್ಲ" ಸಾಂತ್ವನಿಸಿದ ಫೋನ್‌ನಲ್ಲಿಯೇ.

"ಫೋನ್ ಇಡ್ತೀನಿ" ಆಕೆ ಅತ್ತಿದ್ದು ಇಲ್ಲಿವರೆಗೂ ಬೆನ್ನಟ್ಟಿಕೊಂಡು ಬಂದಂತಾಯಿತು. ಅವನ ಮುಷ್ಟಿ ಬಿಗಿಯಿತು "ಸ್ಕ್ಯಾಂಡ್ರಲ್, ಶಾಂತವಾಗಿದ್ದ ನಮ್ಮ ಸಂಸಾರನ ಕದಡಿ ಬಿಟ್ರು" ಹಲ್ಮುಡಿ ಕಚ್ಚಿ ಕೂಗಿದ ಕೋಪ ತಾಳಲಾರದೆ.

ಅವಳ ನೆನಪುಗಳಿಂದ ಕಳಚಿಕೊಳ್ಳಲು ಬಹಳ ಒದ್ದಾಡಿದ. ಆರಾಮಾಗಿ ಸೀರದ ಜೊತೆ ಏನನ್ನೋ ಖರೀದಿಸುತ್ತಿದ್ದ ಚಾರುಲತ ಚಿತ್ರ ಮೂಡಿ ಮೂಡಿ ಮರೆಯಾಗುತ್ತಿತ್ತು. 'ಚಾರುಲತ ಅಪಾಯಿಂಟ್‌ಮೆಂಟ್‌ಗೆ ಸೇರ್ಕೊಂಡಿದ್ದಾಳೆ ಕಮಲ ತಿಳಿಸಿದ್ದು. ಅದಕ್ಕೆ ಮುನ್ನವೇ ಫೋನ್‌ನಲ್ಲಿ ಸಲಹೆ ಕೇಳಿದ್ದು ನೆನಪಾಯಿತು.

ಇದಾದ ಮೂರನೆಯ ದಿನ ಚಾರುಲತ ಜನರಲ್ ಸ್ಟೋರ್‌ನಲ್ಲಿ ಸಿಕ್ಕಳು.

ಮಾತು ನಗು ಬೇಡವೆನಿಸಿತು. ಆದರೆ ಗಾಬರಿಯಿಂದಲೋ ಉದ್ವೇಗದಿಂದಲೋ ಕ್ಯಾಷ್ ಕೌಂಟರ್‌ನಲ್ಲಿ ಹಣ ತೆಗೆದವಳು ಅಲ್ಲಿಯೇ ಬಿಟ್ಟು ಹೋಗಿದ್ದಳು.

"ಸರ್, ಒಂದ್ಸಲ ನೀವಿಬ್ರೂ ಜೊತೆಯಾಗಿ ಬಂದಿದ್ದು ನೋಡಿದ್ದೆ. ನಿಮ್ಮ ಸಂಬಂಧಿಕರೋ, ಪರಿಚಯದವರೋ ಇರ್ಬೇಕು....ಆಕೆ. ದಯವಿಟ್ಟು ತಲುಪಿಸೋಕೆ ಸಾಧ್ಯನಾ ?" ರಿಸೆಪ್ಷನಿಸ್ಟ್ ಕೇಳಿದಾಗ ಸರಿಯೆನ್ನುವಂತೆ ಕೈಗೆತ್ತಿಕೊಂಡ. ಆ ಪರ್ಸ್ ಅವನೇ ಕೊಡಿಸಿದ್ದ. ಭಾದೆಯೆನಿಸಿತು.

ಆದರೂ ಧಾವಿಸಿ ಬಂದ. ಬ್ಯಾಗ್ ಹಿಡಿದು ಪುಟ್‌ಪಾತ್‌ನಲ್ಲಿ ನಡೆದು ಹೋಗುತ್ತಿದ್ದ ಚಾರುಲತಳ ಹಿಂದೆ ಧಾವಿಸಿ ಹಿಡಿದಾಗ ಏದುಸಿರು ಬಿಡುತ್ತಿದ್ದ.

"ತಗೋ, ನಿನ್ನ ಪರ್ಸ್" ಅವಳತ್ತ ನೀಡಿದ.

"ಥ್ಯಾಂಕ್ಸ್, ಮೆನಿ ಮೆನಿ ಥ್ಯಾಂಕ್ಸ್.....ಹೇಗಿದ್ದೀರಾ ? ಯಾವಾಗ್ಬಂದ್ರಿ?" ಕೇಳಿದಳು. ಅವನು ಉತ್ತರಿಸುವ ಕಷ್ಟ ತೆಗೆದುಕೊಳ್ಳಲಿಲ್ಲ.

ಚಾರುಲತ ಹಿಂದಕ್ಕೆ ತಿರುಗಿದಳು. ನೋಟ ಸಾಗಿದಷ್ಟು ದೂರ ಮಂಜು ಹರಡಿದಂತಾಯಿತು. ಜೀವನ ಪೂರ್ತಿ ಬೆರೆತು ಹೆಜ್ಜೆ ಹಾಕುವ ನಿರ್ಧಾರ ತೆಗೆದುಕೊಂಡ ದಂಪತಿಗಳು ವರ್ಷಕ್ಕೆ ಮುನ್ನವೇ ಬೇರೆಯಾದುದ್ದರ ಹಿಂದೆ, ದೈವದ ಕೈವಾಡವಿದೆಯೇ ?

ಅವಳ ಕಾಲುಗಳಲ್ಲಿನ ಶಕ್ತಿಯೇ ಕುಂದಿದಂತಾಯಿತು. ತನ್ನ ಮೂರ್ತಿ ಮಾನಸಿಕವಾಗಿ, ದೈಹಿಕವಾಗಿ ಹಿಂಸಿಸಿದ್ದರೇ, ಇಂದಿನ ತನ್ನ ಮನಸ್ಥಿತಿಯೇ ಬೇರೆಯಾಗುತ್ತಿತ್ತು. ಪ್ರೀತಿಯ ಹೊಳೆಯಲ್ಲಿಯೇ ತೇಲಿಸಿದ್ದ. ತುಂಬು ದಾಂಪತ್ಯ ಸುಖ ನೀಡಿದ ಉತ್ತಮ ವ್ಯಕ್ತಿ. ವರದಕ್ಷಿಣೆ, ವರೋಪಚಾರ ಏನನ್ನೂ ಬೇಡವೆಂದ ಅಪರೂಪದ ಗಂಡು.

ಸಿಟಿ ಬಸ್ಸಿನಲ್ಲಿಯೇ ಮನೆಗೆ ಬಂದಿದ್ದು. ಹೆಚ್ಚು ಓದು ಅಂಥ ಅಭ್ಯಾಸವಿಲ್ಲದ ನೀರದ ಮನೆಗೆಲಸವನ್ನು ಅಚ್ಚುಕಟ್ಟಾಗಿ ಮುಗಿಸಿ ಹೋಗಿ ತಾಯಿಯ ಮನೆಯಲ್ಲಿ ಕೂಡುತ್ತಿದ್ದಳು. ಬರೀ ಮಾತು...ಮಾತು. ಅವಳು ಮಾತಿನ ಹುಡುಗಿಯೇ. ಮನದಲ್ಲಿ ಏನನ್ನ ಉಳಿಸಿಟ್ಟುಕೊಳ್ಳುತ್ತಿರಲಿಲ್ಲ.

ಮನೆಯ ಬಳಿಗೆ ಬರುವ ವೇಳೆಗೆ ಮುಂಬಾಗಿಲು ಮುಚ್ಚಿತಷ್ಟೆ. ಯಾರು

ಇರಲಿಲ್ಲ. ಸಮಾನನ್ನ ಒಂದು ಕಡೆ ಇರಿಸಿ ಅಡಿಗೆ ಮನೆಗೆ ಹೋದಳು. ತಿಂಡಿ ರೆಡಿಯಾಗಿತ್ತು. ಕಾಫಿ ಫ್ಲಾಸ್ಕ್‌ನಲ್ಲಿತ್ತು.

ಆ ವೇಳೆಗೆ ಕಾಲಿಂಗ್ ಬೆಲ್ ಸದ್ದಾಯಿತು. ಸ್ವಲ್ಪ ಕಸಿವಿಸಿಯಿಂದಲೇ ನಿಂತಿದ್ದ ಡಾ|| ನವೀನ್ "ಸಧ್ಯ ನೀನು ಬಂದಿದ್ದು ಒಳ್ಳೆದಾಯ್ತು. ಇಲ್ಲದಿದ್ದರೇ ಯಾರಾದ್ರೂ ಮನೆ ಪೂರ್ತಿ ದೋಚಿಕೊಂಡು ಹೋಗ್ತಾ ಇದ್ದರು" ಸಿಡಿಮಿಡಿಗುಟ್ಟಿದ. ಅವಳಿಗೇನು ಅರ್ಥವಾಗಲಿಲ್ಲ.

"ನಾನೊಬ್ಬ ಫೂಲ್ !" ಗೊಣಗುಟ್ಟಿಕೊಂಡು ಹೋಗಿ ಟೈ ಬಿಚ್ಚಿ ಎಸೆದು ಒಂದು ಕಡೆ ಕೂತ. ಚಾರುಲತಗೆ ಒಂದಿಷ್ಟು ಗಾಬರಿ. "ಏನಾಯ್ತು! ನಮ್ಮ ಮನೆಯಲ್ಲಿ ಏನಿದೆ, ಅಮೂಲ್ಯವಾದದ್ದು ದೋಚಿಕೊಳ್ಳೋಕೆ" ಎದುರು ಕೂತಳು.

ವಾಚ್ ಕಡೆ ನೋಡಿ "ನಾನ್ಬಂದು ಒಂದ್ಗಂಟೆ ಇಪ್ಪತ್ತು ನಿಮಿಷ ಆಗಿತ್ತು. ನೀನು ಬಂದಾಗ ಮನೆ, ಮನೆ ಬಾಗ್ಲು ಯಾವ ಸ್ಥಿತಿಯಲ್ಲಿತ್ತೋ, ಅದೇ ಸ್ಥಿತಿಯಲ್ಲಿತ್ತು. ನಾನ್ಬಂದಾಗ ಕೂಡ ಏನು...ಗತಿ ? ಒಂದಿಷ್ಟು ಯೋಚ್ನೇ ಬೇಡ್ವಾ, ಅವ್ಳಿಗೆ ? ಹೋಗಿ...ಹೋಗಿ...ಅಮ್ಮನ ಎದುರು ಕೂತ್ಕೋತಾಳೆ. ಕೆಲ್ಸಕ್ಕೆ ಬಾರದ ಮಾತುಗಳನ್ನಾಡುತ್ತ ಗೋಳಾಡ್ತಾರೆ ತಾಯಿ ಮಗ್ಳು" ಕೂಗಾಡಿದ. ಚಾರುಲತ ತುಟಿ ಕಚ್ಚಿಡಿದಳು. ಇದು ಅವಳಿಗೂ ಗೊತ್ತಿದ್ದುದೇ. ಹಾಗೆ 'ಬೇಡ' ಎಂದು ಹೇಳಲು ಸಾಧ್ಯ.

"ಅದು ಯಾವ ದೊಡ್ಡ ವಿಷ್ಯ ? ದೂರವಿದ್ದಿದ್ದರೇ ಹೋಗೋಕೆ ಸಾಧ್ಯವಿತ್ತಾ? ತಿಂಡಿ ಮಾಡಿಟ್ಟೇ ಹೋಗಿದ್ದಾರೆ. ಬಂದ ಕೂಡ್ಲೇ ಇಲ್ದ ಮಡದಿ ಮೇಲೆ ಕೋಪ ಸಹಜ. ನಾನ್ಹೋಗಿ ಕೂಗ್ತೀನಿ" ಹೊರಟಾಗ ತಡೆದ "ಬೇಡ, ಅವಳಿದ್ದರೇನೇ ನನ್ನ ತಲೆ ಬಿಸಿ. ಮಹಾನ್ ಆದರ್ಶ ಪ್ರೇಮಿ ತರಹ ಇವ್ಳನ ವಿವಾಹವಾಗಿ ತಪ್ಪು ಮಾಡ್ದೆ" ಎಂದ ಕೂಡಲೇ ಕೈಯಿಂದ ಅವನ ಬಾಯಿ ಮುಚ್ಚಿದಳು "ಏನಾಗಿದೆ, ನವೀನಣ್ಣ ನಿಂಗೆ ? ಇದೇನಾದ್ರೂ ನೀರದ ಕಿವಿಗೆ ಬಿದ್ದರೇ, ಏಳು ವರ್ಷದ ಪ್ರೀತಿ, ಪ್ರೇಮ ಕಡೆ ಪಕ್ಷ ಏಳು ತಿಂಗ್ಳು ಕೂಡ ಉಳಿಯಲಿಲ್ಲಾಂದರೇ ಏನರ್ಥ ? ನೀರದ ನಿನ್ಮಾತುಗಳ್ನ ಕೇಳಿದರೆ ನೊಂದ್ಕೊತಾಳೆ. ಪ್ಲೀಸ್ ಹೀಗೆಲ್ಲ ಮಾತಾಡ್ಬೇಡ. ಸ್ವಲ್ಪ ಪ್ರೀತಿಯಿಂದ ಮೃದುವಾಗಿ ಹೇಳು, ಅರ್ಥ ಮಾಡ್ಕೊತಾಳೆ" ಹೇಳಿದಾಗ ಮುಖ ತಿರುಗಿಸಿಕೊಂಡು ಎದ್ದು ಹೋದ.

ಹಿಂದೆ ಕಾಣದ ಲೋಪ ದೋಷಗಳು ತಾಳಿ ಕಟ್ಟಿದ ಕೂಡಲೆ ಹೇಗೆ ಪ್ರಕಟವಾದವು ? ಎದುರು ಮನೆಯಾದುದ್ದರಿಂದ ನೀರದ ಹೆಚ್ಚು ಕಡಿಮೆ ಈ

ಮನೆಯಲ್ಲೇ ಇರುತ್ತಿದ್ದಳು. ಅವಳು ತಂದೆಗೆ ಅಡಿಗೆ ಕೆಲಸದಲ್ಲಿ ಸಹಾಯ ಮಾಡುತ್ತಿದ್ದಳು. ಬ್ಯಾಂಕ್, ಜನರಲ್ ಸ್ಟೋರ್‌ಗೆ ಹೋಗಿ ಬರುತ್ತಿದ್ದವಳು ಅವಳೇ. ಆಗಾಗ ಡಾ|| ನವೀನ್, ಅವಳು ಕೂಡಿ ಹೊರಗೆ ಹೋಗಿ ಬರುವುದಕ್ಕೆ ಎರಡು ಕಡೆಯವರ ಆಕ್ಷೇಪಣೆ ಇರಲಿಲ್ಲ.

ನೀರದಾನ ಅರಸಿಕೊಂಡು ಅವಳ ಮನೆಗೆ ಬಂದಾಗ ಖಾಲಿ ಬಿಂದಿಗೆ ಹಿಡಿದುಕೊಂಡು ಬರುತ್ತಿದ್ದ ಅವಳ ಅತ್ತಿಗೆ ಹೊರಗಡೆಯೇ ಎದುರಾದಳು.

"ನೀರದಾನ ಕರ್ಯೋಕೆ ಬಂದ್ಯಾ ? ಹಿಂದೆ ನಿಮ್ಮ ಮನೆಯಲ್ಲಿ ಬಂದು ಕೂಡುತ್ತಿದ್ದಳು. ಈ ಕೆಲ್ಸ ನಾನು ಆಗ ಮಾಡ್ತಾ ಇದ್ದೆ. ಈಗ ನೀನು ಮಾಡ್ಬೇಕಾಗಿದೆ. ಒಂದೇ ಮಾತು ತಾಯಿ, ಮಗಳದು. ಆಕೆಯಂತು ಹಾಸಿಗೆ ಹಿಡಿದ ಪೇಷಂಟ್. ಇವ್ಳಿಗಾದ್ರೂ ಬುದ್ಧಿ ಬೇಡ್ವಾ ?" ನಾದಿನಿಯ ಮೇಲೆ ಅಸಹನೆ ತೋರಿದಳು. ಅದಕ್ಕೆ ಕಾರಣವಿತ್ತು. ಹಿಂದೆ ಈ ಮನೆಯ ಮಗಳಾಗಿದ್ದಾಗ ಕೆಲಸ ಮಾಡೋಳು, ಈಗ ಬರೀ ಬಂದು ಕೂಡುತ್ತಿದ್ದುದು ಸೈರಣೆಯ ವಿಷಯವಾಗಿರಲಿಲ್ಲ.

ಮುಖದಲ್ಲಿ ನಗು ತೇಲಿಸಿ ಚಾರುಲತ ಒಳಗೆ ಹೋದಳಷ್ಟೆ. ಈ ಮನೆಯ ಕಿರಿಯ ಸೊಸೆ ಬ್ಯಾಂಕ್ ಉದ್ಯೋಗಿಯಾದುದ್ದರಿಂದ ಹಿರಿಯ ಸೊಸೆ ಸುಕನ್ಯ ಮೇಲೆ ಕೆಲಸದ ಒತ್ತಡ ಬೀಳುತ್ತಿತ್ತು. ಸುಮ್ಮನೆ ತಾಯಿಯ ಬಳಿ ಬಂದು ಕೂಡುವ ನೀರದ ಮೇಲೆ ಕೋಪ ಸಹಜವೆಂದುಕೊಂಡಳು.

"ಅತ್ತಿಗೆ ನೀರದ ಅವ್ರ, ನಿಮ್ಮ ಶ್ರೀಯವ್ರು ದಯಮಾಡ್ಸಿದ್ದಾರೆ" ಸುದ್ದಿ ಮುಟ್ಟಿಸಿದಾಗ ಗಾಬರಿಯಿಂದ ಎದ್ದ ಅವಳು "ಬಾಗ್ಲು ತೆಗೆದೇ ಇತ್ತಾ ? ಮಾತಿನಲ್ಲಿ ಮರ್ತೇ ಬಿಟ್ಟೆ." ಓಡಿದಾಗ ಅವಳ ತಾಯಿ ಬಳಿ ಕೂತಳು. ಆಕೆಯ ಸ್ಥಿತಿ ಕರುಣಾಜನಕವೇ. ತೀವ್ರವಾದ ಹೊಟ್ಟೆಯ ಅಲ್ಸರ್‌ನಿಂದ ನರಳುತ್ತಿರುವ ಆಕೆ ಸದಾ ಮಲಗಿರುವುದೆ ಹೆಚ್ಚು.

"ಕೆಲ್ಸದಿಂದ ಬಂದ್ಯಾ ? ನಿನ್ನ ಈ ಪರಿಸ್ಥಿತಿಗೆ ನಾನೇ ಕಾರಣಾಂತ ಭೂಮಿಗಿಳಿದು ಹೋಗಿದ್ದೀವಿ" ಆಕೆಯ ಮಾತಿನ ಧಾಟಿ ಅಲ್ಲಿಯೇ ಸಾಗಿತು. ಅವಳು ಸಿಕ್ಕಾಗಲೆಲ್ಲ ಇದೇ ಮಾತುಗಳು. ಚಾರುಲತಗೆ ಸಾಕು ಸಾಕಾಗಿತ್ತು.

"ದಯವಿಟ್ಟು ಪದೇ ಪದೇ ಈ ಮಾತುಗಳ್ನ ಆಡ್ಬೇಡಿ. ನೀವು ಕಾರಣವಲ್ಲ. ಅದು ನಿಮ್ಗೇ ಸಂಬಂಧಪಡದ ವಿಷ್ಯ. ನವೀನಣ್ಣನಿಗೆ ಪೂಜಾನ

ವಿವಾಹವಾಗೋಕೆ ಇಷ್ಟವಿರ್ಲಿಲ್ಲ. ಅದ್ಕೇ ನೀವು ಹೇಗೆ ಕಾರಣವಾಗ್ತೀರಾ? ಸುಮ್ನೇ ಯೋಚ್ಸಿ ಮತ್ತಷ್ಟು ಆರೋಗ್ಯ ಕೆಡಿಸ್ಕೋಬೇಡಿ" ಎಂದಳು ಆಕೆಯ ಕೈ ಹಿಡಿದು ಮೃದುವಾಗಿ ಸವರುತ್ತ. ಆ ಜೀವ ನೋಯುವುದು ಅವಳಿಗೆ ಬೇಡ.

"ಸುಕನ್ಯ, ಏನಾದ್ರೂ ತಗೊಂಡ್ಯಾ" ಸೊಸೆನ ಕೂಗಿದರು.

"ಬೇಡ ಎಲ್ಲಾ ಆಗಿದೆ. ಅಲ್ಲಿಗೂ ಇಲ್ಲಿಗೂ ಓಡಾಟ ಇದ್ದೇ ಇರುತ್ತಲ್ಲ. ಅಪ್ಪ, ಎಲ್ಲೋ ಹೋದವರು ಬಂದಿಲ್ಲ, ನೋಡ್ತೀನಿ" ಎದ್ದಳು. ಕೆಲವು ಮಾತುಗಳನ್ನ ಹೇಳಬೇಕೆಂದುಕೊಂಡವಳು ಸುಮ್ಮನಾದಳು. ಆಕೆ ಕೈ ಹಿಡಿದರು "ಕ್ಷಣ ಕೂತ್ಕೋ, ನನ್ನ ಸಮಾಧಾನಕ್ಕೆ."

ಬೇಸರದಿಂದಲೇ ಕೂತರು. ಆಕೆಗೆ ಮಗಳ ಭವಿಷ್ಯದ ಚಿಂತೆ. ಇಂಥ ದೊಡ್ಡ ಗಂಡಾಂತರ ಬಂದು ಒದಗುತ್ತದೆಯೆಂದು ಗೊತ್ತಿರಲಿಲ್ಲ.

"ಏನು ಕೆಲ್ಸ ? ಅಲ್ಲಿ ಎಲ್ಲಾ ಹೆಂಗಸರೇ ಇರೋದೂಂತ ಕೇಳ್ದೆ. ನಿನ್ಗಂಡ, ಅತ್ತೆ ಮಾವನ ಒಂದ್ಮಾತು ಕೇಳ್ಬೇಕಿತ್ತು" ಎಂದರು. ಆಕೆಯ ಚಿಂತೆ ಆ ದಿಕ್ಕಿನಲ್ಲಿ ಹರಿದಿತ್ತು.

ಕಟುವಾಗಬಹುದಾದ ಉತ್ತರವನ್ನು ಮೆತ್ತಗಾಗಿಸಿ "ಎಲ್ಲಾ ಕೇಳಿದ್ದೀನಿ" ಅಂದದ್ದು ಇರುಸು ಮುರುಸಿನಿಂದಲೇ.

"ನೀನು ಗಂಡನ ಮನೆಗೆ ಹೋಗೋ ತನ್ಕ ನೀರದ, ಅವ್ಳ ಗಂಡ ಸುಖವಾಗಿರೋಲ್ಲ. ನವೀನ ಅದ್ಕೇ ಮನಸ್ಸಿಗೆ ಹಚ್ಕೊಂಡ್ ಮೂರು ರಾತ್ರಿಯಿಂದ ಅಷ್ಟಿಂದ ದೂರ ಮಲ್ಗಿದ್ದಾನೆ. ವಿವಾಹವಾದ ಹೊಸದ್ರಲ್ಲಿ ಏನು ಚೆನ್ನ ?" ತೋಡಿಕೊಂಡರು. ಮಗಳು ಅತ್ತುಕೊಂಡಿದ್ದು ಅವರ ವಿವೇಕವನ್ನು ಮಂಕಾಗಿಸಿತ್ತು. ತಕ್ಷಣವೇ "ತಪ್ಪಾಗಿ ಮಾತಾಡಿದ್ನೆ. ಅವ್ಳು ಅತ್ತುಕೊಂಡಾಗ ನನ್ನ ಕರುಳು ಕಿತ್ತು ಬಂತು."

ನಿಶ್ಯಬ್ದವಾಗಿ ಎದ್ದು ಹೊರಗೆ ಬಂದಳು. ಬೆಡ್ ರೂಮಿಗೆ ಸಂಬಂಧಿಸಿದ ಮಾತುಗಳು ಎದುರು ಮನೆಯವರೆಗೂ ಬಂದಿದ್ದು ಸರಿ ಕಾಣಲಿಲ್ಲ. ಬಹುಶಃ ತನ್ನ ತಾಯಿ ಕೂಡ ಬದುಕಿದ್ದರೆ ಮೊದಲು ಯೋಚಿಸುತ್ತಿದ್ದುದು ಮಗಳ ಬಗ್ಗೆಯೇ ಎನಿಸಿತು.

ಆಗ ತಾನೇ ಬಂದಿದ್ದ ವಾಸುದೇವಯ್ಯ ಕೈಕಾಲು ತೊಳೆದು ಹಾಲ್‌ನಲ್ಲಿ ಬಂದು ಕೂತವರು "ಎದುರು ಮನೆಗೆ ಹೋಗಿದ್ಯಾ ? ಹೇಗಿದ್ದಾರೆ ಶ್ಯಾಮಲಕ್ಕ?"

ವಿಚಾರಿಸಿದರು. ಆಗಾಗ ಮೊದಲು ಹೋಗುತ್ತಿದ್ದವರು ಈಗ ಪೂರ್ತಿ ಬಂದ್ ಮಾಡಿದ್ದರು. ಇಷ್ಟವೆನಿಸುತ್ತಿರಲಿಲ್ಲ.

"ಪರ್‍ವಾಗಿಲ್ಲ, ತಿಂಡಿ ತರ್ತೀನಿ" ಅಡಿಗೆ ಮನೆಗೆ ಹೋದಳು.

ಮುಚ್ಚಿಟ್ಟ ತಿಂಡಿ ಹಾಗೆಯೇ ಇತ್ತು. ನೀರದ ನವೀನ್‌ಗೂ ತಿಂಡಿ ಕೊಟ್ಟಿರಲಿಲ್ಲ ಸರಿಯೆನಿಸಲಿಲ್ಲ. ಯಾರಿಗೆ ಬುದ್ಧಿ ಹೇಳುವುದು ? ನೀರದ ಎದುರು ಮನೆಯಿಂದ ತರುವ ತಿಂಡಿಗಾಗಿ ಬಾಗಿಲ ಕಡೆಯೇ ನೋಡುತ್ತ ಕಾಯುತ್ತಿದ್ದ ನವೀನ್‌ಗೆ ಇಷ್ಟು ಬೇಗ ಏನಾಯಿತು ?

ನಾಲ್ಕು ತಟ್ಟೆಗಳಿಗೆ ಉಪ್ಪಿಟ್ಟು ಹಾಕಿ, ಎರಡು ತಂದು ಒಂದು ತಂದೆಗೆ ಕೊಟ್ಟು ತನಗಾಗಿ ಒಂದು ತಟ್ಟೆ ಇಟ್ಟು, ಉಳಿದ ಎರಡು ತಟ್ಟೆಗಳನ್ನ ರೂಮಿನ ಬಾಗಿಲ ಬಳಿಗೆ ಒಯ್ದು ನಿಡುಸೊಯ್ದಳು.

"ನೀರದ, ಅಣ್ಣನಿಗೆ ತಿಂಡಿ ಕೊಡು" ಎಂದಳು.

ನೇರವಾಗಿ ಹೊರಗೆ ಬಂದ ನವೀನ್ ಒಂದು ತಟ್ಟೆಯನ್ನು ಇಸಿಕೊಂಡು ಹೋಗಿ ತಂದೆಯ ಎದುರು ಕೂತ.

"ನೀನು ಇಲ್ಲಿಗೆ ಬಂದ್ಬಿಡತ್ತಿಗೆ" ಎಂದು ಇನ್ನೊಂದು ತಟ್ಟೆಯನ್ನು ಟೀಪಾಯಿ ಮೇಲಿಟ್ಟು "ನಿಂಗೆ ಹಸಿವು ಕಡ್ಮೇ ಆಗಿದ್ಯಾ ?" ವಿಚಾರಿಸಿದಳು. ಅವಳಿಗೆ ಹೋಟಲಲ್ಲಿ ತಿಂಡಿ ತಿಂದಿದ್ದು ಮರತೇ ಹೋಗಿತ್ತು.

ಮಾತಾಡದೆ ನವೀನ್ ಗಬಗಬನೆ ತಿಂದು ತಟ್ಟೆ ಖಾಲಿ ಮಾಡಿಟ್ಟು ಎದ್ದು ಹೋಗಿ ಕೈ ತೊಳೆದವನು ಪಂಚೆಯಲ್ಲಿಯೇ "ಹಯಗ್ರೀವನ್ನ.... ನೋಡ್ಬರ್ತೀನಿ" ಹೊರಟ.

ಅಪ್ಪ, ಮಗಳು ಮುಖ ಮುಖ ನೋಡಿಕೊಂಡರು.

"ಸಂಭ್ರಮ, ಸಂತೋಷ ಇರ್ಬೇಕಾದ ಮನೆಯಲ್ಲಿ ಏನು ಇಲ್ಲವಾಗಿದೆ. ಕುಣಿದು ಕೊಂಡು ಓಡಾಡುತ್ತ ಇದ್ದ. ಹುಡ್ಗಿ ಸಪ್ಪಗೆ ಕೂತಿರ್ತಾಳೆ. ಏನೋಪ್ಪ ಒಂದು ಅರ್ಥವಾಗೋಲ್ಲ" ಸೊಸೆಯನ್ನ ಉದ್ದೇಶಿಸಿ ಆಡಿದ ಮಾತುಗಳು ಅವು.

ಹಣೆಗೆ ಕೈಯೊತ್ತಿಕೊಂಡು "ಅಪ್ಪ, ಹೊಸದಲ್ವೆ ! ಅದೂ ಅಲ್ದೆ ನೀರದಾಗೆ ಅವಳಮ್ಮನ ಆರೋಗ್ಯದ ಚಿಂತೆ. ನಿಮ್ಮ ಮಗನದೇ ಸಿಟ್ಟು, ಸೆಡವು" ಎಂದಳು.

ಅವಳಿಗೆ ಎಲ್ಲಾ ವಿಚಿತ್ರವಾಗಿ ತೋರುತ್ತಿತ್ತು. ಪ್ರೇಮ, ಪ್ರೀತಿ ಸಂಬಂಧಗಳಿಗೆ ಏನಾದರೂ ಅರ್ಥವಿದೆಯೇ ? ಸಣ್ಣ ಸಣ್ಣ ತಪ್ಪುಗಳನ್ನ ಕೂಡ ಕ್ಷಮಿಸಲಾರದಂಥ ವ್ಯಕ್ತಿಗಳ ನಡುವೆ ಬದುಕೆಷ್ಟು ಸುಭದ್ರ ? ಅವೆಲ್ಲ ಬರೀ ಬರವಣಿಗೆಯಲ್ಲಿ ಉಳಿದು ಮುಂದಿನ ಜನಾಂಗಕ್ಕೆ ಇತಿಹಾಸವಾಗ ಬಲ್ಲದೇನೋ !

ಯುಗಂಧರ್ ನಿರೀಕ್ಷಿತ ಮಟ್ಟದಷ್ಟು ಮಾನಸಿಕವಾಗಿ ಪೂಜಾ ಚೇತರಿಸಿ ಕೊಂಡಿದ್ದರೂ ಅವಳ ಆರೋಗ್ಯ ಸಾಕಷ್ಟು ಸುಧಾರಿಸಿರಲಿಲ್ಲ. ಅವಳಿಗೆ ಸರಿಯಾಗಿ ಊಟ ಮಾಡಲೇ ಸಾಧ್ಯವಿರಲಿಲ್ಲ.

ಮರುದಿನವೇ ಬಂದ ಮೂರ್ತಿ ತಂದೆಗೆ ಮಧು ಜಾತಕ, ಫೋಟೋ ಕೊಟ್ಟು "ನೀವು ಜಾತ್ಕ ಬೇಕಾದರೆ ತೋರ್ಸ್ಕೊಳ್ಳಿ. ಚೆನ್ನಗೆ ಹೋಗ್ತಂದೆ. ಗಂಡು ಮಾತ್ರ ಎಕ್ಸಲೆಂಟ್. ಅವ್ನಿಗೆ ತಂಗಿಯರು ವಿವಾಹಕ್ಕೆ ಇರೋದ್ರಿಂದ ಒಂದಿಷ್ಟು ಡೋರಿ ಅಪೇಕ್ಷಿಸ್ಬಹ್ದು. ಅವ್ನು ಕೂಡ ತಕ್ಷಣವೇ ಮ್ಯಾರೇಜ್ ಮಾಡ್ಬೇಕೆಂಬ ಹಾತೊರಿಕೆಯಲ್ಲಿಲ್ಲ. ಟ್ರೈನಿಂಗ್‌ಗೆ ಹೋದ ಮಧು ಆರು ತಿಂಗ್ಳ ನಂತರವೇ ಬರೋದು. ಆ ವೇಳೆಗೆ ಪೂಜಾ ಮತ್ತಷ್ಟು ಚೇತರಿಸ್ಕೋ ತಾಳೆ. ಎಲ್ಲಾ ರೀತಿಯಿಂದಲೂ ಈ ಸಂಬಂಧ ಒಳ್ಳೆಯದೆನಿಸುತ್ತೆ" ತಂದೆಯ ಮುಂದೆ ವಿಷಯವನ್ನಿಟ್ಟ.

ಫೋಟೋವನ್ನ ಮುಖದ ಮುಂದಿಡಿದು ನೋಡಿದರು. ಕನ್ನಡಕ ತೆಗೆದೊರೆಸಿ ಹಾಕಿಕೊಂಡು ದಿಟ್ಟಿಸಿದರು. ಲಕ್ಷಣವಾಗಿ ಕಂಡ. ಡಾ।। ನವೀನ್ ಜೊತೆ ಅವನನ್ನ ತುಲನೆ ಮಾಡಿದ. ಅವನು ಸ್ವಲ್ಪ ಪೀಚು, ಇವನು ದಪ್ಪಪುಷ್ಟವಾಗಿ ಕಂಡ.

"ಚೆನ್ನಾಗಿದ್ದಾರೆ. ಹೇಗೂ ಆರು ತಿಂಗ್ಳು ಅವಕಾಶ ಸಿಕ್ಕಿದೆಯಲ್ಲ. ಆ ವೇಳೆಗೆ ಪೂಜಾನು ಚೇತರಿಸ್ಕೋಬಹ್ದು. ಹೇಗೂ ನಾನು ಮನೆ, ನರ್ಸಿಂಗ್ ಹೋಂಗೆ ಹಣಾನು ನವೀನ್‌ಗೆ ಕೊಡೋಕೆ ಸಿದ್ಧವಾಗಿದ್ದೆ. ಅದ್ನೇ ಅವ್ನಿಗೆ ಕೊಡ್ತೀನಿ. ಇನ್ನಷ್ಟು ಕೊಡೋಣ ಬಿಡು. ಅವ್ಳು ಚೇತರ್ಸ್ಕೊಂಡರೆ ಸಾಕು" ಕನ್ನಡಕ ತೆಗೆದು ಕಂಪನಿಯೊರೆಸಿಕೊಂಡಾಗ ಮೂರ್ತಿಯ ಹೃದಯ ಕಿತ್ತು ಬಾಯಿಗೆ ಬಂದಂತಾಯಿತು.

ತಂದೆಯನ್ನ ಬಲ್ಲ, ಸಿಂಹದಂಥ ವ್ಯಕ್ತಿಯೇ. ಆದರೆ ಈಚೆಗೆ ಎಷ್ಟೊಂದು

ಕಂಗೆಟ್ಟು ಹೋಗಿದ್ದಾರೆಂದರೆ, ಯಾವುದೋ ಹೆದರಿಕೆ ಸದಾ ಭುಜ ತಟ್ಟುತ್ತಿತ್ತು.

"ಅಪ್ಪ, ನೀವು ಅಳೋದೂಂದರೇನು ? ಎಲ್ಲಾ ಸರಿ ಹೋಗುತ್ತೆ. ಈಗ ಪೂಜಾ ಎಷ್ಟೋ ಚೇತರಿಸ್ಕೊಂಡಿದ್ದಾಳೆ. ಅವ್ರನ್ನ ಒಮ್ಮೆ ಬಾ ಅಂದಿದ್ದೀನಿ. ಅದ್ಕೇ ಮುನ್ನ ನಾನು, ನೀನು, ಅಮ್ಮ ಒಮ್ಮೆ ಹೋಗ್ಬರೋಣ. ಅವ್ರು ಪೂರ್ತಿ ತಮಿಳುನಾಡಿನವರೇ. ಅವ್ರ ನೆಂಟರಿಷ್ಟರೆಲ್ಲ ಆ ಕಡೆಯವ್ರೆ. ಬರೀ ಕರ್ನಾಟಕದ ಪ್ರವಾಸ ಮಾಡಿದ್ದಾರಷ್ಟೆ. ಕನ್ನಡ ಪೂರ್ತಿ ಗೊತ್ತಿಲ್ಲ" ಇನ್ನಷ್ಟು ವಿವರಿಸಿದ.

ಮಾತು ಮುಗಿಸಿದ ಮೂರ್ತಿ ತಂಗಿಯ ರೂಮಿಗೆ ಬಂದ. ಸೋಫಾಗೆ ಒರಗಿ ಕೂತಿದ್ದವಳು ಎದುರು ಒಂದು ಪತ್ರಿಕೆ ಇತ್ತು. ಅವಳಿಗೆ ಹೊಟ್ಟೆಯಲ್ಲಿ ನಿರಂತರ ಉರಿ, ಸಂಕಟ. ಸಾಕಷ್ಟು ಟ್ರೀಟ್‌ಮೆಂಟ್ ಕೂಡ ಇದನ್ನ ಕಡಿಮೆ ಮಾಡಿರಲಿಲ್ಲ.

"ಹಾಯ್, ಪೂಜಾ" ಅವಳ ಬಳಿ ಬಂದು ಕೂತ.

ಪತ್ರಿಕೆಯನ್ನು ಟೀಪಾಯಿ ಮೇಲಿಟ್ಟ ಅವಳು ಮುಗುಳ್ನಗೆ ಹರಿಸಿ "ಹೊಟ್ಟೆ ಯಲ್ಲಿ ತುಂಬ ಸಂಕ್ಟ, ಉರಿ ಕಣೋ. ಕಾರ ತಿಂದೇ ಎಷ್ಟೋ ದಿನವಾಯ್ತು" ಕ್ಷೀಣವಾಗಿ ಹೇಳಿದಾಗ ಡಾ॥ ನವೀನ್‌ನ ಅನಾಮತ್ತಾಗಿ ಎತ್ತಿ ಬೆಟ್ಟದಿಂದ ಕೆಳಗೆ ಹಾಕಿಬಿಡಬೇಕೆನಿಸಿತು. ಕೋಪದಿಂದ ಹಲ್ಕುಡಿಯನ್ನು ಕಚ್ಚಿಡಿದ.

"ಪೂರ್ತಿ ಸರಿ ಹೋಗೋಕೆ ಕೆಲವು ದಿನ ಬೇಕೂಂದರಲ್ಲ ಡಾಕ್ಟ್ರು. ಸಂಜೆ ಎಲ್ಲಾದ್ರೂ ಹೊರ್ಗಡೆ ಹೋಗ್ಬರೋಣ್ವಾ ?" ಉತ್ಸಾಹ ತುಂಬಿದ ಅವಳಲ್ಲಿ. "ಷ್ಯೂರ್, ನಾನು ಪಾನಿಪುರಿ, ಬೇಲ್‌ಪುರಿ, ಐಸ್ ಕ್ರೀಮ್ ಎಲ್ಲಾ ತಿಂದು ಎಷ್ಟೋ ದಿನವಾಯ್ತು. ನಾನಂತು ರೆಡಿ" ಎದ್ದು ಕುಣಿಯುವ ಆಸೆ. ಆದರೆ ಈಗ ಅವಳ ಶರೀರದಲ್ಲಿ ಅಂಥ ತ್ರಾಣವೇ ಇರಲಿಲ್ಲ.

ಪಕ್ಕದಲ್ಲಿದ್ದ ದಿಂಬನ್ನ ತೊಡೆಯ ಮೇಲೆ ಹಾಕಿಕೊಂಡು "ನಂಗ್ಯಾಕೋ, ಭಯ ಆಗುತ್ತೆ. ನಾನು ಮೊದ್ಲಿನಂತೆ ಆಗ್ತೀನಾ ?" ಕಣ್ಣೀರು ಸುರಿಸೋಕೆ ಶುರು ಮಾಡಿದಾಗ, ಸುಂದರವಾದ ಹೂವೊಂದು ಬೇರೆಯವರ ಕಾಲು ತುಳಿತಕ್ಕೆ ಸಿಕ್ಕಿ ನರಳಿದಂತಾಯಿತು.

"ಖಂಡಿತ ಆಗ್ತೀಯಾ ! ಅಷ್ಟೊಂದು ನಿದ್ದೆ ಮಾತ್ರೆ ತಗೊಳ್ಳೋಂತ ಮೂರ್ಖತನ ಮಾಡ್ಬಾರ್ದಿತ್ತು. ಈಗ ನೀನೇ ಸವೆಯೋಳು. ಅಪ್ಪ ನೋಡಿ

ನಾವೇ ಸಂಕಟಪಡೋರು. ಬೇರೆಯವ್ರಿಗೇನು ?" ಇದನ್ನು ಚಾರುಲತ ಅವಳ ಮನೆಯವರನ್ನ ಉದ್ದೇಶಿಸಿ ಹೇಳಿದ ಮಾತು.

"ನನ್ನ ಖಂಡಿತ ನವೀನ್ ಮದ್ವೆ ಮಾಡ್ಕೊಳ್ತಾನೇಂತ ತಿಳಿದಿದ್ದೆ. ಮೋಸ....ಮಾಡ್ದ" ಕಣ್ಣಿಗೆ ಕರ್ಚೀಫ್ ಹಚ್ಚಿದಾಗ ಮೂರ್ತಿಗೆ ರೇಗಿತು. "ಸಾಕು ಅವ್ನ ಪುರಾಣ. ಅವನೇನು ಇಂದ್ರಲೋಕದಿಂದ ಇಳಿದಿದ್ದಾ ? ಮಾಡಿರೋದು ಆರ್ಡಿನರಿ ಎಂ. ಬಿ. ಬಿ. ಎಸ್. ಏನಾದ್ರೂ ಸ್ಪೆಷಲೈಜ್ ಮಾಡಿದ್ರೆ ತಾನೇ, ಅದಕ್ಕೂ ಬೆಲೆ. ಅಪ್ಪಿ ತಪ್ಪಿ ಕೂಡ ಅವ್ನ ಸುದ್ದಿ ಬೇಡ. ಅದೆಲ್ಲ ಒಂದು ಕೆಟ್ಟ ಕನಸ್ಸೂಂತ ತಿಳ್ಕೋ. ಹೇಗೂ, ಮೂರು ಆಯ್ತು. ಐದಕ್ಕೆ ಮನೆ ಬಿಡೋಣ" ಎದ್ದುಹೋದ.

ಯುಗಂಧರ್ ಮತ್ತು ಆಕೆ ಫೋಟೋ ಜಾತಕ ಹಿಡಿದು ಕೂತು ಮಾತಾಡುತ್ತಿದ್ದರು. ಅವರಿಗೆ ಸಂಬಂಧ ಕುದುರಿಸುವುದಕ್ಕಿಂತ ಮಗಳು ಮುಂದಿನ ಬದುಕಿಗೆ ಒಗ್ಗಿಕೊಳ್ಳುತ್ತಾಳೆನ್ನುವುದೇ ಚಿಂತೆಯಾಗಿತ್ತು.

"ನಂಗೇನೋ ಭಯ !" ಎಂದರು.

ಕೂತ ಮೂರ್ತಿ ಭಾರವಾದ ಉಸಿರು ದಬ್ಬಿದ. ತಂಗಿಯ ಮಾನಸಿಕ ಚೇತರಿಕೆ ಅವನ ಗಮನಕ್ಕೆ ಬಂದಿತ್ತು. ಆದರೆ ಅವನಿಗೆ ಅವಳ ಆರೋಗ್ಯದ್ದೇ ಚಿಂತೆ. ಮುಖಕ್ಕೆ ಮೊದಲಿನ ಬಣ್ಣ ಬಂದಿರಲಿಲ್ಲ. ಕಾಯಿಲೆ ಬಿದ್ದು ಬಿಳುಚಿಕೊಂಡಂಗೆ ಕಾಣುತ್ತಿದ್ದಳು.

"ಭಯಪಡೋಕೇನಿದೆ ? ಬರೀ ಲವ್ ಸಿನಿಮಾಗಳ್ನ ನೋಡಿ ಈಗಿನ ಯುವಕರು, ಯುವತಿಯರು ಎಕ್ಸ್‌ಪರಿಮೆಂಟ್ ಮಾಡೋಕೆ ಹೋಗ್ತಾರೆ. ಅಂಥ ದೀಕ್ಷೆಯೇನು ಇರೋಲ್ಲ. ಇಷ್ಟ ಅಷ್ಟೆ. ಮಾತು, ನಗು, ಓಡಾಟ ಐಸ್‌ಕ್ರೀಮ್ ತಿನ್ನೋದೇ ಲವ್ ಆಗ್ಬಿಡುತ್ತೆ. ಯೂಸ್‌ಲೆಸ್ ಫೆಲೋಸ್" ಕೆಂಡ ಕಾರಿದ. ಅವನು ಕಾಲೇಜಿನಲ್ಲಿ ಅಧ್ಯಾಪಕ. ಈಗಿನ ವಿದ್ಯಾರ್ಥಿಗಳ ಗುಣ ಸ್ವಭಾವಗಳು ಚೆನ್ನಾಗಿ ಗೊತ್ತು. ಜೊತೆ ಜೊತೆಯಾಗಿ ಓಡಾಡುವುದು ಅವನ ಪ್ರಕಾರ ತಪ್ಪಲ್ಲ. ಆದರೆ ಮಿತಿ ಮೀರಿದ ಓಡಾಟವನ್ನು ವಿರೋಧಿಸುತ್ತಿದ್ದ.

"ನವೀನ್ ತುಂಬ ಒಳ್ಳೆ ಹುಡ್ಗ ಅಂದ್ಕೊಂಡಿದ್ದು ನಮ್ಮ ತಪ್ಪು" ಮೂರ್ತಿ ತಾಯಿ ಅಂದರು. "ನಂಗಂತೂ ಅವ್ರಿಗೆ ಕೊಟ್ಟು ವಿವಾಹ ಮಾಡೋ ಇಚ್ಛೆಯೇನು

ಇರ್ಲಿಲ್ಲ. ಇವ್ಳ ಮೊಂಡಾಟದಿಂದ್ಲೇ ಆ ವಿಷ್ಯ ಅಲ್ಲಿವರ್ಗೂ ಹೋಯ್ತು. ಸುಮ್ನೇ ಅವಮಾನವಾಯಿತಷ್ಟೆ. ಇದರಿಂದ ಒಂದು ಸಾಬೀತಾಯಿತಷ್ಟೆ. ಚಾರುಲತಗೆ ನಾವು ಕಂಡ ಮುಖಕ್ಕಿಂತ ವಿಭಿನ್ನವಾದ ಮುಖವಿದೆ. ಅಷ್ಟಿಗೆ ಇನ್ನ ನಾವೆಲ್ಲ ಅವ್ಳ ಕಡೆಯುವ್ರು ಅನ್ನಿಸಿಯೋ ಇಲ್ಲ" ಯುಗಂಧರ್ ಜಿಗುಪ್ಸೆಯಿಂದ ಪ್ರತಿಕ್ರಿಯಿಸಿದರು.

"ಸುಮ್ನೇ ಅವ್ಳ ವಿಷ್ಯ ಬೇಡ. ತಿಪ್ಪೆನ ಕೆದಕೋದ್ರಿಂದ ಬರೀ ಕಸ, ಕಡ್ಡಿನೇ ಸಿಗೋದು. ಅವ್ಳ ವಿಷ್ಯ ಇನ್ಮೇಲೆ ನಮ್ಮ ಮನೆಯಲ್ಲಿ ಬೇಡ. ತವರು ಮನೆಯಲ್ಲೇ ಸುಖವಾಗಿ ಇದ್ಕೊಳ್ಳಿ" ಎಂದ ಮೂರ್ತಿ ಎದ್ದು ಹೋದ.

ಅವನಿಂದ ಅವಳು ದೂರವಾಗಿದ್ದರೂ, ಅವಳ ನೆರಳು ಅವನನ್ನು ಹಿಂಬಾಲಿಸುತ್ತಿತ್ತು. ಪರಿಚಯದವರು, ಕೊಲಿಗ್ಸ್ ಒಂದಲ್ಲ ಒಂದು ಕಾರಣ ಮುಂದು ಮಾಡಿ ಚಾರುಲತ ಸುದ್ದಿ ಎತ್ತುತ್ತಿದ್ದರು.

"ಅಂಕಲ್, ಯಾವಾಗ್ಬರ್ತಾರೆ ಆಂಟಿ" ಬೀದಿಯಲ್ಲಿ ಆಟವಾಡುವ ಹುಡುಗರೆಲ್ಲ ಪ್ರಶ್ನಿಸುತ್ತಿದ್ದರು "ಬರೋಕೆ ಕೆಲವು ದಿನಗಳು ಆಗುತ್ತೆ" ಹೇಳುತ್ತಿದ್ದ.

ಒಮ್ಮೆ ಪ್ರಿನ್ಸಿಪಾಲರು ಅವನನ್ನು ಕರೆಸಿಕೊಂಡು "ಒಂದು ನ್ಯೂಸ್ ಕೇಳ್ದೆ. ಅದು ಸುಳ್ಳಾಗ್ಲೀಂತ್ಲೇ ನನ್ನ ಹಾರೈಕೆ. ನಿಮ್ಮ ಮತ್ತು ನಿಮ್ಮ ಮಡದಿಯ ನಡ್ವೇ ಏನೋ ಡಿಫರೆನ್ಸ್ ಸ್ ಬಂದಿದೆಯನ್ನೋ ಸುದ್ಧಿ. ಸಣ್ಣ ಪುಟ್ಟ ಡಿಫರೆನ್ಸ್ ಎಲ್ಲಾ ಕಡೆ ಇದ್ದಿದ್ದೇ. ಅದು ದೊಡ್ಡದಾಗೋಕೆ ಅವಕಾಶ ಕೊಡ್ಬಾರ್ದು. ನೀವೇ ಸೋಲಿ. ಇಲ್ಲಿ ಸೋಲು ಗೆಲುವು ಅನ್ನೋ ಪಟ್ಟು ಇರ್ಬಾರ್ದು" ಬುದ್ಧಿ ಹೇಳಿದಾಗ ಅವನಿಗೆ ತಲೆ ತಗ್ಗಿಸುವಂತಾಯಿತು.

ಪ್ರತಿಯೊಬ್ಬರಿಗೂ ಕಾರಣ ವಿವರಿಸಲು ಸಾಧ್ಯವೇ ? ಡಿ.ಟಿ.ಪಿ. ಮಾಡಿಸಿ ಆಫ್‌ಸೆಟ್‌ನಲ್ಲಿ ಮುದ್ರಿಸಿ ಎಲ್ಲರಿಗೂ ಒಂದೊಂದು ಪ್ರತಿ ಹಂಚಿಬಿಟ್ಟರೇ ಹೇಗೆ? ಸಮಾಜದ ಸಿಂಪತಿ ಯಾವಾಗಲೂ ಹೆಣ್ಣಿನ ಕಡೆ. ಈಗ ಸಿಂಪತಿ ಯಾರ ಕಡೆ ಹರಿಯಬಹುದು.? ಪೂಜಾ ಹೆಚ್ಚು ಅರ್ಹಳೋ, ಚಾರುಲತ ಹೆಚ್ಚು ಅರ್ಹಳೋ ಪಬ್ಲಿಕ್ ಸಿಂಪತಿಗೆ ? ಛೆ, ಈ ಸಿಂಪತಿಯಿಂದ ಏನಾಗಬೇಕು? ಮನೆಯ ಮಾನ, ಮರ್ಯಾದೆ ಬಟ್ಟ ಬಯಲು. ಇಬ್ಬರೂ ಸರ್ವನಾಶವಾಗುತ್ತರೆ ಅಷ್ಟೆ. ಸಿಡಿಮಿಡಿಗುಟ್ಟಿದ.

ಬಹುಶಃ ಕಾಲವೇ ಇದನ್ನೆಲ್ಲ ಮರೆಸುತ್ತೆ. ವಿಷಯ ಹಳೆಯದಾದರೆ, ಎಲ್ಲಾ ಸರಿ ಹೋಗುತ್ತೆ ಅನ್ನೋ ತೀರ್ಮಾನಕ್ಕೆ ಬಂದ.

ರಾತ್ರಿಯ ಊಟದ ಸಮಯದಲ್ಲಿ ವಾಸುದೇವಯ್ಯ ಮತ್ತೆ ಫೋನ್ ಮಾಡಿದ ಸಮಾಚಾರ ಯುಗಂಧರ್ ಮಗನಿಗೆ ತಿಳಿಸಿದರು.

"ವಾಸುದೇವಯ್ಯ ಫೋನ್ ಮಾಡಿದ್ರು. ಅವ್ರ ಮಗಳದೇನು ತಪ್ಪಿಲ್ವಂತೆ. ಬಂದು ಕರ್ಕೊಂಡ್ಹೋಗೀಂತ ಕೇಳಿದ್ರು."

ಮೂರ್ತಿ ಮುಖ ಬಿಗಿದುಕೊಂಡು ತಂದೆಯ ಕಡೆ ನೋಡಿದ. "ಈಗ ಊಟ ಮಾಡ್ತಾ ಇದ್ದೀವಿ. ಬೇಡದ ವಿಷ್ಯಗಳು ಯಾಕೆ ? ಅವ್ರ ಮಗ್ಳ ಬಗ್ಗೆ ಅವ್ರುಗಳು ಯೋಚ್ಸಿಕೊಳ್ಳಿ. ಇನ್ನೊಮ್ಮೆ ಫೋನ್ ಮಾಡಿದರೇ ಅಷ್ಟೇ ಹೇಳಿ" ಎಂದವ ಅನ್ನದ ಮೇಲೆ ಮೂರು ಸೌಟು ಹುಳಿ ಸುರಿದುಕೊಂಡ.

ಇಂದು ಕೋಪವಿದ್ದರೂ ತೃಪ್ತಿಯಿಂದ ಊಟ ಮಾಡಿದ.

"ಈ ಗಂಜಿ ತಗೊಂಡ್ಹೋಗಿ ಕೊಡು. ಆಗ್ಲೇ ತಗೊಂಡ್ಹೋಗಿದ್ದೆ ಬೇಡಾಂದ್ಲು. ಆ ಹುಡ್ಗೀ ನೋಡಿದ್ರೆ ಕರುಳು ಕಿತ್ತು ಬರುತ್ತೆ. ನಮ್ಮ ಮನೆಯಲ್ಲಿ ಖಾರ, ಹುಳಿ ಹೆಚ್ಚಿಗೆ ತಿಂತಾ ಇದ್ದೋಳು ಅವಳೊಬ್ಬೇ" ಮೂರ್ತಿಯ ತಾಯಿ ನೋವಿನಿಂದ ನುಡಿದರು.

"ಎಲ್ಲಾ ಸರಿ ಹೋಗುತ್ತೆ" ಗಂಜಿಯ ಬಟ್ಟಲನ್ನ ರೂಮಿಗೆ ಒಯ್ದವನು ಅವಳ ಮುಂದಿಟ್ಟು "ಪೂಜಾ, ನೀನು ಬೇಗ ಚೇತರಿಸಿಕೊಳ್ಳಬೇಕು. ಮೈಯಲ್ಲಿ ಶಕ್ತಿ ಬರಬೇಕಾದರೆ....ಹೊಟ್ಟೆಗೆ ಸರ್‍ಯಾದ ಆಹಾರ ಬೇಕು. ಸ್ವಲ್ಪ ಕಷ್ಟ ಪಟ್ಟಾದ್ರೂ....ಕುಡೀ" ಹೇಳಿದ. ಕರುಣೆಯಿಂದ ಅವನ ಕಣ್ಣುಗಳು ನಿರುಕಿಸಿದವು.

ಬಾರುದ್ದ ಕೂದಲು ಈಗ ತುಂಡಾಗಿತ್ತು. ಮಿರಿ ಮಿರಿ ಮಿರುಗುತ್ತಿದ್ದ ಕೂದಲು ಈಗ ಜೀವಂತಿಕೆಯೇ ಇದ್ದಂಗೆ ಕಾಣುತ್ತಿರಲಿಲ್ಲ. ಮೇಕಪ್, ಹಣೆಗೆ ಬಟ್ಟು ಅಂಥ ಅಲಂಕಾರವೇನು ಇಲ್ಲದ ಮುಖ 'ಬಿಕೋ' ಎನ್ನುತ್ತಿತ್ತು. ಕುತ್ತಿಗೆಯ ಬಳಿ ಮೂಳೆಗಳು ಎದ್ದು ಕಾಣುತ್ತಿತ್ತು. ಗಿಡದಲ್ಲಿ ನಳನಳಿಸುತ್ತಿದ್ದ ಹೂವನ್ನ ಕಿತ್ತು ಮಧ್ಯಾಹ್ನದ ಉರಿ ಬಿಸಿಲಿಗೆ ಇಟ್ಟಂತಾಗಿತ್ತು.

"ಅಣ್ಣ, ನಂಗೆ ವಾಂತಿ ಬಂದಂಗಾಗುತ್ತೆ. ಏನು ರುಚಿ ಇಲ್ಲ. ಬರೀ ಸಪ್ಪೆ. ವಾಂಗೀಬಾತ್, ಬಿಸಬೇಳೆ ಬಾತ್, ಚುರುಮುರಿ, ಚಕ್ಕುಲಿ, ಕೋಡುಬಳೆಯೆಲ್ಲ

ಎಂಥ ರುಚಿ ಇರುತ್ತೆ. ನಂಗೆ ಅದೆಲ್ಲ ಮರೆತಂಗಾಗಿದೆ. ಅದ್ನೆಲ್ಲ ತಿನ್ನೋ ಆಸೆ" ಕಣ್ಣೀರಿಟ್ಟವಳು ಬಿಕ್ಕಿ ಬಿಕ್ಕಿ ಅಳಲು ಷುರು ಮಾಡಿದಾಗ, ಅವಳ ಪಕ್ಕ ಹೋಗಿ ಕೂತು ಎದೆಗೊರಗಿಸಿಕೊಂಡು ಕೂದಲಲ್ಲಿ ಕೈಯಾಡಿ ಸಿದ. ಅವನದು ಸೌಮ್ಯ ಸ್ವಭಾವ. ಈಗ....ಈ ಕ್ಷಣ ಡಾ|| ನವೀನ್ ಎದುರು ಸಿಕ್ಕರೇ ಕೊಚ್ಚಿ ಹಾಕಿ ಜೈಲಿಗೆ ಹೋಗಲು ಸಿದ್ಧವಿದ್ದ. ಅಂಥ ಉದ್ವೇಗವಿತ್ತು ಅವನಲ್ಲಿ ಈಗ.

"ಬೇಗ ಸರ್ಯೋಗ್ತೀಯಾ ! ಅದ್ನೆಲ್ಲ ತಿನ್ನಬಹುದು. ನೀನು ಮಾನಸಿಕವಾಗಿ ಬೆಂಬಲ ನೀಡದ ಪಕ್ಷದಲ್ಲಿ ದೇಹ ಚೇತರ್‍ಸಿಕೊಳ್ಳಲಾರದು" ಧೈರ್ಯ ಹೇಳಿದ.

ತಾನೇ ಸ್ಪೂನ್‌ನಿಂದ ಇಡೀ ಬಟ್ಟಲು ಗಂಜಿ ಕುಡಿಸಿದ.

"ಅನ್ಯಾಯವಾಗಿ ಸಾಯಂಕಾಲದ ಪ್ರೋಗ್ರಾಂ ಕ್ಯಾನ್ಸಲ್ ಆಯ್ತು" ಮುಖ ಮಾಡಿದಾಗ ತಲೆಯ ಮೇಲೊಂದು ಮೊಟಕಿದ "ಅದ್ಕೇ ನೀನೇ ಕಾರಣ. ಒಳ್ಳೆ ನಿದ್ದೆಯಲ್ಲಿದ್ದೆ. ಅಪ್ಪ ಎಬ್ಬಿಸೋದ್ಬೇಡಾಂದ್ರು. ನಾಳೆ ಆ ಪ್ರೋಗ್ರಾಂ ಇಟ್ಕೋಬಹ್ದು. ಈವೊತ್ತಿನ ಪೇಪರ್‌ನಲ್ಲಿ ಒಂದು ವಿಶೇಷ ಸುದ್ದಿ ಬಂದಿದೆ, ಗೊತ್ತಾ" ಎದ್ದು ಹೋಗಿ ಪೇಪರ್ ಹಿಡಿದು ಬಂದ.

ನವಂಬರ್ 4ರ ಕನ್ನಡಪ್ರಭದಲ್ಲಿ 'ಬುದ್ಧಿ ಜೀವಿಗಳು ಯಾರು ? ಅವರ ಕಸಿನ್ಸ್ ಯಾರು ?' ಒಂದು ಹೆಡ್ಡಿಂಗ್ 'ಯಾರು ಹೇಳಿದ್ದು ಅರ್ಥವಾಗು ವುದೋ ಅವರು ಬುದ್ಧಿಜೀವಿಗಳು' ಒಬ್ಬ ಕಾಂಗ್ರೆಸ್ ಮುಖಂಡರ ವಾದ.

"ಪೂಜಾ, ನಿನ್ನ ಪ್ರಕಾರ ಬುದ್ಧಿ ಜೀವಿಗಳು ಅಂದರೆ ಯಾರು ?" ಕೇಳಿದ ಪೇಪರ್ ಅವಳ ಮುಂದಿಟ್ಟು. ಗದ್ದಕ್ಕೆ ಕೈಯೊತ್ತಿಕೊಂಡು ಕೂತ ಪೂಜಾ "ಹೇಗೆ ಒಂದು ತೀರ್ಮಾನಕ್ಕೆ ಬರೋದು? ಇಬ್ಬರು ಬುದ್ಧಿ ಜೀವಿಗಳೆಂದು ಹೇಳಿಕೊಳ್ಳುವವರ್‍ನ ಪ್ರತ್ಯೇಕ...ಪ್ರತ್ಯೇಕವಾಗಿ ಭೇಟಿ ಮಾಡಿ ಒಬ್ಬರ ಬಗ್ಗೆ ಇನ್ನೊಬ್ಬರನ್ನ ಕೇಳಿದ್ರೆ, ಅವರಿಬ್ಬರೂ ಒಪ್ಪೋಲ್ಲ. ಅವ್ರಿಗೆ ತಾವು ಬುದ್ಧಿ ಜೀವಿ ಅನ್ನೋ ಅಹಂ ಇರುತ್ತದೆಯೇ ಹೊರತು ಇಬ್ಬರನ್ನ 'ಬುದ್ಧಿಜೀವಿ' ಎಂದು ಒಪ್ಪಲಾರರು. ನಂಗೂ ಕನ್‌ಫ್ಯೂಷನ್" ಚಿಂತಿತಳಾದಳು.

"ಓಕೇ....ಓಕೇ....ಅದ್ಕೇ ನಮ್ಮ ರಾಜಕೀಯ ವ್ಯಕ್ತಿಗಳು ಏನ್ಹೇಳಿದ್ದಾರೋ ಕೇಳು. ಕಾಂಗ್ರೆಸ್ ಪಕ್ಷದ ಒಬ್ಬ ಮುಖಂಡರು 'ಯಾರು ಹೇಳಿದ್ದು ಅರ್ಥ ವಾಗುವುದಿಲ್ಲವೋ ಅವರೇ ಬುದ್ಧಿ ಜೀವಿಗಳು' ಎಂದಿದಕ್ಕೆ ಅದೇ ಪಕ್ಷದ ಇನ್ನೊಬ್ಬರ ಪ್ರತಿಕ್ರಿಯೆ 'ಸಮಾಜಕ್ಕೆ ಏನು ಮಾಡದವರು ಬುದ್ಧಿ ಜೀವಿಗಳು' ಅದಕ್ಕೆ ಇನ್ನೊಬ್ಬರು

ರೈತ ಸಂಘದವರು ಹೇಳಿದ ಕತೆ ನೋಡು" ಅದರ ಸಾರಾಂಶ ಓದಿದ.

'ಒಬ್ಬ ಸುಶಿಕ್ಷಿತ ವ್ಯಕ್ತಿ ತನ್ನ ಹೆಂಡತಿ ತರಕಾರಿ ಖರೀದಿಸಲು ಕರೆದೊಯ್ದ. ತರಕಾರಿ ಮಾರುವವನು ಆಕೆಯನ್ನೆ ನೋಡುತ್ತಿದ್ದನ್ನ ನೋಡಿ ಸಿಟ್ಟಾದ ಯಾಕೆ ನನ್ನ ಹೆಂಡತಿಯನ್ನು ದುರುಗುಟ್ಟಿಕೊಂಡು ನೋಡುತ್ತೀಯಾ ?' ಎಂದು ಪ್ರಶ್ನಿಸಿದ.

ತಕ್ಷಣ ತರಕಾರಿ ಮಾರುವ ವ್ಯಕ್ತಿ "ನಿಮ್ಮ ಹೆಂಡತಿ ತುಂಬ ಓದಿರಬೇಕಲ್ಲ" ಎಂದು ಕೇಳಿದ.

"ಹೌದು, ನನ್ನ ಹೆಂಡತಿ ಪದವಿಧರೆ. ನಿನಗೆ ಹೇಗೆ ಗೊತ್ತಾಯಿತು ?" ಕೇಳಿದ.

"ಮುಖ ನೋಡಿದ ಕೂಡಲೇ ಗೊತ್ತಾಯಿತು. ಅವರು ಮೊದಲು ಚೀಲದಲ್ಲಿ ಟೊಮೋಟೋ ಹಾಕಿಸಿಕೊಂಡು ನಂತರ ಕೋಸು, ಈರುಳ್ಳಿ ಮುಂತಾದುವನ್ನು ಹಾಕ್ಸಿಕೊಂಡರು."

ಅದಕ್ಕೆ ಇನ್ನೊಬ್ಬ ರಾಜಕೀಯ ವ್ಯಕ್ತಿಯ ವ್ಯಾಖ್ಯಾನ "ಅಪಘಾತ ನಡೆದಾಗ ಪೆಟ್ಟು ತಿಂದವನನ್ನ ಆಸ್ಪತ್ರೆಗೆ ಸೇರಿಸಿ ಪ್ರಚಾರ ಪಡೆಯುವವನು ರಾಜಕಾರಣಿ, ಅಪಘಾತದ ಬಗ್ಗೆ ಮೌನವಾಗಿ ಕವನ ಬರೆಯುವವನು ಬುದ್ಧಿ ಜೀವಿ."

"ಬುದ್ಧಿ ಮಾರಿ ಬದುಕುವವರು ಬುದ್ಧಿ ಜೀವಿ" ಇನ್ನೊಬ್ಬರ ವಿವರಣೆ.

ಪೂಜಾ ಘೊಳ್ಳನೆ ನಕ್ಕಳು. ಆ ನಗೆ ಬೆಳದಿಂಗಳಿನಂತೆ ಮಿಂಚಿತು. ಅಂಥ ನಗೆ ಅವಳ ಮುಖದ ಮೇಲೆ ಕಂಡು ಎಷ್ಟೋ ದಿನಗಳು ಆಗಿತ್ತು.

"ಬುದ್ಧಿ ಜೀವಿಗಳ ಕಸಿನ್ಸ್ ಪತ್ರಕರ್ತರಂತೆ" ಹೀಗೆಂದವರು ಸಭಾಧ್ಯಕ್ಷರು. ಇದು ಸದನದಲ್ಲಿ ಚಕಮುಕಿ ಎಂದ ಮೂರ್ತಿ.

ಮಗಳ ನಗೆ ಕೇಳಿ ಯುಗಂಧರ್ ಹೆಂಡತಿಯೊಂದಿಗೆ ಬಂದರು. ಆಗ ಹುಟ್ಟಿದ ಪುಟ್ಟ ಮಗು ತನ್ನ ಹಲ್ಲಿಲ್ಲದ ಬಾಯಲ್ಲಿ ನಗೆ ತುಂಬಿಕೊಂಡಾಗ ಆನಂದಿಸುವ ತಾಯಿತಂದೆಯ ಸ್ಥಿತಿ ಅವರದಾಗಿತ್ತು.

ಪೇಪರ್ ತೆಗೆದು ತನ್ನ ಕೈಯಲ್ಲಿಟ್ಟ "ಒಂದಿಷ್ಟು ಓದಿ. ಪೂಜಾ ಈ ರೂಮಿನ ಸಹವಾಸ ಸಾಕು. ಒಂದಿಷ್ಟೊತ್ತು ಹೊರಗಡೆ ಕೂರೋಣ ನಡೀ"

ತಂಗಿಯನ್ನು ಎಬ್ಬಿಸಿಕೊಂಡು ಹೊರಗೆ ಹೋದ.

"ಕೆಲವು ದಿನ ಮೂರ್ತಿಯಾದ್ರೂ ಇಲ್ಲಿರಬೇಕು. ಇಲ್ಲ ಪೂಜಾನಾದ್ರೂ ಅವ್ನ ಜೊತೆ ಕಳಿಸ್ಬೇಕು" ಎಂದರು ಆಕೆ. ಮಗಳು ಬೇಗ ಗೆಲುವಾಗುವುದು ಮುಖ್ಯವಾಗಿತ್ತು.

ಯುಗಂಧರ್ ಹ್ಞೂಗುಟ್ಟಿದರು. ಕೆಲವು ದಿನಗಳಾದ ಮೇಲಾದರೂ ಪೂಜಾ ಚೇತರಿಸಿಕೊಳ್ಳಬಹುದು. ಆಮೇಲೆ ವಿವಾಹ ಅವಳದೇ ಒಂದು ಮನೆ....ಅವೆಲ್ಲ ಸರಿ. ಆದರೆ ಮೂರ್ತಿ ಬದುಕೇನು ? ವರ್ಷಕ್ಕೆ ಮುನ್ನವೇ ವಿಯೋಗ ಅನುಭವಿಸಬೇಕಾ ? ಸ್ವಲ್ಪ ತಲೆ ಬಿಸಿಯಾಯಿತು. ಅವರ ಮಸ್ತಿಷ್ಕದಿಂದ ಪೂಜಾ ಸರಿದು ಮೂರ್ತಿ ಕೂತ.

"ಮುಂದೆ ಇವ್ನ ಗತಿಯೇನು ? ಇಷ್ಟಕ್ಕೆ ಮುಗ್ದು ಹೋಗ್ಬೇಕಾ, ಅವ್ನ ದಾಂಪತ್ಯ ಜೀವನ ? ನಿನ್ನ ಸೊಸೆ ಕೆಲ್ಸಕ್ಕೆ ಹೋಗ್ತಾ ಇದ್ದಾಳಂತೆ. ಧೈರ್ಯಸ್ಥೆ, ಇವ್ನು ಡೈವೋರ್ಸ್ ಕೊಟ್ಟರೆ ಮತ್ತೊಂದು ವಿವಾಹವಾಗ್ಬಹುದು. ಅದ್ಕೇ ಅಪ್ಪ, ಅಣ್ಣನ ಕೋಪರೇಷನ್ ಸಿಕ್ಕುತ್ತೆ" ಒಂದು ಚಿತ್ರವನ್ನು ಹೆಂಡತಿಯ ಮುಂದೆ ಬಿಡಿಸಿಟ್ಟರು.

.ಯಾಕೋ, ಸೊಸೆಯ ಬಗ್ಗೆ ಅಷ್ಟೆಲ್ಲ ಯೋಚಿಸಲು ಇಷ್ಟವಾಗಲಿಲ್ಲ.

"ಚಾರು, ನಮ್ಮನ್ನು ಅದೆಷ್ಟು ಹೊಂದಿಕೊಂಡಿದ್ಲು. ಎಷ್ಟು ವರ್ಷದಿಂದ ನಮ್ಮೊಂದಿಗೆ ಇದ್ಲು ಅನ್ನೋ ತರಹ ನಡಕೊಂಡ್ಲು. ಪೂಜಾನೂ ಅವ್ಳು ಎಷ್ಟೊಂದು ಇಷ್ಟವಾಗಿದ್ಲು." ಸೊಸೆಯ ಬಗ್ಗೆ ಸ್ವಲ್ಪ ಮೃದುವಾದರು.

"ಎಲ್ಲಾ ಸರಿನೇ ! ನಾವು ಏನು ಅಲ್ಲ ಅನ್ನೋ ತರಹ ನಡ್ಕೊಂಡ್ಲು. ಎದುರು ಮನೆ ಹುಡ್ಗೀಗಾಗಿ ಪೂಜಾನ ಸಾವಿನಂಚಿಗೆ ತಳ್ಳಿದಳು. ಸಕಲ ಕಲ್ಯಾಣ ಗುಣಗಳು ಅದರಡಿಯಲ್ಲಿ ಸಮಾಧಿಯಾಯ್ತು. ಈಗ್ಲೂ ಪರಿಚಿತರಿಗೆ ಮುಖ ತೋರಿಸ್ದಂಗಾಗಿದೆ" ಕಹಿಯಾಗಿ ನುಡಿದರು.

ಅದು ಯಾವುದು ಸುಳ್ಳಲ್ಲ. ಆಕೆ ತೆಪ್ಪಗಾದರು.

ಮಾರನೆ ಸಂಜೆ ಚೆನ್ನೈನಿಂದ ಫೋನ್ ಬಂತು. ಯುಗಂಧರ್‌ಗೆ "ನಿಮ್ಮ ಮಗ್ಳು ಫೋಟೋ ನಮ್ಮ ಮಗ್ನಿಗೆ ಕಳಿಸಿದ್ವಿ. ತುಂಬ ಮೆಚ್ಚಿಕೊಂಡಿದ್ದಾನೆ. ಮುಂದಿನ ತಿಂಗ್ಳು ಒಮ್ಮೆ ಬರ್ತೀವಿ" ಈ ಸಂತೋಷದ ಸುದ್ದಿಯಿಂದ ಹಿರಿಯರೆಲ್ಲ ತಬ್ಬಿಬ್ಬಾದರು. ಪೂಜಾ ಮಾತ್ರ ಮೌನವಹಿಸಿದಳು.

"ಗಂಡು ತುಂಬ ತುಂಬ ಹ್ಯಾಂಡ್‌ಸಮ್. ಅವ್ರ ಮನೆಗೆ ಹೋಗಿದ್ದಾಗ ಆಲ್ಬಂ ತೋರಿಸಿದರು. ಎಷ್ಟು ಸ್ಮಾರ್ಟಾಗಿದ್ದಾನೆಂದರೆ ನಾನ್ಯಾಕೆ ಹೆಣ್ಣು ಆಗ್ಲಿಲ್ಲಾಂತ ಯೋಚಿಸ್ದೇ" ತಂಗಿಯ ಕೆನ್ನೆ ಸವರಿ ಹೇಳಿದ.

ಅವಳು ಬಾಯಿಗೆ ಕೈ ಅಡ್ಡ ಹಿಡಿದು ಬಿಕ್ಕಿದಳು. ಗುರುತು ಹಿಡಿಯ ಲಾರದಷ್ಟು ಪೇಲವವಾಗಿದ್ದೊಂದು ಪೂಜಾಗೆ ಭಯ. ಕನ್ನಡಿಯ ಮುಂದೆ ನಿಂತಾಗಲೆಲ್ಲ ಹೃದಯ ಒಡೆದು ಹೋಗುತ್ತಿತ್ತು. ದುಂಡಗಿನ ನವಿರಾದ ಕೆನ್ನೆಗಳ ಬಣ್ಣ ಪೂರ್ತಿ ಮಸುಕಾಗಿತ್ತು.

"ಯಾಕೆ ಅಳ್ತಾ ಇದ್ದೀಯಾ ? ಇಂಥ ಲವ್ ಅಫೇರ್ಸ್‌ನ ಸಾಕಷ್ಟು ನೋಡಿದ್ದೀನಿ. ನೀವೇನು ವರ್ಷಾನು ಗಟ್ಟಲೆ ಪ್ರೇಮಿಸ್ಲಿಲ್ಲ. ಈ ಮನೆಗೆ ಅವನ ಪರಿಚಯವಾಗಿ ಹದಿನೈದು ತಿಂಗಳಷ್ಟೆ. ನೀವುಗಳು ಓಡಾಡಿದ್ದು ಅಷ್ಟರಲ್ಲೇ ಇದೆ. ಅವ್ನ ಸ್ನೇಹ ಅಂದ್ರೇ, ನೀನು ಪ್ರೇಮ ಅಂತೀಯಾ ? ಅದೆಲ್ಲ...ಹಾಳಾಗ್ಲಿ! ಮಧು ಮನೆಯವ್ರು ತುಂಬ ಒಳ್ಳೆ ಜನ. ಹೆಣ್ಣು ಮಕ್ಳನ ಹೆತ್ತ ಜನ. ನಿನ್ನ ಚೆನ್ನಾಗಿ ನೋಡ್ಕೋತಾರೆ. ಡೋಂಟ್ ವರೀ. ಹಳೆ ವಿಷ್ಯಗಳನ್ನೆಲ್ಲ ನಿನ್ತಲೆಯಿಂದ ತೆಗ್ದು ಬಿಸಾಕು" ಅನುನಯಿಸಿದ ತಂಗಿಯನ್ನು.

ಅಣ್ಣನ ಕೈಗಳಿಂದ ಮುಖ ಮುಚ್ಚಿಕೊಂಡು ಬಿಕ್ಕಿದಳು. "ನಾನು, ನನ್ಮುಖ ಹೇಗಾಗಿದೆ ನೋಡು. ಅವ್ರು ನನ್ನ ಒಪ್ಕೋಬೇಕಲ್ಲ" ಅವಳು ಭಯವನ್ನು ಸ್ಪಷ್ಟಪಡಿಸಿದಾಗ ಸಮಾಧಾನದ ಉಸಿರು ದಬ್ಬಿದ ಮೂರ್ತಿ ಎದೆಯ ಮೇಲೆ ಕೈ ಇಟ್ಟುಕೊಂಡ.

"ಇನ್ನೊಂದು ತಿಂಗಳಲ್ಲಿ ನೀನು ಮೊದ್ಲಿನ ಪೂಜಾನೇ. ನೀನು ಮನಸ್ಥೈರ್ಯ ತುಂಬ್ಕೋಬೇಕು. ಆಗ ನಿನ್ನ ಮುಖದಲ್ಲಿ ಕಳೆ ಮೂಡುತ್ತೆ." ಧೈರ್ಯ ತುಂಬಿದ. ಪೂಜಾಳಿಗೆ ಭಯುವೆನಿಸಿತು. ಫೋಟೋದಲ್ಲಿನ ಚೆಂದದ ಚೆಲುವೆ ಈಗಿಲ್ಲವೆನಿಸಿತು. ಅವಳು ಬೇಗ ಚೇತರಿಸ್ಕೋಬೇಕು. ಹೇಗೆ ? ಡಾಕ್ಟರ್ ಪ್ರಕಾರ ಕಾಲಾವಕಾಶ ಬೇಕಿತ್ತು.

ಯುಗಂಧರ್ ರಾತ್ರಿ ಎಲ್ಲಾ ಮಲಗಿದ ಮೇಲೆ ಮಗನ ಬಳಿ ಈ ಪ್ರಸ್ತಾಪವೆತ್ತಿದರು "ಪೂಜಾ ಭಯದಲ್ಲಿ ಸತ್ಯವಿದೆ. ಅವ್ಳ ಕಣ್ಣುಗಳು ಎಷ್ಟೊಂದು ಕಳಾಹೀನವಾಗಿದೆ. ಸಧ್ಯಕ್ಕೆ ಅವ್ನು ಪೂಜಾನ ವಿವಾಹವಾಗದಿದ್ದರೂ ಪರ್ವಾಗಿಲ್ಲ,

ತಕ್ಷಣ ಮದ್ವೆಯಾಗಿ ಷಾಕ್ ಕೊಡ್ಬಾರ್ದಿತ್ತು. ಅವ್ನ ಭವಿಷ್ಯನ ಹಾಳು ಮಾಡ್ದಾ !" ಕೈ ಕೈ ಹಿಸುಕಿಕೊಂಡರು.

"ಹಾಗೇನಾಗೋಲ್ಲ ! ಪೂಜಾ ಬೇಗ ಚೇತರಿಸ್ಕೋತಾಳೆ. ಅವ್ಳ ಹೊಟ್ಟೆಗೆ ಸರ್ಯಾಗಿ ಫುಡ್ ತಗೊಂಡರೇ ಬೇಗ ಚೇತರಿಸ್ಕೋತಾಳೆ. ಆ ಬಗ್ಗೆ ನಾವು ಯೋಚ್ಸಬೇಕು. ಡಾ॥ ನವೀನ್‌ನ ಮರೆತಿದ್ದಾಳೆ. ಸಧ್ಯಕ್ಕೆ ಅಷ್ಟು ಸಾಕು. ಅಂತು ಬೇರೆಯವ್ರನ್ನ ಕೈ ಹಿಡ್ಯೋಕೆ ಸಿದ್ಧಾಂತ ತಿಳಿದಂಗಾಯ್ತು."

ಮಗನ ಮಾತು ಅವರಿಗೂ ಸರಿಯೆನಿಸಿತು. ತಂದೆ, ಮಗ ಎಷ್ಟೋ ಹೊತ್ತು ಕೂತು ಮಾತಾಡಿದರು ಮನ ಬಿಚ್ಚಿ. ಮುಂದೆ ಚಾರುಲತಳೊಂದಿಗೆ ಸಂಸಾರ ನಡೆಸುವ ಆಸೆ ಇಲ್ಲವೆಂದು ಸ್ಪಷ್ಟಪಡಿಸಿದ ಮೂರ್ತಿ.

ಮರುದಿನ ಇವನು ಬಸ್ ಸ್ಟಾಂಡ್‌ಗೆ ಹೊರಟಾಗ ಸ್ಕೂಟರ್‌ನಲ್ಲಿ ಎದುರಾದ ಡಾ॥ ನವೀನ್ ನಿಲ್ಲಿಸಿದ.

"ನಿನ್ನನ್ನೇ ನೋಡೋಣಾಂತ ಬಂದೆ" ಎಂದ.

"ಅಗತ್ಯವಿಲ್ಲ. ಇಬ್ಬರ ಸಮಯನ ಅನಗತ್ಯವಾಗಿ ವೇಸ್ಟ್ ಮಾಡಿಕೊಳ್ಳೋದ್ಬೇಡ. ಬರ್ತೀನಿ...." ತನ್ನ ಪಾಡಿಗೆ ತಾನು ನಡೆದ. ಅವನಲ್ಲಿ ಯಾವುದೇ ಬದಲಾವಣೆ ಇಲ್ಲ.

ಸಧ್ಯಕ್ಕೆ ಚಾರುಲತನ ಅವನು ಕರೆದೊಯ್ಯಲಾರ. ಮುಂದೇನು ? ಕೋರ್ಟು ಮೆಟ್ಟಲು ಹತ್ತಬೇಕು. ಅದಕ್ಕೆ ಚಾರುಲತ ಸಮ್ಮತಿ ಇಲ್ಲ. ಒಂದೊಂದು ತೀರದಲ್ಲಿ ಒಬ್ಬೊಬ್ಬರು.

ಅರ್ಧ ದಿನ ನರ್ಸಿಂಗ್ ಹೋಂಗೆ ರಜ ಹಾಕಿದ್ದರಿಂದ ನೇರವಾಗಿ ಮನೆಗೆ ಬಂದ. ಇದ್ದಿದ್ದು ವಾಸುದೇವಯ್ಯನವರೊಬ್ಬರೇ.

"ನೀರದ ಎಲ್ಲಿ ?" ಎಂದ.

"ಎದುರು ಮನೆಗೆ ಹೋಗಿದ್ದಾಳೆ" ಸಹಜವಾಗಿ ಹೇಳಿದರು.

ಅವನ ಮೈ ಬೆಂಕಿಯಾಯಿತು. ಅವಳು ಯಾವ ದುರುದ್ದೇಶದಿಂದ ಹೋಗದಿದ್ದರೂ ಅಸಹನೀಯವೆನಿಸಿತು.

"ಮೂರ್ಹೊತ್ತು ಅಲ್ಲೇನು ಕೆಲ್ಸ ? ಅಪ್ಪ ಇನ್ನಾದ್ರೂ ನೀವು ಮನೆ ಕೆಲ್ಸ ಮಾಡೋದು ನಿಲ್ಲಿಸ್ತೀರಾ ! ಇಲ್ಲಿ ಕೈ ತುಂಬ ಕೆಲ್ಸವಿದ್ದರೇ ಅಲ್ಲಿಗ್ಯಾಕೆ ಹೋಗ್ತಾಳೆ? ಇರೋವರ್ಗೂ ಚಾರು ಮಾಡ್ತಾಳೆ. ಮಿಕ್ಕಿದ್ದು ನೀವು ಮಾಡ್ತೀರಾ. ಯಾಕೋ ಯಾವ್ದೂ ಸರಿ ಹೋಗ್ತಿಲ್ಲ" ಸಿಡುಕುತ್ತ ರೂಮಿಗೆ ಹೋದ.

ಅಷ್ಟರಲ್ಲಿ ಬಂದ ನೀರದ ಅತ್ತಿಗೆ "ಸಕ್ಕರೆ ತಗೊಂಡ್ಹೋಗ್ತೀನಿ" ಎನ್ನುತ್ತ ಅಡಿಗೆಯ ಮನೆಗೆ ಹೋದವರೇ ಡಬ್ಬದಲ್ಲಿದ್ದ ಸಕ್ಕರೆಯನ್ನು ದೊಡ್ಡ ಬಾಟಲಿಗೆ ಬಗ್ಗಿಸಿಕೊಂಡು ಹೋದರು.

ಇಬ್ಬರು ಮಗಂದಿರ ದುಡಿಮೆಯ ಜೊತೆಗೆ ಗಂಡನ ಪೆನ್‌ಷನ್ ಕೂಡ ನೀರದ ಅಮ್ಮನ ಕೈ ಸೇರುತ್ತಿತ್ತು. ಶ್ರೀಮಂತಿಕೆ ಇಲ್ಲದಿದ್ದರೂ ಪರದಾಟವಂತು ಇರಲಿಲ್ಲ. ಕೆಟ್ಟ ಜನರು ಅಲ್ಲದಿದ್ದರೂ ವಿವಾಹವಾದ ಮೇಲೆ ಸದಾ ಬಂದು ಕೂಡುವ ನಾದಿನಿಯ ಮೇಲೆ ಸಿಟ್ಟು. ಅದಕ್ಕೆ ಈ ರೀತಿ ಸೇಡು ತೀರಿಸಿಕೊಳ್ಳುತ್ತಿದ್ದರು.

ಟವಲು ಹೆಗಲ ಮೇಲೆ ಹಾಕಿಕೊಂಡು ಬಂದ ನವೀನ್ "ಅಪ್ಪ, ನೀವಾದ್ರೂ ನಂಗೆ ಬುದ್ಧಿ ಹೇಳ್ಬೇಕಿತ್ತು. ನಂಗೆ ಈಗಾಗ್ಲೇ ಜೀವನ ರೋಸಿ ಹೋಗಿದೆ. ಯಾಕೆ ಮದ್ವೆ...ಮದ್ವೇಂತ ಸಾಯ್ತಾರೋ ? ಏನಿದೆ ಇದ್ರಲ್ಲಿ ಮಣ್ಣಾಂಗಟ್ಟಿ !" ಜೋರು ದನಿಯಿಂದಲೇ ಗೊಣಗಿದ್ದು ಬಂದ ನೀರದ ಕಿವಿಗೆ ಬಿತ್ತು. ಅವಳ ಮೈ ಪೂರ್ತಿ ತಣ್ಣಗಾಯಿತು.

ಅವಳು ಸದಾ ಗಂಡ ಬರುವ ವೇಳೆಗೆ ಮನೆಯಲ್ಲಿರಬೇಕೆಂದು ಅಂದು ಕೊಳ್ಳುತ್ತಿದ್ದರೂ ಆಗುತ್ತಿರಲಿಲ್ಲ. ಅದಕ್ಕೆ ಅವಳ ಮೈ ಮರೆವು ಕಾರಣವಿರ ಬೇಕು. ಇಲ್ಲ, ತಾಳಿ ಬಿಗಿದಾಗಿತ್ತು ದಾಂಪತ್ಯ ಸುಖ ಉಂಡಾಗಿತ್ತು. ಮತ್ತೇನು ಎನ್ನುವ ಉತ್ಪ್ರೇಕ್ಷೆಯೇನೋ !

"ಅಲ್ಲೇ ಇದ್ಬಿಡು ಇಲ್ಲಿಗ್ಯಾಕೆ ಬರ್ತೀಯಾ ? ಇದನ್ನೇನು ಗೆಸ್ಟ್‌ಹೌಸ್ ಅಂತ ತಿಳ್ಕೊಂಡಿದ್ದೀಯಾ" ರೇಗಿದ ದುರ ದುರ ನೋಡುತ್ತ.

"ಅಮ್ಮ...." ಎಂದಳು.

"ಹೌದು, ನಿಮ್ಮಮ್ಮನಿಗೆ ಕಾಯಿಲೆ. ಇನ್ನಷ್ಟು ಮಾತಾಡಿ ಅವ್ರ ನೆಮ್ದಿ

ಕೆಡಿಸ್ತಾ ಇರೋಳು ನೀನೇ. ಅಲ್ಲೇನು ಕೆಲ್ಸ ? ಅಲ್ಲಿನ ಭ್ರಮೆಯಲ್ಲೇ ಇರಬೇಕಾದರೆ ನಿಂಗೆ ವಿವಾಹ ಯಾಕೆ ಬೇಕಿತ್ತು ?" ಯದ್ವಾ ತದ್ವಾ ಕೂಗಾಡಿದ. ತಂದೆಯ ಎದುರು ದನಿ ಇಷ್ಟು ಎತ್ತರಕ್ಕೆ ಏರಿಸಿದ್ದು ಇಂದೇ. ಅವನ ಸಹನೆ ಸತ್ತು ಹೋಗಿತ್ತು.

ಬಂದ ವಾಸುದೇವಯ್ಯ ಸೊಸೆಗೆ ಒಳಗೆ ಹೋಗುವಂತೆ ಸನ್ನೆ ಮಾಡಿ ಮಗನತ್ತ ತಿರುಗಿ "ಏನೋ....ಇದು ? ಇಷ್ಟರ ಮಟ್ಟಿಗೆ ಕೂಗಾಡುವಷ್ಟು ಹಳೆದಾಗಿ ಬಿಟ್ಟಿದ್ಯಾ, ನಿಮ್ಮ ದಾಂಪತ್ಯ ? ಎದುರು ಬದರು ಮನೆ ಒಂದು ಕಾರಣವಾದರೇ, ಅವಳಮ್ಮನಿಗೆ ಕಾಯಿಲೆ. ಇದು ಮತ್ತೊಂದು ಕಾರಣ. ಸರ್‍ಯಾದ ಸಮಯ ನೋಡಿ ಮೆಲ್ಲಗೆ ಹೇಳು. ತಾನೇ ತಿದ್ದಿಕೋತಾಳೆ" ಹೇಳಿದರು ನಿಧಾನವಾಗಿ. ಈಗ ಮಗಳು ಒಂಟಿ ಪಕ್ಷಿ. ಒಂದೇ ರೆಕ್ಕೆಯಿಂದ ಹಾರಾಡುವ ಹಕ್ಕಿ - ಈ ಸ್ಥಿತಿಯಲ್ಲಿ ಇವರಿಬ್ಬರ ನಡುವಿನ ಅನ್ಯೋನ್ಯತೆ ಹಾಳಾಗುವುದು ಬೇಕಿರಲಿಲ್ಲ.

ಇನ್ನಷ್ಟು ಮುಖ ದಪ್ಪಗೆ ಮಾಡಿಕೊಂಡು ಎದ್ದು ಹೋದ ನವೀನ್. ನರ್ಸಿಂಗ್ ಹೋಂನಲ್ಲಿ ಏನೇನು ಸರಿಯಾಗಿರಲಿಲ್ಲ. ಅದು ಒಂದು ಜಾತಿಯ ವರ್ಗದ ನರ್ಸಿಂಗ್‌ಹೋಂ ಆಗಿತ್ತು. ಒಬ್ಬ ಮಠದ ಸ್ವಾಮಿಗಳು ಅದರ ದಾಯತ್ವ ಹೊಂದಿದ್ದರಿಂದ. ಆ ಮನುಷ್ಯನ ಮಾತೇ ಪ್ರಧಾನ. ಅವರ ಹೇಳಿಕೆಯಂತೇ ನಡೆಯಬೇಕು ನರ್ಸಿಂಗ್ ಹೋಂ. ಕೆಲವೊಮ್ಮೆ ಪೇಷಂಟ್‌ಗಳ ಬಿಲ್‌ಗಳು ಕೂಡ ಅವರ ಅಣತಿಯಂತೆ ಸಿದ್ಧವಾಗುವುದು ಕೂಡ ಒಂದು ಅದ್ಭುತ.

ಇವನ ಕೊಲೀಗ್ಸ್ ಮಠದ ಭಕ್ತರಾದುದರಿಂದ ಅವರ ಸಂಭಳವು ಕೂಡ ಹೆಚ್ಚು. ಅವರಿಗೆ ಸಿಗುವ ಕೆಲವು ರಿಯಾಯಿತಿಗಳು ಇವನಿಗೆ ಸಿಕ್ಕಿರಲಿಲ್ಲ. ಎಂ. ಎಸ್. ಮಾಡುವುದು ಅವನ ಗುರಿಯಾದರೂ ಸೀಟು ಸಿಕ್ಕಿರಲಿಲ್ಲ. ಧನ ಬಲ-ಅಂಥದ್ದು ಇಲ್ಲದಿದ್ದರಿಂದ ಅವೆಲ್ಲ ಗಗನ ಕುಸುಮ. ಅವನಿಗೂ ಕೂಡ ಭವಿಷ್ಯದ ಬಗ್ಗೆ ಭಯ ಉಂಟಾಗಿತ್ತು.

ಚಾರುಲತ ಬಂದ ಕೂಡಲೇ ಮನೆಯ ಗಾಂಭೀರ್ಯ ಗಮನಿಸಿ ಒಂದಿಷ್ಟು ಅಳುಕಿದ್ದು ಸಹಜವೇ. ನೀರದ, ನವೀನ್‌ನ ಮಧ್ಯೆ ಸರಿ ಇಲ್ಲವೆನಿಸಿತ್ತು.

ತಂದೆಯ ರೂಮಿನಲ್ಲಿ ಇಣಕಿದಳು ನಿಶ್ಯಬ್ಧವಾಗಿತ್ತು.

ಅವರು ಹಣೆಯನ್ನು ಅಮುಕಿಕೊಳ್ಳುತ್ತಿದ್ದರು. ನವೀನ ಅವನ ರೂಮಿನಲ್ಲಿ ಮುಖ ಗಂಟಿಕ್ಕಿ ಕೂತಿದ್ದರೇ ನೀರದ ಅಡಿಗೆ ಮನೆಯ ನೆಲದ ಮೇಲೆ ಕೂತು ಕಣ್ಣೀರು ಹಾಕುತ್ತಿದ್ದಳು. ಸೆಂಟಿಮೆಂಟ್‌ನ ಒಂದು ಚಲನಚಿತ್ರದ ದೃಶ್ಯದಂತೆ.

ಇವಳು ಬಂದು ಹಾಲ್‌ನಲ್ಲಿ ಕೂತಳು. ಅಲ್ಲಿಗೆ ಕೆಲಸಕ್ಕೆ ಬರುವ ಹೆಚ್ಚು ವಿದ್ಯಾವಂತ ಹೆಣ್ಣುಗಳು ಕೂಡ ಗಂಡ, ಅತ್ತೆ-ಮಾವ ಕಡೆಗೆ ಅಪ್ಪ, ಅಮ್ಮ ಅಣ್ಣ, ತಮ್ಮಂದಿರಿಂದ ಶೋಷಿತಗೊಂಡವರೇ. ಒಬ್ಬೊಬ್ಬರದು ಒಂದೊಂದು ಕತೆ. ಇಲ್ಲ ಅಂಥ ಹೆಣ್ಣುಗಳನ್ನ ಆಯ್ಕೆ ಮಾಡಿ ಕೆಲಸ ಕೊಟ್ಟರಾ ?

ಒಂದೊಂದು ಕಾದಂಬರಿಯಲ್ಲು ಪ್ರಧಾನ ಪಾತ್ರಧಾರಿ ಹೆಣ್ಣೇ ದಟ್ಟವಾಗಿ ಅವಳ ಪಾತ್ರವೆ ಓದುಗರ ಮನಸ್ಸಿನಲ್ಲಿ ನಿಲ್ಲುವುದು. ಎಷ್ಟೋ ಹೊತ್ತು ಚಿಂತಿಸುತ್ತ ಒಳಗೆ ಬಂದರೂ ಒಳಗಿನ ಮೌನ ಕರಗಿರಲಿಲ್ಲ. ಮೊದಲಿಗಿಂತ ಹೆಚ್ಚಾಗಿ ನರ್ಸಿಂಗ್‌ಹೋಂನಲ್ಲಿ ನವೀನ್‌ಗೆ ನೈಟ್ ಡ್ಯೂಟಿ ಇರುತ್ತಿತ್ತು. ಮುಖ ಮೇಲೆತ್ತಿ ಗಹಗಹಿಸುವ ಅವನ ನಗೆಯೇ ಕಡಿಮೆಯಾಗಿತ್ತು.

ಮರು ದಿನ ಸಿಟಿ ಬಸ್ಸಿನಿಂದ ಇಳಿದು ಬರುತ್ತಿರುವಾಗ ಕಮಲ ಸಿಕ್ಕಿದ್ದು ಆಕಸ್ಮಿಕವೇ. ಏದುಸಿರು ಬಿಡುತ್ತ ಬಂದು ಮಾತಾಡಿಸಿದಳು. "ನಿನ್ನ ಮೀಟ್ ಮಾಡ್ಬೇಕೂಂತ ಒಂದ್ವಾರದಿಂದ ಪ್ಲಾನ್ ಮಾಡ್ತಾ ಇದ್ದೀನಿ. ಆಗ್ಲೇ ಇಲ್ಲ ! ಏನಾದ್ರೂ ಒಂದು ತಾಪತ್ರಯ. ಹೇಗಿದ್ದೀ ?" ಸ್ನೇಹದಿಂದ ಕೇಳಿದಳು.

"ನಾನು ಓಕೇ. ಆದರೆ ನಾನು ಮಾಡೋಂಥ ಸಹಾಯವೇನು ? ಮನೆಗೆ ಬರ್ತೀಯಾ ?" ಅತ್ತಿತ್ತ ನೋಡಿದ ಚಾರುಲತ "ರೆಸ್ಟೋರೆಂಟ್ ನಲ್ಲಿ ಕೂತು ಮಾತಾಡೋಣ. ನೀನು ಮಹಾನ್ ಸುಸ್ತಾದಂಗೆ ಕಾಣ್ತೀಯಾ" ಸೂಚಿಸಿದ್ದು ಸ್ವಲ್ಪ ನಿಧಾನವಾಗಿ ಮನೆಗೆ ಹೋಗುವ ಸಲುವಾಗಿಯೇ.

ನೀರದ, ಅಣ್ಣನಿಗೆ ಸಾಕಷ್ಟು ಏಕಾಂತ ಸಿಕ್ಕಿ ಪರಸ್ಪರ ಚರ್ಚಿಸಿ ಅವರಲ್ಲಿನ ಡಿಫರೆನ್ಸ್ ಹೋಗಲಾಡಿಸಿಕೊಳ್ಳಲಿ ಎನ್ನುವುದು ಅವಳ ಉದ್ದೇಶ.

ಅದೊಂದು ಗಾರ್ಡನ್ ರೆಸ್ಟೋರೆಂಟ್. ಇಬ್ಬರು ಹೋಗಿ ಮೂಲೆಯಲ್ಲಿನ ಖಾಲಿಯಾದ ಟೇಬಲ್ಲು ಹಿಡಿದರು. ಐದು ನಿಮಿಷದ ನಂತರ ಬೇರರ್ ಬಂದ.

"ಮೆನು ಬೇಡ, ಏನಿದೇಂತ ಹೇಳಿದ್ರೆ ಸಾಕು" ಎಂದಳು ಕರ್ಚೀಫ್‌ನಿಂದ ಕೈಯೊರೆಸುತ್ತ. ಅವನು ಸಿಕ್ಕಾಪಟ್ಟೆ ಹೇಳಿದಾಗ "ಅದೇನು ಬೇಕೋ, ಹೇಳು ಈಗ ಬರ್ತೀನಿ" ಲೇಡಿಸ್ ಟಾಯ್‌ಲೆಟ್‌ನತ್ತ ನಡೆದಳು. ಈಗ ಅವಳ ಸಂಬಳ ಬ್ಯಾಗ್‌ನಲ್ಲಿತ್ತು. ಒಂದು ರೀತಿಯ ಖುಷಿ. ಅಪ್ಪನಿಂದ, ಅಣ್ಣನಿಂದ ಗಂಡನಿಂದ ಹಣ ಪಡೆದು ಗೊತ್ತಿತ್ತೇ ವಿನಃ ಅವಳು ದುಡಿದು ಗಳಿಸಿರಲೀ

ಹಿಂದೆ. ಈಗ ಸಂಬಳ ಕೈಸೇರಿದಾಗ ಬೇಕೆನಿಸಿದ್ದನ್ನೆಲ್ಲ ತಂದೆ, ಅಣ್ಣ, ನೀರದಾಗಾಗಿ ಸಣ್ಣ ಪುಟ್ಟದ್ದನ್ನು ಖರೀದಿಸಿದಾಗ ಆಕಾಶದಲ್ಲಿ ಹಾರಾಡಿ ದಂತಾಗಿತ್ತು.

ಕೈ ತೊಳೆದು ಬಂದಾಗ ಕಮಲ ಆರ್ಡರ್ ಮಾಡಿ ಕೂತಿದ್ದಳು. "ನಾನಂತೂ ವೆಜಿಟೆಬಲ್ ಕಟ್‌ಲೆಟ್, ಬಾಸುಂದಿಗೆ ಹೇಳ್ದೇ. ನಿಂಗೇನು ಬೇಕಾಗಿತ್ತೋ" ಎಂದಾಗ ಛೇರ್ ಹಿಂದಕ್ಕೆ ಸರಿಸಿ ಕೂತ ಚಾರುಲತ "ನಂಗೇನು ರೆಸ್ಟೋರೆಂಟ್‌ಗೆ ಬಂದು ತಿಂಡಿ ತಿನ್ನೋ ಉದ್ದೇಶವೇನು ಇರ್ಲಿಲ್ಲ. ನಿನ್ನ ಕಂಪನಿಗೋಸ್ಕರ ತಿನ್ನೋದು. ನನ್ನ ಅತ್ತಿಗೆ ನೀರದ ತಂದ್ಕೊಟ್ಟ ಪ್ಲೇಟ್‌ನ ತಿಂಡಿ ಖಾಲಿ ಮಾಡದಿದ್ದರೇ ಬೇಜಾರು ಮಾಡ್ಕೋತಾರೆ" ಅಂದಳಷ್ಟೆ.

ಎರಡು ನಿಮಿಷ ಮೌನವಾಗಿ ತಲೆ ತಗ್ಗಿಸಿ ಕೂತ ಕಮಲ "ನಂಗೊಂದು ಕೆಲಸ ಕೊಡಿಸ್ತೀಯಾ ? ಮನೆಯಲ್ಲಿ ಬೋರಿಡಿದು ಹೋಗಿದೆ. ಹಾಳು ಸಂಪ್ರದಾಯಗಳು ಸಾಯ್ಲಿ. ನಿನ್ನ ಜೀವ್ನ ನೋಡಿದ್ಮೇಲೆ ನಂಗೆ ವಿವಾಹದ ಬಗ್ಗೆ ಆಸಕ್ತಿನೇ ಹೋಗಿದೆ. ನೀನೂಂದರೇ ಪ್ರಾಣ ಬಿಡ್ತಾ ಇದ್ದ ಮೂರ್ತಿ, ಈಗ ಯಾವ ತರಹ ನಡ್ಕೋತಾರೆ ನೋಡು. ಸ್ವಲ್ಪ ಕೂಡ ಅನುಸರಣೆ ಬೇಡ್ವಾ?" ಬೇಸರ ವ್ಯಕ್ತಪಡಿಸಿದಳು.

ಚಾರುಲತ ತುಟಿಗಳು ಕಚ್ಚಿ ಕೂತವು. ಅವಳೆದೆಯಲ್ಲಿ ದೊಡ್ಡ ಅಗ್ನಿ ಕುಂಡವಿದ್ದರೂ ಹೊರ ಮುಖಕ್ಕೆ ಶಾಂತವಾಗಿದ್ದು ಹೆಚ್ಚು ಪ್ರಯಾಸದಿಂದಲೇ.

"ಯಾರದೋ ಒಬ್ಬರ ಜೀವನ ನೋಡಿ ಇಡೀ ವ್ಯವಸ್ಥೆಯ ಬಗ್ಗೆಯೇ ಒಂದು ನಿರ್ಧಾರಕ್ಕೆ ಬಂದು ಬಿಡೋದು ತಪ್ಪು. ನೀನು ಕೆಲ್ಸದ ಬಗ್ಗೆ ಆಸಕ್ತಿ ವಹಿಸೋದೇನು ತಪ್ಪಲ್ಲ. ಒಮ್ಮೆ ನನ್ನೊತೆ ಬಾ. ಅಪ್ಲಿಕೇಷನ್ ಅಂಥದ್ದೇನ್ಬೇಡ. ನಮ್ಮ ಎಂ. ಡಿ. ದು ನೇರ ಇಂಟರ್‌ವ್ಯೂ. ಸ್ವಲ್ಪ ಹೆಚ್ಚು ಶಿಸ್ತಿನ ಮಹಿಳೆ. ಅಂತು ಒಂದು ಪ್ರಯತ್ನ ಮಾಡ್ಬಹುದ್ದು" ಸಲಹೆ ಕೊಟ್ಟಳು.

ಕಮಲ ಹೂಗುಟ್ಟಿದ್ದು ಮೌನವಾಗಿಯೇ.

ವೆಯಿಟರ್ ತಂದಿಟ್ಟ ವೆಜಿಟೇಬಲ್ ಕಟ್‌ಲೆಟ್ ಮತ್ತು ಬಾಸುಂದಿ ತಿಂದನಂತರ ಇಬ್ಬರು ತರಿಸಿಕೊಂಡು ಕುಡಿದಿದ್ದು ಕಾಫಿಯಲ್ಲ.

"ನನ್ನ ಹುಡ್ಗಿ ಐಸ್‌ಕ್ರೀಮ್ ಹುಡ್ಗಿಯಲ್ಲ" ಮೂರ್ತಿ ಕಣ್ಣಲ್ಲಿ ಕಣ್ಣಿಟ್ಟು ಹೇಳುತ್ತಿದ್ದ ಮಾತು ನೆನಪಾಯಿತು. ಅವಳ ಹೃದಯ ದ್ರವಿಸಿತು. ಹತ್ತಿಕ್ಕಲಾರದ ನೋವು,

ಸಂಕಟ. ತಟ್ಟನೆ ಎದ್ದು ಹೋಗಿ ಕೈ ತೊಳೆಯುವ ನೆಪದಲ್ಲಿ ಕಣ್ಣೀರು ತೊಡೆದುಕೊಂಡು ಬಂದಳು.

ಬಂದ ವೆಯಿಟರ್‌ಗೆ "ಎರಡು ಐಸ್‌ಕ್ರೀಮ್" ಎಂದಿದ್ದು ಕಮಲಾನೇ. ಅವಳಿಗೆ ಇನ್ನಷ್ಟು ಮಾತಾಡುವುದಿತ್ತು. "ಮುಂದೇನು ಮಾಡ್ಬೇಕೂಂತ ಇದ್ದೀಯಾ ?" ಕೇಳಿದಳು ಗಂಭೀರವಾಗಿ.

"ಐಸ್‌ಕ್ರೀಮ್ ತಿಂದು ಮುಗ್ಸಿ ಮನೆಗೆ ಹೋಗೋ ಪ್ರೋಗ್ರಾಂ ಅಷ್ಟೆ" ಅಂದಳು ಮುಗುಳ್ನಗೆ ಚೆಲ್ಲುತ್ತ. "ಅದಲ್ಲ, ಪೂಜಾನ ಕರ್ಕಂಡ್ ಆಂಟೀ, ಅಂಕಲ್ ಬಂದಿದ್ದಾರೆ. ಬೇರೆ ನೆವದಲ್ಲಾದ್ರೂ ಹೋಗಿ ನೋಡ್ಬೇಕಿತ್ತು. ನಿನ್ನ ನಿಸ್ಸಹಾಯಕತೆಯನ್ನು ಅವ್ರ ಮನಸ್ಸಿಗೆ ಮುಟ್ಟೋ ಹಾಗೆ ಹೇಳ್ಬೋ ಬೇಕಿತ್ತು" ಇಂಥ ಒಂದು ಸಲಹೆಯನ್ನು ಅಂಜುತ್ತ ಕೊಟ್ಟಿದ್ದು ಕಮಲ.

"ಅಂತು ಅಲ್ಲೊಂದು ಫಿಲಂ ಸೀನ್ ಕ್ರಿಯೇಟ್ ಮಾಡ್ಬೇಕು. ಸುಮ್ನೆ ಏನೇನೋ ಮಾತಾಡ್ಬೇಡ. ಬೇಗ ಐಸ್‌ಕ್ರೀಮ್ ಖಾಲಿ ಮಾಡು" ಎಂದಳು ಅನಾಸಕ್ತಿಯಿಂದ.

ಕಮಲ ತಡೆಯಲಾರದೆ ಅವಳು ಮೂರ್ತಿಯನ್ನು ಭೇಟಿ ಮಾಡಿದ್ದು, ಅಲ್ಲಿ ನಡೆದ ಮಾತುಕತೆಯನ್ನು ಚಾಚು ತಪ್ಪದೇ ಹೇಳಿದಳು.

"ನೀನು ಗಂಡನ ಕಡೆ ನಿಲ್ಲಬೇಕಿತ್ತು" ಎಂದಳು ಕಮಲ.

"ಆ ಮಾತುಗಳು ತುಂಬ ಹಳೆಯದಾದವು. ಈಗ ಅವೆಲ್ಲ ಬೇಡ ಹೆತ್ತವರು-ತವರಿನ ಬಗ್ಗೆ ಹೆಣ್ಣು ಮಕ್ಕು ಅಷ್ಟು ನಿರ್ದಯಿಗಳಾಗ್ಬಾರ್ದು. ಈಗ ಹೋಗ್ಲಿ ಪೂಜಾ ಹೇಗಿದ್ದಾಳೆ ?" ವಿಚಾರಿಸಿದಳು.

"ಪರ್ವಾಗಿಲ್ಲ ಅನ್ನಿಸುತ್ತೆ. ಎಂಥಾ ಬಣ್ಣ, ಮುದ್ದಾದ ಮುಖ ಅವಳದು ಈಗ ವಿವಾಹದ ಮಾತುಕತೆಗಳ್ನ ಶುರು ಮಾಡಿದ್ದಾರೆ. ಮೂರ್ತಿ ಕೂಡ ಚೆನ್ನಾಗಿ ಹೋಗ್ಬಂದ್ರಂತೆ. ಇವ್ಳೇ ಚೇತರಿಸಿಕೊಂಡಿಲ್ಲ. ಅದೇ ಒಂದು ಸಮಸ್ಯೆಯಾಗಿದೆ" ಅಲ್ಲಿನ ವಿಷಯಗಳನ್ನ ಚಾಚು ತಪ್ಪದೇ ತಿಳಿಸಿದಳು.

ಪೂಜಾದು ಸ್ವಲ್ಪ ಹಟವೆಂದುಕೊಂಡರೂ ಇವಳನ್ನ ಕಂಡರೇ ಪ್ರಾಣ. ಹೋಗಿ ಹೊಸದರಲ್ಲಿ ಇವಳ ಹಿಂಬಾಲಕಳಾಗಿದ್ದಳು. ಎಷ್ಟೊಂದು ಆತ್ಮೀಯತೆ - ಚಾರುಲ ಹೃದಯ ಭಾರವಾಯಿತು. ಐಸ್‌ಕ್ರೀಮ್ ಕೂಡ ತಿನ್ನಬೇಕೆನಿಸಲಿಲ್ಲ.

"ಕಮಲ ಡೋಂಟ್ ಮೈಂಡ್, ಈ ಐಸ್‌ಕ್ರೀಮ್ ಕೂಡ ತಗೊಂಡ್ಬಿಡು. ನಂಗ್ಯಾಕೋ ತಿನ್ನಬೇಕೂಂತ ಅನ್ನಿಸ್ತ ಇಲ್ಲ" ಐಸ್‌ಕ್ರೀಮ್ ಬಟ್ಟಲನ್ನ ಅವಳ ಮುಂದಕ್ಕೆ ತಳ್ಳಿದಳು. ಕಮಲ ನೊಂದರೂ ತಿಂದು ಮುಗಿಸಿದ್ದು ಅವಳ ಸಹಜ ಸ್ವಭಾವ.

ಬಿಲ್ ತೆತ್ತು ಇಬ್ಬರು ಹೊರಗೆ ಬಂದರು.

"ಹೇಗೂ ಬಂದಿದ್ದೀಯಾ ! ಮನೆವರ್ಗೂ ಯಾಕೆ ಬರ್ಬಾರ್ದು" ಕೇಳಿದಳು ಚಾರುಲತ. ಮೊದಲು ತಲೆಯಾಡಿಸಿದರು "ಆಯ್ತು, ಮನೆಗೆ ಹೋಗಿ ಮಾಡೋದೇನಿದೆ ? ಅಮ್ಮನಿಗೂ ಹೇಳೇ ಬಂದಿದ್ದೀನಿ. ಒಂದ್ಗಂಟೆ ಕಳೆದೇ ಹೋಗ್ತೀನಿ. ನಿನ್ನ ಅತ್ತಿಗೇನಾ ಸರ್‍ಯಾಗಿ ನೋಡೇ ಇಲ್ಲಾಂತ ಅನ್ನಿಸುತ್ತೆ. ನೋಡಿದಂಗಾಗುತ್ತೆ" ಅವಳ ಜೊತೆ ಹೊರಟಳು. ಚಾರುಲತ ಮನಸ್ಸಿಗೆ ಬರಲಿಲ್ಲ. ಹಾಗೆಂದು ಬರಬೇಡವೆಂದು ಹೇಳಲು ಸಾಧ್ಯವಿರಲಿಲ್ಲ. ಆದರೂ ಒಂದು ಮಾತು ಹೇಳಬೇಕೆನಿಸಿತು.

"ಪ್ಲೀಸ್, ಆ ಮನೆಯವ್ರ ಸುದ್ದಿ ಇಲ್ಲೇನು ಎತ್ತಬೇಡ. ಅನಗತ್ಯ ಕಹೀ ಅಷ್ಟೆ."

ಗೆಳತಿಯ ಮಾತಿಗೆ ಕಮಲ ಸರಿಯೆಂದಳು. ಆದರೂ ಅವಳಿಗೆ ಕಿರಿ ಕಿರಿಯೆನಿಸಿತು. ಅಲ್ಲೇ ನಿಂತು "ಬೇಡ ಬಿಡು, ನಾನು ಬಲವಂತವಾಗಿ ನಿಮ್ಮ ಮನೆಗೆ ಬಂದಂಗಾಗುತ್ತೆ. ನಾನು ಯಾವ್ದೇ ದುರುದ್ದೇಶ ಇಟ್ಕೊಂಡ್ ಬಂದಿದ್ದೀನೀಂತ ನೀನು ತಿಳ್ದುಕೊಳ್ಳೋದ್ಬೇಡ."

ಅವಳ ಮಾತಿಗೆ ಚಾರುಲತ ಒಂದು ತರಹ ಮುಖ ಮಾಡಿ "ಪ್ಲೀಸ್ ತಪ್ಪು ತಿಳ್ಕೋಬೇಡ. ನಂಗೆ ಅಂಥ ಭಾವನೆಯೇನಿಲ್ಲ. ನೀನು ಬರೀ ಸ್ನೇಹಿತಳಾಗಿದ್ದರೇ ಒಂದು ತರಹ, ನನ್ನ ಅತ್ತೆಯ ಮನೆಯ ಕಡೆಯ ಹತ್ತಿರದ ಬಂಧು. ಅಪ್ಪ, ನೀರದ, ಅಣ್ಣ ಏನಾದ್ರೂ ಕೇಳ್ಬಹ್ದು, ಅದು ಸಹಜ ತಾನೇ ? ನೀನು ಸತ್ಯ ಹೇಳಿದ್ರೂ ತೀರಾ ನೊಂದಿರೋ ಅವ್ರುಗಳು ಮತ್ತಷ್ಟು ನೋಯ್ತಾರೆ. ಅದೆಲ್ಲ ಬೇಡಾಂತ ಅಷ್ಟೆ, ಸುಮ್ನೆ ಬಾ" ಬಲವಂತದಿಂದ ಕರೆದೊಯ್ದಳು.

ಅವಳಪ್ಪ, ಅಣ್ಣ ಯಾರು ಇರಲಿಲ್ಲ. ನೀರದ ಮಾತ್ರ ಬಾಗಿಲಲ್ಲಿ ನಿಂತಿದ್ದಳು. ಎದುರು ಮನೆಗೆ ಹೋಗಲೇಬಾರದೆಂಬ ಕಟ್ಟಪ್ಪಣೆ ಮಾಡಿದ್ದರಿಂದ ಅವಳು ಪಾಲಿಸಲೇ ಬೇಕಿತ್ತು. ಇದರಿಂದ ಅವಳಮ್ಮನಿಗೆ ಮಾತ್ರ ಕೋಪ. ನೀರದಾಗೆ

"ಇವ್ಳು ಕಮಲಾಂತ ನನ್ನ ಫ್ರೆಂಡ್" ಪರಿಚಯಿಸಿದಳು.

"ಓಹೋ, ತುಂಬಾನೇ ಗೊತ್ತು. ನಿನ್ನ ಮದ್ವೆಯಲ್ಲಿ ಗಂಡಿನ ಕಡೆಯು ವರಾಗಿ ಹೆಚ್ಚು ಓಡಾಡಿದ್ದು ಇವ್ರೆ" ನೀರದ ಕಣ್ಣರಳಿಸಿದಳು.

ವಿಷಯ ಬಂದೇ ಬಿಟ್ಟಿತು. ಕಮಲ ನಿಸ್ಸಹಾಯಕತೆಯ ನೋಟ ಬೀರಿದಳು "ಕೂತ್ಕೋ...ಬರ್ತೀನಿ" ಕೂಡಿಸಿ ರೂಮಿಗೆ ಹೋದಳು.

ನೀರದ ಸ್ವಲ್ಪ ಮಾತಿನ ಪ್ರಿಯಳು. ಕಮಲ ಎದುರು ಕೂತಳು.

"ಮೂರ್ತಿ ಮನೆಗೆ ಹೋಗಿದ್ರಾ ?" ಷುರು ಹಚ್ಚಿದಳು.

"ಇಲ್ಲ, ಈಚೆಗೆ ಹೋಗಿಲ್ಲ. ಎಲ್ಲಾ ಮುಂಬಯಿಗೆ ಹೋಗಿದ್ರು. ಬಂದರೋ... ಇಲ್ವೋ ಗೊತ್ತಿಲ್ಲ" ಅಷ್ಟು ಹೇಳಿದ್ದು ಕಮಲಾಗ ಸಾಕಿತ್ತು. ಇಂಚು ಇಂಚು ಅವಳ ಬಾಯಿಂದ ಬಿಡಿಸಿದಳು. ಚಾರುಲತ ಮುಖ ತೊಳೆದು ಹೊರ ಬರುವಷ್ಟರಲ್ಲಿ.

"ಪೂಜಾ ವಿಷ ಕುಡಿದಿದ್ದರಂತಲ್ಲ !" ಇವಳತ್ತ ತಿರುಗಿದಳು.

ಚಾರುಲತಗೆ ಗಾಬರಿಯೋ....ಗಾಬರಿ. ಇದು ಯಾವುದಪ್ಪ ಹೊಸ ಸುದ್ಧಿ? ಟವಲನ್ನು ಹೆಗಲ ಮೇಲೆ ಹಾಕಿಕೊಂಡು ಬಂದು ಅವರ ನಡುವೆ ಕೂತಿದ್ದು ಲಗುಬಗೆಯಿಂದ.

"ಯಾರು.....ಹೇಳಿದ್ದು ? ವಿಷ ಕುಡಿಯೋಂಥ ಹಣೆಬರಹ ಅವಳಿಗ್ಯಾಕೆ?" ಚಾರುಲತ ಧಾವಿಸಿದ್ದು ಲಗುಬಗೆಯಿಂದ "ಅಲ್ಲ, ವಿಷವೇನು ಕುಡಿದಿರಲಿಲ್ಲ, ನಿದ್ದೆ ಮಾತ್ರೆ ತಗೊಂಡಿದ್ದು" ತಕ್ಷಣ ಕಮಲ ಉಸುರಿದ್ದು ಷಾಕಾಯಿತು ಅವಳಿಗೆ. ಇವಳನ್ನ ಕರೆತಂದು ತಪ್ಪು ಮಾಡಿದೆ ಎಂದು ಕೈ ಕೈ ಇಸುಕಿಕೊಂಡಳು.

"ಅವೆಲ್ಲ ಯಾಕೆ ? ನೀರದ ನೀವ್ಹೋಗಿ ಏನಾದ್ರೂ ತಿನ್ನೋಕೆ ತನ್ನಿ" ಎಬ್ಬಿಸಿ ಬಲವಂತದಿಂದ ಅಡಿಗೆ ಮನೆಗೆ ತಳ್ಳಿ ನಿಟ್ಟುಸಿರು ಬಿಡುತ್ತ ಬಂದು ಕೂತ ಚಾರುಲತ ದಯಾನೀಯವಾಗಿ ನೋಡಿದಳು ಗೆಳತಿಯನ್ನ "ಮಹಾ ರಾಯ್ತಿ, ಅದ್ನೆಲ್ಲ ಯಾಕೆ ಹೇಳ್ದೆ ? ನೀರದ ತುಂಬ ಸೆನ್ಸಿಟೀವ್, ಏನಾದ್ರೂ ಕಲ್ಪಿಸಿಕೊಂಡು ನೊಂದ್ಕೋಬಹುದ್ದು" ಪರಿಸ್ಥಿತಿ ವಿವರಿಸಿದಳು.

"ನಾನಾಗಿ ಏನು ಹೇಳಿಲ್ಲ. ನೀರದನೇ ಕೇಳಿದ್ದು. ನೊಂದ್ಕೊಳ್ಳಿ ಬಿಡು. ತೀರಾ ಸಾಧಾರಣ ರೂಪಿನ ಈ ಹುಡ್ಗಿಗಾಗಿ ನಿಮ್ಮಣ್ಣ ಮಾಡಿರೋದು ದೊಡ್ಡ

ತ್ಯಾಗವೇ. ಪೂಜಾಗೂ, ಇವ್ರಿಗೂ ಎಲ್ಲಿಗೆಲ್ಲಿಗೆ ?" ಕಮಲ ಷುರು ಹಚ್ಚಿದಾಗ ಕೈಯಿಂದ ಬಾಯಿ ಮುಚ್ಚಿ "ಮಹಾರಾಯ್ತಿ, ರೂಪವೊಂದೇ ಬದ್ಕಿಗೆ ಮುಖ್ಯವಲ್ಲ. ಪೂಜಾ, ನೀರದಾಗಿಂತ ರೂಪವತಿ. ಹಾಗಂತ ಹೋಲಿಕೆ ಮಾಡೋಕೆ ಹೋಗ್ಬೇಡ. ನಮ್ಮಣ್ಣನ ಕಣ್ಣಿಗೆ ಇವ್ಳೇ ಚೆಲುವೆ. ದಯವಿಟ್ಟು ಇನ್ನೇನು ಮಾತಾಡ್ಬೇಡ" ಎದ್ದು ಹೋದಳು ರೂಮಿಗೆ.

ಚಟ್ನಿ ಮಾಡಿಟ್ಟು ಕಡಲೇ ಹಿಟ್ಟು ಕಲಿಸಿರಬೇಕು. ಐದು ನಿಮಿಷದಲ್ಲಿ ಹೀರೇಕಾಯಿ ಬೊಂಡ ತಂದಳು ಚಟ್ನಿಯೊಂದಿಗೆ.

"ನೀವಿಬ್ರೂ ತಗೋತಾ ಇರಿ. ಸ್ಟೌವ್ ಮೇಲೆ ಎಣ್ಣೆ ಇದೆ" ನೀರದ ಒಳಗೆ ಹೋದಾಗ "ನೀರದ ತುಂಬ ಒಳ್ಳೆಯವ್ರು" ಅಂದಳು ಮೈಮರೆತು ಚಾರುಲತ.

"ನಿನ್ನಂಥ ನಾದಿನಿ ಸಿಕ್ಕರೇ, ಎಲ್ಲಾ ಅತ್ತಿಗೆಯವ್ರು ಒಳ್ಳೆಯವ್ರೆ. ಅಂತು ತೀರಾ ಸಾಧಾರಣ ರೂಪು. ಏನೇ ಹೇಳ್ಕೋ ನಿಮ್ಮಣ್ಣ ದುಡುಕಿ ಬಿಟ್ಟ. ತನ್ನ ಭವಿಷ್ಯ ಹಾಳು ಮಾಡಿಕೊಳ್ಳುವುದರ ಜೊತೆಗೆ ನಿನ್ನ ಬಲಿ ಪಶುವ ನ್ನಾಗಿ ಮಾಡಿಬಿಟ್ಟ" ಮನಸ್ಸು ತಡೆಯದೆ ಕಮಲ ಮಿಡುಕಿದಾಗ, ಇವಳು ಹೆಚ್ಚು ಹೊತ್ತು ಇರುವುದು ಅಪಾಯವೆನಿಸಿತು.

ತಾನೇ ಹೋಗಿ ಎರಡು ಕಪ್ ಬೂಸ್ಟ್ ಬೆರೆಸಿಕೊಂಡು ಬಂದು ಕೊಟ್ಟಳು. ಆದಷ್ಟು ಬೇಗ ಇವಳನ್ನು ಕಳುಹಿಸುವುದು ಕ್ಷೇಮವೆನಿಸಿತು. ಕೆಲವು ತಮ್ಮ ಕೈ ಮೀರಿದ್ದೆನಿಸಿತು.

ಅಡಿಗೆ ಮನೆಗೆ ಹೇಳಿ ಬರಲು ಹೋದಾಗ, ನೀರದ ಅವಳ ಕೈ ಹಿಡಿದುಕೊಂಡು "ಪ್ಲೀಸ್, ನನ್ನಿಂದ ಎಲ್ಲಾ ಮುಚ್ಚಿಡೋಕೆ ಹೋಗ್ಬೇಡಿ. ಪೂಜಾ ಯಾಕೆ ನಿದ್ದೆ ಮಾತ್ರೆ ನುಂಗಿದ್ದು ?" ಕೇಳಿದಳು. ಅವಳ ಕಣ್ಣಲ್ಲಿ ಕಂಬನಿ ಇತ್ತು.

"ನೀರದ, ದಯವಿಟ್ಟು ಸುಮ್ನೆ ಇರೋದು ಒಳ್ಳೇದು. ನಂಗೆ ಅಲ್ಲಿನ ವಿಷ್ಯ ಹೇಗೆ ಗೊತ್ತಾಗ್ಬೇಕು ? ಸುಮ್ನೇ ಕೆಲ್ಸ ಮುಂದುವರ್ಸಿ" ಕೈ ಬಿಡಿಸಿ ಕೊಂಡು ಹೊರಗೆ ಬಂದಳು.

ಕಮಲನ ಸಿಟಿ ಬಸ್ಸು ಹತ್ತಿಸಲು ತಾನೇ ಹೋದ ಚಾರುಲತ ದಾರಿಯಲ್ಲಿ "ಯಾವಾಗ್ಬೇಕಾದ್ರೂ ನಮ್ಮ ಮನೆಗ್ಬಾ. ಅಲ್ಲಿನ ಸುದ್ದಿ ಮಾತ್ರ ಪ್ರಸ್ತಾಪಿಸೋ ದ್ಬೇಡ" ಎಂದಿದ್ದು ಅತ್ಯಂತ ಸ್ಪಷ್ಟವಾಗಿಯೇ.

"ಎಲ್ಲಾ ವಿಚಿತ್ರವಾಗಿ ಕಾಣಿಸುತ್ತೆ. ನನ್ನಲ್ಲಿ ಯಾವ್ದೇ ದುರುದ್ದೇಶವಿಲ್ಲ.

ನೀನು, ನಿಮ್ಮ ಮನೆಯವ್ರು ತಪ್ಪು ಮಾಡಿದ್ದೀರಾ. ಮೂರ್ತಿ ಪೂರ್ತಿ ನಿನ್ನ ಮರೆಯೋಕೆ ಮುನ್ನ ನೀನ್ಹೋಗಿ ಸೇರ್ಕೋ" ಕಮಲ ಬಡಬಡಿಸಿದಳು.

ಚಾರುಲತ ಮಾತಾಡಲಿಲ್ಲ.

ಅವಳನ್ನ ಬಸ್ಸು ಹತ್ತಿಸಿ ಹಿಂದಿರುಗಿದಾಗ ತೀರಾ ಮಂಕಾಗಿದ್ದಳು. ಪರಿಸ್ಥಿತಿಗೆ ಹೊಂದಿಕೊಳ್ಳುವ ಪ್ರಯಾಸದಲ್ಲಿ ಇದ್ದಾಗಲೇ ಕಮಲ ಬಂದು ಅವಳ ಮನಸ್ಥಿತಿಯನ್ನು ಕದಡಿದ್ದಳು.

ಇವಳು ಬರೋದನ್ನ ಕಾದ ನೀರದ "ನೀವು ಅಣ್ಣ ತಂಗಿ ನನ್ನಿಂದ ತುಂಬ ಮುಚ್ಚಿಟ್ಟು ಬಿಟ್ಟರಿ. ಎಲ್ಲಾದಕ್ಕೂ ನಾನೇ ಕಾರಣವಾದಂತಾಯಿತು" ಮುಖ ಕಿವಿಚಿದಳು.

ನೇರವಾಗಿ ನೀರದಾನ ನೋಡಿದಳು. ಅವರಿಗೆ ಅಷ್ಟಿಷ್ಟೇನು ಎಲ್ಲಾ ಹೆಚ್ಚು ಗೊತ್ತಿತ್ತೆಂದು ಅವಳ ಭಾವನೆ. ದಿಢೀರೆಂದು ಅವರು ಹತ್ತಿರದ ಮಹೂರ್ತ ಇಡಲು ಅದು ಒಂದು ಕಾರಣವೇ.

"ದಯವಿಟ್ಟು ಏನೇನೋ ಊಹಿಸ್ಕೋಬೇಡಿ. ಎಲ್ಲಾ ಮುಗ್ದ ಕತೆ. ಮತ್ತೆ ಮತ್ತೆ ಪ್ರಸ್ತಾಪಿಸಿ ರಾಡಿ ಮಾಡಿಕೊಳ್ಳೋದ್ಬೇಡಿ" ತಿಳಿ ಹೇಳಿದಾಗ ನೀರದ ಅಳಲು ಷುರು ಮಾಡಿದರು "ವಿವಾಹ ಮಾಡಿಕೊಳ್ಳೋದು ಯೋಕ್ಹೇಳಿ? ಅವ್ರಿಗೆ ನನ್ನ ಸಮೀಪವೇ ಬೇಕಾಗಿಲ್ಲ. ಅದಕ್ಕೋಸ್ಕರನೇ ನೈಟ್ ಡ್ಯೂಟಿ ಹಾಕ್ಸಿಕೊಳ್ಳೋದು. ನಂಗೆ ಅವ್ರು ತುಂಬ....ತುಂಬ ಬೇಕಾದಾಗ್ಲೇ ದೂರ ಉಳಿದರೇ ಹೇಗೆ ?"

ಅವಳ ಮಾತುಗಳನ್ನು ಕೇಳಿದ ಚಾರುಲತ ಕುಸಿದಳು. ಇದು ಮುಗ್ದೆಯೋ? ಮನಸ್ಸಿನಾಳದ ನೋವೋ ? ರೂಮಿನ ಒಳಗೆ ಇರಬೇಕಾದ ವಿಷಯ್ನ ಬಹಿರಂಗವಾಗುವುದು ಸರಿ ಕಾಣಲಿಲ್ಲ.

"ನೀರದ, ಇದ್ನೆಲ್ಲ ನೀವು ಯಾರ್ಹತ್ರ ಹೇಳ್ಕೋಬಾರ್ದು. ನಿಮ್ಮ ತಾಯಿ ಹತ್ರ ಇಂಥ ವಿಷ್ಯಗಳ್ನ ವರದಿ ಒಪ್ಪಿಸೋದು ತೀರಾ ಅಪಾಯ ! ಇದೆಲ್ಲ ನಿಮ್ಗೆ ಯಾಕೆ ಅರ್ಥವಾಗೋಲ್ಲ. ನವೀನಣ್ಣ ಕಿವಿಯ ಮೇಲೆ ಬಿದ್ದರೆ ತೀರಾ ಮನಸ್ಸು ಕೆಡಿಸ್ಕೋತಾನೆ. ಮನಸ್ಸು ಸರಿ ಇಲ್ಲದಾಗ ಇವೆಲ್ಲ ಸಹಜ. ಮನಸ್ಸು, ಇಂದ್ರಿಯಗಳು ಹತೋಟಿಯಲ್ಲಿದ್ದರೇ ಚೆನ್ನ" ಬುದ್ಧಿ ಹೇಳಿದಳು.

ನಿಶ್ಯಬ್ದವಾಗಿ ಕೇಳಿಸಿಕೊಂಡ ನೀರದ ಅಡಿಗೆ ಮನೆಗೆ ಹೋದಳು. ಅವಳ

ಈ ಸ್ವಭಾವ ಇಂದಿನವರೆಗೂ ತನ್ನ ಅರಿವಿಗೆ ಬಾರದಿದ್ದಕ್ಕೆ ಪರಿತಪಿಸಿದಳು ಚಾರುಲತ.

ಆ ವಾರದ ಕೊನೆಯ ದಿನದಲ್ಲಿ ಡಾ|| ನವೀನ್ ಮನೆ ಬದಲಾಯಿಸುವ ಮಾತಾಡಿದಾಗ ಅವಾಕ್ಕಾದಳು.

"ಇದು ನಮ್ಮ ಸ್ವಂತ ಮನೆ ಕಣೋ."

"ಹೌದು, ಇರ್ಲಿಹುದ್ದ. ಇದ್ನ ಬಾಡಿಗೆಗೆ ಕೊಡೋಣ. ಇಲ್ಲಿಂದ ನರ್ಸಿಂಗ್ ಹೋಂಗೆ ಓಡಾಡಿ ಸಾಕಾಗಿದೆ. ಅಲ್ಲೇ ಹತ್ತಿರವಿದ್ದರೇ ಎಷ್ಟೋ ಅನ್ಕೂಲ" ಎಂದ ಅಣ್ಣನನ್ನೆ ನೋಡಿದಳು. ಮನೆ ಬದಲಾವಣೆಗೆ ಕಾರಣ ಅಷ್ಟಿಷ್ಟೇನು ಎಲ್ಲಾ ಮನದಟ್ಟಾಯಿತು.

ಈಗಲೂ ಇವರುಗಳು ಯಾರು ಇಲ್ಲದಾಗ ನೀರದ ಹೋಗಿ ಮಂಚವಿಡಿದ ಅಮ್ಮನ ಮುಂದೆ ಕೂಡುತ್ತಿದ್ದಳು. ಒಂದೇ ವಿಷಯ, ಸದಾ ಅದೇ ಮಾತುಗಳು. ಇದು ಅವರ ಅತ್ತಿಗೆಯವರಿಂದ ಅಣ್ಣಂದಿರ ಕಿವಿ ಮುಟ್ಟಿತ್ತು. ಗಟ್ಟಿಯಾಗಿ ಅವಳಿಗೆ ಬುದ್ಧಿ ಹೇಳಲು ಹೋದರೆ ಕಾಯಿಲೆ ಅಮ್ಮನ ಕಣ್ಣೀರು ನೋಡಬೇಕಿತ್ತು. ಅದಕ್ಕಾಗಿಯೇ ಒಂದು ವಿನಂತಿಯನ್ನು ಡಾ|| ನವೀನ್‌ನ ಮುಂದಿಟ್ಟಿದ್ದರು.

"ನಮ್ಮ ನೀರದ ಬದಲಾಗ್ಬೇಕಾದರೇ, ನೀವಾದ್ರೂ ಮನೆ ಬದಲಾಯಿಸ್ಬೇಕು, ಇಲ್ಲ ನಾವಾದ್ರೂ ದೂರ ಹೋಗ್ಬೇಕು. ಇಲ್ಲ ನಿಮ್ಮ ಸಂಸಾರದಲ್ಲಿ ತಾನಾಗಿ ಸಮಸ್ಯೆಗಳು ಹುಟ್ಟಿಕೊಳ್ಳುತ್ತೆ."

"ನೀವೇನು ಮನೆ ಬದಲಾಯಿಸೋದ್ಬೇಡ. ನಾವೇ ದೂರ ಹೋಗ್ತೀವಿ. ಈ ಯೋಚ್ನೆ ನನ್ನ ಮನಸ್ಸಿನಲ್ಲಿ ಕೂಡ ಬಂದಿದೆ" ಇವನೇ ದಾರಿ ತೋರಿಸಿದ್ದ.

ಮರುದಿನವೇ ತಂದೆ ವಾಕ್ ಹೊರಟಾಗ ತಾನು ಜೊತೆಯಲ್ಲಿ ಹೋದ "ಅಪ್ಪ, ನಿಮ್ಮ ಮನಸ್ಸಿಗೆ ಬೇಸರವಾಗೋಂಥ ತೀರ್ಮಾನ ಕೈಗೊಳ್ಳ ಬೇಕಾಗಿದೆ. ಸಧ್ಯಕ್ಕೆ ಮನೆ ಬದಲಾಯಿಸ್ಬೇಕು."

ಆತ ಬೆಚ್ಚಿ ಬಿದ್ದ. ಇದು ಅವರು ಕಟ್ಟಿಸಿದ ಸ್ವಂತ ಮನೆ. ಸಾಕಷ್ಟು ಕಷ್ಟಪಟ್ಟಿದ್ದರು ಆ ದಿನಗಳಲ್ಲಿ ಹೆಂಡತಿಯೊಂದಿಗೆ. ಕಳೆದು ಹೋದ ಒಂದೊಂದು ನೆನಪು ಇಲ್ಲಿ ಹುದುಗಿ ಹೋಗಿತ್ತು.

"ನಂಗೆ ಅರ್ಥವಾಗ್ಲಿಲ್ಲ" ಎಂದರು ಕ್ಷೀಣಧ್ವನಿಯಲ್ಲಿ.

ಸಂಕ್ಷಿಪ್ತವಾಗಿ ವಿವರಿಸಿದ. ಈಗ ಅನುಭವಿಸುತ್ತಿರುವ ಸ್ಥಿತಿ, ಮುಂದೆ ಬರುವ ಸಮಸ್ಯೆಗಳನ್ನ ಕೂಡ ಅವರ ಮುಂದಿಟ್ಟ.

"ಸಂಬಂಧಗಳು ಬೆಳೆದ ನಂತರವೇ ವ್ಯಕ್ತಿಗಳ ನಡವಳಿಕೆಯ ಪರಿಚಯ ವಾಗುವುದು. ಒಂದಲ್ಲ ನಾಲ್ಕು ಸಲ ನೀರದ ತಾಯಿ ನಂಗೆ ಕರೆಸಿ ಬುದ್ಧಿ ಹೇಳಿದ್ದಾರೆ. ಅವ್ರಿಗೆ ಈಗ್ಲೂ ನಾನು ಎದುರು ಮನೆಯ ವಾಸುದೇವಯ್ಯನ ಮಗ ಮಾತ್ರ ಅನ್ನೋಷ್ಟು ಸಲಿಗೆ ತಗೋತಾರೆ. ಇವ್ಳಿಗೆ ಹೇಳಿ ಆಯ್ತು. ಏನು ಪ್ರಯೋಜನವಾಗ್ಲಿಲ್ಲ. ಒಂದಿಷ್ಟು ಅಂದರೆ ಒಂದೆರಡು ವರ್ಷ ಗಳಾದ್ರೂ ಈ ಮನೆ ಲೀಜ್, ಬಾಡ್ಗಗೆ ಕೊಟ್ಟು ನರ್ಸಿಂಗ್ ಹೋಂ ಹತ್ತಿರದಲ್ಲಿ ಮನೆ ಹಿಡಿಯೋಣ. ಇದ್ರಿಂದ ನಿಮ್ಮ ಮನಸ್ಸಿಗೆ ನೋವೂಂತ ಗೊತ್ತು. ಆದರೆ ಬೇರೆ ದಾರಿ ಇಲ್ಲ."

ಸಂಪೂರ್ಣ ಚಿತ್ರ ಅವರ ಮುಂದೆ ತೇಲಿದಾಗ ಅರ್ಥವಾಯಿತು ಅವರಿಗೆ. ಮದುವೆಗೆ ಮುನ್ನ ಇದ್ದ ಮನೆಯಲ್ಲಿನ ಗೆಲುವು ಈಚೆಗೆ ಇರಲಿಲ್ಲ. ಸೊಸೆ ಕೂಡ ಮಂಕಾಗಿ ಮುಖ ಊದಿಸಿಕೊಂಡು ಇರುವುದು ಅವರ ಗಮನಕ್ಕೆ ಬಂದಿತ್ತು. ಸಧ್ಯಕ್ಕೆ ಇದೊಂದು ತಾತ್ಕಾಲಿಕ ಪರಿಹಾರವೆನಿಸಿತು.

"ನೀರದ ತಪ್ಪು ತಿಳ್ಕೋತಾಳೇನೋ !" ಎಂದರು ಅನುಮಾನದ ಸ್ವರದಲ್ಲಿ.

ಡಾ|| ನವೀನ್‌ನ ಮುಖ ಬಿಗಿದುಕೊಂಡಿತು. "ಆ ಮನಸ್ಥಿತಿನೇ ಇವೊತ್ತಿನ ಹಲವು ಸಮಸ್ಯೆಗಳಿಗೆ ಕಾರಣವಾಯ್ತು. ಚಾರುಲತ, ಮೂರ್ತಿ ಎಷ್ಟೊಂದು ಅನ್ಯೋನ್ಯವಾಗಿದ್ದರು. ಅವ್ಳ ಅಣ್ಣನಾಗಿ ಅವಳ ದಾಂಪತ್ಯ ಜೀವನಕ್ಕೆ ಬೆಂಕಿ ಇಟ್ಟು ಉಪಕಾರ ಮಾಡ್ದೇ" ಉದ್ವೇಗದಿಂದ ನುಡಿದ. ಅವನ ಕಣ್ಣಂಚು ಒದ್ದೆಯಾಗಿತ್ತು.

"ಏನೇನೋ ಮಾತಾಡ್ಬೇಡ ! ಅವ್ರು ಅನಗತ್ಯವಾಗಿ ಪಟ್ಟು ಹಿಡಿದ್ರು. ಇಷ್ಟವಿಲ್ದ ವಿವಾಹ ಯಾರ ಜೀವನಕ್ಕೂ ಒಳ್ಳೇದಲ್ಲ. ನಾನು ಕೋಪ ಬಂದಾಗ ಒಂದ್ಮಾತು ಆಡಿರ್ಬಹುದ್ದು. ಅದ್ನ ಮನಸ್ಸಿನಲ್ಲಿ ಇಟ್ಕೋಬೇಡ" ಸಂತೈಯಿಸಿ "ಹಾಗೇ ಮಾಡು. ಮನೇನಾ ಯಾರಾದ್ರೂ ಒಳ್ಳೆಯವ್ರಿಗೆ ಕೊಡು."

ತಂದೆ ಇಷ್ಟು ಸರಳವಾಗಿ ಒಪ್ಪಿಗೆ ಸೂಚಿಸಿದ್ದು ನೋಡಿ ಅವನಿಗೆ ಆಶ್ಚರ್ಯದ ಜೊತೆ ಆನಂದವು ಕೂಡ. ಇದು ಸುಲಭ ಸಾಧ್ಯವಲ್ಲವೆಂದು ತಿಳಿದಿದ್ದ.

"ತುಂಬ ಥ್ಯಾಂಕ್ಸ್ ! ಇದ್ರಿಂದ ನಿಮ್ಮ ಮನಸ್ಸಿಗೆಷ್ಟು ನೋವೂಂತ ನಂಗೆ

ಗೊತ್ತು. ಆದರೆ ಬೇರೆ ದಾರಿ ಇಲ್ಲ. ನರ್ಸಿಂಗ್ ಹೋಂ ಹಿಂದಿನ ರೋಡಿನಲ್ಲಿಯೇ ಒಂದ್ಮನೆ ನೋಡಿದ್ದೀನಿ. ಬಾಡಿಗೆ ಹೆಚ್ಚ ! ಇಲ್ಲಿನ ಬಾಡ್ಗೆ ಅಲ್ಲಿ ಕೊಟ್ಟರಾಗುತ್ತೆ. ಚಾರುಲತನ ಏನು ಮಾಡೋದು ?" ಕೇಳಿದ.

"ಅದ್ನ ಕಾಲ ಹೇಳ್ಬೇಕಷ್ಟೆ. ಯುಗಂಧರ್ ಎದುರಿಗೆ ಸಿಕ್ಕರೂ ಮಾತಾಡಿ ಸೋಲ್ಲ. ನಾನು ಮಾತನಾಡಿಸೋ ಪ್ರಯತ್ನ ಮಾಡಿದ್ರೂ...ಅವ್ರು ಮುಖ ತಿರುವಿ ಕೊಳ್ತಾರೆ. ಬಹುಶಃ ಪೂಜಾ ವಿವಾಹವಾದ್ಮೇಲೆ ಅವ್ರ ಕೋಪ ತಗ್ಗುತ್ತೇನೋ" ಎಂದರು.

ಡಾ॥ ನವೀನ್ ತಲೆ ತಗ್ಗಿಸಿದ. ಕಾಲಕ್ಕೆ ಶರಣಾಗುವುದು ಬಿಟ್ಟು ಅವನಿಗೂ ಬೇರೆ ದಾರಿ ಕಾಣಲಿಲ್ಲ. ಆದರೆ ಚಾರುಲತನ ನೋಡಿದಾಗಲೆಲ್ಲ ಬಲವಾದ ಸಲಾಕೆಯಿಂದ ಪೆಟ್ಟು ತಿಂದಂತೆ ನೋವು ಅನುಭವಿಸುತ್ತಿದ್ದ.

ಮರುದಿನದಿಂದಲೇ ಸ್ವಂತ ಮನೆಯನ್ನ ಬಾಡಿಗೆಗೋ, ಲೀಜ್‌ಗೋ ಕೊಡಲು ಅವರಿವರಿಗೆ ತಂದೆ ಮಗ ಹೇಳತೊಡಗಿದರು. ನೀರದ ಮುಖಾಂತರವೇ ಚಾರುಲತಗೆ ಈ ಸುದ್ದ ಮುಟ್ಟಿದ್ದು. ಅವಳಿಗೆ ವಿಚಿತ್ರವೆನಿಸಿತು. ಕಾರಣವನ್ನು ಅಂದಾಜು ಮಾಡಿದರೂ, ಈ ಕಾರಣದಿಂದ ಮನೆ ಬಿಡುವುದು ತೀರಾ ಒಳ್ಳೆಯದಲ್ಲವೆನಿಸಿತು.

"ಯಾಕಂತೆ ?" ಅವಳನ್ನೇ ಕೇಳಿದಳು.

"ಗೊತ್ತಿಲ್ಲ, ಅವ್ರು ನೇರವಾಗಿ ನನ್ನೊಂದಿಗೆ ಏನು ಹೇಳ್ಲಿಲ್ಲ. ಅವ್ರು ಮಾವ ಮಾತಾಡ್ತಾ ಇದ್ರು. ನಂಗೆ ಇದೆಲ್ಲ ಸರಿಯೆನಿಸೋಲ್ಲ" ತನ್ನ ಅಭಿಪ್ರಾಯ ತಿಳಿಸಿದಳು. ನಸುನಗು ತೇಲಿತು ಚಾರುಲತ ತುಟಿಗಳ ಮೇಲೆ. ತಾಳಿ ಕಟ್ಟಿಸಿಕೊಳ್ಳದ ಮುನ್ನ ಎಷ್ಟೊಂದು ವಿನಯದಿಂದ ಮೃದುವಾಗಿ ಇದ್ದಳು "ನಾನು ಅವ್ರಿಗಾಗಿ ಏನು ಬೇಕಾದ್ರೂ ಮಾಡಬಲ್ಲೆ. ಆದರೆ ನವೀನ್‌ನ ಕಳ್ಳುಕೊಂಡು ಬದುಕಿರಲಾರೆ" ಇಂಥ ಮಾತುಗಳನ್ನ ಎಷ್ಟೋ ಸಲ ಹೇಳಿದ್ದ ಹೆಣ್ಣು ಇವಳೇನಾ ಎಂದು ಚಿಂತಿಸುವಂತಾಯಿತು.

"ಏನೋ ನಂಗು ಗೊತ್ತಿಲ್ಲ. ನೀನು ವಿಚಾರ್ಸು" ತನ್ನ ಪಾಡಿಗೆ ತಾನು ಹೋದಳು. ಆಗ ನೆನಪಾದದ್ದು ಪೂಜಾ "ಅತ್ತಿಗೆ, ನಿಮ್ಮ ಉಗುರುಗಳಿಗೆ ಬಣ್ಣ ಹಾಕ್ತೀನಿ. ನಿಮ್ಮ ಕಲರ್‌ಗೆ ಮ್ಯಾಚ್ ಆಗೋಂಥ ಬಣ್ಣ ತಂದಿದ್ದೀನಿ"

ಬಲವಂತವಾಗಿ ಕೈ ಹಿಡಿದು ಕೊಡುತ್ತಿದ್ದಳು.

ಪ್ರೀತಿಯ ಹೊಳೆಯನ್ನೇ ಹರಿಸಿದ್ದಳು ಚಾರುಲತ ಮೇಲೆ. ಮೃದುವಾಗಿ ಬಿಟ್ಟಳು ಪೂರ್ತಿಯಾಗಿ. ಯಾಕೆ ಒಮ್ಮೆ ಹೋಗಿ ಅವಳನ್ನ ನೋಡಬಾರದು? ಅವಳ ಈ ಸ್ಥಿತಿಗೆ ನೇರವಾಗಿ ತನ್ನನ್ನು ಕಾರಣ ಮಾಡಿರೋ ಅತ್ತೆ, ಮಾವ ಇದಕ್ಕೆ ಅವಕಾಶ ಮಾಡಿಕೊಟ್ಟಾರ ? ಖಂಡಿತ ಇಲ್ಲ. ಆ ಆಸೆಯನ್ನ ದೂರಕ್ಕೆ ತಳ್ಳಿದ್ದು ಕೆಲವು ಕ್ಷಣಗಳು ಮಾತ್ರ.

ಫೋನ್‌ನ ಬಟನ್‌ಗಳನ್ನೊತ್ತಿ ಕಿವಿಗಿಟ್ಟುಕೊಂಡಳು. ಮೊದಲ ಸಲ ಎತ್ತಿದ್ದು ಯುಗಂಧರ್ "ಹಲೋ...." ಎಂದರಷ್ಟೆ. ಅವಳ ನಾಲಿಗೆಯಲ್ಲಿನ ಪಸೆಯಾರಿತು. ಧ್ವನಿ ಹೊರಡಲಿಲ್ಲ. "ಈಡಿಯಟ್....." ಅವರಿಟ್ಟರು. ಎರಡನೆ ಸಲ ಮತ್ತೆ ಬಟನ್‌ಗಳನ್ನೊತ್ತಿದಳು "ಹಲೋ...ಕಮಲಾನಾ ?" ಅವಳತ್ತೆ ವಾಯ್ಸ್. ಮೂರನೆ ಸಲ ಮಾತ್ರ ತಂತಿಯ ಕೊನೆಯಲ್ಲಿ ಇದ್ದಿದ್ದು ಮೂರ್ತಿ "ಹಲೋ...ಹಲೋ...ಹಲೋ...ಅವಳ ಕಣ್ಣಂಚು ಒದ್ದೆಯಾಯಿತು. ನವಿಲು ನರ್ತಿಸಿದಂತಾಯಿತು. ಸೂರ್ಯನ ಕಿರಣಗಳಿಗೆ ಅರಳುವಂತೆ ತಾವರೆಯಂತೆ ಅವಳ ಮನ ಬಿರಿಯಿತು. ತನ್ಮಯತೆಯಿಂದ ಸಂಗೀತವನ್ನು ಆಲಿಸುವಂತೆ ಗಂಡನ ದನಿಯನ್ನ ಆಸ್ವಾದಿಸಿದಳು. ಅವನ ಉಸಿರು ಚಾರುಲತಳ ಅಧರಗಳನ್ನು ಸ್ಪರ್ಶಿಸಿದಂತಾಯಿತು."

"ಯಾರೋ ಮಾತಾಡ್ತಾ ಇಲ್ಲ" ಫೋನಿಟ್ಟಿದ್ದು ಕೇಳಿಸಿತು.

ನಿಧಾನವಾಗಿ ಫೋನ್‌ನ ಕ್ರೆಡಲ್ ಮೇಲಿಟ್ಟಳು. ಮನಕ್ಕೆ, ಹೃದಯಕ್ಕೆ ಹತ್ತಿರವಾದವರ ದನಿಗಳನ್ನ ಆಲಿಸಿದ್ದು ಸಂತೋಷವೆನಿಸಿತು.

ರಾತ್ರಿ ಅಪ್ಪ, ಮಗಳು ತರಕಾರಿ ತರಲು ಹೊರಟಾಗ ಅವರೇ ಪ್ರಸ್ತಾಪಿಸಿದರು "ನವೀನಾ ಬೇರೆ ಮನೆ ಹುಡುಕ್ತಾ ಇದ್ದಾನೆ" ಸಾವಿರ ಕ್ಯಾಂಡಲ್‌ನ ಹೊಳಪು ಅವಳ ಮಿದುಳಲ್ಲಿ ಹತ್ತಿ ಆರಿ ಹೋಯಿತು. ಅಂದರೆ ನೀರದ ಕೇಳಿಸಿಕೊಂಡಿದ್ದು ಸರಿಯೆನಿಸಿತು.

"ಇದು ನಮ್ಮ ಸ್ವಂತ ಮನೆಯಲ್ವಾ ! ಬೇರೆ ಮನೆ ಹುಡ್ಕೋ ಅಂತ ತಾಪತ್ರಯವೇಕೆ ? ನೀರದ ಹೇಳಿದಾಗ ನಿಜವೆನಿಸ್ಲಿಲ್ಲ. ಈಗ ನಮ್ಮ ಮನೆಯಲ್ಲಿ ಏನು ಅನಾನ್ಕೂಲವಾಗಿದೆ ?" ಕೇಳಿದಳು.

ಕಾರಣಗಳನ್ನು ವಿವರಿಸಿದರು ಮಗಳಿಗೆ. ಅವೆಲ್ಲ ಅವಳಿಗೆ ಗೊತ್ತಿದ್ದುದ್ದೇ. ಅವಳು ಕೂಡ ಸೂಕ್ಷ್ಮವಾಗಿ ಬೇರೆ ರೀತಿಯಲ್ಲಿ ಹೇಳಿ ಸೋತಿದ್ದಳು. ನೀರದ ಕಿವಿಗೆ ಆ ಮಾತುಗಳು ಹೋಗಿರಲಿಲ್ಲ. ವಾಸುದೇವಯ್ಯನವರು ಕೂಡ ಒಮ್ಮೆ ತಿಳಿ ಹೇಳಿದ್ದರು ನಗುತ್ತಾ.

"ಮದ್ವೆಗೆ ಮುಂಚೆನೇ ಇಲ್ಲಿ ಬಹಳ ಹೊತ್ತು ಇರ್ತಾ ಇದ್ದೆ, ಇಲ್ಲಿ. ಈಗಿನ ದಿನಗಳಲ್ಲಿ ಅಲ್ಲಿರೋದೇ ಜಾಸ್ತಿ. ಹೀಗಾದರೇ...ಹೇಗೆ ?" ಅವಳು ಅದನ್ನ ತಮಾಷೆಯಾಗಿ ತಗೊಂಡಿದ್ದಳೇ ವಿನಃ ಸೀರಿಯಸ್ಸಾಗಿ ಸ್ವೀಕರಿಸಿರಲಿಲ್ಲ. ಹಾಗೆಯೇ ಮುಂದುವರಿದಾಗ ಅವರು ತಟಸ್ಥ ಧೋರಣೆ ವಹಿಸಿದರು.

"ಇದೆಲ್ಲ ನಿಜವೇ ! ಆದ್ರೂ ಸರಿಯೆನಿಸೋಲ್ಲ. ಇಷ್ಟೊಂದು ಸಣ್ಣ ಕಾರಣ ಮುಂದು ಮಾಡ್ಕೊಂಡ್ ಸ್ವಂತ ಮನೆ ಬಿಟ್ಟು ಬಾಡಿಗೆ ಮನೆಗೆ ಹೋಗೋದಾ ? ಬೇಕಾದರೇ, ಅವರಿಬ್ರೂ ಒಂದು ಬಾಡ್ಗೇ ಮನೆ ಹಿಡ್ದು ಕೊಳ್ಳಿ. ನಾವಿಬ್ರೂ ಇಲ್ಲೇ ಇರೋಣ" ಸೂಚಿಸಿದಳು.

ಮಗಳನ್ನ ಬೆರಗಿನಿಂದ ನೋಡಿದರು. ಅದ್ಭುತವಾದ ವಿಚಾರವೆನಿಸಿತು. ತನಗೆ ಯಾಕೆ ಹೊಳೆಯಲಿಲ್ಲ ? ತಲೆಯ ಮೇಲಿದ್ದ ದೊಡ್ಡ ಭಾರ ಇಳಿಸಿ ದಂತಾಯಿತು.

"ಒಳ್ಳೆ ಸಲಹೆ ತಾಯಿ ! ನಿನ್ನ ತಾಯಿಯೊಂದಿಗೆ ಕಾಲ ಕಳೆದ ಈ ಮನೆ ನನ್ನ ಪಾಲಿಗೆ ದೇವಸ್ಥಾನ. ಇಲ್ಲೇ ಪ್ರಾಣ ಬಿಡೋ ಆಸೆ ಕೂಡ. ಆದರೂ ಅಪ್ಪ ಅಭಿಪ್ರಾಯಕ್ಕೆ ವಿರೋಧ ಸೂಚಿಸೋಕ್ಕಾಗೋಲ್ಲ. ಸಧ್ಯ ನನ್ನ ಉಳಿಸ್ದೇ. ಇಷ್ಟನ್ನ ನಿಮ್ಮಣ್ಣನಿಗೆ ಹೇಳೋ ಭಾರ ನಿಂದೆ. ಒಂದು ರೀತಿಯ ಬಿಡುಗಡೆ ನಂಗೆ" ಹರ್ಷಿಸಿದರು. ಮಗ ಈ ಪ್ರಸ್ತಾಪವೆತ್ತಿದ ಮೇಲೆ ಅವರು ಮೇಲ್ನುಖಕ್ಕೆ ಉತ್ಸಾಹವಾಗಿದ್ದರೂ ಅಂತರಂಗವಾಗಿ ಬಹಳ ಬಳಲಿ ಹೋಗಿದ್ದರು.

ಮನೆಗೆ ಹಿಂದಿರುಗಿದಾಗ ನವೀನ್ ಹೊರಗೆ ನಿಂತಿದ್ದ. ಮ್ಲಾನತೆ ಇತ್ತು ಮುಖದ ಮೇಲೆ. ಚೂಟಿ, ಹೆಚ್ಚು ಮಾತಿನ ಇವನಿಗೆ ಏನಾಗಿದೆ ?

"ಇವ್ನ ಸುಖವಾಗಿಲ್ಲ" ಎಂದರು ನೋವಿನಿಂದ.

"ಬಹುಶಃ ಅದಕ್ಕೆ ಕಾರಣ ನಾನೇ ! ಅವನೊಬ್ಬ ಪ್ರಾಮಾಣಿಕ ಅಣ್ಣ. ನನ್ನ ಬಗ್ಗೆ ಚಿಂತೆ. ಈಗಿನ ಅವನ ಬೇಡಿಕೆ ಕನಿಷ್ಟ ಪರಿಹಾರವಾದೀತು. ನೀವು ಕೂಡ ಅದೇ ಹೇಳಿ" ನಿಟ್ಟುಸಿರು ಚೆಲ್ಲುತ್ತ ಹೇಳಿದಳು.

ವಾಸುದೇವಯ್ಯ ಒಳಗೆ ಹೋದರು. ತರಕಾರಿ ಬ್ಯಾಸ್ಕೆಟ್ ಇಟ್ಟು ಹೊರ ಬಂದು ನವೀನ್ "ಯಾಕೆ, ಇಲ್ಲಿ ನಿಂತೆ ?" ಕೇಳಿದಳು.

"ಸುಮ್ನೆ, ನಮ್ಮಂಥ ತೀರಾ ಸಾಮಾನ್ಯ ಜನಕ್ಕೆ ಮಗ, ಹೆಂಡ್ತಿ ಇಷ್ಟರದೇ ಸಮಸ್ಯೆ. ಯಾವುದಾದ್ರೂ ದೊಡ್ಡ ಆ್ಯಂಬಿಷನ್ ಬೆಳೆಸ್ಕೋಬೇಕು. ಈಗಾಗ್ಲೇ ಬದ್ಕು ಬೋರ್ ಅನ್ನಿಸೋಕೆ ಷುರುವಾಗಿದೆ" ಎಂದ ಕ್ರಾಪನ್ನ ಹಿಂದಕ್ಕೆ ತಳ್ಳುತ್ತ. ಅವನ ಒತ್ತು ಕೂದಲು ಕೂಡ ಈಗ ಹಿಂಸೆಯೆನಿಸುತ್ತಿತ್ತು.

"ದೇವರೇ ಕಾಪಾಡ್ಬೇಕು ! ಸ್ವಲ್ಪ ದಿನ ನೀವಿಬ್ರೂ ಹೊರ್ಗಡೆ ತಿರ್ಗಾಡಿ ಬನ್ನೀಂತ ಹೇಳಿದರೆ ಕೇಳ್ಲಿಲ್ಲ. ಹೋಗ್ಲಿ, ನೀನು ಮನೆ ಬದಲಾಯಿಸ್ಬೇಕೂಂತ ಇರೋ ಸುದ್ಧಿ ನಿಜನಾ ? ಯಾಕೆ ಈ ತರಹ ಯೋಚಿಸ್ತಿ ?"

ತಂಗಿಯತ್ತ ಒಮ್ಮೆ ನೋಟ ಹರಿಸಿ "ಸಧ್ಯಕ್ಕೆ ಅದ್ಬಿಟ್ಟು ಬೇರೆ ದಾರಿ ಇಲ್ಲ. ಗಿಣ್ಣು ಮಾಡಿದೇಂತ ನೀರದ ಅಮ್ಮ ಹೇಳಿ ಕಳಿಸಿದ್ಲು. ಇವ್ಳು ಕುಣಿಯುತ್ತ ಹೋದ್ಲು. ನಾನು ಹೋಗ್ಲಿಲ್ಲ ಅನ್ನೋ ಕೋಪ ಬೇರ. ಮೂರ್ಹೊತ್ತು ಅವ್ಳಿಗೆ ಇದೇ ಆಗಿ ಹೋಯ್ತು. ಆಗ ಅಲ್ಲಿಂದ ಇಲ್ಲಿಗೆ ಹೋಗಿ ಬರ್‍ತಾ ಇದ್ಲು. ಈಗ ಇಲ್ಲಿಂದ ಅಲ್ಲಿಗೆ ಓಡ್ತಾಳೆ. ನಂಗೆ ಹೇಳಿ ಸಾಕಾಯ್ತು" ವಿವರಿಸಿದ.

"ನೀನು ಹೇಳೋದು ಸರಿ. ಮನೆ ಬದಲಾಯಿಸೋದ್ರಿಂದ ಎಷ್ಟು ಹಿಂಸೆ ಆಗುತ್ತೆ ಅಪ್ಪನಿಗೆ ಗೊತ್ತಾ ? ಈ ವಯಸ್ಸಿನಲ್ಲಿ ನಾವು ಸುಖ ಕೊಡದಿದ್ರೂ ದುಃಖ ಕೊಡ್ಬಾರ್ದು. ಹೇಗೂ ಒಂದು ನಿರ್ಧಾರಕ್ಕೆ ಬಂದಿದ್ದೀಯ. ಇಲ್ಲಿ, ನಾನು ಅಪ್ಪ ಇದ್ಕೋತೀವಿ. ನೀನು ನೀರದ ಬಾಡ್ಗೆ ಮನೆಯಲ್ಲಿರಿ" ಅತ್ಯುತ್ತಮ ಸಲಹೆಯನ್ನ ನೀಡಿದಳು. ಅವನ ಮುಖ ವಿವರ್ಣವಾಯಿತು "ವಾಟ್, ಬರೀ ನಾವಿಬ್ರೂ ಬೇರೆ ಹೋಗೋದಾ ? ಇಂಪಾಜಿಬಲ್...ಅಂಥ ಯೋಚ್ನೆ ಎಂದೂ ಮಾಡೋಲ್ಲ" ಸಿಡಿದ.

ಅವನ ಮನಸ್ಥಿತಿ ಅರ್ಥವಾದರೂ ಅವಳೇನು ಮಾಡುವಂತಿರಲಿಲ್ಲ. ಈಗ ಅವಳಿಗೆ ನೀರದ ತೀರಾ ಮೂರ್ಖಳಾಗಿ ಕಂಡಳು.

ಮರುದಿನ ಇವಳು ಬಸ್ ಸ್ಟಾಪ್‌ನಲ್ಲಿ ನಿಂತಿದ್ದಾಗ ರಸ್ತೆಯಲ್ಲಿ ಓಡಾಡಿದ ಕಾರು ಒಂದು ಪಕ್ಕಕ್ಕೆ ಹೊರಳಿ ಫುಟ್‌ಪಾತ್‌ನ ಕಲ್ಲಿಗೆ ತಗುಲಿ ನಿಂತಾಗ ಕ್ಯೂನಲ್ಲಿದ್ದ ಕೆಲವರು ಓಡಿದರು ಅತ್ತ.

ಚಾರುಲತ್ತ ಅತ್ತ ಧಾವಿಸಿದಳು. ಅದಕ್ಕೆ ಕಾರಣವಿತ್ತು. ಅದು ಯುಗಂಧರ್

ಕಾರು. ಮುಖವೆಲ್ಲ ಬೆವರಿನಿಂದ ತೊಯ್ದು ಯುಗಂಧರ್ ಬಾಧೆ ಪಡುತ್ತ ಸೀಟಿಗೆ ಪೂರ್ತಿ ಒರಗಿದ್ದನ್ನ ನೋಡಿ ಗಾಬರಿಗೆ ಅವಳೆದೆ ನಿಂತಂತಾಯಿತು.

ಬೇರೆಯವರ ಸಹಾಯದಿಂದ ಅವರನ್ನು ನರ್ಸಿಂಗ್‌ಹೋಂಗೆ ಸಾಗಿಸಿದ್ದು ಪ್ರಯಾಸಪಡುತ್ತ. ಇನ್‌ಟೆನ್ಸಿವ್ ಕೇರ್‌ಗೆ ಒಯ್ದರು ಪೇಷಂಟ್‌ನ. ಬಲವಾದ ಹೃದಯಾಘಾತಕ್ಕೆ ತುತ್ತಾಗಿದ್ದರು. ಕೆಲವು ನಿಮಿಷಗಳು ತಡವಾಗಿದ್ದರು ಅವರು ಪರಲೋಕವಾಸಿಯಾಗಿ ಬಿಡುತ್ತಿದ್ದರು.

"ಏನು ಪರ್ವಾಗಿಲ್ಲ ! ನೀವೇನಾಗ್ಬೇಕು ?" ಡಾಕ್ಟರ್ ಪ್ರಶ್ನಿಸಿದಾಗ "ನಾನು ಅವ್ರ ಸೊಸೆ" ಎಂದಳು.

"ದಟ್ಸ್ ಗುಡ್, ಅವ್ರು ಇನ್ನು ಪೂರ್ತಿ ಅಪಾಯದಿಂದ ಪಾರಾಗಿಲ್ಲ. ಅವ್ರ ಹೆಂಡ್ತಿ, ಮಗನಿಗೆ ಇನ್‌ಫರ್ಮೇಷನ್ ಕೊಟ್ಟು ಕರ್‍ಸಿ" ತಿಳಿಸಿದರು.

ನಿರಂತರವಾಗಿ ಹತ್ತಾರು ಸಲ ಫೋನ್ ಮಾಡಿದರೂ ಮನೆಯಲ್ಲಿ ಯಾರೂ ಎತ್ತುತ್ತಿರಲಿಲ್ಲ. ಅವರೆಲ್ಲ ಎಲ್ಲಿ ಹೋದರು. ಮೂರ್ತಿಗೂ ಮಾಡಿದಳು. ಅಲ್ಲು ಅದೇ ರೆಸ್ಪಾನ್ಸ್. ದಿಕ್ಕು ತೋಚದೇ ಅಲ್ಲೇ ಉಳಿದು ಕಡೆಗೆ ಅಣ್ಣನನ್ನ ಸಂಪರ್ಕಿಸಿದಳು.

"ಮಾವನೋರಿಗೆ ಹಾರ್ಟ್ ಅಟ್ಯಾಕ್ ಆಗಿದೆ. ಮುರುಗನ್ ನರ್ಸಿಂಗ್ ಹೋಂಗೆ ಸೇರ್‍ಸಿದ್ದೀನಿ. ಕಾರ್ಡಿಯಾಲಜಿ ವಿಭಾಗದ ಇನ್‌ಟೆನ್ಸಿವ್ ಕೇರ್ ನಲ್ಲಿಟ್ಟಿದ್ದಾರೆ. ಏನು ಗೊತ್ತಾಗ್ತಾ ಇಲ್ಲ."

"ಯಾವ ಮಾವ ?" ಅವನಿಗೇನು ಅರ್ಥವಾಗಲಿಲ್ಲ. ಉಂಡಾಡಿಯಾಗಿ ತಿರುಗುವ ಅವನ ಸೋದರ ಮಾವ ಎಂದೋ ಒಮ್ಮೆ ಬಂದು ಹೋಗುವುದಿತ್ತು. ಯುಗಂಧರ್ ಅವನ ಕಲ್ಪನೆಯಲ್ಲಿ ಕೂಡ ಮೂಡಲಿಲ್ಲ.

"ಯುಗಂಧರ್ ಮಾರಾಯ ! ಅವ್ರು ಕಾರಿನಲ್ಲಿ ಕುಸಿದಾಗ ನಾನು ಬಸ್‌ಸ್ಟಾಪ್‌ನಲ್ಲಿದ್ದೆ. ನೀನು ಕೂಡಲೇ ಬಾ" ಫೋನಿಟ್ಟು ಮುಖದ ಬೆವರನ್ನು ತೊಡೆದುಕೊಂಡಳು.

ಡಾ|| ನವೀನ್ ಬರುವ ವೇಳೆಗೆ ಮಧ್ಯಾಹ್ನವೇ ಆಯಿತು. ಅವನ ಸ್ಥಿತಿ ನರ್ಸಿಂಗ್ ಹೋಂನಲ್ಲಿ ತುಂಬ ಸೂಕ್ಷ್ಮವಾಗಿತ್ತು.

ಮತ್ತೆ ಮತ್ತೆ ಯುಗಂಧರ್ ಮನೆಗೆ ಮತ್ತು ಮೂರ್ತಿಗೆ ಫೋನ್ ಮಾಡಿ ಸೋತು ಹೋದಳು. ರಿಂಗ್ ಆದರೂ ಯಾರು ಫೋನ್ ಎತ್ತುತ್ತಿರಲಿಲ್ಲ.

ಡಾ|| ನವೀನ್ ಕಾರ್ಡಿಯಾಲಜಿಸ್ಟ್ ಡಾ|| ಶರ್ಮ ಅವರನ್ನು ಭೇಟಿ ಮಾಡಿ ಪೇಷಂಟ್‌ನ ಸ್ಥಿತಿಯನ್ನು ಅರಿತು ಬಂದ ನಂತರವೇ ಕೇಳಿದ್ದು.

"ಅವ್ರ ಮನೆಯವರಾರು ಇಲ್ವ ?"

"ಫೋನ್ ಮಾಡಿ ಮಾಡಿ ಸಾಕಾಯ್ತು. ಫೋನ್‌ನ ಪ್ರಾಬ್ಲಮ್ಮೋ, ಅಥ್ವಾ ಮನೆಯಲ್ಲಿ ಯಾರು ಇಲ್ವೋ ? ಅವ್ರಿಗೂ ಫೋನ್ ಮಾಡ್ದೇ. ಏನು ಪ್ರಯೋಜನವಾಗ್ಲಿಲ್ಲ" ಎಂದು ಹಣೆಗೆ ಕೈಯೊತ್ತಿದಳು.

"ಇನ್ನ ಅವ್ರು ಅನ್‌ಕಾನ್‌ಷಿಯಸ್‌ನಲ್ಲೇ ಇದ್ದಾರೆ. ನಾನೇ ಮನೆಗೆ ಹೋಗಿ ವಿಷ್ಯ ತಿಳ್ಸಿ ಬರ್ತೀನಿ. ಸಧ್ಯಕ್ಕೆ ಇಲ್ಲೇ ಇರು. ಫೋನ್ ಮಾಡಿ ಅಪ್ಪನ್ನೋ, ನೀರದನೋ ಕರೆಸ್ಕೋ" ಸ್ಕೂಟರ್ ಹತ್ತಿದ.

ನವೀನ್ ಯುಗಂಧರ್ ಮನೆಯ ಮುಂದೆ ಇಳಿದಾಗ ಗೇಟುಗೆ ಬೀಗ ಹಾಕಿತ್ತು. ಅಂದರೆ ಅವರುಗಳು ಇಲ್ಲ. ಎದುರು ಮನೆಯವರು ಕೂಡ ಇರಲಿಲ್ಲ. ಪಕ್ಕದ ಮನೆಯ ಕಾಲಿಂಗ್ ಬೆಲ್ ಒತ್ತಿದ.

"ಓ, ನೀವು ಚಾರುಲತ ಅವ್ರ ಅಣ್ಣ ಅಲ್ವಾ ? ನೀವು ವಿವಾಹವಾಗೋ ಮುನ್ನ ಒಂದಿಷ್ಟು ಯೋಚ್ಸಬೇಕು. ನಿಮ್ಗೆ ತಂಗಿಯ ಭವಿಷ್ಯಕ್ಕಿಂತ ಪ್ರೇಮನೇ ದೊಡ್ಡದಾಗಿ ಹೋಯ್ತು" ಈ ಪ್ರವರದೊಂದಿಗೆ ಆ ಮನೆಯೊಡತಿ ಇವನನ್ನು ಎದುರುಗೊಂಡಿದ್ದು.

ಮುಷ್ಟಿ ಬಿಗಿ ಹಿಡಿದು ಮುಖದ ಮೇಲೆ ಗುದ್ದಿದಂತಾಯಿತು ಅವನಿಗೆ. ಚೇತರಿಸಿಕೊಳ್ಳಲು ಕ್ಷಣಗಳು ಬೇಕಾಯಿತು.

"ಸಾರಿ ಫಾರ್ ದಿ ಡಿಸ್ಟರ್ಬ್. ಯುಗಂಧರ್ ಮನೆಯವರಾರು ಕಾಣ್ತಾ ಇಲ್ವಲ್ಲ !" ವಿಚಾರಿಸಿದ ಬಿಳುಪೇರಿ.

"ನೆನ್ನೆ ಸತ್ಯನಾರಾಯಣ ಪೂಜೆಗೆ ಹೋಗೋದಿದೇಂತ ಅಂದ್ರು ಬಹುಶಃ ಅಲ್ಲಿಗೆ ಹೋಗಿರ್ತಾರೆ. ಈಚೆಗೆ ಅವ್ರಿಗೆ ದೇವರು, ಪೂಜೆಯೆಂದರೆ ತುಂಬ ಅಕ್ಕರೆ" ಉತ್ತರದ ಜೊತೆ ಒಂದಿಷ್ಟು ಬೇಡದ ವಿಷಯವನ್ನ ಕೂಡ ಹೇಳಿದರು

"ಎಲ್ಲಿಗೇಂತ ಗೊತ್ತಾ ?" ಕೇಳಿದ.

"ಗೊತ್ತಿಲ್ಲ, ಹೇಳಿದಷ್ಟು ಮಾತ್ರ ಕೇಳೋದು ನನ್ನ ಸ್ವಭಾವ. ನೀವು ಬಂದಿದ್ದೇನು ?" ಕುತೂಹಲ ತೋರಿದರು.

ಏನು ಹೇಳುವುದು ಬೇಡವೆನಿಸಿತು ಡಾ|| ನವೀನ್‌ಗೆ.

"ಸುಮ್ನೆ ನೋಡಿ ಹೋಗೋಣಾಂತ ಬಂದೆ. ನಾಳೆ ಬಂದು ನೋಡ್ತೀನಿ" ಸ್ಕೂಟರ್‌ನತ್ತ ಹೊರಟ. ಅವನಿಗೆ ಈಗ ಏನು ಮಾಡುವುದೋ ದಿಕ್ಕು ತೋಚಲಿಲ್ಲ.

ಅವನ ಸ್ಕೂಟರ್ ನರ್ಸಿಂಗ್ ಹೋಂನತ್ತ ಧಾವಿಸಿತು. ತೀರಾ ಹತ್ತಿರದವರು ಇರಬೇಕೆನಿಸಿತು. ಮಾರ್ಗ ಮಧ್ಯದಲ್ಲಿ ಇಳಿದು ಮೂರ್ತಿಯ ಮನೆಗೆ ಫೋನ್ ಹಚ್ಚಿದ. ನಂತರ ಕಾಲೇಜಿನಲ್ಲಿ ಸಿಕ್ಕ ಸುದ್ದಿಯ ಪ್ರಕಾರ ಅವನು ಸ್ಟೂಡೆಂಟ್ಸ್ ಕರೆದುಕೊಂಡು ಟೂರ್‌ಗೆ ಹೋಗಿದ್ದ.

ವಿಷಯನ ತಂಗಿಗೆ ಮುಟ್ಟಿಸಿ ಸುತ್ತಲೂ ನೋಟ ಹರಿಸಿದ.

"ಮನೆಯಲ್ಲಿ ಯಾರು ಫೋನ್ ತಗೋತಾ ಇಲ್ಲ. ಅಪ್ಪ ಇದ್ದರೋ, ಇಲ್ವೋ ?" ಎಂದಳು ಸಪ್ಪಗೆ.

ಹಣೆ ಗಟ್ಟಿಸಿಕೊಳ್ಳಬೇಕೆನಿಸಿತು ಡಾ|| ನವೀನ್‌ಗೆ. ನೀರದಾಗೆ ಮೃದುವಾಗಿ, ಖಾರವಾಗಿ ಹೇಳಿ ಸಾಕಾಗಿದ್ದ. ಅವಳ ಸ್ವಭಾವದಲ್ಲಿ ಕಿಂಚಿತ್ ಬದಲಾವಣೆ ಇಲ್ಲ. ಯಾರು ಇಲ್ಲದಿದ್ದರೇ ಅವಳಂತು ಮನೆಯಲ್ಲಿ ಇರುತ್ತಿರಲಿಲ್ಲ.

"ಅವ್ರಿಗೆ ಹೇಳಿ ಸಾಕಾಗಿದೆ. Love is Blind ಅನ್ನೋದು ನೂರಕ್ಕೆ ನೂರರಷ್ಟು ನಿಜ. ಆಗ ಎಷ್ಟು ಇಷ್ಟವಾಗಿದ್ಲು ಅಂದರೇ, ಹೇಗೆ ಹೇಳ್ಲಿ ? ಈಗಾಗ್ಲೇ ಅವ್ಳ ಸ್ವಭಾವ ಬೇಸರ ಬಂದ್ಹೋಗಿದೆ. ಸುಮ್ನೆ ಮದ್ವೆ ಆಗೋ ಬದ್ಲು ಪ್ರೇಮಿಗಳಾಗಿಯೇ ಇದ್ಬಿಟ್ಟಿದ್ದರೇ ಚೆನ್ನಿತ್ತು. ಅದೆಲ್ಲ ಸವಿ ಸವಿಯಾಗಿ ಇರ್‍ತಾ ಇತ್ತು" ಜಿಗುಪ್ಸೆಗೊಂಡು ನುಡಿದ.

ಆದರೆ ಈ ವಿಷಯವಾಗಿಯೇ ತಲೆ ಕೆಡಿಸಿಕೊಳ್ಳುವಂತಿರಲಿಲ್ಲ. ಡಾಕ್ಟರ್‌ಗಳ ಒಂದು ಹಿಂಡು ಯುಗಂಧರ್ ಸುತ್ತಮುತ್ತ ಇತ್ತು. ಅವರ ಮನೆಯವರಾರು ಇಲ್ಲದಿದ್ದೊಂದು ಚಿಂತೆ.

"ಅಣ್ಣ, ಕಾರು ಅಲ್ಲೇ ಇತ್ತು" ಎಂದಳು ನೆನಪಿಸಿಕೊಂಡು.

"ಅದ್ನ ಆಮೇಲೆ ನೋಡ್ಕೋಬಹ್ದು. ಅವ್ರೆಲ್ಲ ಎಲ್ಹೋದ್ರು" ಹಣೆಗೆ ಕೈ ಹಚ್ಚಿದ. "ಸತ್ಯನಾರಾಯಣ ಪೂಜೆಗೆ ಹೋದೋರು, ಸಂಜೆಗಾದ್ರೂ ಬರ್ತಾರೆ. ಡೋಂಟ್ ವರಿ. ನೀನು ಇಲ್ಲೇ ಇರು" ಎಂದವನು ಮತ್ತೆ ಡಾಕ್ಟರೊಂದಿಗೆ ಡಿಸ್ಕಸ್ ಮಾಡಿ ಬಂದ "ಪ್ರಜ್ಞೆ ಬರೋವರ್ಗೂ ಏನು ಹೇಳೋಕ್ಕಾಗೋಲ್ಲ ಅಂತಾ ಇದ್ದಾರೆ. ಈ ತರಹದ ಕೇಸ್‌ಗಳೆಲ್ಲ ಹಾಗೇ. ಒಂದಿಷ್ಟು ಕಾರು ನೋಡ್ಕೊಂಡ್ ಬಂದ್ಬಿಡ್ತೀನಿ. ಅಲ್ಲೇ ಇದ್ದರೇ ಅದ್ನ ಅವ್ರ ಮನೆ ಮುಂದೆ ನಿಲ್ಲಿಸೋ ಏರ್ಪಾಟು ಮಾಡ್ಬರ್ತೀನಿ. ನಿಮ್ಮ ಆಫೀಸ್‌ಗೆ ಫೋನ್ ಮಾಡಿದ್ಯಾ ?" ನಾಲ್ಕು ಹೆಜ್ಜೆ ಮುಂದೆ ಹೋದವನು ಬಂದು ಪ್ರಶ್ನಿಸಿದ.

"ಮಾಡ್ತೀನಿ, ಆದಷ್ಟು ಬೇಗ್ಬಂದ್ಬಿಡು" ಎಂದಳು. ಅವಳ ಕಣ್ಣುಗಳಲ್ಲಿ ನೀರಿತ್ತು "ಏಯ್ ಅಳೋಂಥದ್ದು ಏನಾಗಿದೆ ? ಇದಿನ್ನ ಮೊದಲ ಅಟ್ಯಾಕ್ ತಾನೇ ? ಅಂಥ ಡೇಂಜರ್ ಏನಲ್ಲ" ಸಂತೈಯಿಸಿ ಹೋದವನು ಐದು ನಿಮಿಷದಲ್ಲಿ ಹಿಂದಿರುಗಿ "ಅದು ಎಲ್ಲಾದ್ರೂ ಹಾಳಾಗ್ಲಿ. ಅವ್ರುಗಳು ಯಾರಾದ್ರೂ ಬರೋವರ್ಗೂ ನಾನು ಇಲ್ಲಿ ಇರ್ತೀನಿ. ಈಗ್ಬಂದೆ..." ಮತ್ತೆ ಹೋದ.

ಪೂಜಾ ವಿಷಯ ಬಂದ ಮೇಲೆ ಅವರು ಬದಲಾಗಿದ್ದರೂ, ಅದರ ಹಿಂದಿನ ದಿನಗಳಲ್ಲಿ ಯುಗಂಧರ್ ಸೊಸೆಯನ್ನು ಮಗಳಿಗಿಂತ ಹೆಚ್ಚಾಗಿ ನೋಡಿಕೊಂಡರು.

"ಇಲ್ಲಿ ಅತ್ತೆ, ಮಾವ ಇದ್ದಾರೆ ಅಂತ ಸಂಕೋಚವೇನು ಇಟ್ಕೋಬೇಡ. ಅಲ್ಲಿ ನಿನ್ತಂದೆ ಮನೆಯಲ್ಲಿ ಹೇಗೆ ಇರ್ತೀಯೋ ಹಾಗೆ ಇರು. ನಂಗೆ ಪೂಜಾ, ನೀನು ಒಂದೇ" ಮನಃದುಂಬಿ ಇವಳು ಹೋದ ಹೊಸದರಲ್ಲಿ ಹೇಳಿದ ಮಾತುಗಳು.

"ಚಾರು.....ಬಾ ಇಲ್ಲಿ" ಬಾಯಿ ತುಂಬ ಕರೆಯುತ್ತಿದ್ದ ಯುಗಂಧರ್ ಅವಳಿಗೆ ತುಂಬ ಇಷ್ಟವಾಗಿದ್ದರು.

ಚಾರುಲತ ಅತ್ತು ಕಣ್ಣೀರು ತೊಡೆದುಕೊಂಡಳು. ನೆನಪಾದ ದೇವರುಗಳನ್ನೆಲ್ಲ ಪ್ರಾರ್ಥಿಸಿದಳು, ಅವರನ್ನ ಉಳಿಸಿಕೊಡಲು. ಪೂಜಾಗೆ ಇದರಿಂದ ಎಂಥ ಷಾಕ್ ಆಗಬಹುದು ? ತಲೆ ಕೆಟ್ಟಂತಾಯಿತು ಅವಳಿಗೆ.

ಸಂಜೆಯ ವೇಳೆಗೆ ಯುಗಂಧರ್ ದೇಹಸ್ಥಿತಿಯಲ್ಲಿ ಅಂಥ ಸುಧಾರಣೆಯೇನು ಕಾಣದಿದ್ದರೂ, ಮೂರ್ತಿಯ ತಾಯಿ ಫೋನ್‌ನಲ್ಲಿ ಸಿಕ್ಕರು. "ಅತ್ತೆ, ದಯವಿಟ್ಟು

ಫೋನ್ ಇಡ್ತೇಡಿ. ಮಾವ ಒಂದಿಷ್ಟು ಎಡವಿ ಪೆಟ್ಟು ಮಾಡ್ಕೊಂಡಿದ್ದಾರೆ. ನೀವು ಮುರುಗನ್ ನರ್ಸಿಂಗ್‌ಹೋಂಗೆ ಬನ್ನಿ. ಗಾಬ್ರಿ ಯಾಗೋ ಅಗತ್ಯವೇನಿಲ್ಲ" ಹೇಳಿ ಅವರ ಪ್ರತಿಕ್ರಿಯೆಗಾಗಿ ಕಾದಳು.

"ಯಾರು ಮಾತಾಡ್ತಾ ಇರೋಡು ?" ಆಕೆಯ ದನಿ ನಡುಗಿತು.

"ಚಾರುಲತ ಮಾತಾಡ್ತಾ ಇರೋದು. ಅದೇ ಮುರುಗನ್ ನರ್ಸಿಂಗ್ ಹೋಂಗೆ ಬನ್ನಿ. ಆತಂಕ ಪಡೋಂಥದೇನಿಲ್ಲ. ಕಾರಿನಿಂದ ಇಳಿಯೋವಾಗ ಆದ ಪೆಟ್ಟಷ್ಟೆ" ಎಂದಳು.

"ನಿಂಗೆ ಅವ್ರೆಲ್ಲಿ ಸಿಕ್ಕರು ?" ಆಕೆಯ ಸ್ವರವೇ ಉಡುಗಿತು.

"ಅದೆಲ್ಲ ಆಮೇಲೆ ಹೇಳ್ತೀನಿ. ಪೂಜಾ ಬೇಕಾದರೇ ಮನೆಯಲ್ಲೇ ಇರ್ಲಿ. ನೀವೊಬ್ರು...ಬನ್ನಿ" ಫೋನಿಟ್ಟಳು.

ಅವಳಿಗೆ ಮೈ ಮೇಲೆ ಬಿಸಿ ನೀರು ಸುರಿದುಕೊಂಡ ಅನುಭವವಾಯಿತು. ಒಬ್ಬರನ್ನೊಬ್ಬರು ಅರ್ಥ ಮಾಡಿಕೊಂಡು ಬದುಕಿದ ಜೀವಗಳು.

ಮೃಣಾಲಿನಿ ಫೋನಿಟ್ಟು ಮಗಳನ್ನು ತಬ್ಬಿಕೊಂಡು ಬಿಕ್ಕಳಿಸಿದರು "ಅವ್ರು ಪೂಜೆಯ ವೇಳೆಗೆ ಬರದಿದ್ದಾಗಲೇ ಗಾಬ್ರಿ. ಏನಾಗಿದೆಯೋ, ಏನೋ" ಎಂದು ತಾಯಿ ಮಗಳು ಒಬ್ಬರನ್ನೊಬ್ಬರು ಸಮಾಧಾನ ಪಡಿಸಿಕೊಂಡು ಬೀಗ ಹಾಕುವ ವೇಳೆಗೆ ಪಕ್ಕದ ಮನೆಯಾಕೆ ಕಾಂಪೌಂಡ್ ಬದಿಗೆ ಬಂದು "ಎಲ್ಲೋಗಿದ್ರಿ ? ನಿಮ್ಮ ಸೊಸೆ ಅಣ್ಣ ಹುಡ್ಕಿಕೊಂಡ್ಬಂದಿದ್ದ" ಅಂತು ವಿಷಯ ಮುಟ್ಟಿಸಿದ ತೃಪ್ತಿ ಅವರಿಗೆ.

ಸರ್ರೆಂದು ಕಾಂಪೌಂಡ್ ಗೋಡೆಯ ಬಳಿ ಬಂದ ಮೃಣಾಲಿನಿ, ಹಾರುವ ಎದೆಯ ಮೇಲೆ ಕೈಯಿಟ್ಟುಕೊಂಡು "ಏನಾದ್ರೂ ಹೇಳಿದ್ನಾ ?" ಕೇಳಿದರು.

"ಏನು ಹೇಳಿಲ್ಲ ! ನಾನು ಛೀಮಾರಿ ಹಾಕ್ದೇ ಬಿಡಿ. ಯಾವ ಮುಖ ಇಟ್ಕೊಂಡ್ ನಿಮ್ಮ ಮನೆಗೆ ಬಂದ್ನೋ" ಎಂದರು ಆಕೆ.

ಮೃಣಾಲಿನಿ ಮುಖ ಮತ್ತಷ್ಟು ಬಿಳುಚಿಕೊಂಡಿತು. ಯುಗಂಧರ್‌ಗೆ ಬರೀ ಸಣ್ಣ ಪೆಟ್ಟಾಗಿರಲಾರದು. ಕೆಟ್ಟ ಕೆಟ್ಟ ಯೋಚನೆಗಳಿಂದ ಕುಸಿದಾಗ ಪೂಜಾ ಬಂದು ಪ್ರಯಾಸದಿಂದ ಎಬ್ಬಿಸಿಕೊಂಡು ಗೇಟಿನ ಬಳಿಗೆ ಬರುವ ವೇಳೆಗೆ ಆಟೋ ನಿಂತಿತ್ತು. ಅದರ ಪಕ್ಕದಲ್ಲಿ ಸ್ಕೂಟರ್ ಮೇಲಿದ್ದ ಡಾ।। ನವೀನ್ ಮೆಲ್ಲಗೆ

ಇಳಿದು ಇವರತ್ತ ಬಂದ.

"ಆಟೋ ಹತ್ಕೊಳ್ಳಿ. ಏನು ಗಾಬ್ರಿ ಪಡೋಂಥದ್ದಲ್ಲ" ಎಂದ ಮೆಲ್ಲಗೆ. ಪೂಜಾನ ನೋಡಿ ಅವನ ಜಂಘಾಬಲವೇ ಉಡುಗಿ ಹೋಗಿತ್ತು. ಗುರುತು ಸಿಗದಷ್ಟು ಬಡವಾಗಿದ್ದಳು. ಗುಲಾಬಿ ಹೂವಿನಂತೆ ನಳನಳಿಸುತ್ತಿದ್ದ ಹೆಣ್ಣು ಬಿಸಿಲಿಗೆ ಕಮರಿ ಹೋದಂತೆ ಕಂಡಳು.

ಸ್ಕೂಟರ್ ಹತ್ತಿದವನೆ ಹೊರಟುಬಿಟ್ಟ. ನರ್ಸಿಂಗ್ ಹೋಂ ತಲುಪೋ ವರೆಗೂ ಹಿಂದಿರುಗಿ ಕೂಡ ನೋಡಲಿಲ್ಲ. ಒಂದು ಹೆಣ್ಣಿನ ಸ್ಥಿತಿ ಇಷ್ಟೊಂದು ದಾರುಣ - ಅದಕ್ಕೆ ತಾನು ಕಾರಣ. ಡಾ|| ನವೀನ್ ಮೈಯೆಲ್ಲ ಕಂಪಿಸುತ್ತಿತ್ತು.

ದಢಬಢ ಬಂದವನೆ "ನಿನ್ನತ್ತೆ ಪೂಜಾ ಬರ್‍ತಾ ಇದ್ದಾರೆ. ಹೇಗೆ ಹ್ಯಾಂಡಲ್ ಮಾಡ್ತೀಯೋ ನೋಡು. ಸಧ್ಯಕ್ಕೆ ನಾನು ಇಲ್ಲಿದ್ರೂ ನಿನ್ಗೆ ಸಿಗೋಲ್ಲ" ಹೊರಟೇ ಬಿಟ್ಟ ಹಿಂದಿರುಗಿ ಕೂಡ ನೋಡದೇ.

ಹತ್ತು ನಿಮಿಷದಲ್ಲಿ ಮೃಣಾಲಿನಿ, ಪೂಜಾ ಬಂದಾಗ ತಾನೇ ಎದುರು ಗೊಂಡು ಪಕ್ಕಕ್ಕೆ ಕರೆದೊಯ್ದು ಕೂಡಿಸಿ ವಿಷಯ ತಿಳಿಸಿದಳು.

"ಅಂಥ ಪ್ರಮಾದಕರವಾದ ಅಟ್ಯಾಕ್ ಅಲ್ಲಾಂತ ಡಾಕ್ಟ್ರು ಹೇಳ್ತಾ ಇದ್ದಾರೆ" ಎಂದಳು ಉಗುಳು ನುಂಗಿ. ಆಕೆ ಪ್ರಜ್ಞೆ ತಪ್ಪಿದರೂ ತಕ್ಷಣ "ಅಮ್ಮನ ಹಿಡ್ಕೋ, ಹೋಗಿ ಡಾಕ್ಟ್ರನ ಕರ್ಕಂಡ್ ಬರ್ತೀನಿ" ಓಡಿದಳು.

ಬಂದ ಸಿಸ್ಟರ್ ಆಕೆಯನ್ನು ಬೆಡ್‌ಗೆ ಸಾಗಿಸಿದರು.

"ಬಿ.ಪಿ. ಜಾಸ್ತಿಯಾಗಿದೆ. ಡೋಂಟ್ ವರೀ. ಷಾಕ್ ನ್ಯೂಸ್, ಎಲ್ಲರ ಸ್ಥಿತಿನು ಇಷ್ಟೆ" ಇಂಜಕ್ಷನ್ ಚುಚ್ಚಿದ ಸಿಸ್ಟರ್ ಉಸುರಿ ಹೋದಾಗ ಅವಳಿಗೆ ದಿಕ್ಕೇ ತೋಚದಂತಾಯಿತು. ನಿಂತ ಪೂಜಾ ಜೀವವಿಲ್ಲದ ಗೊಂಬೆಯಂತೆ ಕಂಡಳು. ಚಾರುಲತಳ ಕರುಳು ಕಿತ್ತು ಬಾಯಿಗೆ ಬಂದಂತಾಯಿತು. ಹಿಡಿದು ಬೆಡ್ ಮೇಲೆ ಕೂಡಿಸಿ "ಬರೀ ಷಾಕ್ ಅಷ್ಟೆ, ಪೂಜಾ. ಗಾಬ್ರಿಯಾಗೋಂಥದೇನಿಲ್ಲ" ಹೇಳಿದಳು.

ಮೊದಲು ಮೌನವಹಿಸಿದ್ದ ಪೂಜಾ ಭೋರೆಂದು ಅಳತೊಡಗಿದಾಗ ದಿಕ್ಕು ತೋಚದಂತಾಯಿತು ಚಾರುಲತಗೆ. ಇವಳು ಇಲ್ಲಿ ಇರುವುದು ಎರಡು ಕಡೆಯ ಅಪಾಯವಾಗಿ ಕಂಡಿತು.

"ಪ್ಲೀಸ್ ಪೂಜಾ, ಅಮ್ಮನಿಗೆ ಏನು ಆಗಿಲ್ಲ. ನೀನು ಧೈರ್ಯಗೆಟ್ಟರೆ ಕಷ್ಟವಾಗುತ್ತೆ" ತಲೆ ಸವರಿ ಹೊರಗೆ ಬಂದವಳೇ ಡಾ|| ನವೀನ್‌ನ ಹುಡುಕಿ ಕೊಂಡು ಹೋಗಿ "ಅಣ್ಣ, ಪೂಜಾ ತುಂಬ ವೀಕಾಗಿ ಕಾಣ್ತಾಳೆ. ಒಂದು ಪೆಥೆಡಿನ್ ಕೊಡ್ಸಿದರೇ ಹೇಗೆ ?" ಸಲಹೆ ಕೇಳಿದಳು.

ಡಾ|| ನವೀನ್ ಅವಳ ಜೊತೆಯಲ್ಲಿ ಬಂದವನು ಪೂಜಾನ ಎಬ್ಬಿಸಿ "ಸ್ಪೆಷಲ್ ವಾರ್ಡ್ ಖಾಲಿ ಇದೆ. ಡಾಕ್ಟರ ಕನ್‌ಸಲ್ಟ್ ಮಾಡ್ತೀನಿ. ನೀನು ಇವ್ರನ ನೋಡ್ಕೋ" ಹೇಳಿ ಕರೆದೊಯ್ದ.

ಮೃಣಾಲಿನಿಗೆ ಎಚ್ಚರವಾದ ಮೇಲೆ ಒಂದೇ ಸಮ ವಾಂತಿ. ಮೊದ ಮೊದಲು ಬೋಗಸೆಯಲ್ಲಿಡಿದು ಚಾರುಲತ ಹೊರ ಚೆಲ್ಲಬೇಕಾಯಿತು. ಇವಳ ಸೀರೆ, ಮೈಮೇಲೆಲ್ಲ ವಾಂತಿ. ಅಂತು ಯುಗಂಧರ್‌ಗಿಂತ ಈಕೆಯ ಸೇವೆ ಮಾಡಿದ್ದೇ ಹೆಚ್ಚಾಯಿತು.

ಮರುದಿನ ಸಂಜೆ ಯುಗಂಧರ್‌ಗೆ ಪ್ರಜ್ಞೆ ಬಂದಾಗ ಮೃಣಾಲಿನಿ ಸ್ವಲ್ಪ ಚೇತರಿಸಿಕೊಂಡಿದ್ದರು. ಸೊಸೆಯನ್ನು ತಬ್ಬಿಕೊಂಡು ಕಣ್ಣೀರು ಸುರಿಸುತ್ತ "ಅವ್ರಿಗೆ ಏನು ಆಗೋಲ್ಲ ತಾನೇ ?" ಕೇಳಿದ್ದೇ ಕೇಳಿದ್ದು.

"ಇಲ್ಲ, ಖಂಡಿತ ಮಾವನವ್ರಿಗೆ ಏನು ಆಗೋಲ್ಲ. ಈಗ ತಾನೇ ಜ್ಞಾನ ಬಂದಿದೆ. ಅವ್ರ ಮುಂದೆ ಅಳ್ಬಾರ್ದು" ಮಂಚದಿಂದ ಎಬ್ಬಿಸಿ ಕರೆದೊಯ್ದರು.

ಹೊರಗಡೆಯ ಕಿಟಕಿಯ ಗ್ಲಾಸ್‌ನಿಂದ ಯುಗಂಧರ್‌ನ ನೋಡಬಹುದಿತ್ತು. ರಕ್ತ ಉಸಿರಾಟದ ನಳಿಕೆಯ ಸಲೈನ್ ತೂಗಾಡುತ್ತಿದ್ದರಿಂದ ಮೃಣಾಲಿನಿಗೆ ನೋಡಯಲಾಗಲಿಲ್ಲ.

"ಚಾರು, ನಂಗೆ ಭಯ ಆಗ್ತಾ ಇದೆ" ಅತ್ತರು ಅವಳ ಆಸರೆಯಲ್ಲಿ.

"ಯಾಕೆ ಭಯ ಪಡುತ್ತೀರಾ ? ಮಾವನವ್ರು ಫಿಫ್ಟಿ ಪರ್ಸೆಂಟ್ ಚೇತರ್ಸಿಕೊಂಡಿದ್ದಾರೆ. ಒಂದೆರಡು ದಿನದಲ್ಲಿ ಕರ್ಕಂಡ್ ಹೋಗ್ಬಹುದು ಅಂದರಲ್ಲ ಡಾಕ್ಟ್ರು" ಧೈರ್ಯ ಹೇಳಿದಳು. ಅವಳ ಮನದಲ್ಲಿ ಯಾವ ಕಹಿ ಭಾವನೆಯು ಉಳಿಲಿಲ್ಲ.

ಕಾರಿಡಾರ್‌ನಲ್ಲಿ ಹಾಕಿದ್ದ ಛೇರ್ ಮೇಲೆ ಕುಸಿದ ಮೃಣಾಲಿನಿ "ಮೂರ್ತಿಗೆ ಹ್ಯ ಗೊತ್ತಾಯ್ತು ? ಅವ್ನು ಟೂರ್ ಹೋಗಿದ್ದಾನೆ" ಎಂದಾಗ ಮೂಡಿದ

ವಿಮನಸ್ಕತೆಯನ್ನ ಬಲವಾಗಿ ಹೊಡೆದಟ್ಟಿ "ಗೊತ್ತಾಯ್ತು. ಬಂದ ಕೂಡ್ಲೇ ಕಳ್ಸಿಕೊಡೀಂತ ಹೇಳ್ದೆ. ಸುಮ್ನೆ ವಿಷ್ಯ ತಿಳಿದ್ರೆ ಗಾಬ್ರಿಯಾಗ್ತಾರದಲ್ಲ. ಹೇಗೂ, ನಾಳಿದ್ದು ಸಾಯಂಕಾಲ ಬರ್ತಾರೇಂತ ತಿಳಿಸಿದ್ರು" ಉದ್ವಿಗ್ನಳಾಗದೇ ಅತ್ಯಂತ ಸಮಾಧಾನವಾಗಿ ನುಡಿದಿದ್ದು ಪ್ರಯಾಸದಿಂದಲೇ.

ಡಾಕ್ಟರನ್ನು ಭೇಟಿಯಾದಾಗ "ಇನ್ನೇನು ಪ್ರಾಬ್ಲಮ್ ಇಲ್ಲ. ಇಲ್ಲೇ ಉಳಿದ್ರೆ ಪೇಷಂಟ್‌ಗಳಾಗಿ ಬಿಡ್ತಾರೆ ಇವರುಗಳು. ಮನೆಗೆ ಕರ್ಕೊಂಡ್ಹೋಗಿ. ನೀವೊಬ್ರು ಇದ್ದರೆ ಸಾಕು" ಎಂದರು.

ಡಾ|| ನವೀನ್ ಕೂಡ ಅದೇ ಸಲಹೆ ಕೊಟ್ಟ "ಹೇಗೂ, ನಾನು ಇಲ್ಲೇ ಇರ್ತೀನಿ. ಆದರೆ ಯುಗಂಧರ್ ಮುಖತಃ ನನ್ನ ನೋಡೋದ್ಬೇಡ. ಮತ್ತೆ ಎಕ್ಸೈಟ್ ಆಗ್ಬಹುದು. ಪೂಜಾನ ನೋಡಿ ನಂಗೆ ತುಂಬ ಸಂಕಟವಾಯ್ತು. ಈ ಹಟದ ಹುಡ್ಗಿ ಇಷ್ಟೊಂದು ಅಪಾಯ ತಂದುಕೋತಾಳೇಂತ ತಿಳ್ದು ಕೊಂಡಿರಲಿಲ್ಲ. ಪಾಸ್ಟ್ ಈಸ್ ಪಾಸ್ಟ್ ಈಗ ನೆನೆದು ಪ್ರಯೋಜನವೇನು ?" ವಿಷಾದ ಇಣಕಿತು ಅವನ ದನಿಯಲ್ಲಿ.

ತಾಯಿ, ಮಗಳನ್ನ ಒಪ್ಪಿಸುವ ವೇಳೆಗೆ ಅವಳಿಗೆ ಸಾಕು ಬೇಕಾಯಿತು. ಈಗಲೂ ಪೂಜಾ ನೇರವಾಗಿ ಅವಳೊಂದಿಗೆ ಮಾತಾಡುತ್ತಿರಲಿಲ್ಲ.

ಹೋಗುವ ಮುನ್ನ ಪ್ರಜ್ಞೆ ಬಂದ ಯುಗಂಧರ್ ಸೊಸೆ, ಹೆಂಡತಿ, ಮಗಳನ್ನ ಒಟ್ಟಿಗೆ ನೋಡಿ ಆಶ್ಚರ್ಯ ಚಕಿತರಾದರು. ಒಂದೆರಡು ಕ್ಷಣ ಅವರ ಮುಖದ ಭಾವನೆಗಳಲ್ಲಿ ಏರುಪೇರಾಯಿತು.

ಅಷ್ಟರಲ್ಲಿ ಬಂದ ಡಾಕ್ಟರ್ ಅವರನ್ನ ಹೊರಗೆ ಕಳಿಸಿದರು.

ಕಾಂಪೌಂಡ್‌ನೊಳಕ್ಕೆ ಇಳಿದ ಮೇಲೆ "ಕಾರೆಲ್ಲಿ ?" ಕೇಳಿದರು ಸುತ್ತಲೂ ನೋಟ ಹರಿಸುತ್ತ ಮೃಣಾಲಿನಿ "ಡ್ರೈವರ್ ಇಲ್ಲ. ಇಲ್ಲೇ ಗ್ಯಾರೇಜ್‌ನಲ್ಲಿ ಬಿಟ್ಟಿದೆ. ಹೇಗೂ ಮಾವನವರನ್ನ ಕರೆದೊಯ್ಯಲು ಕಾರು ಬೇಕಲ್ಲ. ಈಗ ಆಟೋದಲ್ಲಿ ಹೋಗೋಣ."

ಆಕೆ ತೀರಾ ಸುಸ್ತಾಗಿದ್ದರು. ನಿಂದಿಸಲಾಗಲೀ, ಕೋಪ ತೋರಿಸಲಾಗಲಿ ಅವರಿಂದ ಸಾಧ್ಯವಿರಲಿಲ್ಲ. ಸಧ್ಯಕ್ಕೆ ಮಾನಸಿಕವಾಗಿ ಸಪೋರ್ಟು ನೀಡಲು ಅವರವರಾಗಿ ಯಾರಾದರೂ ಬೇಕಿತ್ತು. ಜೊತೆಗೆ ಎರಡು ದಿನದಿಂದ ಚಾರುಲತ ಉಪಚರಿಸಿದ ರೀತಿಗೆ ಮೃದುವಾಗಿ ಹೋಗಿದ್ದರು.

ಮನೆಯ ಬಳಿ ಆಟೋದಿಂದ ಇಳಿದಾಗ ಬಿಕೋ ಎನ್ನುತ್ತಿತ್ತು. ರಾತ್ರಿ ಮನೆಯ ಕಾವಲಿಗೆ ಡಾ|| ನವೀನ್ ಯಾರನ್ನೋ ಕರೆತಂದು ಮಲಗಿಸಿದ್ದ.

ಗೇಟಿನ ಬೀಗ ನೋಡಿ ಆಕೆ ಸಮಾಧಾನಗೊಂಡರು.

"ಸುತ್ತಲು ಕಳ್ಳತನಗಳು. ನಮ್ಮ ಪುಣ್ಯ ಏನು ಆಗಿಲ್ಲ" ಎಂದಾಗ ಅವಳಿಗೆ ನಗು ಬಂತು. ಮನುಷ್ಯ ಎಂಥ ಭ್ರಮೆಯಲ್ಲಿರುತ್ತಾನೆ. ಹಿಂದಿನ ದಿನ ಆಕೆ "ಚಾರು, ನಂಗೆ ಒಂದಿಷ್ಟು ವಿಷ ಕೊಡೊಕ್ಕೋಳು. ಅವ್ರು ಇಲ್ದೇ ನಾನು ಬದ್ಕಲಾರೆ" ಗೋಳಿಟ್ಟಿದ್ದರು. ಇಂದು ಮನೆ ಸಂಪತ್ತಿನ ಬಗ್ಗೆ ವ್ಯಾಮೋಹ. 'ಒಂದು ರೀತಿಯ ವಿಚಿತ್ರವಾದ ಸುಳಿಯಲ್ಲಿ ಮಾನವರನ್ನ ಬಂಧಿಸಿಡುತ್ತಾನೆ, ಸೃಷ್ಟಿಕರ್ತ' ಅವಳ ತಂದೆ ಆಗಾಗ ಹೇಳುತ್ತಿದ್ದರು.

ಇಬ್ಬರನ್ನ ಒಳಗೆ ಕರೆದೊಯ್ದು ಮಲಗಿಸಿ ಗೀಸರ್ ಸ್ವಿಚ್ ಆನ್ ಮಾಡಿ ಸೊಂಟಕ್ಕೆ ಸೆರಗನ್ನ ಸಿಕ್ಕಿಸಿ ಇಡೀ ಮನೆಯನ್ನು ಸ್ವಚ್ಛ ಮಾಡತೊಡಗಿದಳು. ಸ್ನಾನ ಮುಗಿಸಿ ಬಂದು ಪಕ್ಕದ ಮನೆಯ ಹುಡುಗನಿಂದ ಹಾಲು ತರಿಸಿ ಇಬ್ಬರಿಗೂ ಕಾಫಿ ಒಯ್ದು ಕೊಟ್ಟಳು.

"ನಂಗೆ ಬೇಡ" ಪೂಜಾ ಗುರ್‌ಗುಟ್ಟಿದಳು.

"ತುಂಬ ಸುಸ್ತಾಗ್ತೀಯಾ ! ನೀನೇನು ನನ್ನ ಅತ್ತಿಗೇಂತ ಟ್ರೀಟ್ ಮಾಡ್ಬೇಡ. ಸಧ್ಯಕ್ಕೆ ಮಾವನವ್ರು ಒಂದಿಷ್ಟು ಚೇತರಿಸ್ಕೋಬೇಕು. ಅದ್ಕೇ ನಿನ್ನ ಕೋಪರೇಷನ್ ಮುಖ್ಯವಾಗುತ್ತೆ. ಪ್ಲೀಸ್ ಕುಡಿ" ಓಲೈಸಿ ಹೊರ ಬಂದ ಮೇಲೆ ಕಾಫಿಯ ಕಪ್ ಖಾಲಿಯಾಗಿದ್ದು.

ಮೃಣಾಲಿನಿಯವರ ಬಳಿಗೆ ಬಂದು "ಅತ್ತೆ, ನಾನು ನರ್ಸಿಂಗ್ ಹೋಂಗೆ ಹೋಗ್ತಾ ಇದ್ದೀನಿ. ಅಲ್ಲಿಂದಲೇ ಫೋನ್ ಮಾಡ್ತೀನಿ. ಅಡಿಗೆ ಮಾಡಿ ಟ್ಟಿದ್ದೀನಿ. ಊಟ ಮಾಡಿ" ಎಂದು ಹೇಳಿ ಹೊರಬಂದಳು.

ಈ ಮನೆಯ ಸೊಸೆ ಅವಳು. ಅಲ್ಲಿನ ಇಂಚು ಇಂಚಿನ ಪರಿಚಯ ಅವಳಿಗೆ ಇತ್ತು. ಯೋಗಾ...ಯೋಗವೇನೋ ಮತ್ತೆ ತಾತ್ಕಾಲಿಕವಾಗಿಯಾ ದರೂ ಈ ಮನೆಯೊಳಕ್ಕೆ ಬಂದಿದ್ದಳು.

ಡಾ|| ನವೀನ್ ಅವಳಿಗಾಗಿ ಕಾದಿದ್ದ.

"ಹೇಗಿದ್ದಾರೆ, ತಾಯಿ ಮಗ್ಳು ? ಈ ಸ್ಥಿತಿಯಲ್ಲಿ ನನ್ನ ಪೂಜಾ ಹುಲಿಯನ್ನ

ನೋಡಿದಂತೆ ನೋಡ್ತಾಳೆ. ಯುಗಂಧರ್ ಅಪಾಯದಿಂದ ಹೊರ್ಗೆ. ಏನು ತೊಂದರೆ ಇಲ್ಲ. ನೀನು ಅವ್ರನ್ನು ಕರ್ಕಂಡ್ ಬಂದು ನರ್ಸಿಂಗ್ ಹೋಂಗೆ ಸೇರಿಸಿರೋದು, ಅದು ಸ್ವಲ್ಪ ಹೆಚ್ಚು ಕಡ್ಮೆಯಾದರೇ ಎಲ್ಲಿಂದ ಎಲ್ಲಿಗೋ ಎಂದು ಹೆದರಿದ್ದೆ" ಸ್ವಲ್ಪ ಗೆಲುವಿನಿಂದ ನಗಾಡಿದ.

"ಪರ್ವಾಗಿಲ್ಲ, ಪೂಜಾಗಂತು ಕೋಪ ತಗ್ಗಿಲ್ಲ. ಅವ್ಳ ಸ್ಥಿತಿ ನೋಡಿ ನಂಗೆ ಕರುಳು ಕಿತ್ತು ಬಂತು. ಸ್ಲೀಪಿಂಗ್ ಟ್ಯಾಬ್ಲೆಟ್ಸ್ ತಗೊಂಡಿದ್ದಳಂತೆ ಸಾಯೋಕೆ. ಪಕ್ಕದ ಮನೆಯಾಕೆ ಹೇಳಿದ್ರು" ತಂಗಿ ಹೇಳಿದ ಕೂಡಲೇ 'ಖೊ ಖೊ ಖೊ' ಎಂದು ಜೋರಾಗಿ ನಕ್ಕು "ಸಾಯ್ಲಿಲ್ಲ, ನಮ್ಮನ್ನ ಉಳಿಸಿದ್ಲು. ಇಲ್ಲದಿದ್ದರೇ ಅಮ್ಮ ಮಕ್ಳು ಪೂಜಾ ಸಾವಿಗೆ ನಾವೇ ಕಾರಣಾಂತ ಕೋರ್ಟಿಗೆ ಹೋಗಿ ಬಿಡ್ತಾ ಇದ್ದರೇನೋ ! ಅದೊಂದು ತಪ್ಪಿತು" ನಿಟ್ಟುಸಿರು ದಬ್ಬಿದ.

ಚಾರುಲತ ತುಟಿಗಳ ಮೇಲೆ ನಗೆ ಅರಳಿತು.

"ಏನಿ ವೇ ಹ್ಯಾಪಿ ಎಂಡಿಂಗ್" ಎಂದಳು ಮೈ ಮರೆತು.

"ಚಾರು..." ಉದ್ಗರಿಸಿದ.

ಅವನ ನೋಟದಲ್ಲಿ ನೋಟ ನೆಟ್ಟು ಮೆಲು ನಗೆ ಬೀರಿದಳು. "ನನ್ನ ಅವಕಾಶವಾದಿ ಅಂತ ಅವ್ರೇನು ತಿಳಿಯೋದ್ಬೇಡ. ಸಮಯ ಆಗಿತ್ತು. ಮಾವನವ್ರು ಹುಷಾರಾದರೇ ಸಾಕು."

ಅಣ್ಣ, ತಂಗಿ ನಗುತ್ತ ಒಳ ಬಂದರು. ಅಪಾಯದಿಂದ ಹೊರ ಬಂದಿದ್ದರೂ ಇನ್ನ ಇನ್‌ಟೆನ್‌ಸ್ಸೀವ್ ಕೇರ್‌ನಲ್ಲಿಯೇ ಇಟ್ಟಿದ್ದರು ಯುಗಂಧರ್‌ನ. ಡಾ|| ನವೀನ್ ಮಾತ್ರ ಅತ್ತ ಸುಳಿಯುತ್ತಿರಲಿಲ್ಲ.

"ಅವರು ಹುಷಾರಾಗ್ತಾರೆ. ನೀನು ಆಗಿರೋದು, ನೋಡು. ನೆನ್ನೆ ಇಡೀ ರಾತ್ರಿ ನಿದ್ದೆ ಇಲ್ಲ. ಈಗ ಮನೆಗೆ ಹೋಗ್ಬರೋಣ ನಡೀ" ಎಂದ ಹಣೆಯುಜ್ಜುತ್ತ "ಬೇಡ, ಸಧ್ಯಕ್ಕೆ ಇಲ್ಲಿ ಯಾರಾದ್ರೂ ಇರಲೇ ಬೇಕು. ನಾಳೆ ವೇಳೆಗೆ ಅತ್ತೆ, ಪೂಜಾ ಚೇತರಿಸ್ಕೋತಾರೆ. ನಾಳಿದ್ದು ವಿಷ್ಯ ಮುಟ್ಟಿದ ಕೂಡ್ಲೇ ಅವರು ಬರ್ತಾರೆ. ಆಮೇಲೆ ಇಲ್ಲೇನು ಕೆಲ್ಸ ಇರೋಲ್ಲ" ಅತ್ಯಂತ ಸರಳವಾಗಿ ಹೇಳಿದಳು.

ಅಣ್ಣ, ತಂಗಿ ಇಡೀ ಕಾರಿಡಾರ್‌ನಲ್ಲಿ ಒಂದು ರೌಂಡ್ ಹಾಕಿಕೊಂಡು

ಬಂದರು. "ನೀನಿನ್ನ ಹೋಗು. ನಾಳೆ ಬೆಳಿಗ್ಗೆ ಫೋನ್ ಮಾಡು. ನಿನ್ನ ಅಗತ್ಯವಿದ್ದರೇ ಬಾ ಅಂತೀನಿ. ಇಲ್ಲದಿದ್ದರೇ ನರ್ಸಿಂಗ್‌ಹೋಂಗೆ ಹೋಗು. ಅಪ್ಪ ಏನು ಬರೋದ್ಬೇಡ. ನನಗೋಸ್ಕರ ಅವ್ರು ಅವಮಾನ ಸಹಿಸೋದು ನಂಗಿಷ್ಟವಿಲ್ಲ" ಸ್ಪಷ್ಟವಿತ್ತು ಅವಳ ಮಾತಿನಲ್ಲಿ.

"ರಾತ್ರಿ ನೀನು ಇಲ್ಲಿರ್ಬೇಕಾದ ಅಗತ್ಯವೇನಿಲ್ಲ. ಬೆಳಿಗ್ಗೆ ಬರ್ಬಹುದು" ಎಂದ ಹೋಗುವ ಮುನ್ನ "ಬೇಡ, ಎಷ್ಟೇ ಡಾಕ್ಟ್ರು ಸಿಸ್ಟರ್ಸ್ ಇದ್ದರೂ ಮನೆಯವ್ರ ಅಗತ್ಯವಿದೆ. ನೀನು ಹೋಗ್ಬಾ...ಅನಗತ್ಯವಾಗಿ ನೀರದ ಮೇಲೆ ರೋಪ್ ಹಾಕೋದ್ಬೇಡ" ಎಚ್ಚರಿಸಿಯೇ ಕಳಿಸಿದ್ದು.

ಆಮೇಲೆ ಮೃಣಾಲಿನಿಗೆ ಫೋನ್ ಮಾಡಿದಳು. "ಮತ್ತಷ್ಟು ಸುಧಾರಿಸಿದ್ದಾರೇಂತ ಅಂದರು ಡಾಕ್ಟ್ರು. ನಾನು ಇಲ್ಲೇ ಇರ್ತೀನಿ. ನಿಮ್ದು ಊಟ ಆಯ್ತು ? ಪೂಜಾಗೆ ಊಟ ಮಾಡ್ಸಿ. ಇಲ್ಲಿನ ಯೋಚ್ನೆ ಬೇಡ. ಸ್ಲೀಪಿಂಗ್ ಟ್ಯಾಬ್ಲೆಟ್ ಹಾಕಿಕೊಳ್ಳೋದು ಮರೀಬೇಡಿ" ಎಂದಳು. ಅವರು ಪ್ರತಿಯೊಂದಕ್ಕೂ ಹ್ಞೂಗುಟ್ಟಿದರು. "ಜೋಪಾನ, ಮನಸ್ಸೇ ನಿಲ್ಲದು. ಮತ್ತೊಮ್ಮೆ ಫೋನ್ ಮಾಡು" ಅವರ ಕಣ್ಣೀರು ಚಾರುಲತವರೆಗೂ ಹರಿದು ಬಂದಂತಾಯಿತು.

ಇಡೀ ರಾತ್ರಿ ನಿದ್ದೆ ಗೆಟ್ಟು ಅವರ ಬಳಿ ಇದ್ದುದ್ದರಿಂದ ಚಾರುಲತ ಕಣ್ಣುಗಳು ಬೆಳಗಿನ ವೇಳೆಗೆ ಭಗಭಗ ಎನ್ನತೊಡಗಿತು. ರೂಮಿನಿಂದ ಹೊರ ಬಂದಾಗ ಎದುರಾದುದ್ದು ತಾಯಿ ಮಗ.

"ಹೇಗಿದ್ದಾರೆ ?" ಮೃಣಾಲಿನಿಯ ಗಾಬರಿ.

"ಏನು ಪರ್ವಾಗಿಲ್ಲ. ಎಚ್ಚರವಾಗಿಯೇ ಇದ್ದಾರೆ" ಸರಿದು ಹೋದಾಗ ಮೂರ್ತಿಯ ನೋಟ ಹಿಂಬಾಲಿಸಿತು "ಚಾರುನ ನೀನೇ ಕರೆಸಿ ಕೊಂಡ್ಯಾ?" ಅರಿವಾಗದಂತೆ ಅವನ ಹುಬ್ಬುಗಳು ಬಿಗಿದುಕೊಂಡವು. ಕೇಳಿದ ಅಷ್ಟೆ, ಉತ್ತರವೇನು ನಿರೀಕ್ಷಿಸಲಿಲ್ಲ. ಅವನಿಗೆ ತಂದೆಯ ಆರೋಗ್ಯದ ಬಗ್ಗೆ ಗಾಬರಿ ಇತ್ತು. ಒಂದು ದಿನ ಮೊದಲೇ ಬಂದಿದ್ದರಿಂದ ಸುದ್ದಿ ಸಿಕ್ಕ ಕೂಡಲೇ ರಾತ್ರಿನೇ ಟ್ಯಾಕ್ಸಿ ಮಾಡಿಕೊಂಡು ಬಂದಿದ್ದ.

ಆರಾಮಾಗಿ ಚಾರುಲತ ಆಟೋ ಹತ್ತಿ ಮನೆಗೆ ಬಂದಳು. ಇನ್ನು ಇವಳ ಅಗತ್ಯ ಅಲ್ಲಿರಲಿಲ್ಲ. ಈಗಾಗಲೇ ವಿಷಯ ಮುಟ್ಟಿ ಯುಗಂಧರ್ ತಮ್ಮ

ತಂಗಿಯೆಲ್ಲ ಬಂದ ಸುದ್ದಿ ತಿಳಿದಾಗ ಹಾಯೆನಿಸಿತು.

ಸ್ಕೂಟರ್ ಹತ್ತುತ್ತಿದ್ದ ಡಾ।। ನವೀನ್ ಅಚ್ಚರಿಯಿಂದ ಇಳಿದ.

"ಏನು ವಿಷ್ಯ ?" ಗಾಬರಿಯಿಂದ ಪ್ರಶ್ನಿಸಿದ.

"ಮೊದ್ಲು ಆಟೋಗೆ ಹಣ ಕೊಡು" ಎಂದು ಮನೆಯೊಳಕ್ಕೆ ಹೋದಳು. ವರಾಂಡದಲ್ಲಿ ಪೇಪರ್ ಹಿಡಿದು ಕೂತ ವಾಸುದೇವಯ್ಯ "ಹೇಗಿದ್ದಾರೆ?" ಮೇಲೆದ್ದರು.

"ಈಗ ಹುಷಾರಾಗಿದ್ದಾರೆ" ಎಂದು ಅವರ ಎದುರಿನಲ್ಲಿ ಕೂತಳು.

"ನಾನು ಬರೋಣಾಂತ ಇದ್ದೆ. ನವೀನ ಬೇಡಾಂದ. ಬಹಳ ಒಳ್ಳೆ ಮನುಷ್ಯ. ಏನೋ ಭಿನ್ನಾಭಿಪ್ರಾಯ ಬಂತು. ಹಾಗೆಂದು ಸಂಬಂಧನ ಕಡಿದುಕೊಳ್ಳೋಕೆ ಸಾಧ್ಯನಾ ?" ಅವರ ದನಿಯಲ್ಲಿ ನೋವಿತ್ತು.

"ಚೇತರಿಸಿಕೊಂಡಿದ್ದಾರೆ. ನಮ್ಗೆ ಅಷ್ಟು ಸಾಕು. ಸ್ನಾನ ಮಾಡ್ಕೊಂಡ್ ಬೇಗ್ಬರ್ತೀನಿ" ಎದ್ದು ಹೋದಳು. ಮೈಯಲ್ಲಿ ನೀರಸವಿದ್ದರೂ ಅವಳು ಆಫೀಸಿಗೆ ಹೋಗುವ ನಿರ್ಧಾರ ಮಾಡಿದಳು.

ಬಾತ್‌ರೂಂನ ಬಳಿ ಎದುರಾದ ನೀರದ "ಯಾವಾಗ್ಬಂದ್ರಿ ? ನೀವು ಅಲ್ಲೇ ಉಳ್ಕೋತೀರೀಂತ ಅಂದ್ಕೊಂಡೆ. ಅಮ್ಮ ಕೂಡ ಅದನ್ನೇ ಹೇಳಿದ್ರು" ಅವಳ ಮಾತುಗಳಿಗೆ ಪ್ರತಿಕ್ರಿಯಿಸದೇ "ಹೊತ್ತಾಯ್ತು ಬೇಗ ಸ್ನಾನ ಮಾಡ್ಕೊಂಡ್ ಬರ್ತೀನಿ" ಸರಸಿಕೊಂಡು ಬಾತ್‌ರೂಮುನೊಳಕ್ಕೆ ಹೋಗಿ ಬಾಗಿಲು ಹಾಕಿಕೊಂಡಳು

ಮೌನವಾಗಿ ಕಣ್ಣೀರು ಸುರಿಸಿದಳು. ತುಂಬು ಅಕ್ಕರೆ ಸುರಿಸುತ್ತಿದ್ದ ನೀರದ ಅತ್ತಿಗೆಯಾದ ಮೇಲೆ ಬದಲಾಗಿದ್ದಾಳೆಯೆನಿಸಿತು. ಅವರ ವೈಯಕ್ತಿಕ ಸುಖ ಸಂತೋಷಗಳಿಗೆ ತಾನು ಅಡ್ಡಿಯೆನ್ನುವಂತೆ ಅವಳ ನೋಟ. ಇದೇನು ಬಿಡಿಸಲಾರದ ಒಗಟಲ್ಲ. ಕನ್ಯೆಯಾಗಿದ್ದಾಗ ತವರು ಮನೆಯಲ್ಲಿರುವುದೇ ಬೇರೆ. ಇನ್ನೊಬ್ಬರ ಕೈ ಹಿಡಿದ ಕೂಡಲೇ ತಾಯಿ ಮನೆಯಲ್ಲಿ ಹೆಣ್ಣು ತನ್ನ ಅಸ್ತಿತ್ವವನ್ನೇ ಕಳೆದುಕೊಂಡು ಬಿಡುತ್ತಾಳೆ. ಸರಿಯೋ, ತಪ್ಪೋ ಅಂತು ಇದೊಂದು ಪದ್ಧತಿ. ಮಾನಸಿಕವಾಗಿ ಎಲ್ಲರೂ ಇದಕ್ಕೆ ಹೊಂದಿಕೊಂಡಿದ್ದರು.

ಸ್ನಾನ ಮುಗಿಸಿಕೊಂಡು ಹೊರ ಬಂದಾಗ ಡಾ।। ನವೀನ್ ಅವಳಿಗಾಗಿ ಕಾದಿದ್ದ "ನಿನ್ನ ಡ್ರಾಪ್ ಮಾಡಿ ನಾನ್ಹೋಗ್ತೀನಿ. ಒಂದ್ಗಂಟೆ ಲೇಟಾಗಿ ಬರ್ತೀನೀಂತ ಪರ್ಮೀಷನ್ ತಗೊಂಡಿದ್ದೀನಿ" ಎಂದ.

ಐದೇ ನಿಮಿಷದಲ್ಲಿ ರೆಡಿಯಾದಾಗ ನೀರದ ತಂದು ಉಪ್ಪಿಟ್ಟಿನ ತಟ್ಟೆ ಅವಳ ಮುಂದಿಟ್ಟು "ಸ್ವಲ್ಪ ಉಪ್ಪು ಜಾಸ್ತಿಯಾಗಿದೆ. ಮೊಸರು ತರ್ಲಾ" ಎಂದಾಗ, ಚಾರುಲತಗೆ ತಿಂಡಿ ತಿನ್ನುವ ಉದ್ದೇಶವೇನು ಇರಲಿಲ್ಲ. "ಬೇಡ, ಈಗ್ಲೇ ಲೇಟಾಗಿದೆ. ಎರ್ಡು ದಿನ ರಜ ತಗೊಂಡಾಗಿದೆ. ಅದೊಂದು ಪ್ರೈವೇಟ್ ಫರ್ಮ್. ಜೊತೆಗೆ ತುಂಬ ಸ್ಟ್ರಿಕ್ಟ್. ಒಳ್ಳೆ ಧ್ಯೇಯೋದ್ದೇಶಗಳನ್ನಿಟ್ಕಂಡ್ ಬೆಳೀತಾ ಇರೋ ಕಂಪನಿ. ತೆಗೆದಿಡಿ. ಸಂಜೆ ಬಂದು ತಿಂತೀನಿ" ಚಪ್ಪಲಿ ಮೆಟ್ಟಿ ವರಾಂಡದಲ್ಲಿದ್ದ ತಂದೆಗೆ ಹೇಳಿ ಹೋಗುವ ವೇಳೆಗೆ ನವೀನ್ ಸ್ಕೂಟರ್ ಏರಿದ್ದ.

ಸ್ಕೂಟರ್ ನಿಂತಿದ್ದು ಹೋಟಲ್ ಮುಂದೆ.

"ಇದೇನಿದು ?" ಎಂದಳು.

"ನಂಗಂತು ಹಸಿವು. ಉಪ್ಪಿಟ್ಟು ಬಾಯಿಗೆ ಇಡೋಕೆ ಆಗದಷ್ಟು ಉಪ್ಪು ಹಾಕಿದ್ದಾಳೆ. ಹೊಟ್ಟೆಗೆ ಏನಾದ್ರೂ ಬಿದ್ದರೇನೇ ಮೈಗೆ ಶಕ್ತಿ" ಹೋಟೆಲ್‌ನೊಳಕ್ಕೆ ನಡೆದಾಗ ಹಿಂಬಾಲಿಸಿದಳು.

ನೀರದ ಬಹಳ ರುಚಿಕಟ್ಟಾಗಿ ಅಡಿಗೆ ತಿಂಡಿ ಮಾಡುತ್ತಿದ್ದಳು. ಅದನ್ನೆ ಹೆಚ್ಚು ಮೆಚ್ಚಿಕೊಂಡಿದ್ದು ಡಾ।। ನವೀನ್. ಅವನಿಗೆ ಸದಾ ಅಡಿಗೆ ರುಚಿ ರುಚಿಗಟ್ಟಾಗಿರಬೇಕು. ಆದರೆ ಮಡದಿಯಾಗಿ ಈ ಮನೆಗೆ ಕಾಲಿಟ್ಟ ಮೇಲೆ ಅಡಿಗೆ ತಿಂಡಿಯ ಹದವೇ ಕೆಟ್ಟು ಹೋಗಿತ್ತು. ಯಾಕೆ ಹೀಗೆ ? ಇದಕ್ಕೆ ಕಾರಣ ಯಾರು ಹೇಳಬೇಕು.

ಕೂತ ನಂತರ ಅಣ್ಣನತ್ತ ನೋಡಿ ಮುಗುಳ್ನಗೆ ಬೀರಿ "ಏನಾದ್ರೂ ಸಣ್ಣ ಫೈಟಿಂಗಾ ? ಅದ್ಕೇ ಉಪ್ಪಿಟ್ಟಿನ ಹದ ಕೆಟ್ಟಿದೆ" ಎಂದಳು.

ಫ್ಯಾನ್‌ನ ಬಟನ್ನೊತ್ತಿ ಷರಟಿನ ಮೇಲಿನ ಗುಂಡಿ ಬಿಚ್ಚಿ "ಅವ್ಳ ಹದನೆ ಕೆಟ್ಟಿದೆ. ಇನ್ನ ಉಪ್ಪಿಟ್ಟಿನ ಹದ ಕೆಡೋದೇನು ? ಎಷ್ಟೊಂದು ಓಲೈಸೋಳು. ಅವ್ಳು ಹುಟ್ಟಿರೋದೇ ನಂಗಾಗಿ, ಬದ್ಕಿರೋದೇ ನಂಗಾಗಿ ಅನ್ನೋ ತರಹ ನಡ್ಕೋತಾ ಇದ್ದೋಳು ಈಗ ಪೂರ್ತಿ ತದ್ವಿರುದ್ಧ. ನನ್ನಿಂದ್ಲೇ ಅವ್ಳಿಗೆ ಅನ್ಯಾಯವಾಗಿದೆ ಅನ್ನೋ ತರಹ ನಡ್ಕೋತಾಳೆ. ಎಲ್ಲಾ ವಿಪರೀತ, ವಿಚಿತ್ರ.

ಹೆಣ್ಣನ್ನ, ಮನೆಯನ್ನ ತೀರಾ ಹಚ್ಕೊಂಡೋನು ಬದ್ಕಿನಲ್ಲಿ ಮೇಲೇ ರೋಲ್ಲ. ಇದು ನನ್ನ ಫಿಲಾಸಫಿ. ಅವೆಲ್ಲ ಬಿಡು, ಈಗೇನು ತಗೋ ತೀಯಾ ? ತಿಂಡಿ ಆಗೋವರ್ಗೂ ಯಾವ್ದೇ ವಿಷ್ಯದಲ್ಲಿ ಕಾಮೆಂಟ್ಸ್ ಬೇಡ" ತುಟಿಗಳ ಮೇಲೆ ಬೆರಳಿಟ್ಟು ಎಚ್ಚರಿಸಿದ.

"ಸಾರಿ, ಒಂದೇ ಒಂದ್ಮಾತು. ನಿನ್ನ ಅನುಭವಗಳ್ನ ಬರ್ದು ಪುಸ್ತಕ ರೂಪದಲ್ಲಿ ಪ್ರಕಟಿಸ್ಬಾರ್ದು. ಅದರಿಂದ ಪ್ರೇರಿತರಾಗಿ ಕೆಲವರಾದ್ರೂ ತಮ್ಮ ವಿವಾಹದ ಡೇಟ್ಸ್‌ನ ಮುಂದೆ ಹಾಕ್ತಾರೆ. ಮತ್ತೆ ಕೆಲವರು ಪ್ರೇಮಿಗಳಾಗಿಯೇ ಉಳಿತಾರೆ. ಇನ್ನ ಕೆಲವರು ಪ್ರೇಮಿಗಳ್ನ ಬಿಟ್ಟು ಹಿರಿಯರು ತೋರಿಸೋ ವ್ರನ್ನ ಲಗ್ನವಾಗ್ತಾರೆ". ನಕ್ಕಳು.

"ಇದು ಒಂದೇ...ಒಂದ್ಮಾತಾ ? ಆ ಬಗ್ಗೆ ಯೋಚಿಸ್ತೀನಿ. ಸಧ್ಯಕ್ಕೆ ಮಾತ್ಬೇಡ" ಅಲ್ಲಿಗೆ ನಿಲ್ಲಿಸಿದ.

ಇಬ್ಬರು ಇಡ್ಲಿ, ವಡೆ ಸಾಂಬಾರ್ ಜೊತೆ ಒಂದೊಂದು ಪ್ಲೇಟ್ ಪೂರಿ ಕೂಡ ತಿಂದು ಎದ್ದರು.

"ಸಧ್ಯಕ್ಕೆ ತೃಪ್ತಿ ಆಯ್ತು. ಅದೇನು ಅಪ್ಪ ಒಂದೆರಡು ಸಲ ಕೇಳಿದ್ರು. ನಿನ್ಗೇನೋ ಹೇಳೋದಿದೆ ಅಂದರು. ಅದೇನಮ್ಮ ಅಂಥ ವಿಷ್ಯ ?"

ಡಾ|| ನವೀನ್ ಕೇಳಿದ ನಂತರವೇ ಅವಳಿಗೆ ಮನೆಯ ವಿಷಯ ನೆನಪಾದದ್ದು. ಆದರೆ ಈಗ ಅದರ ಪ್ರಸ್ತಾಪ ಬೇಡವೆನಿಸಿತು.

"ಅದೇನು ಮುಖ್ಯವಾದುದ್ದಲ್ಲ. ನಂಗೆ ಹೊತ್ತಾಯ್ತು."

ತಂಗಿಯನ್ನ ನಿವೇದಿತಾ ನ್ಯೂ ವುಮನ್ಸ್ ವೇರ್ ಬಳಿ ಇಳಿಸಿಯೇ ಅವನು ನರ್ಸಿಂಗ್ ಹೋಂಗೆ ಹೋಗಿದ್ದು. ಮಧ್ಯೆ ನರ್ಸಿಂಗ್ ಹೋಂಗೆ ಫೋನ್ ಮಾಡಿ ಯುಗಂಧರ್ ದೇಹ ಸ್ಥಿತಿ ವಿಚಾರಿಸಿಕೊಂಡು ಸಮಾಧಾನದ ಉಸಿರು ದಬ್ಬಿದ 'ಗಾಡ್ ಈಸ್ ಗ್ರೇಟ್' ಎಂದುಕೊಂಡ. ಹಿಂದೆಯೇ ಪೂಜಾಳ ನೆನಪಾಯಿತು. ಅವಳ ಕಣ್ಣುಗಳಲ್ಲಿನ ಮಿಂಚು ಏನಾಯಿತು ? ಆ ಹುಡುಗಿ ಆತ್ಮಹತ್ಯೆ ಮಾಡಿಕೊಳ್ಳಬೇಕಾದರೇ ತನ್ನನ್ನು ಎಷ್ಟು ತೀವ್ರವಾಗಿ ಪ್ರೇಮಿಸಿರಬೇಕು. ಅವಳ ನಗು, ಸ್ನೇಹಮಯವಾದ ಮಾತುಗಳಲ್ಲಿನ ಪ್ರೇಮವನ್ನ ತಾನು ಗುರುತಿಸಲೇ ಇಲ್ಲ. ಇದಕ್ಕೆ ನೀರದ ಅಡ್ಡ ನಿಂತಿರ ಬೇಕು.

'ಛೆ....ಆ ಬಗ್ಗೆ ಚಿಂತಿಸುವುದು ಬೇಡ' ಎನ್ನುವ ತೀರ್ಮಾನಕ್ಕೆ ಬಂದು ತನ್ನ ಕೆಲಸದಲ್ಲಿ ಮಗ್ನನಾದ.

ಅಂದು ಚಾರುಲತ ಬಸ್ಸಿಗಾಗಿ ಹೊರಟಾಗ ಅವಳ ತಂದೆ ಜೊತೆಯಾದರು. "ನವೀನ್ ಹತ್ರ ಮನೆ ವಿಷ್ಯ ಮಾತಾಡಿದ್ಯಾ ? ಅವ್ರು ಯಾರೋ ನೆನ್ನೆ ದಿನ ಬಂದು ಮನೆ ನೋಡ್ಕೊಂಡ್ಹೋದ್ರು. ಎದೆಯಲ್ಲಿ ಥಳಕ್ ಅಂತು. ಆಮೇಲೆ ನೀರದ ದೊಡ್ಡ ಪಂಚಾಯಿತಿನೇ ಮಾಡಿದ್ಳು. ಅವ್ಳಿಗಂತು ಮನೆ ಬದಲಾವಣೆ ಸುತರಾಂ ಇಷ್ಟವಿಲ್ಲ."

ಅವಳ ಮುಖ ತೀರಾ ಗಂಭೀರವಾಯಿತು. ಸದಾ ಮಲಗಿಯೇ ಇರೋ ನೀರದ ಅಮ್ಮ ಸದಾ ಕದಡುತ್ತಲೇ ಇದ್ದರು. ಈ ಕದಡುವಿಕೆಯ ಪರಿಣಾಮ ಅವಳ ವೈಯಕ್ತಿಕ ಜೀವನದ ಮೇಲೆ ಕರಿ ನೆರಳಿನ ಛಾಯೆ ಬೀಳುತ್ತದೆಯೆನ್ನುವುದು ಆಕೆಗೆ ತಿಳಿಯಂದೋ ! ಇಲ್ಲ ಭಯ, ಆವೇಗದಿಂದ ವಿವೇಕ ಕಳೆದುಕೊಂಡಿದ್ದಾರೇನೋ !

ಈ ವಿಷ್ಯದಲ್ಲಿ ನಮ್ಮ ಪ್ರವೇಶ ಬೇಡವೇ ಬೇಡ. ಅವರಿಬ್ಬರೇ ಚರ್ಚಿಸಿ ನಿರ್ಧಾರಕ್ಕೆ ಬರ್ಲಿ. ನಂಗೆ ಅಣ್ಣನ ಮುಂದೆ ಈ ಪ್ರಸ್ತಾಪ ಎತ್ತೋಕೆ ತುಂಬ ಭಯ. ಈಗ್ಲೇ ಸುಮಾರು ತಲೆ ಕೆಡ್ಸಿಕೊಂಡಿದ್ದಾನೆ.. ನಿಮ್ಮನ್ನು ದೂರ ಮಾಡ್ಕೊಂಡರೆ ಮತ್ತಷ್ಟು ಹದಗೆಡಬಹ್ದು. ಅದೇ ನಂಗೆ ಭಯ. ನಾನು ಇಲ್ಲದಿದ್ದರೇ ಅವರಿಬ್ರೂ ಸರಿ ಹೋಗ್ತಾರೆ. ಅಲ್ಲೇ ವುಮೆನ್ಸ್ ಹಾಸ್ಟಲ್ ಇದೆ. ದೂರ ಅನ್ನೋ ಕಾರಣ ನೀಡಿ ನಾನು ಅಲ್ಲೇ ಉಳ್ಕೋತೀನಿ ಎಂದಳು ಮೆಲುವಾಗಿ. ಇದರಿಂದ ಅವರಿಗೆ ನೋವೆಂದು ಗೊತ್ತು. ಹಾಗೆಂದು ಮತ್ತಷ್ಟು ಸಮಸ್ಯೆಗಳನ್ನು ಗುಡ್ಡೆ ಹಾಕಿಕೊಳ್ಳುವುದು ಬೇಡವಾಗಿತ್ತು.

ವಾಸುದೇವಯ್ಯನ ಕಣ್ಣಲ್ಲಿ ನೀರಾಡಿತು. ಉದ್ವಿಗ್ನತೆ ಕಂಪಿಸುತ್ತಿದ್ದರಿಂದ ನಡೆಯಲು ಸಾಧ್ಯವಿಲ್ಲವೆನಿಸಿತು.

"ಸಂಜೆ ಮಾತಾಡೋಣ, ನೀನ್ಹೋಗು...." ಎಂದವರು ಅಲ್ಲೇ ಇದ್ದ ಮೆಡಿಕಲ್ ಸ್ಟೋರ್‌ಗೆ ಹೋದರು. ಅವರು ಆಗಾಗ ಹೋಗಿ ಬರುತ್ತಿದ್ದ ರಿಂದ ರೂಢಿಯಾಗಿದ್ದರು. ಅಲ್ಲಿ ಹೋಗಿ ಕೂತು ಸುಧಾರಿಸಿಕೊಳ್ಳುವುದು ಅವರ

ಉದ್ದೇಶವಾಗಿತ್ತು.

"ಬನ್ನಿ.....ಬನ್ನಿ" ಸ್ವಾಗತಿಸಿದರು ಹಿರಿಯರು. ಅವರೊಬ್ಬ ಸರ್ಕಾರಿ ನೌಕರರು. ನಿವೃತ್ತಿಯ ನಂತರ ಮಗನ ಮೆಡಿಕಲ್ ಸ್ಟೋರ್‌ನಲ್ಲಿ ಬಂದು ಕೂಡುತ್ತಿದ್ದರು ಆಗಾಗ. ಸ್ವಲ್ಪ ಮಾತಿನ ಮನುಷ್ಯ. "ಕೂತ್ಕೊಳ್ಳಿ" ಕೈಯಲ್ಲಿನ ಪೇಪರ್‌ನ ಪಕ್ಕಕ್ಕಿಟ್ಟರು.

ಈಗಿನ ಪ್ರಸಕ್ತ ರಾಜಕೀಯದ ಮಾತುಕತೆ ಷುರುವಾಗಿ ಹಿಂದಿನ ದಿನ ನಡೆದ ಶಿರಾ ಗಲಭೆ, ಪೊಲೀಸರಿಂದ ಲಾಠಿ ಛಾರ್ಜ್, ಆರು ಜನ ರೈತರು ಸೇರಿ ಒಬ್ಬ ಸರ್ಕಲ್ ಇನ್ಸ್‌ಪೆಕ್ಟರ್‌ನ ಮರಣ. ಲಾಜಿಕ್ಕಾಗಿ ಚರ್ಚೆ ಮಾಡಿದರು ಎಲ್ಲಾ ಕೋನಗಳಿಂದಲೂ.

"ತೀರಾ ಕುಲಗೆಟ್ಟು ಹೋಗಿದೆ, ರಾಜಕೀಯ ಪರಿಸ್ಥಿತಿ. ಬರೀ ತಮ್ಮ ಛೇರ್‌ಗಾಗಿ ಬಡಿದಾಡುತ್ತಾರೆಯೇ ವಿನಃ ಯಾರಿಗೂ ಸಾಮಾನ್ಯ ಜನರ ಬಗ್ಗೆ ಕಾಳಜಿ ಇಲ್ಲ" ನೋವಿನಿಂದ ನುಡಿದರು.

ಅಂಗಡಿಯಲ್ಲಿದ್ದ ಹುಡುಗನನ್ನ ಕಳಿಸಿ ಕಾಫಿ ತರಿಸಿದವರೇ ಮತ್ತೆ ಮಾತು ಷುರು ಹಚ್ಚಿದರು "ನಿಮ್ಮ ಮಗ್ಳಿಗೆ ವಿವಾಹವಾಗಿದೆ ಅಲ್ವಾ ? ನಾನು ಬಂದಿದ್ದೆ ಮದುವೆಗೆ. ಆದರೆ ಈ ಕಡೆ ಓಡಾಡ್ತಾ ಇರೋದು, ಇನ್ನೊಬ್ಬ ಮಗಳಾ ?" ಕೇಳಿದರು ನೇರವಾಗಿ.

"ಇಲ್ಲ, ಇರೋದು ಒಬ್ಬ ಮಗ್ಳು. ಇನ್ನೊಂದು ಗಂಡು ಸಂತಾನ. ಅವ್ನಿಗೂ ಈಚೆಗೆ ವಿವಾಹವಾಯ್ತು. ನಾನೇ ಸ್ವತಃ ಬಂದು ಆಹ್ವಾನ ಪತ್ರಿಕೆ ಕೊಟ್ಟು ಹೋಗಿದ್ದೆ" ಎಂದರು ವಾಸುದೇವಯ್ಯ.

ಅವರ ಮುಖನೇ ಒಂದು ತರಹ ಆಯಿತು.

"ನೀವು ಕೊಟ್ಟಿರುತ್ತೀರಿ ! ಅವ್ನು ನನಗೆ ತಲುಪಿಸ್ಬೇಕಲ್ಲ. ಹಿರಿಯರು ಅಂದರೇನು ಉಪೇಕ್ಷೆ. ಮೊದಲಿನ ಹಾಗೆ ಈಗಿನವ್ರಿಗೆ ಬಧ್ಧಿನ ಬಗ್ಗೆ ಪ್ರೀತಿ ಕಡ್ಮೇ. ಬೇರೆ ಜನರೊಂದಿಗೆ ಸ್ನೇಹ, ವಿಶ್ವಾಸ ಅನ್ನೋದಿಲ್ಲ. ಬರೀ ವ್ಯವಹಾರಿಕ ಸ್ವಪ್ರತಿಷ್ಠೆ. ನಂಗೆ ಇದೆಲ್ಲ ಹಿಡಿಯೋಲ್ಲ. ಅದ್ನ ಯಾರ್ಗೇ ಹೇಳ್ಬೇಕು ? ಕೇಳೋರು ಯಾರಿದ್ದಾರೆ ? ನಮ್ಗೆ ಬಾಯಿ ನೋವು. ಆದ್ರೂ ಮನಸ್ಸು ತಡ್ಕೋಲ್ಲ" ಮಗನನ್ನ ಬೈಯ್ದುಕೊಂಡರು. ಅವರು ಸ್ವಲ್ಪ ತಮ್ಮ ಯೌವನದ ದಿನಗಳನ್ನ ನೆನಪಿಸಿಕೊಂಡಿದ್ದರೇ, ಸ್ವಲ್ಪವಾದರೂ ರಾಜಿ ಯಾಗುತ್ತಿದ್ದರು. ಅವರ

ಮನಸ್ಥಿತಿ, ಸಮಸ್ಯೆಗಳನ್ನ ಅರ್ಥ ಮಾಡಿಕೊಳ್ಳುತ್ತಿದ್ದರು. ಅದು ಬಹಳಷ್ಟು ಜನಕ್ಕೆ ಸಾಧ್ಯವಾಗದು.

ಸ್ವಲ್ಪ ಬಳಲಿಕೆ ಇದ್ದುದ್ದರಿಂದ ವಾಸುದೇವಯ್ಯ ಮಾತಾಡಲಿಲ್ಲ. ಆದರೆ ಮತ್ತೆ ಅವರು ಹಿಂದಕ್ಕೆ ಹೋದರು. "ನಿಮ್ಮ ಮಗ್ಳು ಒಬ್ಳೇ ಅಂದರಲ್ಲ" ಕನ್ನಡಕ ಸರಿಪಡಿಸಿಕೊಂಡು ಕಣ್ಣು ಕಿರಿದು ಮಾಡಿದರು.

"ಹೌದು" ಎಂದರು.

"ಇಲ್ಲೇ ಓಡಾಡುತ್ತಾಳಲ್ಲ ! ದಿನ ಇದೇ ಸಮಯಕ್ಕೆ ಹೋಗ್ತಾಳೆ. ಇದು ಆಫೀಸ್‌ಗಳಿಗೆ ಹೋಗೋ ಸಮಯ. ಎಲ್ಲಾದ್ರೂ ಕೆಲ್ಸದಲ್ಲಿ ಇದ್ದಾಳ?" ಅವರ ಮನಕ್ಕೆ ನೇರವಾಗಿ ಪಾತಾಳ ಗರಡಿ ಹಾಕಿದರು.

ಯಾಕಾದರೂ ಇಲ್ಲಿಗೆ ಬಂದೆನೋ, ಎಂದು ಮರುಗಿದರು ವಾಸುದೇವಯ್ಯ. ಅಷ್ಟರಲ್ಲಿ ಗಿರಾಕಿಗಳು ಬಂದಿದ್ದರಿಂದ ಮೇಲೆದ್ದರು.

"ಸುಮ್ನೆ ತೊಂದರೆ."

ಆ ಮನುಷ್ಯ ಬಿಡಬೇಕಲ್ಲ. ಕೈ ಹಿಡಿದು "ಕೂತ್ಕೊಳ್ಳಿ, ಅದ್ರಿಂದ ನಮ್ಗೇನು ತೊಂದರೆ ? ಹುಡ್ಗ ನೋಡ್ಕೋತಾನೆ. ನಾನು ನಾಮಕಾವಸ್ಥೆ ಮಗ ಇಲ್ಲದಾಗ ಬಂದು ಕೂತ್ಕೋತೀನಿ" ಕೂಡಿಸಿಕೊಂಡ ಮಹಾಶಯ.

"ಮಗ್ಳು ಕೆಲ್ಸದಲ್ಲಿ ಇದ್ದಾಳ ?" ಮತ್ತೆ ಅದೇ ಪ್ರಶ್ನೆ.

"ಹೌದು, ನ್ಯೂ ವುಮೆನ್ಸ್ ವೇರ್ ಹೌಸ್‌ನ ಅಕೌಂಟ್ ಸೆಕ್ಷನ್‌ನಲ್ಲಿದ್ದಾಳೆ. ಈಗ ಹೆಣ್ಣು ಮಕ್ಳು ಓದೋದು, ಕೆಲ್ಸಕ್ಕೆ ಹೋಗೋದು ಸರ್ವೇ ಸಾಮಾನ್ಯ" ಎಂದರು. ಇದೊಂದು ತಪ್ಪಿಸಿಕೊಳ್ಳುವ ಪ್ರಯತ್ನ ಅವರದು.

"ನಿಮ್ಮ ಮಾತು ನೂರಕ್ಕೆ ನೂರರಷ್ಟು ನಿಜ. ನಿಮ್ಮ ಮಗ್ಳು ಕೂಡ ಕೆಲ್ಸಕ್ಕೆ ಹೋಗ್ಲಿ. ಹಣ ಬರುತ್ತೆ. ದುಡ್ಡು ಯಾರ್ಗೆ ಬೇಕಿಲ್ಲ? ಆದರೆ ಗಂಡ-ಹೆಂಡ್ತಿ ಒಂದೇ ಊರಿನಲ್ಲಿ ಇರ್ಬೇಕು. ಇಲ್ಲದಿದ್ದರೇ ನೂರೆಂಟು ಸಮಸ್ಯೆ. ಅವ್ರ ಮಧ್ಯೆ ಪ್ರೀತಿ-ಪ್ರೇಮ ಬೆಳೀಬೇಡ್ವಾ ? ಅತಿಥಿಗಳಂತೆ ವಾರಕ್ಕೋ, ತಿಂಗ್ಳಿಗೋ, ವರ್ಷಕ್ಕೋ ಭೇಟಿಯಾಗೋದು ಏನು ಚೆನ್ನ ? ನಂಗೆ ಮಾತ್ರ ಅದು ಹಿಡಿಸೋಲ್ಲ. ಇದ್ರಿಂದ ತೀರಾ ಅಪಾಯ ಕೂಡ. ನಿಮ್ಗೂ ಇದೆಲ್ಲ ಗೊತ್ತಿಲ್ಲದ ಸಂಗ್ತಿಯಲ್ಲ ಬಿಡಿ" ಇಡೀ ಪುರಾಣವೇ ಒದರಿದರು. ಅದರಲ್ಲಿ ಪೀಠಿಕೆ ಕೂಡ ಇತ್ತು.

ಅರ್ಥಂಬರ್ಥ ವಿಷಯ ಇವರಿಗೆ ಗೊತ್ತಿರ ಬಹುದೆಂದುಕೊಂಡರು ವಾಸುದೇವಯ್ಯ.

"ನಿಮ್ಮ ಮಾತು ನಿಜ" ಒಪ್ಪಿಗೆ ಸೂಚಿಸಿದರು.

ವಯಸ್ಸಾದ ವ್ಯಕ್ತಿ ಸ್ವಲ್ಪ ಬಗ್ಗಿ ಗುಟ್ಟು ಹೇಳುವಂತೆ "ನಿಮ್ಮ ಅಳಿಯ ಬೇರೆ ಊರಿನಲ್ಲಿ ಲೆಕ್ಚರರ್. ಒಳ್ಳೆ ಕೆಲ್ಸ. ಕೈ ತುಂಬ ಸಂಬಳನು ಕೂಡ. ಅಂದರೇ ನಿಮ್ಮ ಮಗ್ಳು ಕೆಲ್ಸಕ್ಕೆ ಹೋಗ್ಬಾರ್ದು ಅನ್ನೋ ಉದ್ದೇಶ ನನ್ನದಲ್ಲ. ಇದು ನಮ್ಮ ಕಾಲ ಅಲ್ಲ. ಹೆಣ್ಣು ಮಕ್ಕಳಿಗೆ ನೂರೆಂಟು ಖರ್ಚುಗಳು ಇರುತ್ತೆ. ಎಲ್ಲಾ ಗಂಡ ಪೂರೈಸೋಕೆ ಆಗುತ್ತಾ ? ಸ್ವಂತ ದುಡಿಮೆ ಇರ್ಲಿ. ಹಾಗಂತ ಗಂಡನಿಂದ ದೂರ ಇರೋದು ಮಾತ್ರ ಸರಿಯಲ್ಲ" ಹಿತೈಷಿಯಂತೆ ಹೇಳಿದಾಗ ಹ್ಞೂಗುಟ್ಟುವುದರ ವಿನಃ ಮತ್ತೇನು ಮಾಡುವಂತಿರಲಿಲ್ಲ ವಾಸುದೇವಯ್ಯ.

ಮತ್ತಷ್ಟು ವಿಶ್ವಾಸ ತೋರುವಂತೆ ಅವರ ಕೈ ಹಿಡಿದುಕೊಂಡು "ಯುಗಂಧರ್ ಗೊತ್ತು, ಒಳ್ಳೆ ಮನುಷ್ಯ. ಹಣದ ಮುಖ ನೋಡಿದೋನೇ ಅಲ್ಲ. ಇದು ನಂಗೆ ಹೇಗೇ ಗೊತ್ತಾಯಿತೂಂದರೇ, ಅದೇ ಅವ್ರ ಮಗನಿಗೆ ನಮ್ಮ ಸಂಬಂಧದ ಹುಡ್ಗೀನ ಕೊಡಿಸಲಿಕ್ಕೆ ನಾನೇ ಮಧ್ಯಸ್ಥಿಕೆ ವಹಿಸಿದ್ದೆ. ಬೆಂಕಿಯಂಥ ಜನ. ನಮ್ಗೇ ಅಂಥದೆಲ್ಲ ಬೇಡ. ನಮ್ಗೆ ಹುಡ್ಗಿ ಇಷ್ಟವಾದರೇ ಸಾಕೂಂದ. ಆಮೇಲೆ ಆ ಸಂಬಂಧ ಆಗಲಿಲ್ಲ ಅಂದ್ಕೊಳ್ಳಿ. ಅವ್ರ ಮಗ್ಳು ನಿಮ್ಮ ಮಗ್ಳೇ ಅತ್ತಿಗೆ ಆಗ್ಬೇಕೂಂತ ಹಟ ಹಿಡಿದಳಂತೆ. ಇವೆಲ್ಲ ಸ್ವಲ್ಪ ಹಳೆಯದಾಯ್ತು. ನೀವು ಸ್ವಲ್ಪ ದೊಡ್ಡ ಮನಸ್ಸು ಮಾಡ್ಕೊಂಡ್ ಆ ಹುಡ್ಗೀನ ತಂದ್ಕೋಬೇಕಿತ್ತು" ಎನ್ನುವ ವೇಳೆಗೆ ಅವರ ಮಗ ಬಂದು ವ್ಯಾಪಾರಕ್ಕೆ ನಿಂತ.

"ಏನೋ ಋಣಾನುಬಂಧ ಇರ್ಲಿಲ್ಲ. ಮೊದ್ಲೇ ಹುಡ್ಗಿ ನಿಶ್ಚಯವಾಗಿದ್ಲು. ಮಾತು ಕೊಟ್ಟು ಬದಲಾಯಿಸೋಕೆ ಸಾಧ್ಯನಾ ? ಅದೆಲ್ಲ ನಮ್ಮ ಕೈಯಲ್ಲಿ ಇದ್ಯಾ ? ದೈವ ಚಿತ್ತದಂತೆ ನಾವು ನಡೀಬೇಕು" ವಾಸುದೇವಯ್ಯ ನೊಂದ ದನಿಯಲ್ಲಿ ಹೇಳಿದರು. ಅವರೆದೆಯಲ್ಲಿ ದೊಡ್ಡ ವೇದನೆಯ ಅಗ್ನಿಕುಂಡವೇ ಇತ್ತು. ಬೊಗಸೆ ಬೊಗಸೆ ಚೆಲ್ಲಿದಷ್ಟು ತುಂಬಿಕೊಳ್ಳುತ್ತಿತ್ತು.

"ಇದೆಲ್ಲ ತಪ್ಪಿಸಿಕೊಳ್ಳೋ ಮಾತುಗಳು. ನಿಮ್ಗೆ ದೇವ್ರು ಬುದ್ಧಿ ಕೊಟ್ಟಿರಲಿಲ್ವಾ? ? ಒಂದಿಷ್ಟು ವ್ಯವಹಾರಿಕವಾಗಿ ಯೋಚ್ಸಬೇಕಿತ್ತು. ತಂದೆಯಾಗಿ ಸ್ವಂತ ಮಗ್ಳ ಬಾಳಿಗೆ ಬೆಂಕಿ ಇಟ್ಟಿರಿ. ನಿಮ್ಮ ಮಗ್ಳು ಗಂಡ ನೊಂದಿಗೆ

ನಗುನಗುತ್ತಾ ಹೋಗ್ತಾ ಇದ್ದಿದ್ನಾ ನೋಡಿ ಸಂತೋಷಪಟ್ಟೋನು ನಾನು. ಈಗ ಆ ಹುಡ್ಗಿ ಒಂಟಿಯಾಗಿ ಹೋಗ್ತಾ ಇದ್ದರೇ ಎದೆಗೆ ಭರ್ಜಿ ಹಾಕಿ ತಿವಿದಂತಾಗುತ್ತೆ. ಸ್ವಂತ ತಂದೆಯಾಗಿ ನೀವು ಹೇಗಿದ್ದೀರಿ? ನಂಗೆ ಮಾತ್ರ ಇದು ಚೆನ್ನಾಗಿ ಕಾಣ್ಲಿಲ್ಲ" ಎದೆಗೆ ಒದ್ದಂತೆ ಹೇಳಿದಾಗ ಎದ್ದ ವಾಸುದೇವಯ್ಯ ಎರಡು ಕೈಗಳನ್ನು ಜೋಡಿಸಿದರು. "ಹಿಂದೆ ನಿಮ್ಮನ್ನ ಭೇಟಿ ಮಾಡ್ಬೇಕಿತ್ತು. ಇದೇ ಮಾತುಗಳ್ನ ಯಾರಾದ್ರೂ ಆಗ ಹೇಳಿದ್ದರೇ, ಇಂಥ ದೊಡ್ಡ ತಪ್ಪು ಆಗ್ತಾ ಇರ್ಲಿಲ್ಲ. ಬರ್ತೀನಿ" ನಡೆದೇಬಿಟ್ಟರು.

ಹಿಂಬಾಲಿಸಿಕೊಂಡು ಬಂದ ಅವರ ಮಗ "ನಮ್ತಂದೆ ಮಾತಿಗೆ ನೀವೇನು ಬೇಜಾರು ಮಾಡ್ಕೋಬೇಡಿ. ಅವ್ರ ತಪ್ಪುಗಳ್ನ ಬೇಕಾದರೆ ಪಟ್ಟಿ ಮಾಡ್ಬಹುದ್ದು. ನಮ್ಮಕ್ಕನ ಚಿಕ್ಕ ವಯಸ್ಸಿನಲ್ಲಿ ಇಷ್ಟವಿಲ್ಲದವ್ನಿಗೆ ಕಟ್ಟಿದ್ರು. ಮೂರು ಮಕ್ಳು ಜೊತೆ ಬಂದು ತವರು ಮನೆ ಸೇರ್ಕೊಂಡ್ ಹತ್ತು ವರ್ಷ ಆಯ್ತು. ಅವ್ನು ಈ ಕಡೆ ತಿರ್ಗಿ ನೋಡ್ಲಿಲ್ಲ. ಬರೀ ಕೋರ್ಟು, ಲಾಯರ್ ಅಂತ ಹಣ ಖರ್ಚು ಮಾಡೋದೇ ಆಯ್ತು. ಇದೊಂದು ಎಗ್ಸಾಮ್‌ಪಲ್. ಇಂಥದ್ದು ಬೇಕಾದಷ್ಟಿದೆ. ಚಾರುಲತ ನಾವು ನೋಡ್ದ ಹುಡ್ಗೀನೇ. ಎಲ್ಲಾ ಗೊತ್ತಾಯ್ತು. ನಮ್ಮಕ್ಕನ ಹಾಗೇ ತವರು ಮನೆಗೆ ಭಾರವಾಗಿ ಅಳ್ತಾ ಕೂಡಲಿಲ್ಲ. ಒಂದ್ಕೆಲ್ಸ ಹಿಡಿದಿದ್ದಾಳೆ. ಅದ್ಕೇ ಸಂತೋಷಪಡಿ. ಮನೆ ಮನೆಯಲ್ಲು ಇಂಥದ್ದು ಇದೆ. ನಂಗೂ ವಿವಾಹವಾಗಿ ಹತ್ತು ವರ್ಷ ಆಯ್ತು. ಅವ್ಳಿಗೆ ಸದಾ ಗಂಡ ನನ್ನ ಸೆರಗು ಇಡ್ಕೊಂಡ್ ಓಡಾಡ್ಬೇಕು ಅನ್ನೋ ಆಸೆ. ನಂಗೆ ನನ್ನ ವ್ಯಾಪಾರನೇ ಮುಖ್ಯ. ಮುನಿಸ್ಕೊಂಡ್ ಮೂರು ತಿಂಗ್ಳು ಹಿಂದೆ ತವರಿಗೆ ಹೋದ್ಲು. ನಂಗೇನು ಬೇಜಾರಿಲ್ಲ. ಹತ್ತು ಗಂಟೆವರ್ಗೂ ವ್ಯಾಪಾರ. ಆಮೇಲೆ ಲೆಕ್ಕ ನೋಡೋದು ಇರುತ್ತೆ. ಆಮೇಲೆ ಆರಾಮಾಗಿ ನಿದ್ದೆ ಬರುತ್ತೆ. ಯಾವಾಗ್ಲಾದ್ರೂ ಬರಲೀ. ನಾನು ಆ ಕಡೆ ತಲೆ ಹಾಕಿಲ್ಲ" ಅವರ ಮನೆಯ ಪೂರ್ತಿ ಕತೆಯನ್ನ ಬಿಡಿಸಿಟ್ಟ.

ಅವರು ತಲೆ ದೂಗಿದರಷ್ಟೆ. ಮಾತು ಬೇಕೂಂತ ಅನ್ನಿಸಲಿಲ್ಲ.

"ಇಷ್ಟೆಲ್ಲ ಯಾಕೆ ಹೇಳ್ದೆಂತ ಅಂದರೇ, ನಮ್ಮ ಅಪ್ಪ ರಾಡಿ ಮಾಡಿರೋ ನಿಮ್ಮ ಮನಸ್ಸು ಒಂದಿಷ್ಟು ತಿಳಿಯಾಗ್ಲಿ" ಎಂದು ಹಿಂದಕ್ಕೆ ಹೋದ.

ಆ ಹಿರಿಯ ಮನುಷ್ಯನ ಬಗ್ಗೆ ಅವರಿಗೆ ಬೇಜಾರು ಇರಲಿಲ್ಲ. ಅವರು ಹೇಳಿದ ಮಾತಿನ ಅರ್ಥ ಮನದಟ್ಟಾಗಿತ್ತು. ಅಂದು ತಾನು ಮಗಳ ಬಗ್ಗೆ ಯೋಚಿಸಿದ್ದರೇ ಚೆನ್ನಿತ್ತು. ಈಗ ಚಿಂತಿಸಿ ಫ಼ಯೋಜನವೇನು ?

ಮನೆಯ ಕಡೆ ಹೆಜ್ಜೆ ಹಾಕಿದರು.

ಬಾಗಿಲಲ್ಲಿ ನಿಂತಿದ್ದ ನೀರದ ತಟ್ಟನೇ ಒಳಗೆ ಹೋದಳು. ಅವಳಿಗೆ ಈಗ ತಂದೆ, ಮಗನ ಬಗ್ಗೆ ವಿಪರೀತ ಕೋಪ. ಅವಳಮ್ಮ ಇನ್ನೊಂದು ವಿಷಯ ಊದಿದ್ದರು. "ನಂಗೇನೋ ಅನುಮಾನ ಕಣೇ ! ಚಾರುಲತ ಮದ್ವೆಯಲ್ಲಿ ಅವ್ರು ವರದಕ್ಷಿಣೆ, ವರೋಪಚಾರ ಬೇಡ ಅಂದಿರ್ಬಹ್ದು. ಈಗ ಅವ್ರು ಮಗ್ಳಿಗೆ ಕೊಡಲು ಹಣ ಬೇಕು. ಅದ್ಕೇ ಇವ್ರು ಮನೆ ಮಾರಿ ಹಣ ಕೊಡ್ಬಹ್ದು. ಇರೋ ಒಂದ್ಮನೆ ಮಾರ್‍ಕೊಂಡರೇ ಏನು ಉಳಿಯುತ್ತೆ. ಹಾದಿಗೆ ನಾಲ್ಕು ಜನ ಡಾಕ್ಟರ್‌ಗಳು ಆಗ್ಬಿಟ್ಟಿದ್ದಾರೆ. ಸರ್ಕಾರಿ ನೌಕರಿ ಸಿಕ್ಕೋಲ್ಲ. ನವೀನ್ ನಿನ್ನ ಕೈ ಹಿಡೀತಾನೇಂತ ತಿಳಿದಾಗ ನಾನು ಎಷ್ಟೊಂದು ಆಸೆ ಇಟ್ಕೊಂಡಿದ್ದೆ, ಗೊತ್ತಿದ್ಯಾ ! ಕಡೆವರ್‍ಗೂ ಈ ಹಳೆ ಸ್ಕೂಟರ್ ಗತಿಯಾಗು ತ್ತೇನೋ" ಆಕೆಯ ಕಣ್ಣೀರು ಅವಳನ್ನ ತಟ್ಟಿತ್ತು.

ವಾಸುದೇವಯ್ಯ ಸೊಸೆಯ ಕಡೆ ನೋಡಿ "ಯಾಕಮ್ಮ ಒಂದು ತರಹ ಇದ್ದೀಯಾ ? ಆಕಸ್ಮಾತ್ ಕೋಪದಿಂದ ಅವನೇನಾದ್ರೂ ಎಗರಾಡಿದರೇ ಸಮಾಧಾನವಾಗಿ ಹೋಗ್ಬೇಕು. ಹೊರ್‍ಗಡೆ ಅವ್ನಿಗೆ ಹಲವು ಸಮಸ್ಯೆಗಳು ಇರುತ್ತೆ" ಬಿಡಿಸಿಟ್ಟರು. ಮನೆಗೆ ಬಂದ ಹೆಣ್ಣು ಮುಖ ಮುದುಡಿ ಕೂಡುವುದು ಬೇಕಿರಲಿಲ್ಲ.

"ನೀವು ಕೋಪ ಮಾಡ್ಕೋಬಾರ್‍ದು. ಈಗ ಮನೆ ಬದಲಾಯಿಸೋದು ಯಾಕೆ ?" ಸೊಸೆಯ ಪ್ರಶ್ನೆಗೆ ನಿರುತ್ತರರಾದರು. ಖಂಡಿತ ಉತ್ತರಿಸಲಾರರು "ಅದ್ನ ನವೀನ್‌ನಲ್ಲಿ ಕೇಳು" ಅಂದವರು ಅಲ್ಲೇ ಇದ್ದ ಆರಾಮ ಛೇರ್‌ನ ಮೇಲೆ ಕೂತು ಕಣ್ಮುಚ್ಚಿ "ಒಂದ್ಲೋಟ ನೀರು ಕೊಡು ತಾಯಿ" ಹೇಳಿದರು.

ಒಂದಷ್ಟು ಪಾತ್ರೆಗಳು ಸದ್ದಾದ ನಂತರವೇ ನೀರದ ನೀರು ಹಿಡಿದು ಬಂದಿದ್ದು. ಮುಗುಳ್ನಗು ತೇಲಿತು ಅವರ ತುಟಿಗಳ ಮೇಲೆ. ಇದೇ ಈ ನೀರದ ಸದಾ ಅವರ ಹಿಂದೂ ಮುಂದು ಸುತ್ತುತ್ತಿದ್ದಳು. ಇಲ್ಲಿ ಕೆಮ್ಮಿದ್ದು ಕೇಳಿಸಿದರೇ ಎದುರು ಮನೆಯಿಂದ ನೀರಿಡಿದು ಹಾರಿ ಬರುತ್ತಿದ್ದಳು. ಎಷ್ಟೊಂದು ಅಕ್ಕರೆ, ಇವರ ಪ್ರತಿಯೊಂದು ಕೆಲಸದಲ್ಲು ಅವಳು ಸಹಾಯ ಮಾಡುವುದು. 'ಮಾವ, ಮಾವ' ಒಂದು ನೂರು ಸಲವಾದರೂ ಕರೆಯುತ್ತಿದ್ದಳು ಆತ್ಮೀಯವಾಗಿ. ಅವಳ ನಡತೆ ಅವರನ್ನ ಬಹಳವಾಗಿ ತಟ್ಟಿತ್ತು. 'ತಾನು ಸ್ವಾರ್ಥದಿಂದ ಯೋಚಿಸಿರಬೇಕು' ಎಂದುಕೊಂಡರು ಇಂದು.

ನೀರು ಕುಡಿದು ಲೋಟ ಹಿಂದಿರುಗಿಸಿದರು ನೀರದ ನಿಂತ ಜಾಗ ಬಿಟ್ಟು ಅಲ್ಲಾಡಲಿಲ್ಲ. ಅವಳು ಮತ್ತೇನೋ ಹೇಳುವುದಿದೆಯೆಂಬು ತಿಳಿದು

ಮೌನವಾದರು.

"ಒಂದ್ಮಾತು ಕೇಳಿದ್ರೆ ನೀವು ಬೇಜಾರು ಮಾಡ್ಕೋಬಾರ್ದು. ನವೀನ್ ನಿಮ್ಮ ಮಾತು ಇಲ್ದೇ ಇಂಥ ಪ್ರಯತ್ನ ಮಾಡ್ತಾರಾ ? ನಂಗೆ ನಂಬಿಕೆ ಇಲ್ಲ" ಎಂದಳು. ಅವಳಲ್ಲಿನ ದಿಟ್ಟತನದ ಅರಿವಾಯಿತು ವಾಸುದೇವಯ್ಯನವರಿಗೆ. ಉಗುಳು ಕಹಿಯೆನಿಸಿದರೂ ಬಲವಂತದಿಂದ ನುಂಗಿದರು.

"ನನ್ನ ಮುಂದು ಕೂಡ ಪ್ರಸ್ತಾಪಿಸಿದ್ದಾನೆ. ಅವನೊಂದಿಗೆ ಮಾತಾಡು. ಕೂತು ಚರ್ಚಿಸಿ. ನಿಮ್ಮನಿಮ್ಮಲ್ಲಿನ ಲೋಪ ದೋಷಗಳ್ನ ಒಮ್ಮತ್ರದಿಂದ ತಿದ್ದಿಕೊಳ್ಳಿ. ಆಗ ಒಬ್ಬರ ಬಗ್ಗೆ ಇನ್ನೊಬ್ಬರ ನಂಬಿಕೆ ಅನುಮಾನ ಬಲವಾಗುತ್ತೆ. ಅದ್ಬಿಟ್ಟು ನೀನು ಮುಖ ಮುದುರಿ ಕೂಡೋದು, ಅವ್ನು ಸಿಡುಕೋದು ಏನು ಚೆನ್ನ ?" ಅಕ್ಕರೆಯಿಂದ ಬುದ್ಧಿ ಹೇಳಿದರು. ಇವಳು ಸಹನೆ ಕೆಟ್ಟರೆ ಡಾ|| ನವೀನ್ ಮನೆಗೆ ಬರುವುದನ್ನ ಕಮ್ಮಿ ಮಾಡುತ್ತಾನೆಂದು ಅವರ ಅನುಭವಕ್ಕೆ ಬಂದಿತ್ತು. ಈಗಾಗಲೇ ಆ ಹಾದಿಯನ್ನ ಹಿಡಿದಿದ್ದ.

"ನನ್ನ ತಪ್ಪೇನಿಲ್ಲ. ಅವ್ರೇ ಬದಲಾಗಿದ್ದಾರೆ" ಮುಖ ದಪ್ಪಗೆ ಮಾಡಿದ್ದು ವಾಸುದೇವಯ್ಯನಿಗೆ ಸರಿ ಕಾಣಿಸಲಿಲ್ಲ "ಆಯ್ತು, ಅದ್ಕೇ ಕಾರಣ ಹುಡ್ಕು. ನನ್ನಿಂದ ನನ್ನ ತಂಗಿ ಬಾಳು ಹಾಳಾಯಿತಲ್ಲ ಅನ್ನೋ ನೋವು ಇರೋದು ಸಹಜ. ಅದ್ನ ನೀನು ಹಂಚ್ಕೋ. ಧೈರ್ಯ ಹೇಳು. ಆಗ ಎಲ್ಲಾ ಸರಿ ಹೋಗುತ್ತೆ" ತಿಳುವಳಿಕೆಯ ಮಾತುಗಳನ್ನ ಹೇಳಿದರು.

"ಅವ್ರು ಕಾರಣವಾಗ್ಬಹುದ್ದು. ನಾನಂತೂ ಕಾರಣವಲ್ಲ. ಆ ಹುಡ್ಗೀ ಜೊತೆ ಪ್ರೇಮ - ಪ್ರೀತಿ ಅಂತ ಸುತ್ತಾಡಿದ್ದಕ್ಕೆ ತಾನೇ ಇಷ್ಟೊಂದು ರಾಮಾಯಣ ವಾಗಿದ್ದು. ಎಲ್ಲಾ ಮುಚ್ಚಿಟ್ಟರು."

ಮಗನ ಮೇಲೆ ಸೊಸೆಯೊರೆಸಿದ ದೋಷಾರೋಪಣೆಗೆ ಅವಾಕ್ಕಾದರು. ಭಯವೆನಿಸಿತು. ಇದು ತೀರಾ ಅಡ್ಡ ದಾರಿ. ಹೀಗಾದರೆ ಇಬ್ಬರು ಬೇರೆ ಬೇರೆ ತೀರಗಳನ್ನ ಸೇರಿ ಬಿಡುತ್ತಾರೆ.

"ನಿನ್ನ ಯೋಚ್ನೇ ಅಡ್ಡ ದಾರಿ ಹಿಡಿದಿದೆ. ಅವ್ನ ಮೇಲೆ ಪ್ರೀತಿ ಪ್ರೇಮ ವಿದ್ದರೇ ನಿನ್ನಾಕೆ ವಿವಾಹವಾಗ್ತಾ ಇದ್ದ ? ಇಷ್ಟು ಸರಳವಾದ ವಿಷಯನ ತಿಳಿಯಲಾರದಷ್ಟು ಹೆಡ್ಡಿನಾ ? ಈ ಮಾತುಗಳ್ನ ಅವ್ನ ಮುಂದೆ ಆಡಿ ಅವ್ನ

ಮನಸ್ಸಿನಿಂದ ದೂರ ಸರಿಬೇಡ. ಹೋಗಿ, ಕೆಲ್ಸ ನೋಡ್ಕೋ. ಸಧ್ಯಕ್ಕೆ ನಿಮ್ಮಮ್ಮನ ಮುಂದೆ ಹೋಗಿ ಕೂತು ಉಪದೇಶ ಕೇಳೋದನ್ನ ಕಡ್ಮೆ ಮಾಡ್ಕೋ" ಮೊದಲ ಸಲ ಸೊಸೆಯ ಮೇಲೆ ಗುಡುಗಿದರು.

ಅಡಿಗೆ ಮನೆಗೆ ಹೋದ ನೀರದ ಇಡೀ ದಿನ ಗರಬಡಿದಂತೆ ಅಲ್ಲೇ ಕೂತಳೇ ವಿನಃ ಒಂದು ಕೆಲಸ ಮಾಡಲಿಲ್ಲ. ಹೇಳಿ ಸಾಕಾದ ವಾಸುದೇವಯ್ಯ ತಾವೇ ಅಡಿಗೆ ಮಾಡಿದರು.

"ಊಟ ಮಾಡು ಬಾ" ಕರೆದರು.

ನೀರದ ಅಲ್ಲಾಡಲಿಲ್ಲ. ಕಾದು ಕಾದು ಸೋತು ಕಡೆಗೆ ತಾವೇ ತಟ್ಟೆಗೆ ಬಡಿಸಿಕೊಳ್ಳುವ ವೇಳೆಗೆ ಅವಳ ಅತ್ತಿಗೆ ಬಂದಳು "ನೀರದ ಎಲ್ಲಿ ?"

ಅಡಿಗೆ ಮನೆಯತ್ತ ಸನ್ನೆಯಿಂದ ತೋರಿದರಷ್ಟೆ. ಅಸಹನೆ, ಕೋಪ, ಜಿಗುಪ್ಸೆಯಿಂದ ಅವರ ತಲೆ ಸಿಡಿಯುತ್ತಿತ್ತು. ಸೊಸೆ ಮನೆಗೆ ಬಂದರೇ ಸಕಲ ಸೌಭಾಗ್ಯಗಳು ಲಭಿಸಿ ತಾವು ಸುಖಿಯಾಗಿ ಬಿಡುತ್ತೇನೆಂದು ತಿಳಿದಿದ್ದು ತಪ್ಪೆನಿಸಿತು. ಹಿಂದೆ ನಗುವಿತ್ತು, ಶಾಂತಿ ಇತ್ತು, ಸಂತೋಷವಿತ್ತು-ಈಗ ಅವೆಲ್ಲ ಅದೃಶ್ಯವಾಗಿತ್ತು.

ಅವರಿಗೆ ಊಟ ಮಾಡಲಾಗಲಿಲ್ಲ. ತಟ್ಟೆಗೆ ನಮಸ್ಕರಿಸಿ ಅನ್ನವನ್ನ ಹಿತ್ತಲಲ್ಲಿ ಚೆಲ್ಲಿ ಬಂದು ಕೂತರು.

"ನೀರದಾಗೆ ಏನಾಗಿದೆ ?" ಅವಳ ಅತ್ತಿಗೆ ಕೇಳಿದಾಗ ಗೊತ್ತಿಲ್ಲವೆಂದು ತಲೆಯಾಡಿಸಿ "ಅವ್ಳು ಊಟ ಮಾಡಿಲ್ಲ. ಕರ್ಕೊಂಡ್ಹೋಗಿ ಊಟಕ್ಕೆ ಹಾಕು. ಉಪವಾಸದಿಂದ ಏನು ಸಾಧಿಸೋಕ್ಕಾಗೋಲ್ಲ" ಎಂದರು.

ಅತ್ತಿಗೆ ಕರೆದಿದ್ದೇ ಸಾಕು, ಎದ್ದು ಆರಾಮಾಗಿ ಹೊರಟುಬಿಟ್ಟಳು. ಇದಕ್ಕೆ ಪ್ರತ್ಯಕ್ಷದರ್ಶಿಯಾಗಿದ್ದ ಕೆಲಸದ ಮೋನಮ್ಮ ಬಂದ ಕೂಡಲೇ ಡಾ॥ ನವೀನ್‌ಗೆ ಹೊರಗಡೆ ವಿಷಯ ಮುಟ್ಟಿಸಿ ತಾನು ಹಗುರಾದಳು.

"ನೀನ್ಹೋಗು...." ಎಂದ ಮುಖ ಗಂಟಿಕ್ಕಿ.

"ಅಯ್ನೋರು ಒಂದು ತುತ್ತು ಅನ್ನ ತಿನ್ನಲಿಲ್ಲ" ಅಂದಾಗ ಮಾತ್ರ ನೀರದಾನ ಕತರಿಸಿ ಹಾಕಬೇಕೆನಿಸಿತು.

ಒಳಗೆ ಬಂದವನು ತಂದೆಯನ್ನ ಆತುರಾತುರವಾಗಿ ಹೊರಡಿಸಿಕೊಂಡು "ಬೇಗ ಬರ್ಬೇಕು" ಎಳೆದೊಯ್ದ ಎಂದು ಹೇಳಬಹುದು.

ಹತ್ತಿರದ ಹೋಟೆಲ್‌ಗೆ ಕರೆದೊಯ್ದು ತಿಂಡಿಗೆ ಆರ್ಡರ್ ಮಾಡಿದ.

"ಏನೋ ಇದು ? ಅಡಿಗೆನೇ ಖರ್ಚಾಗಿರ್ಲಿಲ್ಲ. ಅದ್ಕೆ ತಿಂಡಿಯೇನು ಮಾಡ್ಲಿಲ್ಲ. ನಂಗೇನು ಹಸಿವು ಇರ್ಲಿಲ್ಲ. ಯಾಕೋ ತುಂಬ ಬದಲಾಗಿದ್ದೀಯ" ತಂದೆಯ ಮಾತಿಗೆ ಜೋರಾಗಿ ನಕ್ಕು ದನಿ ತಗ್ಗಿಸಿ ಅವರತ್ತ ನೋಡಿ "ಹೊಸ ಪೋಸ್ಟ್ ನಿಭಾಯಿಸಬೇಕಲ್ಲ ! ಏನೇನೋ ಅರ್ಥ ಮಾಡ್ಕೋಬೇಡಿ. ನಿಮ್ಗೆ ಮನೆ ತೋರಿಸೋದು ಇತ್ತಲ್ಲ. ಅದ್ಕೇ ಆತುರಾತುರವಾಗಿ ಎಳ್ಕಂಡ್ ಬಂದೆ" ಎಂದ ಅಂಗೈಗಳನ್ನ ಹೊಸಕಿಕೊಳ್ಳುತ್ತ.

ಮೊದಲು ಕಸಿವಿಸಿಗೊಂಡರು ವಾಸುದೇವಯ್ಯ, ತೃಪ್ತಿಯಾಗಿಯೇ ಬೆಣ್ಣೆ ಮಸಾಲೆ ತಿಂದರು. ಕಾಫಿ ಕುಡಿದಾದ ಮೇಲೆ ಸ್ಕೂಟರ್ ತಂದು ಚಾರುಲತ ಇಳಿಯುವ ಬಸ್‌ಸ್ಟಾಪ್‌ನಲ್ಲಿ ನಿಲ್ಲಿಸಿದ.

"ಇದೇನು, ಇಲ್ಲಿ ?" ಕೇಳಿದರು.

"ಚಾರುನು ಬರ್ತಾಳಲ್ಲ. ಮತ್ತೆ ಇನ್ನೊಂದ್ಸಲ ಕರ್ಕಂಡ್ ಹೋಗೋ ದೇನು? ಅದ್ಕೇ ಒಟ್ಟಿಗೆ ಹೋಗೋಣಾಂತ" ಎಂದ ಬಸ್ಸಿನ ಹಾದಿ ನೋಡುತ್ತ.

ಸೊಸೆಯ ಮನದ ಮಾತನ್ನ ಮಗನಿಗೆ ತಿಳಿಸುವುದು ಕರ್ತವ್ಯವಾಗಿ ಕಂಡಿತು.

"ಮಧ್ಯಾಹ್ನ ಮನೆ ಬದಲಾವಣೆಯ ವಿಷ್ಯ ನೀರದ ಪ್ರಸ್ತಾಪಿಸಿದ್ಳು. ನೀನು ಮೊದ್ಲೇ ಅವ್ಳ ಕಿವಿಯ ಮೇಲೆ ಈ ಮಾತು ಹಾಕ್ಬೇಕಿತ್ತು. ತುಂಬ ನೊಂದುಕೊಂಡ್ಳು. ಅವ್ಳಿಗೆ ಇಷ್ಟವಾಗೋಲ್ಲ."

ತಂದೆಯ ಮಾತುಗಳಿಗೆ ಕಿರುನಗೆ ಬೀರಿದ.

"ಹೇಗೆ, ಹೇಳೋಕ್ಕಾಗುತ್ತೆ ? ಬೇಡಾಂತಾಳೆ. ಇವ್ಳು ಇಲ್ಲಿಂದ ಹೊರಟು ಹೋದರೆ ಅವಳಮ್ಮನ ಉಪದೇಶ ಕೇಳೋರು ಯಾರು ? ನಮ್ಮ ಡಾ|| ರೆಡ್ಡಿ ಆಗಾಗ ಒಂದ್ಮಾತು ಹೇಳ್ತಾರೆ. ಕೋಳಿನ ಕೇಳಿ ಮಸಾಲೆ ಅರೆಯೋಲ್ಲ ಅಂತ. ಈ ವಿಷ್ಯದಲ್ಲಿ ಅವ್ಳ ಅಭಿಪ್ರಾಯ ಬೇಕಿಲ್ಲ" ಸ್ಪಷ್ಟವಾಗಿ ಹೇಳಿದ. ಅವನ ಮುಖ ಕೋಪದಿಂದ ಉರಿಯುತ್ತಿತ್ತು.

"ನಂಗೇನು ಅರ್ಥವಾಗೋಲ್ಲ !" ಎಂದರು ನೋವಿನಿಂದ.

ತಂದೆಯತ್ತ ನೋಡಿದ. 'ಅರೆ, ಇಷ್ಟೊಂದು ಸುಕ್ಕುಗಳು ಇವರ ಮುಖದ ಮೇಲೆ ಮೂಡಿದ್ದು ಎಂದು ?' ಚಾರುಲತ ಭವಿಷ್ಯದ ಬಗ್ಗೆ ಆತಂಕದಿಂದ ತೀರಾ ಹಣ್ಣಾಗಿದ್ದಾರೆನಿಸಿದಾಗ, ಅವನ ಕರುಳು ಕಿತ್ತು ಬಂದಂತಾಯಿತು. ಝುಳು ಝುಳು ಹರಿದು ಹೋಗುತ್ತಿದ್ದ ಜೀವನ ಸಮಸ್ಯೆಗಳೆಂಬ ಕಸ ಕಡ್ಡಿಯ ನಡುವೆ ಸಿಕ್ಕಿಕೊಂಡು ಒದ್ದಾಡುತ್ತಿತ್ತು.

ಹದಿನೈದು ನಿಮಿಷ ಕಾದ ನಂತರವೆ ಬಸ್ಸು ಬಂದಿದ್ದು. ಇಳಿದ ಚಾರುಲತ ಆಶ್ಚರ್ಯಗೊಂಡಳು. ಹಿಂದೆಯೇ ಆತಂಕ. ಇಂದು ಮಧ್ಯಾಹ್ನ ಯುಗಂಧರ್ ಆರೋಗ್ಯ ವಿಚಾರಿಸಲು ಫೋನ್ ಮಾಡಿದಾಗ ಮೃಣಾಲಿನಿ ಬಹಳ ದಿನಗಳ ನಂತರ "ಹೇಗಿದ್ದಿ ?" ಎಂದು ವಿಚಾರಿಸುವುದರ ಜೊತೆಗೆ "ತುಂಬ ಥ್ಯಾಂಕ್ಸ್, ನಿನ್ನಿಂದ ದೊಡ್ಡ ಉಪಕಾರವೇ ಆಗಿದೆ" ಅಂದಾಗ ಸದ್ದಿಲ್ಲದೇ ಫೋನಿಟ್ಟಿದ್ದಳು.

"ಇದೇನು, ನೀವಿಬ್ರೂ ಇಲ್ಲಿ ?" ಕೇಳಿದಳು ಗಾಬರಿಯಿಂದ.

"ಅಂಥದೇನಿಲ್ಲ !" ಎಂದವ ಸ್ಕೂಟರ್‌ನ ವೆಹಿಕಲ್ ಸ್ಟಾಂಡ್‌ನಲ್ಲಿ ನಿಲ್ಲಿಸಿ ಆಟೋನ ತಂದ "ಹತ್ಕೊಳ್ಳಿ" ಸೂಚಿಸಿದ.

ತಂದೆ, ಮಗಳು ಮುಖ ಮುಖ ನೋಡಿಕೊಂಡರು.

ಆಗ ತಾನೇ ಕಟ್ಟಿ ಮುಗಿಸಿದ ಇತ್ತೀಚೆಗೆ ಗೃಹಪ್ರವೇಶ ಮಾಡಿದ ಒಂದು ಹೊಸ ಮನೆಯ ಮುಂದೆ ಆಟೋ ನಿಲ್ಲಿಸಿ ಹಣ ಕೊಟ್ಟಾಗಲೇ ದೂರದ ಲೆಕ್ಕ ಹಾಕಿದ್ದು ಚಾರುಲತ. ಮುವತ್ತಾರು ರೂಪಾಯಿ ಆಟೋದವನಿಗೆ ತೆತ್ತಿದ್ದ.

ಹೊಸ ಏರಿಯಾ. ಹೆಚ್ಚು ಕಡಿಮೆ ಇತ್ತೀಚೆಗೆ ಕಟ್ಟಲ್ಪಟ್ಟ ಬಿಲ್ಡಿಂಗ್‌ಗಳು. ಅವನೇ ಜೇಬಿನಿಂದ ಕೀ ತೆಗೆದು ಗೇಟಿಗೆ ಹಾಕಿದ್ದ ಬೀಗ ತೆಗೆದ. ವಿಶಾಲವಾದ ಕಾಂಪೌಂಡ್ ಬಟ್ಟ ಬಯಲಿನಂತಿತ್ತು. ಅಲ್ಲಲ್ಲಿ ಪೈಂಟ್‌ನ ಕರೆಗಳು, ಸಿಮೆಂಟುನ ಧೂಳು ಇತ್ತು. ಅಂತು ಚೆಂದವಾದ ಮನೆಯೇ.

"ಅಂತು ಒಳ್ಳೆ ಕಡೆನೇ ಮನೆ ಹಿಡಿದಿದ್ದೀಯಾ ! ನೀರದ ಅವ್ವ ಅಮ್ಮನನ್ನ ಒಮ್ಮೆ ನೋಡಿ ಬರಬೇಕಾದರೆ, ನೂರು ರೂಪಾಯಿ ಖರ್ಚು. ಇದು ತುಂಬ ಅನ್ಯಾಯ. ಆ ಹಣ ನೀನೇ ಕೊಡಬೇಕಲ್ಲ ಬಿಡು" ಅಂದು ಅಣಕಿಸಿದಳು

ಚಾರುಲತ.

ಬೀಗ ತೆಗೆಯುತ್ತಿದ್ದವನು ತಂಗಿಯತ್ತ ನೋಟ ಹರಿಸಿ "ಯಾಕೆ ಕೊಡೋಲ್ಲ? ಖಂಡಿತ ಕೊಡ್ತೀನಿ. ನನ್ನ ಸಂಬಳ ಈ ಮನೆ ಬಾಡಿಗೆ, ಎಲೆಕ್ಟ್ರಿಕ್ ಬಿಲ್‌ಗೆ ಸರ್‍ಹೋಗುತ್ತೆ. ಉಳಿದಿದ್ದು ಪೆಟ್ರೋಲ್‌ಗೆ. ನಾನು ಇಂಥ ಸ್ಥಿತಿಯಲ್ಲಿರೋವಾಗ, ಅವಳಿಗೆ ನೂರು ನೂರು ಕೊಟ್ಟು ಅವಳಮ್ಮ ನನ್ನು ನೋಡಲು ಕಳಿಸ್ತೀನಿ" ವ್ಯಂಗ್ಯವಾಗಿ ಅಂದ. ಸ್ವಲ್ಪ ಜಿದ್ದಿಯಾಗಿ ಕಂಡ ನವೀನ್ ಮೊದಲ ಸಲ ಚಾರುಲತಗೆ.

ಮೂವರು ಒಳಗೆ ಪ್ರವೇಶಿಸಿದರು. ಒಳಗೆ ಬರೀ ಪೈಂಟ್ ಮತ್ತು ಪಾಲಿಷ್‌ನ ವಾಸನೆ. ನೆಲಕ್ಕೆ ಪೂರ್ತಿಯಾಗಿ ಮಾರ್ಬಲ್ ಹಾಕಿಸಿದ್ದರು. ಎರಡು ದೊಡ್ಡ ರೂಮು. ಹಾಲ್, ಡೈನಿಂಗ್ ಹಾಲ್‌ನ ಕೂಡಿಸಿ ನವೀನ ಉಾದರಿಯಲ್ಲಿ ವಿಸ್ತರಿಸಿದ್ದರು. ಅಡಿಗೆ ಮನೆಗೂ ಪೂರ್ತಿಯಾಗಿ ಮಾರ್ಬಲ್ಸ್. ಗೋಡೆಗಳಿಗೆ ಸೆರಾಮಿಕ್ಸ್ ಟೈಲ್ಸ್, ಸಿಂಕ್-ನಲ್ಲಿ ಎಲ್ಲಾ ಲೇಟೆಸ್ಟ್ ಆಗಿಯೇ ಇತ್ತು.

ಅಂತು ಚೆಂದದ ಮನೆಯೇ. ತಂದೆ, ಮಗಳು ಡಾ|| ನವೀನ್‌ನತ್ತ ನೋಡಿದರು. ಅರ್ಥಮಾಡಿಕೊಂಡ "ಬಾಡ್ಗೇ ಬಗ್ಗೆ ಅಂಥ ಯೋಚ್ನೇ ಬೇಡ. ಹೆಚ್ಚಿಗೇನು ಕೊಡೊದ್ಬೇಡ ಅಂದಿದ್ದಾನೆ. ಡಾ|| ರೆಡ್ಡಿ ಒಂದೈದು ವರ್ಷ ದುಬೈಗೆ ಹೋಗ್ತಾ ಇದ್ದಾನೆ. ಅವನದೇ ಮನೆ. ಅವ್ನೇ ನನಗೊಂದು ಆಫರ್ ಕೊಟ್ಟ. ಇಂಥ ಮನೆ ಕಟ್ಟಿಸೋದಂತು ದೂರದ ಮಾತು. ಆದರೂ ಇಂಥ ಮನೆಯಲ್ಲಿ ಬಾಡಿಗೆ ಕೊಟ್ಟಾದ್ರೂ ವಾಸ ಮಾಡಬಹುದಲ್ಲ" ಎಂದ ಸುತ್ತಲೂ ನೋಟ ಹರಿಸುತ್ತ. ಹಾಲ್‌ನಿಂದ ನಾಲ್ಕು ಮೆಟ್ಟಲು ಎತ್ತರಿಸಿ ಡೈನಿಂಗ್ ಟೇಬಲ್ ಹಾಕಲು ಮಾಡಿದ್ದರು. ಆ ಮೆಟ್ಟಲು ಮೇಲೆ ಕೂತಳು ಚಾರುಲತ. ಸಧ್ಯಕ್ಕೆ ನವೀನ್‌ನೊಂದಿಗೆ ಮಾತಾಡಲು ಇದು ಸುಸಮಯ ವೆನಿಸಿತು.

"ಕೂತ್ಕೋಪ್ಪ" ಎಂದಳು ತನ್ನ ಹ್ಯಾಂಡ್ ಬ್ಯಾಗ್‌ನ ಪಕ್ಕದಲ್ಲಿರಿಸಿ ಕೊಳ್ಳುತ್ತ. ಅವರಿಗೂ ಕೂಡ ಮುಂದೆ ಮಗ ಹೆಜ್ಜೆ ಇಡುವ ಮುನ್ನ ಒಂದಿಷ್ಟು ಮಾತನಾಡುವುದು ಸರಿಯೆನಿಸಿತು.

"ನವೀನಾ, ನಂಗೆ ಸರಿಯೆನಿಸಿದ ನಾಲ್ಕು ಮಾತು ಹೇಳ್ತೀನಿ. ಒಮ್ಮೆ ಮಾಡಿದ ತಪ್ಪು, ಮತ್ತೆ ಮಾಡ್ಬಾರ್ದು. ನೀನು ಈಗ ಮನೆ ಬದಲಾಯಿ ಸೋದ್ರಿಂದ ದೊಡ್ಡ ತೊಡಕು ಇದೆ. ನೀರದಾಗೆ ಇಷ್ಟವಾಗೋಲ್ಲ. ಅವ್ಳು ನಿನ್ನ ನಡ್ವೇ

ನೇರವಾಗಿ ಘರ್ಷಣೆ ಶುರುವಾಗುತ್ತೆ" ಎಚ್ಚರಿಸಿದರು.

ಆರಾಮಾಗಿ ನಕ್ಕುಬಿಟ್ಟ. ಅವನಿಗೆ ತಾನು ಮಾಡಿದ ತಪ್ಪು ಬ್ರಹ್ಮಾಂಡ ವಾಗಿ ಕಾಣುತ್ತಿತ್ತು. ಈಗ ಸ್ವಲ್ಪ ಬಿಗಿ ಧೋರಣೆ ಅನುಸರಿಸದಿದ್ದರೆ ಜೀವನ ಪೂರ್ತಿ ನರಳಬೇಕೆಂದು ಅವನಿಗೆ ಗೊತ್ತು.

ಅಲ್ಲೇ ತಂದೆಯ ಪಕ್ಕ ಕೂತು "ಅಪ್ಪ, ಒಂದ್ಮಾತು ಕೇಳ್ಲಾ ? ವರ್ಷ ಗಟ್ಟಲೇ ಜಡಿಮಳೆ ಹಿಡಿದರೇ ಹೇಗೆ ? ಭೂಮಿನ ತೋಯಿಸೋಕೆ ವರ್ಷ ಅನಿವಾರ್ಯ. ಅದಿಲ್ಲದೇ ಬದುಕಿಲ್ಲ. ಆದರೆ, ವರ್ಷಾನುಗಟ್ಟಲೆ ದಿನದ ನಲವತ್ತೆಂಟು ಗಂಟೆಗಳು ಜಡಿಮಳೆ ಸುರಿಯುತ್ತಿದ್ದರೆ ಹೇಗೆ ? ಇಲ್ಲ ಪ್ರಕೃತಿ ದತ್ತವಾದ ಒಂದು ಕಾಲದಲ್ಲಿ ಮಳೆ ಇತಿ ಮಿತವಾಗಿ ಸುರಿದು, ನಂತರ ಶುಭ್ರವಾದ ಆಕಾಶದ ದರ್ಶನವಾದರೇ ಹೇಗೆ ? ಇಡೀ ರಾತ್ರಿ ಮಳೆ ಸುರಿದರೂ ಮನುಷ್ಯ ಬೆಳಿಗ್ಗೆ ಸೂರ್ಯನನ್ನ ನೋಡಲು ಹಂಬಲಿಸುತ್ತಾನೆ. ಈಗ ಮೊದಲಿದರ ಬಗ್ಗೆ ನಿಮ್ಮ ಅಭಿಪ್ರಾಯವೇನು ?" ಅರ್ಥಗರ್ಭಿತವಾಗಿ ಕೇಳಿದ.

ಅವರು ಚಿಂತಿತರಾದರು. ಮಗನ ಒಳತೋಟಿ ಪೂರ್ತಿ ಅರ್ಥವಾಗದಿದ್ದರೂ ಅಷ್ಟಿಷ್ಟು ಅರ್ಥಮಾಡಿಕೊಂಡರು. ಆದರೆ ವಿಶ್ಲೇಷಿಸಿದ್ದು ಮಾತ್ರ ಚಾರುಲತ.

"ಯಾರ್ಗೂ ಇಪ್ಪತ್ನಾಲ್ಕು ಗಂಟೆ ಸುರಿಯೋ ಮಳೆ ಬೇಕಿರೋಲ್ಲ. ನಾವು ಈಗಿನ ಇಲ್ಲಿನ ಪ್ರಕೃತಿಯ ವೈಪರೀತ್ಯಕ್ಕೆ ಒಗ್ಗಿಕೊಂಡಿದ್ದೀವಿ. ಅಂಥ ಏರುಪೇರು ಗಳಾದರೇ....ಸಾಧ್ಯವಿಲ್ಲ" ತಲೆ ಅಡ್ಡಡ್ಡ ಆಡಿಸಿದಳು.

ತಂಗಿಯ ತಲೆ ಕೆದರಿ "ಚಾರು, ಅಪ್ಪ ಎದುರಿಗೆ ಇದ್ದರೂ ಪರ್ವಾಗಿಲ್ಲ! ಲವ್‌ಅಂದರೇನು ? ನನ್ನ ನೀರದ ಭಯಂಕರವಾಗಿ ಪ್ರೀತಿಸ್ತಾ ಇದ್ದಾಳೆ. ನನ್ನ ನಿಲುವು ಸ್ವಲ್ಪ ಬದಲಾದ್ರೂ ಆತ್ಮಹತ್ಯೆ ಮಾಡ್ಕೋತಾಳೇಂತ ತಿಳಿದಿದ್ದೆ. ಅದೆಲ್ಲ ಸುಳ್ಳು. ಒಬ್ಬ ಡಾಕ್ಟ್ರು ಗಂಡ ಪುಗಸಟ್ಟೆಯಾಗಿ ಸಿಕ್ತಾನೇ ಅಂತಲೇ ಮನೆಯವ್ರೆಲ್ಲ ಒಲ್ಲೆಸಿದ್ದು. ಮದ್ವೆ ಆದ್ಮೇಲೆ ಹೇಗೆ ಬದಲಾಗ್ಬಿಟ್ರು ನೋಡು. ನೀವು ಮನೆ ಬದಲಾಯಿಸದಿದ್ರೆ ತೊಡಕಿಗೆ ಸಿಕ್ಕಿ ಕೋತೀರೀಂತ ಅವ್ಳ ಅಣ್ಣನ ಸಲಹೆ. ಸಧ್ಯಕ್ಕೆ ಆ ಮಹಾತಾಯಿ ಸಾವಿನ ಡೇಟ್ ಮುಂದಕ್ಕೆ ಹಾಕ್ತಾ ಹೋಗ್ತಾ ಇದ್ದಾಳೆ" ಗೊಣಗಿದ.

ತಂದೆಯ ಮುಖ ನೋಡಿದಳು. ಸಪ್ಪಗೆ ಕೂತಿದ್ದರು.

"ಒಂದ್ಕೆಲ್ಸ ಯಾಕೆ ಮಾಡ್ಬಾರ್ದು ? ನಾನು, ಅಪ್ಪ ಅಲ್ಲೇ ಇದ್ಕೋತೀವಿ. ನೀನು ನೀರದ ಇಲ್ಲಿರಬಹುದ್ದು" ಮೆಲ್ಲಗೆ ಪ್ರಸ್ತಾಪಿಸಿದಳು.

ಚಪ್ಪಾಳೆ ತಟ್ಟಿದ ಡಾ।। ನವೀನ್.

"ಹೇಗೂ, ನನ್ನ ಸಂಪಾದ್ನೇನ ಬಾಡ್ಗೆಯಾಗಿ ಕೊಟ್ಟು ಊಟ, ತಿಂಡಿಗೆ ದಿನವು ಅಲ್ಲಿಗೆ ಬರ್ತೀವಿ. ಅದು ಇದ್ದಿದ್ದು ಆರಾಮು. ನೀರದ ಹೇಗೂ ದೊಡ್ಡ ಮನೆ ಬೇಜಾರೂಂತ ಅವಳಮ್ಮನನ್ನು ಶಾಶ್ವತವಾಗಿ ತಂದಿಟ್ಕೋ ತಾಳೆ. ಅವ್ರ ಮಕ್ಳಿಗೆ ಇದು ಸಂತೋಷದ ಸುದ್ದಿ. ನಿಮ್ಮಣ್ಣನಿಗೆ ನರ್ಕ ! ಇದೊಂದು ಉಪಕಾರ ಮಾಡ್ಬಿಡು. ಇಲ್ಲಿ ನನ್ನ ತ್ಯಾಗ ರಿವರ್ಸ್ ಆಯ್ತು" ತಂಗಿಯ ಎರಡು ಕೈಗಳನ್ನ ಹಿಡಿದುಕೊಂಡು ಗದ್ಗದಿತನಾದ.

ಚಾರುಲತ ಹತ್ತಿಕ್ಕಲಾರದೆ ಪಕ್ಕಕ್ಕೆ ತಿರುಗಿ ಕಣ್ಣೊರೆಸಿಕೊಂಡಳು. ನಿಜವಾಗಲೂ ಇದೊಂದು ಷಾಕಿಂಗ್ ನ್ಯೂಸ್. ಪ್ರೇಮಿಸಿ ಮದುವೆಯಾದ ಜೋಡಿಯ ನಡುವೆ ಇಷ್ಟು ಬೇಗ ಅಭಿಪ್ರಾಯ ಭೇದ, ಬೇಸರ, ಜಿಗುಪ್ಸೆ.

ತಕ್ಷಣ ಚೇತರಿಸಿಕೊಂಡ ಅವನು "ಡೋಂಟ್ ವರಿ, ನಾನು ನೀರದಾನ ಇಷ್ಟಪಟ್ಟಿದ್ದು ನಿಜ. ಇವೆಲ್ಲ ಅವರವ್ರ ಯೋಗ್ಯತೆಗಳಿಗೆ ಸಂಬಂಧಿಸಿದ ವಿಷಯ. ಆ ಬಗ್ಗೆಯೇನು ನೀನು ತಲೆ ಕೆಡಿಸ್ಕೋಬೇಡ. ಆ ಮನೆನಾ ನನ್ನ ಫ್ರೆಂಡ್‌ಗೆ ನಾಲ್ಕು ಲಕ್ಷ ಲೀಜ್ ಮೇಲೆ ಕೊಡೋದು. ಆ ಹಣನ ಅಪ್ಪನ ಹೆಸರಿನಲ್ಲಿ ಫಿಕ್ಸೆಡ್‌ಗೆ ಹಾಕೋದು. ಸಧ್ಯಕ್ಕೆ ನೀರದ ಅವ್ಳ ಅಮ್ಮನ ಉಪ ದೇಶದಿಂದ ಮುಕ್ತಾಳಾಗ್ಬೇಕು. ಇಲ್ಲದಿದ್ದರೇ ಮನೆ ಸುಡುಗಾಡು ಆಗ್ಬಿಡುತ್ತೆ. ದಯವಿಟ್ಟು ಇದ್ಕೇ ನೀವಿಬ್ರೂ ಒಪ್ಪಿಗೆ ಕೊಡ್ಬೇಕು" ಎಂದ. ಅವನು ಹೆಣಗಿ ಒಂದು ಬಲವಾದ ನಿರ್ಧಾರಕ್ಕೆ ಬಂದಿದ್ದ.

ಐದು ನಿಮಿಷ ಮೌನವಾಗಿ ಕೂತ ವಾಸುದೇವಯ್ಯ "ದುಡುಕಬೇಡ. ನೀರದಾಗೆ ಇನ್ನೊಂದು ಅನುಮಾನ. ನಾವು ನಮ್ಮ ಮನೆನ ಮಾರಿ ಆ ಹಣನ ಪೂಜಾ ಮದುವೆ ಸಲುವಾಗಿ ಮೂರ್ತಿಗೆ ವರದಕ್ಷಿಣೆ ರೂಪದಲ್ಲಿ ಕೊಡ್ತಾ ಇದ್ದೀವಿ ಅನ್ನೋ ಅವ್ಳ ಅಭಿಪ್ರಾಯ. ಹಾಗೇ ತಿಳ್ಕೋತಾಳೆ ಕೂಡ" ಬಹಳ ನಿಧಾನವಾಗಿ ಹೇಳಿದರು ಅರ್ಥವಾಗುವಂತೆ.

"ಭೇಷ್, ನಂಗೆ ಅಂಥ ಒಂದು ಅವಕಾಶ ಸಿಕ್ಕರೇ, ನೀರದಾನ ಎತ್ಕೊಂಡ್ ಓಡಾಡಿ ಬಿಡ್ತೀನಿ. ಆ ಹಣದಲ್ಲಿ ನನ್ತಂಗಿ ಸಂಸಾರ ಸರಿಪಡಿ ಸೋಕೆ ಸಾಧ್ಯನಾ

? ಅವ್ರು ಅಂಥ ಜುಜುಬಿ ಜನ ಅಲ್ಲ ಬಿಡು. ಇವ್ರಿಗೇನು ಗೊತ್ತು ಅವ್ರ ಯೋಗ್ಯತೆ. ಮೂರ್ತಿ ಈಗ್ಲೂ ಸಾವಿರದಲ್ಲಿ ಒಬ್ಬ. ಅದ್ಕೇ ಅವ್ನಿಗೆ ಲಕ್ಷದಲ್ಲಿ ಒಬ್ಳು ಅನ್ನೋಂತ ಸಂಗಾತಿ ಸಿಕ್ಳು. ಅಪ್ಪ, ನೀರದಾ ವಿಷ್ಯನ ಬಿಡಿ. ದಯವಿಟ್ಟು ನಿಮ್ಮನ್ನ ನೋಯಿಸ್ತಾ ಇದ್ದೀನಿ. ಬೇರೆ ದಾರಿ ನಂಗಿಲ್ಲ. ನೀವು ಮಾತ್ರ ಕೊರಗ್ಬಾರ್ದು" ಅವರ ಎರಡು ಕೈಗಳನ್ನ ಹಿಡಿದು ಕಣ್ಣಿಗೊತ್ತಿಕೊಂಡ.

ವಾಸುದೇವಯ್ಯ ಮಗನನ್ನು ತಬ್ಬಿಕೊಂಡು ಕಣ್ಣೀರು ಸುರಿಸಿದರು. ಚಲನ ಚಿತ್ರದಲ್ಲಿ ಈ ದೃಶ್ಯ ಮೂಡಿ ಬರಬೇಕಾದರೇ ಎಷ್ಟು ರಿಟೇಕ್‌ಗಳು ಆಗುತ್ತಿದ್ದವೋ. ಅದಕ್ಕಾಗಿ ಡೈರೆಕ್ಟರ್ ಎಷ್ಟು ಕಷ್ಟಪಡಬೇಕಿತ್ತೋ ! ಹೃದಯ ವಿದ್ದ ಪ್ರೇಕ್ಷಕರೆಲ್ಲ ಕಣ್ಣೀರು ಮಿಡಿದರೆ, ಬರೀ ಮಿದುಳಿದ್ದ ಜನ ಮುಖ ತಿರುವಿ ಕರ್ಚೀಫ್ ಆಡಿಸುತ್ತಿದ್ದರೇನೋ ! ಫುಲ್ ಸೆಂಟಿಮೆಂಟಲ್ ಸೀನ್.

ಬಹಳ ಹೊತ್ತು ಮೂವರು ಕೂತು ಮಾತಾಡಿ ಮನೆಗೆ ಹೊರಟಾಗ ರಾತ್ರಿಯೇ ಆಗಿತ್ತು. ಬಲವಂತದಿಂದ ಡಾ|| ನವೀನ್ ತನ್ನ ಸ್ನೇಹಿತನ ಮನೆಗೆ ಕರೆದೊಯ್ದ. ಅಲ್ಲೇ ಊಟ, ಉಪಚಾರ ಆಯಿತು.

"ಮನೆಗೆ ಫೋನಾದ್ರೂ ಮಾಡು. ನೀರದ ಏನು ತಿಳ್ಕೋ ಬೇಕು?" ತಂಗಿಯ ಮಾತಿಗೆ ಒಂದಲ್ಲ ನಾಲ್ಕು ಸಲ ಪ್ರಯತ್ನಿಸಿದ. "ಯಾರು ಫೋನ್ ಎತ್ತುತ್ತ ಇಲ್ಲ. ನೀನು.....ನೋಡು" ತಂಗಿಯ ಕೈಗೆ ಕೊಟ್ಟು ಮುಗಿಸಿದ ಕರ್ತವ್ಯವೆನ್ನುವಂತೆ. ಅವಳು ಕೂಡ ಪ್ರಯತ್ನಿಸಿದಳು. ಫೋನ್ ರಿಂಗಾಗು ತ್ತಿತ್ತು "ಇಲ್ಲಪ್ಪ...." ಎಂದು ಕೂತಳು.

ಆಟೋದಲ್ಲಿ ಬಂದು ಇಳಿದಾಗ ಹನ್ನೊಂದು ದಾಟಿ ಹೋಗಿತ್ತು. ಕನಿಷ್ಟ ಮನೆಯ ಮುಂದೆ ಲೈಟು ಕೂಡ ಇರಲಿಲ್ಲ. ಮುಂಬಾಗಿಲಿನ ಬೀಗದ ಒಂದು ಗೊಂಚಲು ಸದಾ ನೀರದ ಸೊಂಟದಲ್ಲಿಯೇ ಇರುತ್ತಿತ್ತು. ಅದು ಎಲ್ಲರಿಗೂ ಗೊತ್ತಿತ್ತು.

"ಈ ಹುಡ್ಗಿ ಮನೆಗೆ ಬಂದಿಲ್ಲ" ಎಂದರು ವಾಸುದೇವಯ್ಯ.

ಮುಖ ಬಿಗಿದುಕೊಂಡೇ ಹೋಗಿ ಬಾಗಿಲು ತೆಗೆದ ಡಾ|| ನವೀನ್ "ಲೈಟು ಹಾಕಿದ. ನೀರದಾನ ಕರೀತೀನಿ" ಹೊರಟ ತಂಗಿಯ ರಟ್ಟೆ ಹಿಡಿದು ನಿಲ್ಲಿಸಿದ. "ಬೇಡ, ಸುಮ್ನೆ ನಿದ್ದೆ ಮಾಡಿರೋರ್ನ ಎಬ್ಬಿ ಡಿಸ್ಟರ್ಬ್ ಮಾಡೋ ದ್ಬೇಡ" ತಡೆದ.

ಬಾಗಿಲು ತೆಗೆದವನು ಹೊರಗಡೆ ಲೈಟು ಹಾಕಲೇ ಇಲ್ಲ. ಟಿ.ವಿ. ನೋಡುತ್ತಿದ್ದ ನೀರದಾಗೆ ಆಟೋ ನಿಂತ ಸದ್ದೇ ಕೇಳಲಿಲ್ಲ. ಚಲನಚಿತ್ರದ ಒಂದು ಮಹತ್ತರ ಘಟ್ಟದಲ್ಲಿ ಎಚ್ಚರವಿಲ್ಲದೇ ಮುಳುಗಿ ಹೋದಳು. ಯಾವ ಧ್ಯೇಯೋದ್ದೇಶಗಳು ಇಲ್ಲದ ಹೆಣ್ಣುಗಳು ಕಾಣುವ ಕನಸುಗಳೆಲ್ಲ ಒಂದೇ.

ಇದು ಸರಿಯೆನಿಸಲಿಲ್ಲ ಚಾರುಲತಗೆ.

"ಏಯ್ ನವೀನಣ್ಣ ಒಂದು ಕೂಗು ಹಾಕು. ಇಷ್ಟೊಂದು ಕಟುವಾದರೆ ಹೇಗೆ ?" ಎಂದಳು ಬೇಸರದಿಂದ.

ಅವಳ ಬಳಿಯಲ್ಲಿ ಬಗ್ಗಿ "ಖಂಡಿತ ನಿನ್ನ ಗಂಡನಷ್ಟು ಕಟುವಲ್ಲ. ನಿನ್ನಂಥ ನಿರಪರಾಧಿ ಹೆಣ್ಣಿಗೆ ವಿಧಿಸಿದ ಶಿಕ್ಷೆ ಎಷ್ಟೊಂದು ಘೋರ !" ಕನಲಿದ. ಅವನ ದನಿಯಲ್ಲಿ ಕೂಡ ಕೋಪ ಇಣಕಿತು.

ನಗಲು ಪ್ರಯತ್ನಿಸಿದಳು. ನಗಲಾಗಲಿಲ್ಲ. ಆದರೂ ಸೋಲೊಪ್ಪಿಕೊಳ್ಳಲು ಇಚ್ಛಿಸದೇ ಪ್ರಯತ್ನಪೂರ್ವಕವಾಗಿ ಮುಗುಳ್ನಗು ಬೀರಿದಳು.

"ಸಾರಿ ಕೇಳಲಾ ? ನಂಗೆ ಗೊತ್ತು ನಿನ್ನ ಮೃದು ಸ್ವಭಾವ. ಅವಳದು ತಪ್ಪೇ ಇರ್ಬಹ್ದು. ರಾತ್ರಿಯೆಲ್ಲ ಕಣ್ಣೀರಿಡಬಾರದಲ್ಲ. ಸಂಜೆಯ ಕಾರ್ಯ ಕ್ರಮ ಬೆಳಿಗ್ಗನೇ ನೀನು ಬಿತ್ತರಿಸ್ಬೇಕಿತ್ತು. 'ಇಗೋ' ಬೇಡ, ನಾನ್ಹೋಗಿ ಕೂಗ್ಲಾ ?" ಕೇಳಿದಳು.

ಕಿವಿ ಹಿಡಿದು ರೂಮಿನವರೆಗೂ ಕರೆದೊಯ್ದು ಬಿಟ್ಟು "ಗುಡ್‌ನೈಟ್, ಬೇರೆಯವ್ರ ನಿದ್ದೆ ಹಾಳು ಮಾಡ್ಬಾರ್ದು" ಹೇಳಿ ಬಾಗಿಲು ಎಳೆದುಕೊಂಡು ಆರಾಮಾಗಿ ಹೋಗಿ ಮಲಗಿದ.

ಇಂದು ಹಾಯೆನಿಸಿತು. ಜೊತೆಗಾತಿಗಾಗಿ ಚಡಪಡಿಸಿದ ರಾತ್ರಿಗಳೆಷ್ಟೋ, ಕಂಡ ಕನಸುಗಳೆಷ್ಟೋ. ಈಗ ಎಲ್ಲಾ ಮುಗಿದಂತಾಗಿತ್ತು. ಮುಂದೇನು ? ಇಷ್ಟೇನಾ....ಬದುಕು ? ಇದಕ್ಕಾಗಿ ಇಷ್ಟೊಂದು ಹಾರಾಟ, ಹೊಯ್ದಾಟ. ಎಲ್ಲಾ ವಿಚಿತ್ರವೆನಿಸಿತು. ಬೇಗ ನಿದ್ದೆ ಬಂತು ಕೂಡ.

ಸಿನಿಮಾ ಮುಗಿದಾಗ ಒಂದರ ಸುಮಾರು. ಹುಡುಗರ ಜೊತೆ ತಾಯಿ, ಮಗಳು ನೋಡಿದ್ದರು. ಝುಗ್ಗನೇ ಎದ್ದ ನೀರದ ಗಡಿಯಾರದ ಕಡೆ ನೋಟ ಹರಿಸಿ ಬೆಚ್ಚಿಬಿದ್ದಳು.

"ಆಗ಼್್ಲೇ, ಒಂದ್ಗಂಟೆ ! ಇನ್ನೇನು ಗತಿ ? ಇವ್ರುಗಳೆಲ್ಲ ಎಲ್ಲಿ ಹೋದ್ರೋ" ಗಾಬರಿಯಿಂದ ಕಣ್ಣೀರು ಸುರಿಸಲು ಶುರು ಮಾಡಿದಾಗ, ಅವಳಮ್ಮ ಮಗನನ್ನ ಕೂಗಿಕೊಂಡರು "ಒಂದಿಷ್ಟು ನೋಡೋ. ಎಲ್ಲಾ ಹೇಳ್ದೇ ಕೇಳ್ದ.... ಎಲ್ಹೋದ್ರೋ."

ಹೊರ ಬಂದ ಹಿರಿಯ ಮಗ ಗೊಣಗಿಕೊಂಡೇ ಹೋದವನು ಹಿಂದಕ್ಕೆ ಬಂದು "ಅವ್ರು ಬಂದು ಮಲ್ಗಿಯಾಗಿದೆ. ಇವ್ಳಿಗೆ ಮೈಮೇಲೆ ಜ್ಞಾನ ಬೇಡ್ವಾ? ಎದುರು ಮನೆ ಅಮ್ಮನ ಮನೇಂತ ಮೂರ್ಹೊತ್ತು ಬಂದು ಕೂಡೋದಾ ? ನಾಳೆಯಿಂದ ಇಲ್ಲಿಗೆ ಬಂದರೆ ಒದ್ದು ಹೊರ್ಗೇ ಹಾಕ್ಬಿಡ್ತೀನಿ" ರೇಗಿದ.

"ನಾನ್ಹೋಗ್ತೀನಿ !" ಎಂದಳು.

"ಬಾಯಿ ಮುಚ್ಕೊಂಡ್ ಮಲ್ಗು. ಇಷ್ಹೊತ್ತಿನಲ್ಲಿ ಹೋಗಿ ಬಾಗ್ಲು ಬಡಿದರೆ ಅಕ್ಕಪಕ್ಕದ ಜನ ಏಳ್ತಾರೆ. ಸುಮ್ನೇ ನಗೆ ಪಾಟಲು. ಬೀಟ್ ಪೋಲೀಸ್ ಪೋಲೀಸ್ ಸ್ಟೇಷನ್‌ಗೆ ಎಳೆದೊಯ್ದರು ಹೆಚ್ಚಲ್ಲ" ಅಂದು ರೂಮಿಗೆ ಹೋಗಿ ಬಾಗಿಲು ಹಾಕಿಕೊಂಡ.

ಈ ಪ್ರಕರಣದಿಂದ ತಾಯಿ, ಮಗಳು ಎಷ್ಟು ಹೆದರಿದರೆಂದರೇ ಒಂದು ಹಂತದವರೆಗೂ ನಾನಾ ಯೋಚನೆಗಳು. ಆಮೇಲೆ ಭಂಡ ಧೈರ್ಯ.

"ಸುಮ್ನೆ ಮಲಕ್ಕೋ ! ನಿನ್ನದೇನು ತಪ್ಪು ? ಬಂದ ಕೂಡಲೇ ಕರೀ ಬೇಕಿತ್ತು. ಇಲ್ಲ ಬೆಳಿಗ್ಗೆ ಮೂವರಲ್ಲಿ ಒಬ್ಬರಾದ್ರು ಹೇಳಿ ಹೋಗ್ಬೇಕಿತ್ತು. ಎಂಥ ಧೈರ್ಯ" ಅಳಿಯ, ಅವನ ತಂಗಿ ಅಪ್ಪನನ್ನೇ ಬೈಯ್ದರು ಆಕೆ.

ಅದು ಅವಳಿಗೆ ಸರಿಯೆನಿಸಿತು. ಒಂದಿಷ್ಟು ಧೈರ್ಯ ಕೂಡ ಬಂತು. ಅಪರಾಧವೆಲ್ಲ ಅವರದೇ ಆಗಿ ಕಂಡಾಗ, ಅಳು ಕೋಪವಾಗಿ ಪರಿವರ್ತನೆ ಗೊಂಡಿತು. ತಾಯಿಯ ಬಳಿಯಲ್ಲಿ ಹಾಸಿಕೊಂಡು ಮಲಗಿದಳು. ಆದರೆ ಬೆಳಿಗ್ಗವರೆಗೂ ನಿದ್ದೆ ಹತ್ತಲಿಲ್ಲ. ಪದೇ ಪದೇ ಮಗ್ಗುಲು ಬದಲಾಯಿಸಿ ಎದ್ದು ಕೂಡುತ್ತಿದ್ದಳು.

"ಸುಮ್ನೆ ಮಲಕ್ಕೋ. ಈಗ ಚಾರುಲತ ನೋಡು ಎಷ್ಟೊಂದು ಆರಾಮಾಗಿದ್ದಾಳೆ. ಹೆಣ್ಣು ಅಂದರೇ ಅಷ್ಟಾದ್ರೂ ಧೈರ್ಯ ಬೇಕು " ಆಕೆ ಗೊಣಗಿದರು.

ಚಾರುಲತಳ ದಿನಚರಿಯನ್ನೇ ಮೆಲುಕು ಹಾಕುತ್ತ ಉಳಿದ ಸಮಯ ಕಳೆದಳು.

* * *

ಎರಡು ದಿನದಿಂದ ಹಿಡಿದ ಮಳೆ ಬಿಟ್ಟಿರಲಿಲ್ಲ. 'ಧೋ' ಎಂದು ಸುರಿಯುವ ಮಳೆ ಆಗಾಗ ಕಡಿಮೆಯಾದರೂ ಮತ್ತೆ ವೇಗ ಹೆಚ್ಚಿಸಿ ಆಲಿ ಕಲ್ಲುಗಳಂತೆ ದಪ್ಪ ದಪ್ಪ ಹನಿಗಳು ಉದುರುತ್ತಿದ್ದವು. 'ಇದು ಯಾವ ವೈಖರಿ ?' ಕೆಲವರ ಗೊಣಗಾಟ. ಅಂತು ಮಳೆಯ ಚೆಲ್ಲಾಟ ನಡದೆ ಇತ್ತು.

ಬೆಳಿಗ್ಗೆಯೇನೋ ಆಫೀಸ್‌ಗೆ ಹೋದಳು ಅಷ್ಟಿಷ್ಟು ನೆನೆದರು ಸಿಟಿ ಬಸ್ಸು ಹಿಡಿದು. ಸಂಜೆ ಬಸ್ಸಿಗಾಗಿ ಕಾದು ಸೋತಳು. ತಾನೊಂದು 'ಮೊಪೆಡ್, ಸ್ಕೂಟರ್' ಅಂಥದ್ದು ಕೊಳ್ಳುವುದು ಅಗತ್ಯವೆನಿಸಿತು. ಅದನ್ನು ವ್ಯಕ್ತಪಡಿಸಿದ್ದಳು ಕೂಡ ಅಣ್ಣನ ಮುಂದೆ.

"ನಂಗೆ ಈ ಸಿಟಿ ಬಸ್ಸಿನ ಓಡಾಟ ಸಾಕಾಗಿದೆ. ನಾನ್ಯಾಕೆ ಒಂದು ಸ್ಕೂಟಿ ಕೊಳ್ಳಬಾರ್ದು. ಪ್ರಯತ್ನಪಟ್ಟರೇ ಬೇಗ್ನೆ ಡ್ರೈವಿಂಗ್ ಕಲೀತೀನಿ."

ಡಾ|| ನವೀನ್ ಬೆಪ್ಪಾಗಿ ನಿಂತ. ತಂಗಿಯ ಬದುಕು ಈ ಮಿತಿಯಲ್ಲಿ ಶಾಶ್ವತವಾಗಿ ನಿಂತು ಹೋಗಬೇಕಾ ? ಅವನಿಗೆ ಎಚ್ಚರ ತಪ್ಪುವಂತಾಯಿತು.

"ನೋಡೋಣ, ಸಧ್ಯಕ್ಕೆ ಬೇಡ" ಎಂದಿದ್ದ.

ಕೆಲವರು ವೆಹಿಕಲ್‌ನಲ್ಲಿ ಬಂದವರು ಕೂಡ ಅವನ್ನ ಅಲ್ಲಿಯೇ ಬಿಟ್ಟು ಬಸ್ಸಿಗಾಗಿ ಬಂದು ಕಾದು ಕೂತರು. ಅಂತು ಗಂಟೆ ಕಳೆದರೂ ಬಸ್ಸು ಬರಲಿಲ್ಲ.

ಮೈನ್ ಬಸ್‌ಸ್ಟಾಂಡ್‌ಗೆ ಹೋಗೋ ಬಸ್ಸು ಬಂದಾಗ ಎಲ್ಲರೊಂದಿಗೆ ಹತ್ತಿಕೊಂಡು ಕಂಬಿಗೆ ತೂಗು ಬಿದ್ದಳು. "ಅಲ್ಲಿಗೆ ಹೋದರೆ ಯಾವುದಾದ್ರೂ ಬಸ್ಸುಗಳು ಸಿಗುತ್ತೆ. ಕಡೆಗೆ ಆಟೋ ಟ್ಯಾಕ್ಸಿನಾದ್ರೂ ಹಿಡಿಯಬಹ್ದು" ಕೆಲವರು ಸೂಚಿಸಿದರು.

ಬಸ್‌ಸ್ಟಾಪ್‌ನ ತಲುಪುವ ವೇಳೆಗೆ ಪೂರ್ತಿ ಕತ್ತಲಾಗಿತ್ತು. ಮಳೆಯು ಬಿರುಸು ಕೂಡ ಹೆಚ್ಚಾಯಿತು. ಜನ ಗಿಜಿಗಿಜಿಯೆನ್ನುತ್ತಿದ್ದರು. ನಿಲ್ಲುವುದೇ ಕಷ್ಟ. ಮನೆಗೆ ಫೋನಾಯಿಸಿದಳು.

"ಎಲ್ಲಾ ಒಟ್ಟಿಗೆ ಇದ್ದೇವೆ. ಬೇಗ ಬರ್ತೀವಿ ಗಾಬ್ರಿ ಬೇಡ."

ಆ ಕಡೆಯಿಂದ ಬರೋವಾಗ ಎದುರಾದದ್ದು ಮೂರ್ತಿ. ನೋಡಿ ನೋಡದಂತೆ ಸರಿದು ಹೋದರೂ ಅಷ್ಟು ದೂರ ಹೋದ ಮೇಲೆ ಹಿಂದಿರುಗಿದ. ಹೃದಯ ಹೊರಳಿ ಹೊರಳಿ ನರಳಿ ಅತ್ತಿತ್ತು.

ಸುರಿಯೋ ಮಳೆಯಲ್ಲಿ ಇವಳು ಮನೆಗೆ ಹೋಗುವುದು ಹೇಗೆ ? ಎಂದು ಯೋಚಿಸಿ ಹೆದರಿದ. ಮತ್ತೆ ಜನಗಳ ನಡುವೆ ಅರಸಿಕೊಂಡು ಅಲೆದಾಡಿದ. ಹೊರಗಿನ ಕತ್ತಲು, ಮಳೆ ಜನರನ್ನ ಹೆದರಿಸುತ್ತಿತ್ತು. ಬಸ್ಸು ಬಂದ ಕೂಡಲೇ ಜನರು ಗೂಳಿಗಳಂತೆ ಓಡುತ್ತಿದ್ದುದೊಂದು ಚಿತ್ರ.

ಬಂದ ಪೊಲೀಸ್ ಜನರನ್ನ ಕ್ಯೂನಲ್ಲಿ ನಿಲ್ಲಿಸಿ ಆಯಾ ರೂಟ್‌ನ ಬಸ್ಸುಗಳು ಬಂದ ಕೂಡಲೇ ಕಳಿಸತೊಡಗಿದಾಗ, ನಿಶ್ಚಿಂತೆಯಿಂದ ಅಲ್ಲಿ ಹೋಗಿ ನಿಂತಳು.

"ಚಾರುಲತ....ಚಾರು" ಕೂಗು ಕೇಳಿಸಿದ ಕಡೆ ಕತ್ತು ತಿರುಗಿಸಿದಳು. ಬ್ರೀಫ್‌ಕೇಸ್ ಹಿಡಿದಿದ್ದ ಮೂರ್ತಿ ಬರುವಂತೆ ಸನ್ನೆ ಮಾಡಿದಾಗ ಹಿಂದೆ, ಮುಂದೆ ನೋಡಿ ತನ್ನನ್ನೇ ಎಂದು ಮನದಟ್ಟಾದಾಗ ಕ್ಯೂನಿಂದ ಅರೆ ಮನಸ್ಸಿನಿಂದಲೇ ಹೊರ ಬಂದಿದ್ದು.

"ಬ್ರೀಫ್‌ಕೇಸ್ ಇಟ್ಕೊಂಡಿರು. ಹೋಗಿ ಟ್ಯಾಕ್ಸಿ ತರ್ತೀನಿ" ಅವಳ ಮುಂದಿಟ್ಟು ಹೋದಾಗ ಅವಳಿಗೇನು ಹೇಳಲು ಸಮಯವೇ ಇರಲಿಲ್ಲ. ನಿಧಾನವಾಗಿ ಬ್ರೀಫ್‌ಕೇಸ್ ಎತ್ತಿಕೊಂಡಳು. ಹಿಡಿಯಲ್ಲಿ ಅವನ ಕೈನ ಬಿಸಿಯೆನಿಸಿತು. ಕಳೆದ ಮಧುರ ದಿನಗಳು ನೆನಪಾಗಿ ಬಿಕ್ಕುವಂತಾದರೂ ಸಮರ್ಥಿಸಿಕೊಂಡಳು.

ಹತ್ತು ನಿಮಿಷದಲ್ಲಿ ಬಂದವ ಅವಳ ಕೈಯಲ್ಲಿನ ಬ್ರೀಫ್‌ಕೇಸ್ ತಗೊಂಡು "ಬಾ ಬೇಗ, ಈ ಮಳೆ ಧಾಟಿ ನೋಡಿದ್ರೆ ಜಗತ್ತನ್ನೇ ಮುಳುಗಿಸೋ ಹಾಗಿದೆ" ಎಂದು ಬಿರ ಬಿರ ನಡೆದಾಗ ಜನ ಜಗುಲಿ ಮಳೆಯಲ್ಲಿ ಹಿಂಬಾಲಿಸದೇ ಬೇರೆ ದಾರಿ ಇರಲಿಲ್ಲ.

ಟ್ಯಾಕ್ಸಿಯಲ್ಲಿ ಕೂತನಂತರ ತನ್ನ ಹ್ಯಾಂಡ್ ಬ್ಯಾಗ್‌ನಲ್ಲಿದ್ದ ಪುಟ್ಟ ಟವಲನ್ನು ತೆಗೆದು ಅವನ ತೊಡೆಯ ಮೇಲೆ ಹಾಕಿ ಕರ್ಚೀಫ್‌ನಿಂದ ಮುಖ ಕೈಗಳನ್ನೊರೆಸಿಕೊಂಡಳು.

ಕೋಪದಿಂದ ಕುದಿಯುತ್ತಿದ್ದವ ತಕ್ಷಣ ತಣ್ಣಗಾದ. ಈ ಕತ್ತಲು ಮಳೆಯಲ್ಲಿ

ಮನೆಯಿಂದ ಹೊರಗೆ ಬರುವ ಅಗತ್ಯವಿತ್ತೆ ? ಆ ಪ್ರಶ್ನೆಗೆ ಅವನಲ್ಲಿಯೇ ಉತ್ತರವಿತ್ತು. 'ನಿವೇದಿತಾ ನ್ಯೂ ವುಮೆನ್ಸ್ ವೇರ್ ಅಕೌಂಟ್ ಸೆಕ್ಷನ್‌ನಲ್ಲಿ ಚಾರುಲತ ಕೆಲ್ಸ ಮಾಡ್ತಾ ಇದ್ದಾಳೆ' ಕಮಲ ಸಿಕ್ಕಾಗ ಹೇಳಿದ್ದಳು. 'ಹಕ್ಕು ಅಧಿಕಾರ' ಎರಡು ಒಂದೇ ನಾಣ್ಯದ ಎರಡು ಮುಖಗಳು. ಒಂದರ ಬಿಟ್ಟು ಮತ್ತೊಂದಿಲ್ಲ ಅಂದುಕೊಂಡು ತೆಪ್ಪಗೆ ಕೂತ.

ಇವರ ಮನೆಯ ಅಡ್ರಸ್ ಟ್ಯಾಕ್ಸಿಯವನಿಗೆ ಹೇಳಿದಾಗ ತಕ್ಷಣ "ಮನೆ ಬದಲಾಯಿಸಿದ್ದೀವಿ. ಹೊಸ ಮನೆ ವಿದ್ಯಾನಗರದ ಬಡಾವಣೆಯ ಏಳನೇ ಕ್ರಾಸ್‌ನಲ್ಲಿರೋದು" ಎಂದಳು ಮೆಲ್ಲಗೆ. ಮೂರ್ತಿ ಮಾತಾಡಲಿಲ್ಲ.

ಏಳನೇ ಕ್ರಾಸ್‌ನಲ್ಲಿ ಎರಡನೇ ಮನೆಯೆಂದ್ದುದ್ದರಿಂದ ಟ್ಯಾಕ್ಸಿಯವನಿಗೆ ಅಂಥ ತೊಂದರೆಯೇನು ಆಗಲಿಲ್ಲ. ನಿಂತಾಗ ಡೋರ್ ತೆಗೆದು ಇಳಿಯುವ ಮುನ್ನ "ತುಂಬ ಥ್ಯಾಂಕ್ಸ್, ಸಾಧ್ಯವಾದರೇ ಒಳಗೆ ಬಂದು ಹೋಗ್ಬಹುದ್ದು" ಅಂದಿದ್ದಕ್ಕೆ ಅವನು ಮಾತಾಡಲಿಲ್ಲ.

ಚಾರುಲತ ಇಳಿದ ಕೂಡಲೇ ಟ್ಯಾಕ್ಸಿ ಮುಂದಕ್ಕೆ ಹೋಯಿತು.

ಸಣ್ಣಗೆ ಹನಿಯುತ್ತಿದ್ದ ಮಳೆಯಲ್ಲಿ ಸೀರೆಯ ನೆರಿಗೆಗಳನ್ನು ಮೇಲಕ್ಕೆ ಎತ್ತಿಡಿದು ಗೇಟು ತೆರೆದಾಗ ಹೊರಗಿನ ವಿದ್ಯುತ್‌ದೀಪಗಳೆಲ್ಲ ತಕ್ಷಣ ಹತ್ತಿ ಕೊಂಡವು.

ವಾಸುದೇವಯ್ಯ ಬಾಗಿಲು ತೆರೆದುಕೊಂಡು ಹೊರಗೆ ಬಂದು "ಸದ್ಯ ಬಂದ್ಯಾ ನನ್ನ ಜೀವನೇ ಹಾರಿ ಹೋಗಿತ್ತು. ಅವ್ನು ನರ್ಸಿಂಗ್‌ಹೋಂನಲ್ಲಿ ಸಿಕ್ಕಿ ಹಾಕ್ಕೊಂಡಿದ್ದಾನೆ. ಮೂರು ಸಲ ಫೋನ್ ಮಾಡಿ ವಿಚಾರಿಸ್ದ. ನೀನು ಫೋನ್ ಮಾಡದಿದ್ದರೇ, ಅಲ್ಲಿಗೆ ಹುಡ್ಕಿಕೊಂಡು ಹೋಗ್ತಾ ಇದ್ದನೇನೋ. ಅಲ್ಲಿಗೂ ಫೋನ್ ಮಾಡ್ದೆ. ನೀನು ಹೊರಟ ವಿಷ್ಯ ತಿಳ್ಸಿದ್ರು" ಉದ್ವೇಗದಿಂದ ನುಡಿದಾಗ ಮುಖದ ಮೇಲಿನ ಮಳೆಯ ನೀರನ್ನ ಕೈಯಿಂದ ತೊಡೆದುಕೊಳ್ಳುತ್ತ "ನಾನು ಇನ್ನ ಮಗುನಾ, ಅಪ್ಪ ? ಪುಟ್ಟ ಮಗು ಶಾಲೆಯಿಂದ ಸ್ವಲ್ಪ ಬರೋದು ಲೇಟಾದ್ರೆ ಚಡಪಡಿಸುತ್ತಾರಲ್ಲ, ಹಾಗೇ ಆತಂಕಗೊಳ್ಳುತ್ತೀರಲ್ಲ ಬನ್ನಿ...ಒಳ್ಗಡೆ" ಒಳ ನಡೆದಳು.

ಟವಲು ಹಿಡಿದು ಬಂದ ನೀರದ "ಅದೆಂಥ ಭಯಂಕರ ಮಳೆ. ಅವ್ರು ಕೂಡ ಇನ್ನ ಬಂದಿಲ್ಲ. ಮಾವನೋರಂತು ರಾಮನಾಮ ಜಪಿಸ್ಕೊಂಡ್ ಕೂತುಬಿಟ್ಟರು" ಪಟ್ಟ ಆತಂಕದ ಸ್ಥಿತಿಯನ್ನು ವಿವರಿಸಿದಾಗ "ಮಳೆಯೇನೋ

ಜೋರಿದೆ. ಬಸ್ಸು ಬರಲೇ ಇಲ್ಲ. ಅದ್ಕೆ ಇಷ್ಟೆಲ್ಲ ತೊಂದರೆ" ರೂಮಿಗ
ಹೋದಳು.

ಬಟ್ಟೆ ಬದಲಾಯಿಸಿ ಹೊರ ಬರುವ ವೇಳೆಗೆ ಲೈಟು ಹೋಗಿ ಇಡೀ ಮನೆ ಕತ್ತಲಲ್ಲಿ ಮುಳುಗಿ ಹೋಯಿತು.

"ಬಾ ಕೂತ್ಕೋ" ಎಂದು ಕ್ಯಾಂಡಲ್ ಹಚ್ಚಿದ ವಾಸುದೇವಯ್ಯ "ಮೊದ್ಲು ನರ್ಸಿಂಗ್‌ಹೋಂಗೆ ಫೋನ್ ಮಾಡಿ ನೀನು ಮನೆಗೆ ಬಂದಿರೋ ಸಂಗ್ತಿ ನಿಮ್ಮಣ್ಣನಿಗೆ ತಿಳ್ಸು. ಅವನೆಷ್ಟು ಗಾಬ್ರಿಯಾಗಿದ್ದಾನೋ" ಉಸುರಿದರು.

ಅಲ್ಲಿಗೆ ವಿಷಯ ಮುಟ್ಟಿಸೋ ವೇಳೆಗೆ ಕಾಫಿ ತಂದಿಟ್ಟ ನೀರದ "ಅವ್ರು ಮನೆಗೆ ಬರುತ್ತಾರಂತ ?" ಕೇಳಿದಳು. ಅವನು ಇತ್ತೀಚೆಗೆ ಡೇ ಡ್ಯೂಟಿ ಮಾಡಿದರೂ 'ನೈಟ್ ಡ್ಯೂಟಿ' ಇದೆ ಎಂದು ಆಗಾಗ ಅಲ್ಲೇ ಉಳಿಯುವುದು ರೂಢಿಯಾಗಿತ್ತು.

"ಬರದೇ ಎಲ್ಲಿ ಹೋಗ್ತಾನೆ ! ಅಣ್ಣ ಸಿಗ್ಲಿಲ್ಲ, ರಿಸೆಪ್ಷನಿಸ್ಟ್ ಕೌಂಟರ್‌ನಲ್ಲಿ ತಿಳ್ಸಿದ್ದೀನಿ. ಅಲ್ಲಿ ಎಲ್ಲ ಸರಿಯಿಲ್ಲ. ಅದೇ ಅವ್ನಿಗೆ ಪ್ರಾಬ್ಲಮ್ ಆಗಿರೋದು. ಅಲ್ಲಿ ತಕ್ಷಣಕ್ಕೆ ಕೆಲ್ಸ ಬಿಡೋ ಇಚ್ಛೆ ಇದ್ದರೂ, ಬೇರೆ ಕಡೆ ಕೆಲ್ಸ ಸಿಗ್ಬೇಕಲ್ಲ. ನೀವು ದಯವಿಟ್ಟು ಬೇರೇನೋ ತಿಳ್ಕೋಬೇಡಿ" ಎಂದು ಕಾಫಿಯ ಲೋಟ ಎತ್ತಿಕೊಂಡ ಚಾರುಲತ ಮೇಣದ ಬತ್ತಿ ಉರಿಯುವ ಬೆಳಕಲ್ಲಿ ನೀರದ ಮುಖ ದಿಟ್ಟಿಸಿದಳು. ಒಂದು ರೀತಿಯ ವ್ಯಾಕುಲತೆ ಸ್ಪಷ್ಟವಾಗಿತ್ತು. ಆದರೂ ಮತ್ತೇನು ಹೇಳಲಿಲ್ಲ.

ಒಂದರ್ಧ ಗಂಟೆ ಕಾದು ನಂತರ ಮೂವರು ಊಟ ಮುಗಿಸಿದರು. ಅಷ್ಟರಲ್ಲಿ ಫೋನ್ ಬಂತು. "ಡಾ|| ನವೀನ್ ಇಲ್ಲೇ ಉಳ್ಕೋತಾರೆ" ನರ್ಸಿಂಗ್ ಹೋಂನಿಂದ ಫೋನ್ ಬಂತು.

"ಅವ್ರು ಬೇಕಾಗಿಯೇ ಈ ರೀತಿ ಮಾಡ್ತಾ ಇದ್ದಾರೆ" ತನ್ನ ಅಸಮಾಧಾನ ನೀರದ ಪ್ರಕಟಿಸಿಯೇ ಬಿಟ್ಟಳು. ರೂಮಿನಿಂದ ಹೊರಟ ಚಾರುಲತ ನಿಂತು "ಹಾಗೆಲ್ಲ ಯಾಕೆ ತಿಳ್ಕೋತೀಯಾ, ನೀರದ ? ನಿಮ್ಮದೇನು ಹಿರಿಯರು ಅರೇಂಜ್ ಮಾಡಿದ ಮ್ಯಾರೇಜ್ ಅಲ್ಲ. ಅಮ್ಮ ಸತ್ತ ಮೇಲೆ ನಿಮ್ಗೆ ನವೀನಣ್ಣ ಹೆಚ್ಚು ಪರಿಚಯವಾದದ್ದು. ಅವ್ನ ಗುಣ, ಸ್ವಭಾವಗಳೆಲ್ಲ ಗೊತ್ತು. ಅವನದು ಸರ್ಕಾರಿ ಜಾಬ್ ಅಲ್ಲ. ಅದ್ರಲ್ಲು ಅವ್ನು ಡಾಕ್ಟ್ರು. ಆ ಪ್ರೊಫೆಷನ್‌ಗೆ ಅದರದೇ ಆದ ನೀತಿ. ನಿಯಮಗಳು ಇವೆ. ಸುಮ್ನೆ ಏನೇನೋ ಯೋಚಿ. ಮನಸ್ಸು —

ಮಾಡ್ಕೋಬೇಡಿ. ಬೆಳಿಗ್ಗೆ ಬಂದ್ಮೇಲೆ ಅವ್ನೆ ಹೇಳ್ತಾನೆ" ಎಂದು ಹೇಳಿಯೇ ರೂಮಿಗೆ ಹೋಗಿ ಹಾಸಿಗೆಯ ಮೇಲೆ ಕುಸಿದಿದ್ದು. ಬಿಚ್ಚಿದ ಒದ್ದೆಯ ಕೂದಲು ದಿಂಬಿನ ಮೇಲೆ ಹರಡಿಕೊಂಡಿತು.

ಎರಡು ತಿಂಗಳು ಇಪ್ಪತ್ತು ದಿನಗಳ ನಂತರ ಮೊದಲ ಸಲ ಮೂರ್ತಿಯಿಂದ "ಚಾರುಲತ...." ಎಂದು ಕರೆಸಿಕೊಂಡಿದ್ದಳು. ಅವಳಿಗೆ ವಾಸ್ತವ ಪ್ರಜ್ಞೆ ಇದ್ದುದ್ದರಿಂದ ಮೈ ಮರೆಯಲಿಲ್ಲ. ಅವನ ನಡತೆಯಲ್ಲಿ ಅವಳು ಕಂಡಿದ್ದು ಪ್ರೀತಿಗಿಂತ ಆತಂಕವೆ ಹೆಚ್ಚು. ಗುರುತು ಪರಿಚಯ ಇರುವ ಯಾವ ಹೆಣ್ಣಾದರೂ ಅವಳ ಸ್ಥಿತಿಯಲ್ಲಿದ್ದರೇ ಖಂಡಿತ ಸಹಾಯ ಮಾಡುವಂಥ ಮನಸ್ಸು ಮೂರ್ತಿಯದು ಎಂದು ಅವಳಿಗೆ ಗೊತ್ತು. ಇಲ್ಲಿ ನಡೆದಿರೋದು ಕೂಡ ಅಷ್ಟೆ ಅಂದುಕೊಂಡಳೇ ವಿನಃ ವಿಪರೀತವಾದುದ್ದನ್ನ ಕಲ್ಪಿಸಿಕೊಂಡು ಅದಕ್ಕೆ ರೆಕ್ಕೆ ಪುಕ್ಕ ಹಚ್ಚಿ ಆಕಾಶದಲ್ಲಿ ಹಾರಲಿಲ್ಲ.

ಆಯಾಸವೆನಿಸಿದ್ದರಿಂದ ಕಣ್ಣು ಮುಚ್ಚಿದ ಕೂಡಲೇ ಅವಳಿಗೆ ನಿದ್ದೆ ಬಂತು.

ಮೂರ್ತಿ ಆತುರಾತುರವಾಗಿ ಬಂದಿದ್ದಕ್ಕೆ ಕಾರಣವಿತ್ತು. ಚೆನ್ನೈನಿಂದ ಪೈಲೆಟ್‌ನ ತಾಯ್ತಂದೆಯರು ಪೂಜಾನ ನೋಡಲು ಮರುದಿನ ಬರುವವರಿದ್ದರು.

"ನೀನು ತಕ್ಷಣ ಬಾ. ನಮ್ಗೇನು ತೋಚ್ತಾ ಇಲ್ಲ" ಅವನಪ್ಪ ಫೋನ್ ನಲ್ಲಿ ಕಂಪಿಸುವ ದನಿಯಲ್ಲಿ ಹೇಳಿದಾಗ "ಈಗ ಹೊರಟೆ ?. ಯಾಕೆ ಅಷ್ಟೊಂದು ಎಕ್ಸೈಟ್ ಆಗ್ತೀರಾ ? ಅವ್ರು ಕೂಡ ನಮ್ಮಂಗೆ ಮನುಷ್ಯರೇ ತಾನೇ ?" ಬೇಸರಿಸಿದ.

"ಹಾಗಲ್ಲ, ಪೂಜಾ ಬಗ್ಗನೇ ಚಿಂತೆ" ಎಂದರು ನಿಟ್ಟುಸಿರಿನೊಂದಿಗೆ "ಅವಳದೇನು ತಕರಾರಿಲ್ಲ ಬಿಡಿ. ಪೈಲೆಟ್ ಗಂಡನ್ನ ಒಪ್ಕೊಂಡಿದ್ದಾಳೆ. ಇದು ಸಿನಿಮಾ ಅಲ್ಲ, ಜೀವನ. ಸುಮ್ನೆ ತಲೆ ಕೆಡಿಸ್ಕೊಳ್ಳೋದ್ಬೇಡ, ಬರ್ತೀನಿ" ಎಂದವನು ತಕ್ಷಣ ಹೊರಟಿದ್ದ. ಅವಳ ಮದುವೆ, ಭವಿಷ್ಯ ಆದ್ಯ ಕರ್ತವ್ಯವಾಗಿತ್ತು. ಅದು ಮುಗಿಯುವವರೆಗೂ ನೆಮ್ಮದಿ ಇರಲಿಲ್ಲ.

ಮನೆಯ ಬಳಿ ಟ್ಯಾಕ್ಸಿಯಿಂದ ಇಳಿದಾಗ ಹೊರಗಿನ ಲೈಟುಗಳು ಉರಿಯುತ್ತಿತ್ತು. ಮಗನ ಬರುವನ್ನೇ ಎದುರು ನೋಡುತ್ತಿದ್ದರು ಯುಗಂಧರ್, ಮೃಣಾಲಿನಿ. ಪೂಜಾ ಎಷ್ಟೇ ಚೇತರಿಸಿಕೊಂಡಿದ್ದರೂ ಮೊದಲಿನ ಚೆಂದುಳ್ಳಿ ಚೆಲುವೆಯಾಗಿರಲಿಲ್ಲ.

"ಸಧ್ಯ ಬಂದೆಯಲ್ಲ ! ಈ ಸುರಿಯೋ ಮಳೆ ಬೇರೆ. ನಂಗಂತು ನಿನ್ಮುಖ ನೋಡೋವರ್ಗೂ ಜೀವದಲ್ಲಿ ಜೀವ ಇರ್ಲಿಲ್ಲ" ಆಕೆಯ ದನಿ ಒದ್ದೆಯಾಯಿತು. ನಿಧಾನವಾಗಿ ಏರಿದ ಮೂರ್ತಿ ಹುಬ್ಬು ಮಾಮೂಲಿ ಸ್ಟೇಜ್‌ಗೆ ಬಂದವು "ಏನಮ್ಮ ಇದು ! ಒಬ್ಬ ಗಂಡಿನೋರು ಬರ್ತೀನಿ ಅಂದ ಮಾತ್ರಕ್ಕೆ ಇಷ್ಟೊಂದು ಧಾವಂತನಾ ? ಅವ್ರು ನಮ್ಮ ಹಾಗೆ ಸಾಧಾರಣ ಮನುಷ್ಯರೇ. ಅವ್ರು ಬರ್‍ತಾ ಇರೋದು ರಷ್ಯ, ಅಮೇರಿಕಾದಿಂದಲ್ಲ. ಇಲ್ಲಿರೋ ಚೆನ್ನೈನಿಂದಲೇ" ಎಂದು ಬಲಗೈಯಲ್ಲಿದ್ದ ಪುಟ್ಟ ಟವಲಿನಿಂದ ಮುಖವನ್ನೊರೆಸಿಕೊಂಡ. ಟ್ಯಾಕ್ಸಿಯಲ್ಲಿ ಇಳಿದು ಗೇಟು ದಾಟಿ ಬಾಗಿಲಿಗೆ ಬರುವ ವೇಳೆಗೆ ಪನ್ನೀರಿನಂತೆ ಎರಚಾಡಿತ್ತು ಮಳೆಯ ಹನಿಗಳು.

"ನಿನ್ನಷ್ಟು ಧೈರ್ಯ ನಂಗಿಲ್ಲ ಬಿಡು. ಹೇಗೂ ನೀನು ಬಂದಿದ್ದೀಯಾ. ಎಲ್ಲಾ ನೀನೇ ಸಮಾಳಿಸ್ಕೋ" ಒಳಗೆ ನಡೆದರು.

ಶಾಲು ಹೊದ್ದು ಕೂತಿದ್ದ ಯುಗಂಧರ್ ಮಗನತ್ತ ಅಭಿಮಾನದ ನೋಟ ಬೀರಿದರು.

"ಹೇಗಿದ್ದೀರಿ ?" ಹತ್ತಿರಕ್ಕೆ ಹೋಗಿ ವಿಚಾರಿಸಿದ.

"ಪರ್ವಾಗಿಲ್ಲ, ಆದ್ರೂ ಮೊದಲಿನ ಯುಗಂಧರ್ ಆಗಿಲ್ಲ. ಇನ್ನ ವಾಕ್, ಡ್ರೈವಿಂಗ್ ಎಲ್ಲಾ ಬಂದ್" ಎಂದರು. ಹಾರ್ಟ್ ಅಟ್ಯಾಕ್ ಆದ ಮೇಲೆ ಮೊದಲಿನ ಗಡಸುತನ ಮಾಯವಾಗಿ ಮೆತ್ತಗಾಗಿದ್ದರು.

"ಪೂಜಾ ಎಲ್ಲಿ ? ಬಟ್ಟೆ ಬದಲಾಯ್ಸಿಕೊಂಡ್ಬರ್ತೀನಿ" ರೂಮಿನತ್ತ ನಡೆದ. ಷರಟು ಬಿಚ್ಚಿ ಹ್ಯಾಂಗರ್‌ಗೆ ಹಾಕುವಾಗ ಪುಟ್ಟ ಟವಲು ಅಣಕಿಸಿತು. ಅದು ಚಾರುಲತದು.

ನೆಟ್ಟ ನೋಟದಿಂದ ಅದನ್ನ ನೋಡಿದ. ತೀವ್ರವಾದ ಭಾವ ಸಂಘರ್ಷ ಅವನಲ್ಲಿ. ಚಾರುಲತ ಮಧುರವಾಗಿ ಮಿಡಿದಿದ್ದಳು ಅವನಲ್ಲಿ. ಸಪ್ತ ಸ್ವರ ಗಳಂತೆ ಬೆರೆತಿದ್ದರು.

ಧೊಪ್ಪನೆ ಕುಸಿದ. ಏನಾಗಿ ಹೋಯಿತು ನಮಗೆ ? ಯಾವ ತಪ್ಪಿಗೆ ಈ ಪ್ರಾಯಶ್ಚಿತ. ಕಲ್ಲಾಗಿ ವರ್ತಿಸಿ ನನ್ನ ಹೃದಯವನ್ನೊಡೆದು ಬಿಟ್ಟಳು.

ಎರಡು ಕೈಯಲ್ಲು ತಲೆಗೂದಲನ್ನು ಕಿತ್ತ. ಎಷ್ಟೋ ಹೊತ್ತು ಅಲ್ಲಿಂದ ಕದಲಲಾಗಲಿಲ ಅವನಿಗೆ.

"ಮೂರ್ತಿ" ಅವನಮ್ಮನ ದನಿ ಕೇಳಿ ಮೇಲೆದ್ದಿದ್ದು.

ಒಳಗೆ ಬಂದ ಮೃಣಾಲಿನಿ "ಇನ್ನ ಸರ‍್ಯಾಗಿ ತಲೆಯೊರ‍್ಸಿಕೊಂಡಿಲ್ಲ. ಗೀಜರ್ ಹಾಕಿದ್ದೀನಿ. ಬಿಸಿಯಾಗಿ ಸ್ನಾನ ಮಾಡ್ಕೊಂಡ್ಬಾ. ತಟ್ಟೆ ಹಾಕ್ತೀನಿ" ಹೇಳಿ ಹೋದರು. ತಾಯಿ ಹೃದಯ ಮಗನ ಸಂಕಟ ಅರಿಯದೇನಲ್ಲ. 'ಹೀಗಾಗ್ಬಾರ‍್ದಿತ್ತು' ಎಂದುಕೊಂಡರು.

ಸ್ನಾನ ಮುಗಿಸಿಕೊಂಡು ನೇರವಾಗಿ ತಂಗಿಯ ರೂಮಿಗೆ ಹೋದ. ನೆಪಕ್ಕೊಂದು ಕಾದಂಬರಿ ಇತ್ತು ಕೈಯಲ್ಲಿ.

ಅವಳ ಎದುರು ಕೂತು "ಹೇಗಿದ್ದಿ ?, ನೀನು ಹೀಗೇ ಷೇಕ್ಸ್‌ಪಿಯರ್‌ನ ನಾಟಕದ ದುರಂತ ಪ್ರೇಮಿಯಂಗೆ ಕೂತರೇ ದೇವರೇ ಕಾಪಾಡ್ಬೇಕು. ಅಪ್ಪನಿಗೆ ಹಾರ್ಟ್ ಅಟ್ಯಾಕ್ ಆಯ್ತು. ಹೇಗೋ ಚೇತರಿಸಿಕೊಂಡರು ದೇವರ ದಯೆಯಿಂದ. ಅಮ್ಮನಿಗೇನಾದ್ರೂ ಹಾರ್ಟ್ ಅಟ್ಯಾಕ್ ಆದರೇ ಆರಾಮಾಗಿ ರೈಟ್ ಹೇಳ್ಬಿಡ್ತಾರೆ. ನಾನು ಒಂದ್ಜೊತೆ ಕಾವಿ ಖರೀದಿಸಿ ಇಟ್ಕೊಂಡ್ ಇದ್ದೀನಿ. ನಿಶ್ಚಿಂತೆಯಾಗಿ ಹಿಮಾಲಯಕ್ಕೆ ಹೊರಟು ಬಿಡ್ತೀನಿ. ಆ ಮೇಲೆ ಆ ಮೂರ್ಖನ ನೆನೆಯುತ್ತ ಪ್ಯಾಥೆರ್ ಸಾಂಗ್ ಹಾಡ್ಕೋಬಹುದ್ದು" ಮುಖ ಗಂಟಿಕ್ಕಿ ಹೇಳಿದ. ಅವನ ಮಾತುಗಳು ಪೂಜಾಳನ್ನ ಅಲ್ಲೋಲ ಕಲ್ಲೋಲ ಮಾಡಿತು. ತಂದೆಗೆ ಹಾರ್ಟ್ ಅಟ್ಯಾಕ್ ಆದಾಗ ಅವರ ನಂತರ ಏನು ಎನ್ನುವ ಚಿತ್ರವನ್ನ ಕಲ್ಪಿಸಿಕೊಳ್ಳಲಾರದೆ ಭಯಪಟ್ಟಿದ್ದಳು.

"ಬೇಡ ಕಣೋ, ಬಿಡ್ತು...ಬಿಡ್ತು...ಅನ್ನೋ. ಪ್ಲೀಸ್....ಸಾರಿ... ನಾನು ಅಪ್ಪ, ಅಮ್ಮನ ಕಳ್ದುಕೊಳ್ಳೋಕೆ ಇಷ್ಟಪಡೋಲ್ಲ" ಕಣ್ಣೀರು ಸುರಿಸಿದಾಗ ಕಂಬನಿ ತೊಡೆದು ಕೆನ್ನೆ ತಟ್ಟಿ "ಈಗ ಸ್ವಲ್ಪ ಗೆಲುವಾಗಿ ಡೈನಿಂಗ್ ಹಾಲ್‌ಗೆ ನಡೀ. ನಿನ್ನ ಪಾಲಿಗೆ ಇನ್ನ ಕೆಲವು ಗಂಟೆಗಳು ಇವೆ. ಮಾನಸಿಕವಾಗಿ ಚೇತರಿಸ್ಕೋ. ಮೊದ್ಲಿನ ಪೂಜಾನೆ ಆಗ್ತೀಯಾ" ಉತ್ಸಾಹ ತುಂಬಿದ.

ಅಣ್ಣ, ತಂಗಿ ಒಟ್ಟಿಗೆ ಬಂದರು ಡೈನಿಂಗ್ ಹಾಲ್‌ಗೆ.

ಇಂದು ಸ್ವಲ್ಪ ನಗು ನಗುತ್ತಾ ಪೂಜಾ ಊಟ ಮಾಡಿದಾಗ ಮನೆಯಲ್ಲಿ ಜೀವ ಸಂಚಾರವಾಯಿತು. ಬಂದ ಚೆನ್ನೆ ದಂಪತಿಗಳು ಮಗಳನ್ನ ಒಪ್ಪದಿದ್ದರೂ ಪರವಾಗಿಲ್ಲ, ಒಂದಿಷ್ಟು ಗೆಲುವಾದಳಲ್ಲ ಎಂದು ಸಂತಸ ಗೊಂಡರು.

ಬಹಳ ಹೊತ್ತು ಮಾತಾಡುತ್ತ ಕೂತರು ಎಲ್ಲರು. ಇಷ್ಟು ದಿನಗಳ ತರುವಾಯ

ಪೂಜಾ ಕೂಡ ಆಗಾಗ ಒಂದು ಮಾತಾಡಿದಳು. ಎಲ್ಲರೂ ಚಾರುಲತ ಮತ್ತು ಅವರ ಮನೆಯವರ ವಿಚಾರ ಬರದಂತೆ ಎಚ್ಚರದಿಂದಿದ್ದರು.

ಹನ್ನೆರಡರ ನಂತರ ಮೂರ್ತಿ ಹಾಸಿಗೆಗೆ ಹೋಗಿದ್ದು, ಅಲ್ಲೇ ಸ್ಟೂಲ್ ಮೇಲಿದ್ದ ಟವಲು ಮತ್ತೆ ಅಣಕಿಸಿತು. ಕೈ ಅದನ್ನೊತ್ತಿಕೊಂಡು ಅಮೂಲ್ಯ ವೆನ್ನುವಂತೆ ಎದೆಗವಚಿಕೊಂಡಿತು. ಹೃದಯ 'ಚಾರು.....ಚಾರುಲತ' ಎಂದು ಪಿಸುಗುಟ್ಟಿತು. ಕೋಪವಿರಬಹುದು ಮೂರ್ತಿಗೆ, ಆದರೆ ಮಡದಿಯ ಪ್ರೇಮದ ಬಂಧನದಿಂದ ವಿಮುಕ್ತನಾಗಿರಲಿಲ್ಲ.

ಅವನು ನಿದ್ದೆಗೆ ಜಾರಿದನಂತರವು ಪುಟ್ಟ ಟವಲು ಅವನೆದೆಗೆ ಒತ್ತಿಕೊಂಡು ಹೆಮ್ಮೆಯಿಂದ ಬೀಗುತ್ತಿತ್ತು.

ಬೆಳಿಗ್ಗೆ ಎಚ್ಚರವಾದಾಗಲೇ ಅವನ ಅರಿವಿಗೆ ಬಂದಿದ್ದು. ಅಷ್ಟು ದೂರಕ್ಕೆ ಎಸೆದು ಬಾತ್‌ರೂಮಿಗೆ ಹೋದ. ಬ್ರೇಕ್‌ಫಾಸ್ಟ್ ನಂತರ ತಾಯಿ ಮಗ ಹಣ್ಣು ಖರೀದಿಸಲು ಹೊರಟಾಗ ಒಂದು ವಿಷಯ ತಿಳಿಸಿದರು.

"ನಿಮ್ಮಪ್ಪ ಆಸ್ಪತ್ರೆಯಲ್ಲಿದ್ದಾಗ ಬಂದಿದ್ದ ಚಾರುಲತ ಎರಡೆಳೆಯ ಸರ, ಒಂದು ಜೊತೆ ಬಳೆ ದೇವರ ಮನೆಯಲ್ಲಿ ಬಿಚ್ಚಿಟ್ಟು ಹೋಗಿದ್ದಾಳೆ. ಮರ್ತು ಇಟ್ಟು ಹೋಗಿದ್ದಾಳೇನೋ ಮತ್ತೆ ಬರ್‍ಬಹುದು ಅಂದ್ಕೊಂಡೆ. ಅವ್ಳು ಒಂದೆರಡು ಸಲ ಫೋನ್ ಮಾಡಿ ಅಪ್ಪ ಆರೋಗ್ಯದ ಬಗ್ಗೆ ವಿಚಾರಿಸಿದ್ಳು. ಆಗ್ಲೂ ಈ ಸುದ್ದಿ ಎತ್ತಲಿಲ್ಲ. ಅವ್ಳ ಉದ್ದೇಶವೇನೋ !"

ಮೂರ್ತಿ ಮಾತೇ ಆಡಲಿಲ್ಲ. ಇವರು ಹಾಕಿದ್ದ ತೂಕದ ಎರಡೆಳೆ ಸರದಲ್ಲಿದ್ದ ಮಾಂಗಲ್ಯವನ್ನ ತೆಗೆದು ಅವಳಪ್ಪ ಕಡಿಮೆ ಚಿನ್ನದಲ್ಲಿ ಎಣಿಸಿಕೊಟ್ಟ ಕರೀಮಣಿಯ ಸರಕ್ಕೆ ಹಾಕಿಕೊಂಡಿದ್ದಳು. ಅದಕ್ಕೆ ಅವಳತ್ತೆಯ ಪರ್ಮಿಷನ್ ಸಿಕ್ಕಿತ್ತು. ಈಗಲೂ ಆ ಕರೀಮಣಿ ಸರದಲ್ಲಿಯೇ ಇದ್ದಿದ್ದು ಮಾಂಗಲ್ಯ. ಈಗ ನಿರ್ದಾಕ್ಷಿಣ್ಯವಾಗಿ ಇವರು ಕೊಟ್ಟ ಚಿನ್ನ ನಿರಾಕರಿಸಲು ಸುಲಭವಾಯಿತು.

"ಕಮಲ ಬಂದರೇ ಅವ್ಳ ಕೈಯಲ್ಲಿ ಕೊಟ್ಟು ಕಳಿಸೋಣಾಂತ" ಎಂದರು ಮತ್ತೆ ಮೃಣಾಲಿನಿ. ಮೂರ್ತಿ ತನಗೇ ಕೇಳಲೇ ಇಲ್ಲವೆನ್ನುವಂತೆ ವರ್ತಿಸಿದ.

ಹಣ್ಣು ಖರೀದಿಸಿ ಹಿಂದಿರುಗಿ ಬರೋವಾಗ "ಈ ವಿಷ್ಯ ಅಪ್ಪನಿಗೆ ಗೊತ್ತಾ ?" ಕೇಳಿದ. ಸಧ್ಯಕ್ಕೆ ಯಾವುದೇ ಆಘಾತವಾಗುವಂಥ ವಿಷಯಗಳು

ಅವರವರೆಗೂ ಹೋಗುವುದು ಬೇಕಿರಲಿಲ್ಲ.

ಕೈಯಲ್ಲಿನ ಹೂವಿನ ಬ್ಯಾಸ್ಕೆಟ್‌ನ ಹಿಂದಿನ ಸೀಟು ಮೇಲಿಟ್ಟು "ಹೇಳ್ಲಿಲ್ಲ, ಆದ್ರೂ ಎಷ್ಟೋ ಸಲ ಹೇಳ್ಬೇಕು ಅಂದ್ಕೊಂಡೆ. ಒಮ್ಮೆ ಹೇಳಿ ಸಲಹೆ ಕೇಳೋದು ಅನ್ನಿಸಿದರು ಹಿಂಜರಿದೆ. ನಾನೇ ಒಮ್ಮೆ ಫೋನ್ ಮಾಡಿ ಅವಳನ್ನ ಬಂದು ತಗೊಂಡ್ಹೋಗೂಂತ ಹೇಳೋಣಾಂತ ಅಂದ್ಕೊಂಡೆ. ನಿಮ್ಮಪ್ಪ ನರ್ಸಿಂಗ್‌ಹೋಂನಿಂದ ಬಂದ್ಮೇಲೆ ಹೊರ್ಗಡೆ ಹೋಗಿಲ್ಲ. ಚಾರುಲತ ಬಂದರೇ ಅವ್ರು ತಪ್ಪು ತಿಳಿ ಬಾರ್ದಲ್ಲ. ಅದ್ಕೆ ನಿಂಗೆ ಹೇಳ್ದೆ" ಪೂರ್ತಿ ಹೇಳಿ ಆಕೆ ಮನಸ್ಸಿನ ಭಾರ ಕಳೆದುಕೊಂಡರು.

ಈಗ ಸೊಸೆಯ ಬಗ್ಗೆ ಮೆತ್ತಗಾಗಿದ್ದರು. ಹಿಂದಿನ ವೈರತ್ವ ಇರಲಿಲ್ಲ.

"ಈಗೇನ್ಮಾಡೋದು ?" ಅವನನ್ನ ಕೇಳಿದರು.

"ಅದೇನು ಅಂಥ ಅರ್ಜೆಂಟ್‌ನ ವಿಷ್ಯವಲ್ಲ. ನಿಧಾನವಾಗಿ ಯೋಚ್ಸೋಣ" ಸ್ಟೇರಿಂಗ್ ವ್ಹೀಲ್‌ನ ಮುಂದೆ ಕೂತ. ಅವನು ಕಾರಿನ ತಂಟೆಗೆ ಹೋಗುತ್ತಿದ್ದುದೇ ಕಡಿಮೆ. ಓರಿಜಿನಲ್ ಡ್ರೈವರ್, ಮಾಲೀಕರು ಅವನ ತಂದೆನೇ.

ಬರುವ ಅತಿಥಿಗಳಿಗಾಗಿ ಮನೆಯನ್ನ ಸಿಂಗರಿಸಿದರು. ಪೂಜಾ ಉಡಬೇಕಾದ ಸೀರೆಯನ್ನ ಮೂರ್ತಿನೇ ಆಯ್ದುಕೊಟ್ಟ. ಈ ಸಮಯದಲ್ಲಿ ಚಾರುಲತ ಇರಬೇಕಾಗಿತ್ತೆಂದು ಒಂದಲ್ಲ, ನೂರು ಸಲವಾದರೂ ಅಂದು ಕೊಂಡ.

ಮೃಣಾಲಿನಿಯ ಸಹಾಯಕ್ಕೆ ಒಂದಿಬ್ಬರು ನೆಂಟರ ಹೆಂಗಸರು ಬಂದಿದ್ದರು. ಹೇಳಿ ಮಾಡಿಸುವುದಷ್ಟೇ ಅವರ ಕೆಲಸ.

ಮೂರರ ಸುಮಾರಿಗೆ ಲಗ್ಸುರಿ ಟ್ಯಾಕ್ಸಿ ಬಂದು ಮನೆಯ ಮುಂದೆ ನಿಂತಾಗ, ಮೂರ್ತಿ ಹೊರಗೆ ಓಡಿದ. ಅವರುಗಳನ್ನ ನೇರವಾಗಿ ನೋಡಿ ಮಾತಾಡಿದ್ದವನು ಇವನೊಬ್ಬನೇ.

ತೀರ ತಮಿಳು ಬೆರೆತ ಕನ್ನಡವಾಗಿದ್ದರು ಸೊಗಸಾಗಿತ್ತು.

ಸರಳವಾದ ಜನ ಆತ್ಮೀಯವಾಗಿ ವ್ಯವಹರಿಸಿದಾಗ ಎಲ್ಲಾ ಸುಲಭ ವೆನಿಸಿತು. ಬಹಳ ಕಾಳಜಿಯಿಂದ ಮೂರ್ತಿಯೇ ತಂಗಿಗೆ ಮೇಕಪ್ ಮಾಡಿದ್ದರಿಂದ ಮೊದಲಿನ ಕೆಂಪು ಇನ್ನ ಕೆನ್ನೆಗಳ ಮೇಲೆ ಮೂಡದಿದ್ದರೂ ಚೆಲುವಾಗಿಯೇ ಕಂಡಳು. ತಮ್ಮ ಮಗನ ದಿನಚರಿಯ ವೀಡಿಯೋ ಕ್ಯಾಸೆಟ್ ಕೊಟ್ಟರು.

"ನಿಮ್ಮ ಮಗ್ಳ ದಿನಚರಿಯ ಒಂದು ವೀಡಿಯೋ ಕ್ಯಾಸೆಟ್ ಮಾಡ್ಸಿ ಕೊಡಿ. ಅವ್ನು ಬರೋಕೆ ಮೊದ್ಲು ಇದ್ನ ಕಳ್ಸಿ ಕೊಡ್ತೀವಿ" ಎಂದರು.

ಅವರುಗಳು ಕೂಡ ತಮ್ಮ ಹೆಣ್ಣು ಮಕ್ಕಳ ವಿವಾಹ ಮಾಡಬೇಕಾದುದ್ದರಿಂದ ಅರ್ಥ ಮಾಡಿಕೊಂಡು ಹಣ ಕೊಡುವ ಜನ ಬೇಕಿದ್ದರೇ ವಿನಃ ತೀರಾ ವ್ಯವಹಾರ ಮಾಡಿಯೋ, ಅವರನ್ನ ಹಿಂಡಿ ಹಿಪ್ಪೆ ಮಾಡಿ ಹಣ ವಸೂಲು ಮಾಡುವುದು ಅವರ ಉದ್ದೇಶವಾಗಿರಲಿಲ್ಲ. ಅದನ್ನ ಸ್ಪಷ್ಟವಾಗಿ ಹೇಳಿಕೊಂಡರು.

ಈ ಕಡೆಯವರ ಪೂರ್ಣ ಸಮ್ಮತಿ ಇದ್ದುದ್ದರಿಂದ ಅವರುಗಳು ಕೂಡ ಹೆಚ್ಚು ಘಾಸಿಗೊಳ್ಳಬೇಕಿರಲಿಲ್ಲ. ರಾತ್ರಿಯ ಫ್ಲೈಟ್‌ಗೆ ರಿಟರ್ನ್ ಟಿಕೆಟ್ಸ್‌ನ ಪಡೆದಿದ್ದರಿಂದ ಮೂರ್ತಿಯೇ ಹೋಗಿ ಬೀಳ್ಕೊಟ್ಟು ಕೈ ಬೀಸಿ ಬಂದಿದ್ದ.

"ನಿಮ್ಮ ಹುಡ್ಗಿ ನಮ್ಗೆ ಪೂರ್ತಿಯಾಗಿ ಇಷ್ಟವಾಗಿದ್ದಾಳೆ" ದಂಪತಿಗಳು ಒಮ್ಮತದಿಂದ ಹೇಳಿದ್ದರಿಂದ ಅವನಿಗೆ ಆಕಾಶಕ್ಕೆ ಏಣಿ ಹಾಕುವಂತಾಗಿತ್ತು.

ಹಿಂದಿರುಗಿ ಬಂದವನೇ ಕ್ಯಾಸೆಟ್‌ನ ವಿ.ಸಿ.ಆರ್. ನೊಳಕ್ಕೆ ತುರುಕಿ ತಂಗಿಯ ಪಕ್ಕ ಕೂತ. ಅರ್ಧಗಂಟೆಯ ಕ್ಯಾಸೆಟ್. ಮನೆಯ ದಿನಚರಿಯಿಂದ ಹಿಡಿದು ಅವನು ವಿಮಾನ ಹತ್ತಿ ಪೈಲಟ್ ಸೀಟುನಲ್ಲಿ ಕೂಡುವವರಿಗೂ ಇತ್ತು. ಅವನ ಕಂಠದಲ್ಲಿನ ಒಂದು ಹಾಡು ಕೂಡ ಇತ್ತು. ಇಂಪಾದ ರಫಿ ಹಾಡಿದ ಚಲನಚಿತ್ರಗೀತೆ. ತಂದೆ, ತಾಯಿ, ತಂಗಿಯರೊಂದಿಗಿನ ಒಡನಾಟ, ಎಲ್ಲ ಇಷ್ಟವೆನಿಸಿತು ಎಲ್ಲರಿಗೂ.

"ಮಧು ತುಂಬ ಚೆನ್ನಾಗಿದ್ದಾನೆ" ಎಂದರು ಮೃಣಾಲಿನಿ.

ತಂಗಿಯ ಹೆಗಲ ಮೇಲೆ ಕೈ ಹಾಕಿದ ಮೂರ್ತಿ "ಬರೀ ಚೆನ್ನಾಗಿ ಏನು, ಸೂಪರ್ಬ್. ಎಂಥ ಹೊಳೆಯೋ ಕಣ್ಣುಗಳು. ಎಷ್ಟು ಮಟ್ಟಸವಾಗಿದ್ದಾನೆ. ಮಾಡೆಲಿಂಗ್ ಮಾಡಿದ್ರೆ ಲಕ್ಷಾಂತರ ಸಂಪಾದಿಸಬಹುದಿತ್ತು. ಆದರೆ ಅದೆಲ್ಲಿ ಆಗದ ಮಾತು. ಬೆಳಿಗ್ಗೆ ತಿರುಪತಿ ವೆಂಕಟೇಶ್ವರ ಸುಪ್ರಭಾತ ಸುಬ್ಬಲಕ್ಷ್ಮಿಯವರ ಕಂಠದಲ್ಲಿ ಕೇಳದ ದಿನ ಅಪ್ರಿಗೆ ಊಟ ಸೇರೋಲ್ವೇನೋ ! ಅಂಥ ಸಂಪ್ರದಾಯಸ್ಥ ಜನ" ಹೇಳಿದ ಮುಖ ಉಬ್ಬಿಸಿ. ಈ ಗಂಡು, ಸಂಬಂಧ, ಎಲ್ಲರಿಗೂ ಇಷ್ಟವಾಗಿತ್ತು.

ಇಷ್ಟು ಬೇಗ ಇಂಥ ಒಳ್ಳೆಯ ಸಂಬಂಧ ಕಾಲಿಗೆ ತೊಡರಿದ ಬಳ್ಳಿಯಂತೆ

ತಮಗೆ ಸಿಕ್ಕಿದ್ದು ತೀರಾ ಅದೃಷ್ಟವೆಂದು ಕೊಂಡರು ಯುಗಂಧರ್. ಕರಿ ನೆರಳಿನ ಛಾಯೆಯ ಮನಸ್ಥಿತಿಯಲ್ಲಿದ್ದವರನ್ನ ಬೆಳದಿಂಗಳಿಗೆ ದೂಡಿ ದಂತಾಗಿತ್ತು.

ಪೂಜಾ ಮಾತ್ರ ಸುಮ್ಮನೆ ಕೂತಿದ್ದಳು.

"ಇದೆಲ್ಲ ನಿಮ್ಮಗಳ ಅಭಿಪ್ರಾಯ ಆಯ್ತು. ಇನ್ನ ಪೂಜಾ ಒಪ್ಕೊಂಡರೆ ಅರ್ಧ ಮದ್ವೆ ಮುಗಿದಂತಾಗುತ್ತೆ" ಎಂದರು ಮೃಣಾಲಿನಿ ನಿಶ್ಚಿಂತೆಯಿಂದ ಅವಳು ತಟ್ಟನೆ ಎದ್ದು ಹೋದಳು.

ಯುಗಂಧರ್ ಗಾಬರಿಯಾದರು.

ಮೂರ್ತಿ ಪಕ ಪಕ ನಕ್ಕುಬಿಟ್ಟ "ಅಪ್ಪ, ನೀವೇನು ಆತಂಕ ಪಡೋದ್ಬೇಡ ನಿಮ್ಮ ಮಗ್ನ ಬಗ್ಗೆ ಅವ್ಳಿಗೆ ಹಂಡ್ರೆಡ್ ಪರ್ಸೆಂಟ್ ಒಪ್ಪಿಗೇಂತ ಅವ್ಳ ಕಣ್ಣುಗಳೇ ಹೇಳ್ತಾ ಇದ್ವು. ಹಿರಿಯರು ಒಪ್ಕೊಂಡ್ರು. ಒಪ್ಪಬೇಕಾದ ಗಂಡಿನ ಬಗ್ಗೆ ಮಾತ್ರ ನಾವು ಯೋಚ್ಸೋಣ" ಎಂದ. ಯುಗಂಧರ್‌ಗೆ ಅದು ಸರಿಯೆನಿಸಿತು.

"ಒಡ್ವೆ, ವಸ್ತು ಸಾಕಷ್ಟು ಇದೆ. ಆ ಬಗ್ಗೆ ನಾವೇನು ತಲೆ ಕೆಡ್ಸಿ ಕೊಳ್ಳೋದ್ಬೇಡ. ಅವ್ರೇನು ಕೇಳದಿದ್ರು....ಎಷ್ಟು ಕೊಡೋಕೆ ಸಾಧ್ಯ ನಮ್ಮಿಂದ? ಮಧು ಇರೋ ಚೆಂದಕ್ಕೆ ವಿದ್ಯೆಗೆ ಯಾರಾದ್ರೂ ಕೋಟಿಗಟ್ಟಲೆ ಸುರಿದಾರು! ನಾವು ಅಷ್ಟೆಲ್ಲ ಎಲ್ಲಿಂದ ತರೋಣ" ಅನುಮಾನಿಸಿದರು ಮೃಣಾಲಿನಿ.

ಹಾಗೇನು ಅನ್ನಿಸಲಿಲ್ಲ ಮೂರ್ತಿಗೆ. ಅವರು ಅಂದೇ ತಮ್ಮ ಪರಿಸ್ಥಿತಿ ವಿವರಿಸಿದ್ದರು. ಯಾರು ಅವರನ್ನು ಗಂಡಿನ ಕಡೆಯವರು ವರದಕ್ಷಿಣೆ ಕೇಳದಿದ್ದರೇ, ಅವರುಗಳು ಕೂಡ ಕೈಯೊಡ್ಡುವಂಥ ಜನವಲ್ಲ. ಪರಿಸ್ಥಿತಿ ಅವರನ್ನ ಇಕ್ಕಟ್ಟಿಗೆ ಸಿಕ್ಕಿಸಿತ್ತು.

"ಹೇಗೂ, ಆ ಮನೆನ ಇನ್ನಷ್ಟು ವಿಸ್ತರಿಸಿ ಡಾ|| ನವೀನ್‌ಗೆ ಒಂದು ನರ್ಸಿಂಗ್‌ಹೋಂ ಮಾಡಿ ಕೊಡೋ ಉದ್ದೇಶವಿತ್ತು. ಅದ್ನ ಬಾಯ್ಬಿಟ್ಟು ಕೂಡ ಹೇಳಿದ್ದೆ. ಈಗ ಅದೇ ಮನೇನ ಮಾರಿ ಹಣದ ರೂಪದಲ್ಲಿ ಕೊಟ್ಟು ಬಿಡೋಣ. ನಿನ್ನ ಅಭಿಪ್ರಾಯವೇನು ಮೂರ್ತಿ ?" ಮಗನನ್ನ ಕೇಳಿದರು ಯುಗಂಧರ್.

ತಲೆದೂಗಿದ. ತಂಗಿಯ ವಿವಾಹಕ್ಕಾಗಿ ಅವನು ಯಾವ ರಿಸ್ಕ್ ಬೇಕಾದರೂ ತೆಗೆದುಕೊಳ್ಳಲು ಸಿದ್ಧವಿದ್ದ. ಪೂಜಾ ಬದುಕು ಸರಿ ಹೋಗಬೇಕು. ಇಲ್ಲದಿದ್ದರೇ

ಬೇರೆಯವರ ಬೆರಳು ಅವನತ್ತಲೇ.

"ಖಂಡಿತ, ಅದ್ನೆಲ್ಲ ನಾನು ನೋಡ್ಕೋತೀನಿ. ಇನ್ನಷ್ಟು ಸಾಲ ಕೇಳಿದ್ರೂ ಈ ಮನೆಯ ಮೇಲೆ ಸಾಲ ತೆಗ್ದು ಕೊಡೋಣ. ನಿಧಾನವಾಗಿ ತೀರ್ಸ್ಸಿ ಕೊಂಡರಾಯ್ತು. ಅವಳೊಬ್ಬಳ ಬದ್ಕು ಸೇಫಾದರೇ ಸಾಕು" ಉದ್ವಿಗ್ನನಾಗಿ ನುಡಿದ.

ಯುಗಂಧರ್ ಎದೆ ತುಂಬಿತು. ಮಗ ಈಗ ಇಷ್ಟು ಬೆಂಬಲವಾಗಿ ತಮ್ಮೊಂದಿಗೆ ನಿಂತಿದ್ದಕ್ಕೆ ಅವನಿಗೆ ಹೇಗೆ ಕೃತಜ್ಞತೆ ತಿಳಿಸಬೇಕೋ ಅವರಿಗೆ ಅರ್ಥವಾಗಲಿಲ್ಲ. ಕಣ್ತುಂಬಿತು. ಮಾತಾಡದೇ ರೂಮಿಗೆ ಹೋಗಿ ಮಲಗಿ ಬಿಟ್ಟರು.

ತಾಯಿಯ ಕಡೆ ತಿರುಗಿದ ಮೂರ್ತಿ "ಅಪ್ಪನ್ನ ಯಾವ್ದೂ ಮನಸ್ಸಿಗೆ ಹಚ್ಕೋಬೇಡಾಂತ ಹೇಳು. ಎಲ್ಲಾ ನಾನು ನೋಡ್ಕೋತೀನಿ. ಪೂಜಾ ನಗು ನಗುತ್ತ ಗಂಡನ ಜೊತೆ ಹೋಗ್ತಾಳೆ" ಮೇಲುಸಿರಿನೊಂದಿಗೆ ಹೇಳಿದ.

ಆಕೆಯ ಕಣ್ಣಾಲಿಗಳು ಒದ್ದೆಯಾಯಿತು. ಆದರೆ ಮುಂದಿನ ಮೂರ್ತಿಯ ಬದುಕು ಯೋಚಿಸುವಂತಾಗುತ್ತಿತ್ತು. ಆ ಬಗ್ಗೆ ತಲೆ ಕೆಡಿಸಿಕೊಂಡಂಗೆ ಕಾಣಲಿಲ್ಲ.

"ಚಾರುಲತ ಬಿಟ್ಹೋದ ಒಡ್ವೆಗಳ ಬಗ್ಗೆ ನಿಮ್ಮ ತಂದೆಗೆ ತಿಳಿಸ್ಲಾ ?" ಪಿಸು ದನಿಯಲ್ಲಿ ಕೇಳಿದರು. ಅವನ ಮುಖ ಒಂದು ತರಹ ಆಯಿತು. "ಸಧ್ಯಕ್ಕೆ ಬೇಡ. ಇದು ಯಾವ ದೊಡ್ಡ ವಿಷ್ಯಾಂತ ಅವ್ರವರ್ಗೂ ತಗೊಂಡ್ ಹೋಗೋದು ? ಮರ್ತು ಬಿಟ್ಹೋಗಿರ್ಬೇಕು. ಅಣ್ಣನ ಮದ್ವೆ ವಿಷ್ಯ ಬಂದಾಗ ನಮ್ಮನ್ನೆ ನಿರ್ಲಕ್ಷಿಸಿಬಿಟ್ಲು. ಈ ಚಿನ್ನ ಯಾವ ಮಹಾ" ಎಂದ ಗಡುಸಾಗಿ.

ಮಗನ ಕೋಪ ಕಮ್ಮಿಯಾಗಿಲ್ಲವೆಂದುಕೊಂಡರು.

"ನೀನು ಮಲಕ್ಕೋ ಹೋಗು. ಅವ್ಳಿಗೆ ಬಿಸಾಕೋ ಅಷ್ಟು ಒಡ್ವೆ ಇರ್ಬಹುದು. ಪೂಜಾಗೆ ಕೊಟ್ಟರಾಯ್ತು" ಅಂದು ಎದ್ದು ಹೋದ. ಅದು ಮನ ಸ್ಸಿನಾಳದಿಂದ ಬಂದ ಮಾತಲ್ಲ. ಮದುವೆಯ ಸಂದರ್ಭದಲ್ಲಿ ಅತ್ತೆ ಮನೆಯ ವರು ಹಾಕಿದ್ದು ಕೂಡ ಅವಳ ಸ್ವಂತಕ್ಕೆ ಸೇರಿದ್ದೇ. ಅದರ ಮೇಲೆ ಯಾರ ಹಕ್ಕು ಇಲ್ಲ. ಇದು ಅವನ ಮನಸ್ಸಿನ ಸ್ಪಷ್ಟವಾದ ಅಭಿಪ್ರಾಯ.

ದಿಂಬಿನ ಮೇಲೆ ತಲೆ ಇಟ್ಟನಂತರ ತಲೆ ತಿರುಗಿಸಿ ನೋಡಿದ. ಪುಟ್ಟ

ಟವಲು ಸ್ಟೂಲ್‌ನ ಅಡಿಯಲ್ಲಿ ಬಿದ್ದಿತ್ತು. 'ಬಿದ್ದಿರ್ಲಿ' ಮುಖ ತಿರುಗಿಸಿ ಮಲಗಿಕೊಂಡರೂ ಹತ್ತು ನಿಮಿಷಗಳನಂತರ ಅದನ್ನ ಎತ್ತಿ ಸ್ಟೂಲ್ ಮೇಲೆ ಹಾಕಿದ 'ಅಯ್ಯೋ, ಇನ್ನ ಇಡೀ ರಾತ್ರಿ ಜಾಗರಣೆ' ಸದಾ ಕಾಡುವುದು ಹೆಣ್ಣಿನ ಕೆಲಸವೇ. ಅಮ್ಮ ತಂಗಿ, ಮಡದಿ, ಮಗಳು ಒಬ್ಬರಲ್ಲಿ ಒಬ್ಬರು ಗಂಡನ್ನ ಕಾಡುತ್ತಿರುತ್ತಾರೆ. ಇದು ಅವನ ವಿಶ್ಲೇಷಣೆ. ಈ ಬಗ್ಗೆ ಯಾಕೆ ಒಂದು ಲೇಖನ ಸಿದ್ಧ ಮಾಡಬಾರದು?

ತಕ್ಷಣ ಎದ್ದು ಕೂತ. ಚೆನ್ನೈನ ಜನ ಮನೆಯಲ್ಲಿ ಮಾತ್ರವಲ್ಲ ವಿಮಾನ ನಿಲ್ದಾಣದಲ್ಲಿ ಕೂಡ ಅವನ ಮಡದಿಯ ಬಗ್ಗೆ ಪ್ರಶ್ನಿಸುತ್ತಿದ್ದರು. "ನೋಡಿದ್ರೆ ಚೆನ್ನಿತ್ತು. ನಿಮ್ತಂದೆ ಕೊಟ್ಟ ಮ್ಯಾರೇಜ್ ಆಲ್ಬಮ್ ನೋಡಿದ್ವಿ. ಬ್ಯೂಟಿ ಫುಲ್ ಲೇಡಿ. ನಮ್ಗೆ ಅಷ್ಟೊಂದು ಸರಳವಾಗಿ, ಸಂಪ್ರದಾಯವಾಗಿ ಇರೋ ಹುಡ್ಗಿರೇ ಇಷ್ಟವಾಗೋಲ್ಲ. ನಮ್ಮ ಮಧುಗೆ ಕೂಡ ಸೀರೆಗಳು ಅಂದರೇನೇ ಇಷ್ಟ." ಆಕೆ ಒತ್ತಿ ಹೇಳಿ ಹೋಗಿದ್ದರು.

ನಡೆದು ಹೋದ ರಾದ್ಧಾಂತ ಅವರಲ್ಲಿ ವಿವರಿಸಲು ಹೋದರೆ ಇಡೀ ಕತೆಯೇ ಹೊರಗೆ ಬರುತ್ತೆ. ಒಬ್ಬ ಗಂಡಾಗಿ ಆತ್ಮಹತ್ಯೆ ಮಾಡಿಕೊಳ್ಳಲು ಯತ್ನಿಸಿದ ಹೆಣ್ಣನ್ನ ಇನ್ನೊಬ್ಬ ಗಂಡು ಹೇಗೆ ಒಪ್ಪಿಯಾನು ? ಮಧುಗಾದರೂ ಅಂಥ ಹಣೆ ಬರಹವೇನು ? ತೀರಾ ಗೋಜಲು ಗೋಜಲಾಗಿ ಹೋಯಿತು ಅವನ ಮನಸ್ಸು.

ತಲೆಯ ಮೇಲೆ ಕೈಯೊತ್ತು ಕೂತ. ಅವನಪ್ಪ, ಡಾ॥ ನವೀನ್‌ನ ಪ್ರತಿಯೊಬ್ಬರನ್ನ ಅವಮಾನಿಸಿದ್ದ. ಬಂದ ಚಾರುಲತನ ಕತ್ತಿಡಿದು ದಬ್ಬುವಂತೆ ಕಳಿಸಿದ್ದ. ಬಿಸಿಲಲ್ಲಿ ನಡೆದು ಹೋಗುತ್ತಿದ್ದವಳ ಕಡೆ ನೋಟ ಕೂಡ ಹರಿಸಿರಲಿಲ್ಲ.

ಮಿದುಳು ಸಿಡಿಯುತೊಡಗಿತು. ಒಂದು ಸಾರಿಡಾನ್ ನುಂಗಿದ. ಅಮೃತಾಂಜನ ಹಚ್ಚಿದ. ಯಾವುದರಿಂದಲೂ ನೋವು ಕಡಿಮೆಯಾಗದಿದ್ದಾಗ ಹೊರಗೆದ್ದು ಬಂದು ಕೂತ. ಮೃಣಾಲಿನಿ ಕೂಡ ಭಾಗವತ ಹಿಡಿದು ಕೂತಿದ್ದರು.

"ಅಮ್ಮ ನಿದ್ದೆ ಬರ್ಲಿಲ್ವಾ ?" ಎದುರಿಗೆ ಬಂದು ಕೂತವನು ಭಾರವಾದ ನಿಟ್ಟುಸಿರು ದಬ್ಬಿದ "ಮಧ್ಯಾಹ್ನ ಮಲಗಿದ್ದೆ" ತಡವರಿಸಿದರು. ಅವನಿಗೆ ನಗು ಬಂತು. "ಹೋಗ್ಲಿ ಬಿಡು. ಬಹುಶಃ ನಿನ್ತಲೆಯಲ್ಲಿ ಕೊರೆಯುತ್ತ ಇರೋ ಸಮಸ್ಯೆನೇ ನನ್ನ ತಲೆ ತುಂಬಿಕೊಂಡಿರೋದು. ಅಪ್ಪಿಗೆ ಆಲ್ಬಮ್ ತೋರಿಸ್ಬಾರ್ದಿತ್ತು. ನನ್ನ ವಿಮಾನ ನಿಲ್ದಾಣದಲ್ಲಿ ಚಾರುಲತ ಬಗ್ಗೆ ಕೇಳಿದ್ರು" ಎಂದ ಅತ್ತಿತ್ತ ನೋಡಿ. ಯುಗಂಧರ್ ಮಲಗಿದ್ದ ಬೆಡ್‌ರೂಂ ಬಾಗಿಲು ಹಾಕಿತ್ತು.

"ಹೇಗೆ ತೋರಿಸ್ತೇ ಇರೋಕೆ ಸಾಧ್ಯ ? ನೀನು ಮದ್ವೆ ಆಗಿದೇಂತ ಹೇಳಿದ್ದೀಯ. ಚಾರುಲತ ಓಡಾಡಿಕೊಂಡಿದ್ದರೇ, ಅದರ ಅಗತ್ಯ ಕಾಣ್ತಾ ಇರಲಿಲ್ಲ. ಬದ್ಕೇ ಸಮಸ್ಯೆಗಳ ಗೂಂಡಾರಣ್ಯ ಅನ್ನಿಸುತ್ತೆ. ಒಳ್ಳೆ ಸಂಬಂಧ ಬಂದಿದೆ. ಪೂಜಾ ಕೂಡ ಒಪ್ಕೋತಾಳೇಂತ ಅನ್ನಿಸಿದೆ. ಇದ್ರ ಮಧ್ಯೆ ಈ ಸಮಸ್ಯೆ. ಈಗ ಹೇಗೋ, ಏನೋ ಹೇಳಿ ಸಮಾಳಿಸ್ಕೋಬಹ್ದು. ಮದುವೆಯ ಮನೆಯಲ್ಲಿ ಈ ಮನೆ ಸೊಸೆ ಓಡಾಡದಿದ್ದರೇ ಹೇಗೆ ? ವಿಷ್ಯಕ್ಕೆ ರೆಕ್ಕೆ ಪುಕ್ಕ ಹುಟ್ಟಿಕೊಂಡು ಮುಂದಿನ ಪೂಜಾಳ ಭವಿಷ್ಯಕ್ಕೆ ತೊಂದರೆ ಆಗುತ್ತೆ. ಈಗೇನು ಮಾಡೋದು?" ಪೂರ್ತಿ ಚಿತ್ರವನ್ನ ಮಗನ ಮುಂದಿಟ್ಟರು.

ಅವನಿಗೇನು ತೋಚಲಿಲ್ಲ. ತಾಯಿಯತ್ತ ನೋಡಿದ. ಬರೀ ಆತಂಕವೇ ಆಕೆಯ ಕಣ್ಣುಗಳಲ್ಲಿ. ಗಂಟಲು ಹಿಡಿದಂತಾಯಿತು.

"ಇನ್ನ ಸಮಯವಿದೆಯಲ್ಲ. ನೀನು ನಂಬಿರೋ ಕೃಷ್ಣನೇ ಮಾರ್ಗ ತೋರಿಸ್ತಾನೆ. ನಾಳೆ ಓದಬಹ್ದು ಹೋಗಿ ಮಲಕ್ಕೊಳ್ಳಿ. ಅಪ್ಪನಿಗೆ ನಿದ್ದೆ ಬಂದಿರಬಹುದೆಂದು ನಾವು ಅಂದ್ಕೋಬಹ್ದು. ವಿಷಯ ಮನಸ್ಸಿಗೆ ಇಳಿಯ ದಿದ್ದರೂ, ನೀವು ಹಾಸಿಗೆಯಿಂದ ಎದ್ದು ಬಂದಿರೋದು ನೋಡಿ ಮೌನ ವಾಗಿಯೇ ತಲೆ ಕೆಡಿಸ್ಕೋತಾರೆ. ಪ್ಲೀಸ್ ಹೋಗಿ ಮಲ್ಗಿಕೊಳ್ಳಿ. ಅಪ್ಪಿ ತಪ್ಪಿ ಪೂಜಾ ಮುಂದೆ ಈ ಪ್ರಸ್ತಾಪ ಖಂಡಿತವಾಗಿಯು ಬೇಡ" ಬಗ್ಗಿ ಪಿಸು ದನಿಯಲ್ಲಿ ನುಡಿದ. ಆಕೆ ತಲೆದೂಗಿ ಎದ್ದು ಹೋದರು.

ಟಿ.ವಿ. ಆನ್ ಮಾಡಿದ. ಯಾವುದೋ ಇಂಗ್ಲೀಷ್ ಚಿತ್ರ ಸ್ಟಾರ್ ಪ್ಲೇಸ್‌ನಲ್ಲಿ. ಬರೀ ಚಾನಲ್‌ಗಳನ್ನ ಬದಲಾಯಿಸುತ್ತ ಗಂಟೆ ಕೂತವನು ಬೇಸರದಿಂದ ಎದ್ದು ಹೋಗಿ ಮಲಗಿದ.

ಪೂಜಾ, ಡಾ।। ನವೀನ್‌ನ ವಿಷಯ ಪ್ರಸ್ತಾಪವಾಗಿ ಬಹಳ ದೂರ ಹೋದನಂತರ ಹೆದರಿಸಲು ಒಂದು ಮಾತು ಹೇಳಿದ್ದ.

"ನಿನ್ನ ಭವಿಷ್ಯ ಹಾಳು ಮಾಡ್ಕೋತಾ ಇದ್ದೀಯಾ ! ಜೀವನ ಪೂರ್ತಿ ಒಂಟಿಯಾಗಿರಬೇಕಾಗುತ್ತೆ."

ಅವಳು ಒಂದಿಂಚು ಕೂಡ ಚಲಿಸಿರಲಿಲ್ಲ "ನೀವು ಹೇಳಿದ್ದು ಇಬ್ರಿಗೂ ಅನ್ವಯವಾಗುತ್ತೆ. ಒಂದಿಷ್ಟು ಹೆಚ್ಚು ಕಡ್ಮೆಯಾಗ್ಬಹ್ದು. ಬದುಕಿನಲ್ಲಿ ಸಮಸ್ಯೆ

ಗಳು ಸಹಜ. ಭಾರ ಹೊತ್ತೇನು ವಿಪರೀತ ಕಲ್ಪನೆ ಮಾಡ್ಕೊಂಡರೆ ಭಾರದ ಪ್ರಮಾಣ ನೂರರಷ್ಟು ಹೆಚ್ಚುತ್ತೆ. 'ಅದೇನು ಮಹಾ !' ಎಂದುಕೊಂಡರೇ ಬೆಟ್ಟ ಕೂಡ ಹಗುರವಾಗಿರುತ್ತೆ" ಸವಾಲೆಸೆದಂತೆ ಆಡಿದ ಮಾತುಗಳು ನೆನಪಾಯಿತು.

ಅಂದು ಅವಳ ಮುಖದಲ್ಲಿ ಮಿನುಗುತ್ತಿದ್ದ ಸ್ವಾಭಿಮಾನ ರೊಚ್ಚಿಗೆಬ್ಬಿಸಿತ್ತು. ಇಂದು ವಿವೇಕದಿಂದ ಚಿಂತಿಸಿದಾಗ ಹೆಮ್ಮೆಯೆನಿಸಿತು. ಆದರೆ ಅವನ 'ಈಗೋ' ಒಪ್ಪಲು ಬಿಡಲಿಲ್ಲ.

ಆದರೆ ಮೂರ್ತಿಯ ಮಸ್ತಿಷ್ಕದಲ್ಲಿ ಇನ್ನೊಂದು ವಿಷಯ ಸುಳಿಯಿತು. 'ಸ್ವಂತ ಮನೆ ಇದ್ದು ಬದಲಾಯಿಸಿದ್ದು ಯಾಕೆ ?' ಬಹುಶಃ ಮನೆ ಮಾರಿರ ಬಹುದು. ಅಂಥ ಸ್ಥಿತಿ ಅವರಿಗೇನಿತ್ತು. ತಲೆ ಬುಡ ಗೊತ್ತಾಗಲಿಲ್ಲ.

ಬೆಳಿಗ್ಗೆ ಕಮಲ ಮನೆಗೆ ಹೋಗಿ ಬರಬೇಕೆಂದುಕೊಂಡ. ನೆಂಟರಾದುದ್ದರಿಂದ ಹೋಗಿ ಬರಲು ಕಾರಣ ಬೇಕಿರಲಿಲ್ಲ. ಮತ್ತೆ ಚೆನ್ನಿಗೆ ಸಂಬಂಧ ಸೂಚಿಸಿದವರು ಕೂಡ ಅವಳ ಮನೆಯವರೇ.

ಎರಡು ನಿದ್ದೆ ಮಾತ್ರೆ ನುಂಗಿ ಮಲಗಿದ. ತಾಯಿಗೂ ಇದೇ ಸಲಹೆ ಕೊಡಬೇಕೆನಿಸಿತು. ಈಗ ಪೂಜಾಗೂ ಮಾತ್ರೆ ನುಂಗಿಯೇ ನಿದ್ರಿಸುವ ಅಭ್ಯಾಸ. ಅದನ್ನ ಆದಷ್ಟು ಕಡಿಮೆ ಮಾಡಬೇಕೆಂದುಕೊಂಡ.

ಚಾರುಲತ ಕರ್ಚೀಫ್ ಅಣಕಿಸಿದಂತಾಯಿತು. ಮನಸ್ಸಿರೋ ಮನುಷ್ಯನಿಗೆ ಮಾತ್ರ ಈ ನೋವುಗಳೆಲ್ಲ ಅನಿಸಿತು.

ಎದ್ದ ಕೂಡಲೇ ಮೂರ್ತಿ ಸ್ನಾನ ಮುಗಿಸಿ ಬ್ರೇಕ್‌ಫಾಸ್ಟ್ ಕೂಡ ಬೇಡವೆಂದು ಹೊರಟ. ಅವನಿಗೆ ಈಗ ಕಮಲನ ಕಂಡು ಮಾತಾಡುವುದು ಅಷ್ಟು ಅಗತ್ಯವಾಗಿ ಕಂಡಿತು.

ಬಾಗಿಲಲ್ಲಿ ತರಕಾರಿ ವ್ಯಾಪಾರ ಮಾಡುತ್ತಿದ್ದ ಕಮಲ ತಾಯಿ ನಗು ಮುಖದಿಂದಲೇ ಸ್ವಾಗತಿಸಿದರು "ಒಳಗೆ ಹೋಗಿ ಕೂತ್ಕೋ. ಈ ತರಕಾರಿ ಯೊಳ್ನ ಕಳ್ಸಿ ಬರ್ತೀನಿ" ಎಂದಾಗ ಒಳಗೆ ನಡೆದು ಆಸೀನನಾದ. ಮನೆಯಲ್ಲಿ ಯಾರು ಇಲ್ಲದ್ದು ಅವನ ಗಮನಕ್ಕೆ ಬಂತು.

ಒಳಗೆ ಬಂದ ಕೂಡಲೇ "ಒಂದ್ನಿಮ್ಷ ಕೂತ್ಕೋ" ಎಂದು ಒಳಗೆ ಬಂದವರು ತಟ್ಟೆಯ ತುಂಬ ಉಪ್ಪಿಟ್ಟು ತಂದಿಟ್ಟು "ಮೊದ್ಲು ತಿನ್ನು. ಆಮೇಲೆ ಮಾತು,

ಅವ್ರ ಸ್ನೇಹಿತರ ಮನೆ ಸತ್ಯನಾರಾಯಣ ಪೂಜೇಂತ ಮಕ್ಕಳನ್ನೆಲ್ಲ ಕಟ್ಟಿಕೊಂಡ್ಹೋಗಿದ್ದಾರೆ. ನಂಗೂ ಸ್ವಲ್ಪ ನಿಶ್ಚಿಂತೆ. ನಂಗೂ ತಿಂಡಿ ತರ್ತೀನಿ. ತಿನ್ನುತ್ತ ಮಾತಾಡೋಣ" ಒಳಗೆ ಹೋದರು.

ಈಕೆ ಸ್ವಲ್ಪ ಡಿಫರೆಂಟ್. ಸಂದರ್ಭಕ್ಕೆ ಸರಿಯಾಗಿ ಹೊಂದಿಕೊಳ್ಳುವ ಮನಸತ್ವ ಉಳ್ಳವರು.

"ಈಗ್ಹೇಳು ಪೂಜಾ ವಿವಾಹದ ವಿಷ್ಯ ಏನಾಯ್ತು ?" ವಿಷಯಕ್ಕೆ ಬಂದರು. ಬಾಯಲ್ಲಿದ್ದ ಉಪ್ಪಿಟ್ಟು ನುಂಗಿ ನೀರು ಕುಡಿದು "ಈ ಹಂತಕ್ಕೆ ಬಂದಿದೆ. ನಿಮ್ಮಿಂದ ಉಪಕಾರವಾಯ್ತು. ನೆನ್ನೆ ದಿನ ಚೆನ್ನೈನಿಂದ ಅವ್ರುಗಳು ಬಂದಿದ್ರು. ಪೂಜಾನ ಒಪ್ಕೊಂಡಿದ್ದಾರೆ" ತಿಳಿಸಿದ.

"ಒಳ್ಳೆದಾಯ್ತು ! ಆ ಹುಡ್ಗಿದೊಂದು ಮದ್ವೆ ಆಗ್ಲಿ" ತಮ್ಮ ಮನೆಯ ಚಿಂತೆಯನ್ನು ಆ ಸಮಯದಲ್ಲಿ ಮರೆತರು "ಪೂಜಾನ ನೋಡೋಕೆ ಎಷ್ಟೋ ಸಲ ಬರ್ಬೇಕು ಅಂದ್ಕೋತೀನಿ. ಈ ಕೊನೆಯಿಂದ ಆ ಮೂಲೆಗೆ ಬರೋದೊಂದರೆ ಒಂದು ಊರಿಗೆ ಹೋಗ್ಬಂದಂಗೆ ಆಗುತ್ತೆ."

"ಇನ್ಮೇಲೆ ಅವ್ಳೇ ಬಂದ್ಹೋಗ್ತಾಳೆ. ನೀವು ಪೂರ್ತಿಯಾಗಿ ಸಂಸಾರನ ಗಂಟು ಹಾಕ್ಕೊಂಡ್ ಬಿಟ್ಟಿದ್ದೀರಾ ! ಯಾರು ಇಲ್ವಲ್ಲ, ನಂಜೊತೆ ಹೊರಡಿ" ಆಹ್ವಾನ ಕೊಟ್ಟ ರುಚಿಯಾದ ಉಪ್ಪಿಟ್ಟನ್ನು ಚಪ್ಪರಿಸುತ್ತ. ಈಕೆಯ ಕೈನ ಅಡಿಗೆ, ತಿಂಡಿ ಎಂದೂ ಹದಗೆಡದೆಂದು ಅವನಿಗೆ ಗೊತ್ತು.

ತಟ್ಟೆ ಎತ್ತಿಟ್ಟು ಕೈ ತೊಳೆದು ಸೆರಗಿನಿಂದ ಮೂಗೊರೆಸಿಕೊಂಡು ಬಂದ ಕಮಲ ತಾಯಿ "ಹೇಗಾಗುತ್ತೆ ! ಹೋಗಿರೋದು ಸತ್ಯನಾರಾಯಣ ಪೂಜೆ. ಅಲ್ಲಿ ಊಟಾನು ಮಾಡ್ತಾರೆ. ಬಂದ ಕೂಡಲೇ ಹಸಿವೂಂತ ಷುರು ಮಾಡ್ತಾರೆ ಬಕಾಸುರನ ವಂಶಸ್ಥರು. ಅದ್ಕೆ ಅಚ್ಚುಕಟ್ಟಾಗಿ ಅಡ್ಗೆ ಮಾಡಿ ಇಟ್ಟಿರ್ಲೀಂತ ನನ್ನ ಬಿಟ್ಹೋಗಿದ್ದಾರೆ. ಒಂದಿಷ್ಟು ಉಪ್ಪಿಟ್ಟು ತರ್ಲಾ" ಹೊರಟ ವರನ್ನು ನಿಲ್ಲಿಸಿದ "ಬೇಡ ಅತ್ತೆ ! ನನ್ನ ಏನಂದ್ಕೊಂಡ್ರಿ. ನಿಮ್ಮ ಮನೆಯವ್ರು ಬಕಾಸುರನ ವಂಶಸ್ಥರಾದರೇ ನಾನು ಮಾತ್ರ ಭೀಮನ ನಕ್ಷತ್ರದಲ್ಲಿ ಹುಟ್ಟಿದ್ದೀನಿಂತ ತಿಳಿದಿರಾ ?" ನಗಾಡಿದ. ಒಂದು ರೀತಿಯ ರಿಲ್ಯಾಕ್ಸ್ ಆದರೂ ಕಮಲ ಇಲ್ಲದ್ದರಿಂದ ಬಂದು ಪ್ರಯೋಜನವಾಗಲಿಲ್ಲಾಂತ ಅಂದುಕೊಂಡ.

ಒಂದು ದೊಡ್ಡ ಸ್ಟೀಲ್ ಲೋಟದ ತುಂಬ ಕಾಫಿ ಬಂತು. ಆಕೆನೇ ವಿಷಯಕ್ಕೆ

ಬಂದರು.

"ಚಾರುಲತ ವಿಷ್ಯ ಏನಾಪ್ತ್ರೇ ? ಮತ್ತೆ ವಿವಾಹವಾಗೋ ಮನಸ್ಸು ಇದ್ಯಾ?"

ಕೂತಿದ್ದವನು ಧಡಕ್ಕನೇ ಎದ್ದ. ಎಂದೂ ಅವನ ತಲೆಯಲ್ಲಿ ವಿವಾಹ, ಬೇರೆ ಹೆಣ್ಣು ಅಂಥದ್ದು ಸುಳಿದೇ ಇಲ್ಲ. ಪ್ರಶಾಂತವಾಗಿದ್ದ ಅವನ ಮನಸ್ಸು ಅಲ್ಲೋಲ ಕಲ್ಲೋಲವಾಯಿತು. ಹೆಣ್ಣು ಹೆತ್ತ ತಾಯಿ, ಇಂಥ ಪ್ರಶ್ನೆನ ತನ್ನ ಮುಂದಿಡೋದು ?

"ಸಧ್ಯಕ್ಕೆ ಈಗ ಪೂಜಾ ಮದ್ವೆ ಆಗಬೇಕಷ್ಟೆ. ಅಲ್ಲ ಅತ್ತೆ, ಒಂದೊಂದು ಮದ್ವೆ ಆಗೋಕೆ ಇಷ್ಟೊಂದು ತಂಟೆ, ತಕರಾರು, ತಾಪತ್ರಯ. ಅಂಥದ್ದರಲ್ಲಿ ಎರಡನೇ ವಿವಾಹ ! ಭಯವಾಗುತ್ತೆ. ನಮ್ಮದೆಲ್ಲ ಮುಗೀತಲ್ಲ ನಿಮ್ಮದು ಹೇಳಿ" ಕಾಫಿ ಲೋಟ ಕೈಗೆತ್ತಿಕೊಂಡ.

ಬರೀ ಪುರಾಣವೆ ಹೇಳಿದರು ಒಂದು ಗಂಟೆ ನಿರಂತರವಾಗಿ ಹರಿಕಥೆಯಂತೆ ಹೇಳಿದರೂ ಮುಗಿಯಲಿಲ್ಲ. ಒಂದಾ, ಎರಡಾ, ವಿವಾಹ ವಾಗದ ಹೆಣ್ಣುಗಳಲ್ಲಿ ಮನೆಯಲ್ಲಿಟ್ಟುಕೊಂಡು ಪಡುತ್ತಿದ್ದ ಕಷ್ಟಗಳೆಲ್ಲ ಒಂದು ಬೃಹತ್ ಕಾದಂಬರಿಗೆ ಆಗುವಷ್ಟು ಮ್ಯಾಟರ್ ಇತ್ತು.

ಅವನಿಗೆ ಅಯ್ಯೋ ಎನಿಸಿತು. ಆದರೂ ಇನ್ನೊಂದು ವಿವಾಹದ ಸುದ್ದಿ ಎತ್ತಿದ ಆಕೆಯ ಬಗ್ಗೆ ಬೇಸರ.

ಹೊರಟು ಬಾಗಿಲಿಗೆ ಬರೋ ವೇಳೆಗೆ ಕಮಲ ಬಂದಳು. "ಅಮ್ಮ ಕಲಶದ ಬೆಳ್ಳಿ ಚೊಂಬು ಕೊಡ್ಬೇಕಂತೆ. ಅದು ಅವ್ರ ಹಿರಿಯ ಮಗನ ಭಾಗಕ್ಕೆ ಹೋಯಿತಂತೆ. ಕಾದು ಸಾಕಾದಾಗ ಅಣ್ಣ ನನ್ನ ಕಳ್ಸಿದ್ರು. ಎಲ್ಹೋದ್ರು ತಲೆ ನೋವೇ ! ನಂಗೆ ಒಂದ್ಲೋಟ ಕಾಫಿ ಕೊಟ್ಟರೇನೇ ಹೋಗುದು" ಎಂದು ಕೂತು ಬಿಟ್ಟವಳು ಮೂರ್ತಿಯ ಕಡೆ ನೋಡಿ "ಯಾರು ಇಲ್ದ ಸಮಯದಲ್ಲಿ ಬಂದಿದ್ದೀರಿ. ಅಮ್ಮ ತುಂಬ ಮಾತಾಡಿ ಬೋರ್ ಮಾಡಿರ ಬೇಕು" ಎಂದು ತಾಯಿಯ ಕಡೆ ನೋಡಿ ಅಣಕಿಸಿದಾಗ ಆಕೆ ತಲೆಯ ಮೇಲೊಂದು ಮೊಟಕಿ ಒಳಗೆ ಹೋದರು. ಬೆಳ್ಳಿಯ ಕಲಶದ ಚೊಂಬು ತರಲು.

"ನನ್ನ ಪ್ರಕಾರ ನಿನ್ನಷ್ಟು ಮಾತಾಡ್ಲಿಲ್ಲ. ಉಪ್ಪಿಟ್ಟು ಮಾತ್ರ ಚೆನ್ನಾಗಿತ್ತು. ತಟ್ಟೆ ಸ್ಯಾಂಪಲ್‌ನಲ್ಲಿ ಕೊಟ್ಟಿದ್ದು, ಒಂದು ತಟ್ಟೆ ತುಂಬ. ಸಂಜೆವರ್ಗೂ ಹೊಟ್ಟೆ

ಮತ್ತೇನನ್ನು ಕೇಳದು. ನೀನು ಬೇಗ ಬಂದರೇ ಬಸ್ ಸ್ಟಾಪ್‌ವರ್‍ಗೂ ಕಂಪನಿ ಕೊಡ್ತೀನಿ. ಸಾಧ್ಯವಾದ್ರೆ ನಿನ್ನ ಅಲ್ಲಿಬಿಟ್ಟು ಹೋಗ್ತೀನಿ. ನೀನು ಕಾಫಿ ಜೊತೆ ಉಪ್ಪಿಟ್ಟು ತಿಂತಾ ಕೂಡ್ಬಾರ್‍ದು" ಎಂದ ಸ್ನೇಹದಿಂದ.

ತಾಯಿ ತಂದು ಕೊಟ್ಟ ಅರೆ ಬಿಸಿಯಾದ ಕಾಫಿಯನ್ನೇ ಕುಡಿದು ಹೊರಟಾಗ ಕಮಲ ತಾನಾಗಿ ಬಾಯಿ ಬಿಟ್ಟಳು.

"ಚಾರು ಕೆಲ್ಸ ಮಾಡ್ತಾ ಇರೋ ಕಡೆ ನಂಗೂ ಒಂದ್ಕೆಲ್ಸ ಸಿಕ್ತು. ಅವ್ಳು ಅಕೌಂಟ್ ಸೆಕ್ಷನ್‌ನಲ್ಲಿ. ನಾನು ಸೇಲ್ಸ್‌ನಲ್ಲಿ. ಸೋಮವಾರದಿಂದ ಹೋಗ್ಬೇಕು. ಮನೆಯಲ್ಲಿ ಇನ್ನ ಯಾರ್‍ಗೂ ಗೊತ್ತಿಲ್ಲ. ಇರೋರೆಲ್ಲ ಪಲ್ಟಿ ಹಾಕಿದ್ರು ನನ್ನ ನಿರ್ಧಾರ ಬದಲಾಗೋಲ್ಲ."

ಬೆಳಗಿನಿಂದ ಮಳೆ ಮತ್ತೆ ಹನಿಯೋಕೆ ಷುರುವಾಯಿತು.

"ಅಂತು ಗಟ್ಟಿ ನಿರ್ಧಾರ !" ಮೆಚ್ಚಿಗೆಯಾಡಿದ.

ಬರೀ ಚಾರುಲತಳ ಚುರುಕಿನ ಬಗ್ಗೆ ಕೊರೆದಳು ದಾರಿಯುದ್ದಕ್ಕೂ. "ನಿಜವಾಗ್ಲೂ ಚಾರುಲತ ಹಂಗೇ ಇರ್ಬೇಕು. ನಾವುಗಳು ಆಗಿದ್ರೆ ಅಳ್ತ ಇದ್ದೆವೇನೋ, ಇಲ್ಲ ತಾಯಿ ಮುಂದೆ ಉಪವಾಸ ಸತ್ಯಾಗ್ರಹ ಮಾಡ್ತಾ ಇದ್ದೆವೇನೋ ! ಅವಳಂತು ಎಷ್ಟು ಗೆಲುವಾಗಿ ಓಡಾಡಿಕೊಂಡಿದ್ದಾಳೆ. ಇಂಥದೊಂದು ನನ್ನ ಜೀವ್ನದಲ್ಲಿ ನಡೆದಿದೆಯನ್ನೋ ವ್ಯಥೆ ಕೂಡ ಇದ್ದಂಗಿಲ್ಲ. ಕೆಲವರಿಗಂತು ತೀರಾ ಇಷ್ಟವಾಗಿದ್ದಾಳೆ" ಅದೇ ಮಾತುಗಳು.

"ಅವ್ರು ಮನೆ ಬದಲಾಯಿಸಿದ್ದಾರಾ ?" ಕೇಳಿದ ಸ್ವಲ್ಪ ಸಂಕೋಚ ದಿಂದಲೇ. ಅದಕ್ಕೆ ಕಾರಣ ತಿಳಿಯಬೇಕಿತ್ತು ಅವನು. ತಟ್ಟನೇ ಕಮಲ "ಹೌದು, ಅದು ಸ್ವಲ್ಪ ದೊಡ್ಡ ಮನೆ. ನರ್ಸಿಂಗ್‌ಹೋಂಗೂ ಹತ್ತಿರ. ಆ ಮನೆ ಹತ್ತಿರಾನೇ ಚಾರುಗೂ ಬಸ್ ಸ್ಟಾಪ್. ಅದಕ್ಕೋಸ್ಕರ ಅಲ್ಲಿಗೆ ಹೋದ್ರಂತೆ. ಈ ಮನೆನಾ ಯಾರ್‍ಗೋ ಲೀಜ್‌ಗೆ ಕೊಟ್ಟಿದ್ದಾರಂತೆ. ನಾನು ಒಂದೆರಡು ಸಲ ಹೋಗಿದ್ದೆ. ನೀವು ಹೋಗೋದು ಇದ್ಯಾ ?" ಕೇಳಿಯೇ ಬಿಟ್ಟಳು.

"ಷಟ್ ಅಪ್" ಅಂದಾಗ ಬೆಪ್ಪಾದಳು.

"ಸಾರಿ ಕಮಲ, ನಾನು ಕೇಳಿದ ಉದ್ದೇಶವೇ ಬೇರೆ. ಏನಿ ವೇ ಥ್ಯಾಂಕ್ಯೂ ವೆರಿಮಚ್" ಆಟೋ ನಿಲ್ಲಿಸಿ ಹತ್ತಿಕೊಂಡೇ ಬಿಟ್ಟ.

ಕಮಲ ಹಣೆ ಚಚ್ಚಿಕೊಂಡಳು.

* * *

ಅಂದು ಚಾರುಲತ, ಮೂರ್ತಿಯ ವಿವಾಹವಾದ ದಿನ. ಮೂರು ನೂರಾ ಅರವತ್ತೈದು ದಿನಗಳು ಕಳೆಯುದ ಎಷ್ಟೋ ದಿನಗಳ ಮೊದಲೇ ಬೇರೆ ಬೇರೆಯಾಗಿದ್ದರು.

ತಲೆಗೆ ನೀರು ಹಾಕಿಕೊಂಡು ಟವಲಿನಿಂದೊರೆಸುತ್ತ ಬಂದ ತಂಗಿಯನ್ನ ನೋಡಿ ನಿಂತ. 'ಹ್ಯಾಪಿ ಮ್ಯಾರೇಜ್ ಆನಿವರ್ಜರ್ಸರಿ' ಅನ್ನಬೇಕಿತ್ತು. ಗ್ರಾಂಡಾಗಿ ಆಚರಿಸಬೇಕಿತ್ತು. ದೊಡ್ಡ ಪ್ರಸೆಂಟೇಷನ್ ಕೊಟ್ಟು ರೇಗಿಸಬೇಕು. ಆದರೆ ಇಂದು ಯಾವುದು ಇಲ್ಲ. ಒಳಗೊಳಗೆ ಕುದಿಯುತ್ತಿದ್ದ.

"ಚಾರು... " ಎಂದು ನಿಲ್ಲಿಸಿದ.

ಎಣ್ಣೆಯ ಅಭ್ಯಂಜನದಿಂದ ಕೆಂಪಗಾದ ಮುಖ ಮೇಲೆತ್ತಿ "ಏನು ಸರ್, ಸಮಾಚಾರ ?" ತಮಾಷೆಯಾಗಿ ಪ್ರಶ್ನಿಸಿದಳು. ಬಲವಂತದಿಂದ ಉಗುಳು ನುಂಗಿದ. "ಇವತ್ತು ನರ್ಸಿಂಗ್ ಹೋಂಗೆ ಹೋಗ್ಬೇಕೂಂತ ಅನ್ನಿಸೋಲ್ಲ."

ವಿಷಯ ಗೊತ್ತಿದ್ದರಿಂದ ಪ್ರಶ್ನಿಸಿ ರಾಡಿ ಮಾಡುವುದು ಇಷ್ಟವಾಗಲಿಲ್ಲ "ಹೋಗ್ಲಿ, ನನ್ನನ್ನಾದ್ರೂ ಡ್ರಾಪ್ ಮಾಡು. ಇದೊಂದು ದಿನನಾದ್ರೂ ಬಸ್‌ಗೆ ಕಾಯೋದು ತಪ್ಪುತ್ತೆ" ಅನ್ನುವ ವೇಳೆಗೆ ಅಡಿಗೆ ಮನೆಯಿಂದ ಹೊರ ಬಂದ ನೀರದ "ಇವತ್ತು ನಮ್ಮ ತಾಯಿ ಮನೆಗೆ ಹೋಗ್ತೀವಿ."

"ಕರೆಕ್ಟ್, ಅದೇ ಸರಿ" ಮುಂದಿದ್ದ ಕೂದಲನ್ನ ಚಾರುಲತ ಹಿಂದಕ್ಕೆ ಎತ್ತಿ ಹಾಕಿಕೊಂಡು "ನಂಗಂತೂ ಹೊತ್ತಾಯ್ತು. ಹ್ಯಾವ್ ಎ ನೈಸ್ ಟೈಮ್" ಎಂದು ತನ್ನ ಪಾಡಿಗೆ ತಾನು ಹೋದಳು.

ಡಾ|| ನವೀನ್ ಆಕಳಿಸುತ್ತ ಸೋಮಾರಿಯಂತೆ "ಬೇಗ, ರೆಡಿಯಾಗ್ಬಿಡು. ನಂಗೂ ಆ ಕಡೆ ಹೋಗೋದಿದೆ" ಎಂದು ಅವಸರಿಸಿದ. ತಿಂಡಿಯಾಗಿದ್ದರೂ ತಿನ್ನೋಕೆ ಕೂಡ ಬಿಡಲಿಲ್ಲ. ಒಂದು ಹಳೆ ಷರಟು, ಪ್ಯಾಂಟು ಹಾಕಿಕೊಂಡ ವನು ಅವಳನ್ನ ಕೂಡಿಸಿಕೊಂಡು ಸರ್ಕಲ್‌ಗೆ ಬರುವ ವೇಳೆಗೆ ಸ್ಕೂಟರ್ ನಿಂತಿತು. ಬಹಳ ಸಾಹಸ ಮಾಡಿದ. ಜಪ್ಪಯ್ಯ ಅಂದರೂ ಅಲ್ಲಾಡಲಿಲ್ಲ. "ಅಲ್ಲಿ ಮೆಕ್ಯಾನಿಕ್ ಷಾಪ್ ಇದೆ, ನಡೀ" ಹೇಳಿದ.

ಮೆಕ್ಯಾನಿಕ್‌ಗೆ ಸ್ಕೂಟರ್ ಒಪ್ಪಿಸಿ ಹಿಂದಕ್ಕೆ ಬಂದ.

"ಪೂರ್ತಿ ಬಿಚ್ಚಬೇಕಂತೆ. ಸಂಜೆವರ್‍ಗೂ ಆಗುತ್ತೇನೋ, ಆರಾಮಾಗಿ ಬಾಗ್ಲು ಹಾಕಿರೋ ಅಂಗ್ಡಿ ಮುಂದಿನ ಜಗುಲಿ ಮೇಲೆ ಕೂತ್ಕೋ. ಸರಿಯಾದ್ಮೇಲೆ ಹೋಗೋಣ" ಆರಾಮಾಗಿ ನುಡಿದಾಗ ಬೆಚ್ಚಿದಳು. ಬೆಳಗಿನ ತಿಂಡಿ ಇಲ್ಲ. ಒಂದು ಪರ್ಲಾಂಗ್‌ನಷ್ಟು ದೂರ ನಡೆಸಿದ್ದ. ಇನ್ನ ಸಂಜೆ ವರೆಗೂ ಇಲ್ಲಿ ಕಾದು ಕೂಡುವುದೆಂದರೆ ಅವಳಿಂದಾಗದ ಕೆಲಸ.

"ನನ್ಕೈಯಲ್ಲಾಗೋಲ್ಲ !" ಎಂದಳು ಅತ್ತಿತ್ತ ನೋಡಿ.

"ನಾನೇನ್ಮಾಡ್ಲಿ ? ಸ್ಕೂಟರ್ ಮೆಕ್ಯಾನಿಕ್‌ಗೆ ಕೊಟ್ಟು ಹೋಗೋಕ್ಕಾ ಗೋಲ್ಲ. ಹಿಂದಕ್ಕೆ ಹೋಗ್ತಿಯೋ, ಮುಂದಕ್ಕೆ ಹೋಗ್ತೀಯೋ ಯೋಚ್ಸು" ಅಡ್ಡ ಗೋಡೆಯ ಮೇಲೆ ದೀಪವಿಟ್ಟಂತೆ ನುಡಿದ.

ದೊಡ್ಡ ಮನೆ, ಚಾಕರಿಯು ಜಾಸ್ತಿ. ಕೆಲಸದವರು ಸಿಗುತ್ತಿರಲಿಲ್ಲ. ಮೂರು ದಿನಕ್ಕೊಮ್ಮೆ ಬೋರ್ ಕೆಡುತ್ತಿತ್ತು. ನಾಲ್ಕನೆ ಮನೆಯಲ್ಲಿರುವ ಬಾವಿಯಿಂದ ನೀರು ಸೇದಿ ತರಬೇಕಿತ್ತು. ಚಾರುಲತ ಮನೆಯಲ್ಲಿದ್ದರೇ ಎಲ್ಲಾ ಅವಳೇ ಮಾಡುತ್ತಿದ್ದಳು. ಈಗ ಅವಳು ಕಂಪ್ಯೂಟರ್ ಕ್ಲಾಸ್‌ಗೆ ಸೇರಿಕೊಂಡಿದ್ದರಿಂದ ಮನೆ ಬೇಗ ಬಿಡಬೇಕಿತ್ತು. ಆದ್ದರಿಂದ ಮುಕ್ಕಾಲು ಕೆಲಸ ಅವಳ ಮೇಲೆ ಬೀಳುತ್ತಿತ್ತು. ಇಲ್ಲಿಗೆ ಬಂದ ಮೇಲೆ ವಾಸುದೇವಯ್ಯ ನವರ ಗೆಳೆಯರ ಸಂಖ್ಯೆ ಜಾಸ್ತಿಯಾಗಿತ್ತು. ಒಬ್ಬರಲ್ಲ ಒಬ್ಬರು ಬರುತ್ತಿ ದ್ದರಿಂದ ಮೊದಲಿನ ಹಾಗೆ ಅಡಿಗೆ ಕೆಲಸ ಮಾಡುತ್ತಿರಲಿಲ್ಲ. ಅದರಿಂದ ಒಂದೆರಡು ದಿನಗಳಾದರೂ ಅಮ್ಮನ ಮನೆಯಲ್ಲಿರಬೇಕೆನಿಸಿತ್ತು.

"ಅಮ್ಮನ ಮನೆಗೆ ಹೋಗ್ತೀನಿ" ಎಂದ ಕೂಡಲೇ ಸಂತೋಷದಿಂದ ಬಿ.ಟಿ.ಎಸ್. ಬಸ್ಸಿನಲ್ಲಿ ಕೂಡಿಸಿ ತನ್ನ ಪಾಡಿಗೆ ತಾನು ಬಂದು ಸ್ಕೂಟರ್ ಸ್ಟಾರ್ಟ್ ಮಾಡಿಕೊಂಡು ಮನೆಯ ಕಡೆಗೆ ನಡೆದ.

ತನ್ನ ಎದೆಯಲ್ಲಿನ ಕೋಪವನ್ನ ಎಲ್ಲಿ ನೀರದ ಮೇಲೆ ಚೆಲ್ಲುತ್ತೇನೋ ಎಂದು ಕಳಿಸಿ ಕೈ ತೊಳೆದುಕೊಂಡಿದ್ದ. ಪ್ರತಿಯೊಬ್ಬರು ವಿವಾಹವಾಗುವ ಮುನ್ನ ಒಮ್ಮೆಯಲ್ಲ ಹತ್ತು ಸಲವಾದರೂ ಯೋಚಿಸಬೇಕೆಂದುಕೊಂಡ.

ಗೇಟಿನ ಬಳಿ ಸ್ಕೂಟರ್ ನಿಲ್ಲಿಸುವ ವೇಳೆಗೆ ಚಾರುಲತ ಬಂದಳು. ಕಣ್ಣಲ್ಲಿ

ಅಚ್ಚರಿ "ಎಲ್ಲಿ ನೀರದ ಅತ್ತಿಗೆ ? ಅರ್ಧ ದಾರಿಯಲ್ಲಿ ಇಳ್ಸಿ ಬರ್ಲಿಲ್ಲ ತಾನೇ ? ಮಹರಾಯ ನೀನು ತುಂಬ...ತುಂಬನೇ ಬದಲಾದೆ" ರೇಗಿಸಿದಳು.

ಸ್ಕೂಟರ್ ಸೀಟು ಮೇಲೆ ಒಂದು ಏಟು ಹಾಕಿ "ಖಂಡಿತ, ಷ್ಯೂರ್! ನೀನು ಏನೇನು ಮಾತಾಡೋಕೆ ಷುರು ಮಾಡ್ದೆ. ಸ್ಕೂಟರ್ ಕೈ ಕೊಟ್ಟು ಮೆಕ್ಯಾನಿಕ್ ಷಾಪ್‌ವರ್ಗ್ಯೂ ತಳ್ಳಿಕೊಂಡು ಹೋದೆ. ಅವ್ಳಿಗೆ ಹಿಂದಕ್ಕೆ ಬರೋಕೆ ಇಷ್ಟವಿರ್ಲಿಲ್ಲ. ಅದ್ಕೇ ಸಿಟಿ ಬಸ್ಸು ಹತ್ತಿಸ್ದೆ. ಏನು ತೊಂದರೆ ಇಲ್ಲ. ತುಂಬ ಸುಸ್ತಾಗಿದ್ದಾಳೆ. ಅಲ್ಹೋಗಿ ಉಪದೇಶ ತಗೊಳ್ಳಿ. ಚಾರು ನೀನು ಆಫೀಸ್‌ಗೆ ಹೋಗೋದ್ಬೇಡ. ತುಂಬ ಲೋನ್ಲಿನೆಸ್ ಕಾಡ್ತಾ ಇದೆ" ಎಂದು ಸ್ಕೂಟರ್‌ನ ಗೇಟಿನೊಳಕ್ಕೆ ತಳ್ಳಿದ.

ಅವನತ್ತ ತಿರುಗಿದ ಚಾರುಲತ "ನವೀನಣ್ಣ ನೀನು ನರ್ಸಿಂಗ್ ಹೋಂಗೆ ಹೋಗ್ಬಿಡು. ನಂಗೆ ಗೊತ್ತು ನಿನ್ನ ನೋವು. ಏನು ಮಾಡೋ ಪರಿಸ್ಥಿತಿ ಯಲ್ಲಿ ಇಲ್ಲದಾಗ...ಎಲ್ಲಾ ನುಂಗಿಕೋಬೇಕು." ಸಾಂತ್ವನದ ದನಿಯಲ್ಲಿ ಹೇಳಿದಳು.

ಡಾ|| ನವೀನ್ ಅವಳ ಮಾತುಗಳನ್ನ ಕೇಳಿಸಿಕೊಳ್ಳದವನಂತೆ ಮನೆಯೊಳಕ್ಕೆ ನಡೆದ. ಇದೇ ದಿನ ತಂಗಿಯ ಕೈ ಮೂರ್ತಿಯ ಕೈಯೊಳಗಿಟ್ಟು ಹರ್ಷಿಸಿದ್ದ. ನೂರು ಸಲ ಸಂತೋಷವಾಗಿರಲಿಯೆಂದು ಹಾರೈಸಿದ್ದ. ಅದು ಸುಳ್ಳಾಯಿತು. ಅದಕ್ಕೆ ತಾನೇ ಕಾರಣ.

ಸೋಫಾ ಮೇಲೆ ಕುಸಿದವನು ಜೋರಾಗಿ ಬಿಕ್ಕುತ್ತ ಹಣೆ ಚಚ್ಚಿಕೊಳ್ಳ ತೊಡಗಿದ ಹುಚ್ಚನಂತೆ. ಅವನ ತಾಳ್ಮೆ ವಿವೇಕ ಎಲ್ಲಾ ಸತ್ತು ಹೋಗಿತ್ತು. ಮನೆಯಲ್ಲಿದ್ದ ಸಾಮಾನುಗಳನ್ನೆಲ್ಲ ಎತ್ತಿ ಕುಕ್ಕಿದ. ಎರಚಾಡಿದ. ಸ್ಟೀಲ್ ಫ್ರೇಮ್‌ನಲ್ಲಿದ್ದ ಅವನ ಮದುವೆಯ ಫೋಟೋನ ಗೋಡೆಗೆ ಅಪ್ಪಳಿಸಿದ. ಗಾಜಿನ ಚೂರುಗಳು ಎಲ್ಲೆಡೆ ಎರಚಾಡಿದವು.

"ಏನೋ ಇದು, ನವೀನ್" ರೂಮಿನಲ್ಲಿದ್ದ ಅವನ ತಂದೆ ಓಡಿ ಬಂದರು. ರೋಷದಿಂದ ಅವರತ್ತ ನೋಡಿದ "ಅಂದು ನೀನೇನು ಮಾಡ್ತಾ ಇದ್ದೇಯಪ್ಪ. ಎದುರು ಮನೆ ಹುಡ್ಗಿ ವಿವಾಹವಾಗದಿದ್ದರೇ ನಿನ್ನ ಮಗನೇನು ಆತ್ಮಹತ್ಯೆ ಮಾಡ್ಕೋತಾ ಇದ್ನಾ ? ಇಲ್ಲ, ನೀರದ ಉರುಳು ಹಾಕ್ಕೋತಾ ಇದ್ಲಾ ? ಅಮ್ಮ ಬದ್ಕಿದ್ದರೇ ಚಾರು ಬದ್ಕು ಈ ರೀತಿ ಆಗೋಕೆ ಅವಕಾಶ ಮಾಡಿ ಕೊಡ್ತಾ ಇದ್ಲಾ ? ಹಾಳು ಮಾಡ್ಬಿಟ್ಟೆ ಅವ್ಳ ಬಾಳು" ಜೀವನದಲ್ಲಿ ತಂದೆಗೆ ಎದುರು ನಿಂತು

ಚಾರುಲತ ಹೋಗಿ ಅವನ ಬಾಯಿ ಮುಚ್ಚಿದಳು.

"ಪ್ಲೀಸ್ ನವೀನಣ್ಣ, ಅಪ್ಪನ್ನ ಏನು ಅನ್ನಬೇಡ ಮಾರಾಯ. ಇದ್ರಲ್ಲಿ ಯಾರ್ದೂ ತಪ್ಪಿಲ್ಲ" ಅಂದ ಕೂಡಲೇ ಮುಂದಿದ್ದ ಟೀಪಾಯಿನ ಬಲವಾಗಿ ಒದ್ದ. ಅದು ಹೋಗಿ ಗೋಡೆಗೆ ಅಪ್ಪಳಿಸಿತು ಸದ್ದಿನೊಂದಿಗೆ.

"ಏಯ್ ಚಾರು, ಎಷ್ಟೊಂದು ಮೂರ್ಖಳೇ ನೀನು. ಅನ್ಯಾಯವಾಗಿ ಈ ಜುಜುಬಿ ಅಣ್ಣನಿಗಾಗಿ ನಿನ್ನ ಸಂಸಾರ ಬಲಿ ಕೊಟ್ಟೆ. ಅವ್ನಿಗೆ ತಂಗಿ ಹೆಚ್ಚಾದ್ಲು, ನಿನ್ಮೇಲೆ ಸೇಡು ತೀರ್ಸಿಕೊಂಡ. ಇವ್ನು ಮಹಾ ದೊಡ್ಡ ಪ್ರೇಮಿ. ಆ ಮಹಾತಾಯಿಗಾಗಿ ನಿನ್ನ ಜೀವನನ ಬಲಿ ಕೊಟ್ಟುಬಿಟ್ಟ. ನಂಗೆ ಶಿಕ್ಷೆ ವಿಧಿಸೋರು ಯಾರು ?" ರಪರಪನೆ ತಲೆ ಚಚ್ಚಿಕೊಂಡಾಗ, ಅಪ್ಪ ಮಗಳಿಗೆ ಅವನನ್ನ ಹಿಡಿದಿಡಲು ಸಾಧ್ಯವಾಗಲಿಲ್ಲ.

ಅವನ ಅಳು, ಮಾತು ನಿಲ್ಲಲು ಗಂಟೆಯೇ ಬೇಕಾಯಿತು.

ಬಲವಂತದಿಂದ ಅವನನ್ನ ರೂಮಿಗೆ ಎಳೆದೊಯ್ದು ಎರಡು ನಿದ್ದೆ ಗುಳಿಗೆ ಗಳನ್ನು ನುಂಗಿಸಿ ಅಲ್ಲೇ ಕೂತಳು ಚಾರುಲತ. ಅವನ ಕೈಯಲ್ಲಿ ತಂಗಿಯ ಕೈ ಇತ್ತು. ಬಲವಾಗಿ ನವೀನ್ ಕಣ್ಣು ಮುಚ್ಚಿಕೊಂಡಿದ್ದರೂ ಎರಡು ಕಡೆಯು ಸುರಿಯುತ್ತಿದ್ದ ಕಂಬನಿ ಧಾರೆ ಕೂದಲನ್ನು ತೋಯಿಸಿ ದಿಂಬಿನೊಳಗೆ ಮಾಯವಾಗುತ್ತಿತ್ತು.

ಅವನ ಉದ್ರಿಕ್ತಗೊಂಡ ಮನಸ್ಸು ಸಮಾಧಾನಕ್ಕೆ ಬರಲು ಸಾಕಷ್ಟು ವೇಳೆ ಹಿಡಿಸಿತು. ನಿದ್ದೆ ಬಂದ ಮೇಲೆ ಹೊರ ಬಂದ ಚಾರುಲತ ಸಪ್ಪಗೆ ಕೂತಳು.

"ಅವ್ನು ನನ್ನ ಕೆನ್ನೆಗೊಡೆಯ ಬೇಕಿತ್ತು" ವಾಸುದೇವಯ್ಯ ಹಣೆ ಗಟ್ಟಿಸಿ ಕೊಂಡರು. ಇದು ತೀರಾ ಅತಿಯೆನಿಸಿತು. ತಂದೆಯ ಸನ್ನಿಹ ಬಂದು ಕೂತು "ಇದೇನಪ್ಪ, ಅವನಂತು ತಾಳ್ಮೆ ಕಳೆದುಕೊಂಡ ಅಂದರೇ, ನೀವು ತಲೆ ಕೆಡ್ಸಿಕೊಳ್ಳೋದೇ. ಮಗ, ಮಗಳು ಅನ್ನೋ ವ್ಯತ್ಯಾಸ ಯಾರಿಗೆ ಇರುತ್ತೋ ಏನೋ, ನಿಮ್ಗಂತು ಇರೋಲ್ಲ. ಅದ್ಕೆ ನೀವು ಹೊಣೆ. ಮಗ ಮೆಚ್ಚಿಕೊಂಡ ಹೆಣ್ಣಿನೊಂದಿಗೆ ಲಗ್ನ ಮಾಡೋದು ನಿಮ್ಮ ಕರ್ತವ್ಯವಾಗಿತ್ತು. ಅಮ್ಮ ಕಾಯಿಲೆ ಬಿದ್ದಾಗ, ಸತ್ತಾಗ ನೀರದ ಕುಟುಂಬ ನಮ್ಗೆ ಸಾಕಷ್ಟು ಮಾಡಿತ್ತು. ಅದರ ಕೃತಜ್ಞತೆಯ ಹೊಣೆ ನಮ್ಮ ಮೇಲಿತ್ತು. ಚೆನ್ನಾಗಿ ನಮ್ಮನ್ನ ಬಲ್ಲ ಹೆಣ್ಣು ಸೊಸೆಯಾಗಿ ಬರೋದು ನಿಮ್ಗೆ ಸಂತೋಷದ ವಿಷ್ಯವಾಗಿತ್ತು. ಇದೆಲ್ಲ ಸಹಜವೆ. ನನ್ನ

ಒಂಟಿತನಕ್ಕೆ ನೀವು ಹೊಣೆಯಲ್ಲ. ಆ ಮಾತುಗಳನ್ನೆತ್ತಿಕೊಂಡು ಮನೆಯ ನೆಮ್ದಿ ಹಾಳು ಮಾಡಿಕೊಳ್ಳೋದ್ಬೇಡ. ನಾನು ಬರ್ತೀನಿ ಅರ್ಧ ದಿನವಾದ್ರೂ ಕೆಲ್ಸ ಮಾಡ್ಬಹ್ದು" ಎಂದು ಉಸುರಿ ಎದ್ದು ಅವರ ಎರಡು ಕೈಗಳನ್ನ ಹಿಡಿದುಕೊಂಡು "ಅಪ್ಪ, ನೀವು ಖಂಡಿತ ತಾಳ್ಮೆ ಕಳ್ಕೋಬಾರ್ದು. ಅಣ್ಣನ ವಿವಾಹದ ಜೀವ್ನ ಕೂಡ ನಾಶವಾಗಿ ಬಿಡುತ್ತೆ. ಹಾಗೇ ಆಗೋಕೆ ಅವಕಾಶ ಕೊಡ್ಬೇಡಿ."

ಮನೆಯಿಂದ ಚಾರುಲತ ಹೊರಟಾಗ ತೀರಾ ಗೊಂದಲದಲ್ಲಿದ್ದಳು. ಅರ್ಥವಾಗದ ನೋವು, ಸಂಕಟ, ಮೂರ್ತಿ ಎದೆಗೊರಗಿ ಕಣ್ಣೀರು ಸುರಿಸ ಬೇಕೆನಿಸಿತು. ಹೃದಯ, ಮಿದುಳು ಬುದ್ಧಿ ಹೇಳಿತು. ಹೆಣ್ಣು ಅಂದ ಮಾತ್ರಕ್ಕೆ ಆ ಮಟ್ಟಕ್ಕೆ ಇಳಿಯಬಾರದು. ಮನಸ್ಸು ಇವೆರಡರ ನಡುವಿನ ಘರ್ಷಣೆಗೆ ಮೌನವಾಗಿತ್ತು.

ನಿವೇದಿತಾ ನರ್ಸಿಂಗ್ ಹೋಂ ಎರಡನೇ ಬಸ್‌ಸ್ಟಾಪ್‌ನ ಮುಂಭಾಗ ದಲ್ಲಿಯೇ. ಅಲ್ಲಿ ಯುಗಂಧರ್ ಕಾರು ನಿಂತಿದ್ದು ನೋಡಿ ಅವಳೆದೆ ಧಸ್ಸಕ್ಕೆಂದಿತು. ಮುಂದಿನ ಸ್ಟಾಪ್‌ನಲ್ಲಿ ಇಳಿದು ಆಟೋ ಮಾಡಿಕೊಂಡು ಹಿಂದಕ್ಕೆ ಬಂದಳು ಹಾರುವ ಎದೆಯನ್ನು ಹಿಡಿದುಕೊಂಡು.

ಮುಂಭಾಗದಲ್ಲಿಯೇ ಮೂರ್ತಿ ಎದುರಾದಾಗ ಸ್ವಲ್ಪ ಸಂಕೋಚಿಸಿದರೂ ಭಾರವಾದ ಉಸಿರನ್ನ ದಬ್ಬಿ ನಿಂತಳು. "ಮಾವನೋರು, ಹುಷಾರಾಗಿದ್ದಾರೆ ತಾನೇ ?" ವಿಚಾರಿಸಿದಳು.

"ತುಂಬ ಸುಸ್ತಾಗಿದ್ರು. ಚೆಕ್‌ಅಪ್‌ಗೆ ಕರ್ಕೊಂಡ್ ಬಂದಿದ್ದೆ. ಅಮ್ಮ ಅಲ್ಲಿದ್ದಾರೆ" ಎಂದು ತನ್ನ ಪಾಡಿಗೆ ತಾನು ಹೋದ. ತಾಯಿ ಸೊಸೆಯ ಬಗ್ಗೆ ತೀರಾ ಮೃದು ಮಾತುಗಳನ್ನ ಆಡುವುದರ ಜೊತೆಗೆ ಇಂದು ಬೆಳಿಗ್ಗೆ ಕಣ್ಣೀರು ಹಾಕಿದ್ದರು "ಅವ್ಳ ಸ್ಥಿತಿ ಹೇಗಿತ್ತೋ, ಏನೋ ! ಇವ್ಳು ತಾನೇ ಬೇಡಾಂದ ಗಂಡನ ಮದ್ವೆಯಾಗ್ಬೇಕೂಂತ ಹಟ ಹಿಡಿದಿದ್ದು ತಪ್ಪು" ಇಂದು ಮಗಳನ್ನ ಕೂಡ ಒಂದು ಮಾತು ಅಂದಿದ್ದರು ಧೈರ್ಯದಿಂದ.

ಅದು ಇಂದು ಅವನು ವಿವಾಹವಾದ ದಿನ. ಮೊದಲ ಮ್ಯಾರೇಜ್ ಆನಿವರ್ಸರಿ. ಗ್ರಾಂಡಾಗಿ ಆಚರಿಸಬಹುದಿತ್ತು - ಸುಮ್ಮನೆ ತಲೆ ಕೆಡಿಸಿ ಕೊಂಡಿದ್ದ.

ಯಾರೊಂದಿಗೋ ಮಾತಾಡುತ್ತಿದ್ದ ಮೃಣಾಲಿನಿ ಹಿಂದಕ್ಕೆ ತಿರುಗಿದವರು ಸೊಸೆಯನ್ನ ನೋಡಿ ಮುಖ ದಪ್ಪಗೆ ಮಾಡಲಿಲ್ಲ. ಹಸನ್ಮುಖರಾದರು.

"ಬಸ್ಸಿನಲ್ಲಿ ಹೋಗ್ತಾ ಇದ್ದೆ. ಕಾರು ನೋಡಿ ಹಿಂದಕ್ಕೆ ಬಂದೆ. ಹೇಗಿದ್ದಾರೆ" ಕೇಳಿದಳು.

ಕಷ್ಟಸುಖ ಹೇಳಿಕೊಳ್ಳಲು ಒಂದು ಹೆಣ್ಣಿನ ಜೀವದ ಅಗತ್ಯವಿತ್ತೇನೋ ಕರ್ಚೀಫ್‌ನಿಂದ ಕಣ್ಣೊರೆಸಿಕೊಂಡು "ನೆನ್ನೆ ರಾತ್ರಿಯಿಂದ ತೀರಾ ಸುಸ್ತಾಗಿದ್ರು. ರಾತ್ರಿ ಮೂರ್ತಿನು ಬಂದ. ಚೆಕ್‌ಅಪ್‌ಗೆ ಕರ್ಕಂಡ್ ಬಂದ್ವಿ. ಅವ್ರು ಮೊದ್ಲಿನಂತಾಗಲೇ ಇಲ್ಲ" ಆಕೆ ಸ್ವರ ಪೂರ್ತಿ ಒದ್ದೆಯಾಯಿತು.

"ಇಲ್ಲ ಅತ್ತೆ ! ಮಾವನೋರು ಎಷ್ಟೋ ಬೇಗ ಚೇತರ್ಸಿಕೊಂಡಿದ್ದಾರೆ. ಅವ್ರಿಗೆ ಬಂದಿದ್ದು ಬಲವಾದ ಹಾರ್ಟ್ ಅಟ್ಯಾಕ್. ಇನ್ನು ಸ್ವಲ್ಪ ದಿನ ಬೇಕಾಗುತ್ತೆ. ನೀವು ಕೂತ್ಕೊಳ್ಳಿ" ಎಂದು ರೆಟ್ಟೆ ಹಿಡಿದು ಕರೆದೊಯ್ದು, ಅಲ್ಲೇ ಸ್ಟಾಲ್‌ನಲ್ಲಿರುವ ಬಿಸ್ಲೇರಿ ಬಾಟಲು ತಂದು ನೀರು ಕುಡಿಸಿ "ಪೂಜಾ ಕಾಣೋಲ್ವಲ್ಲ" ಅತ್ತಿತ್ತ ನೋಟ ಹರಿಸಿದಾಗ "ಅವ್ಳು ಮುಂಬಯಿಗೆ ಹೋದ್ಲು. ಇನ್ನು ಸರ್‍ಯಾಗಿ ಅವ್ಳ ಆರೋಗ್ಯ ಸುಧಾರಿಸಿಲ್ಲ" ಮನಸ್ಸು ಬಿಚ್ಚಿ ಹೇಳಿಕೊಂಡರು.

ಕಾರ್ಡಿಯಾಲಜಿ ವಿಭಾಗಕ್ಕೆ ಹೋದವಳು ಹದಿನೈದು ನಿಮಿಷಗಳ ನಂತರ ಬಂದು "ಏನು ಪರ್ವಾಗಿಲ್ಲಾಂದ್ರು. ಬಹುಶಃ ಇಂದು ನಾಳೆ ಇಲ್ಲಿಯೇ ಇರ್ಸಿಕೊಂಡು ರೆಸ್ಟ್‌ಗಾಗಿ ನಾಳಿದ್ದು ಮನೆಗೆ ಕಳಿಸ್ತಾರಂತೆ" ಎನ್ನುವ ವೇಳೆಗೆ ಕೈಯಲ್ಲಿ ಏನೋ ಹಿಡಿದು ಮೂರ್ತಿ ಬರುತ್ತಿದ್ದ "ಬರ್ತೀನಿ..." ಇನ್ನೊಂದು ಅಂದರೆ ಔಟ್ ಪೇಷಂಟ್‌ನ ಕಡೆಯ ಬಾಗಿಲಿನಿಂದ ಅದೃಶ್ಯಳಾದಳು.

"ಚಾರುಲತ ಕಣೋ, ಮುಂದಿದ್ದ ಕಾರು ನೋಡಿ ಬಂದಳಂತೆ."

ಅವನು ಅದಕ್ಕೆ ಪ್ರತಿಕ್ರಿಯಿಸಲಿಲ್ಲ "ಡಾಕ್ಟ್ರನ ನೋಡೋದಿದೆ. ಈಗ್ಬರ್ತೀನಿ" ಹೋದ. ಅವನ ಮನಸ್ಸು ನೀರಿನಿಂದ ಹೊರ ಬಿದ್ದ ಮೀನಿ ನಂತೆ ಒದ್ದಾಡುತ್ತಿತ್ತು ಮಿಲಮಿಲ. ಇದೇ ದಿನ ಅವಳ ಕೈ ಹಿಡಿದು ಸಪ್ತ ಪದಿ ತುಳಿದಿದ್ದ.

ಮೂರ್ತಿ ಹಿಂದಕ್ಕೆ ಬರುವ ವೇಳೆಗೆ ಅರ್ಧಗಂಟೆಯೇ ಆಯಿತು. ಗೆಲುವಿಲ್ಲದ ಮುಖ ನೋಡಿ ಆಕೆಯ ಕರುಳು ಕಿತ್ತು ಬಂದಂತಾಯಿತು.

"ಚೆಕ್‌ಅಪ್ ಮುಗೀತಾ ?" ಧಾವಂತದಿಂದ ಕೇಳಿದರು.

"ಆಯ್ತು, ಎವ್ವೆರಿಥಿಂಗ್ ಈಜ್ ನಾರ್ಮಲ್. ವೀಕ್‌ನೆಸ್‌ಗೆ ಆಯಾಸ ಕಾಣಿಸಿಕೊಂಡಿದೆ ಅಂದ್ರು. ಏನು ಗಾಬ್ರಿ ಬೇಡ. ಎರಡು ದಿನ ಇಲ್ಲಿರಲೀಂತ ಅಂದಿದ್ದಾರೆ. ನಾನು ಹ್ಞೂ ಅಂದೆ. ಇಲ್ಲಿ ಅಪ್ಪನ ಜೊತೆ ನಾನು ಇರ್ತೀನಿ"

ಅಂದ. ಅದರ ಅಗತ್ಯವೇನಿಲ್ಲವೆಂದಿದ್ದರು ಡಾಕ್ಟರ್. ಆದರೂ ಅವನ ಸಮಾಧಾನಕ್ಕೆ ಇರುವ ನಿರ್ಧಾರ ತಗೊಂಡಿದ್ದ.

ತಾಯಿ, ಮಗ ಮಧ್ಯಾಹ್ನ ಹತ್ತಿರದ ಹೋಟಲ್‌ನಲ್ಲಿ ಊಟ ಮಾಡಿ ಬಂದರು. ಯುಗಂಧರ್ ಪಥ್ಯದ ಊಟ. ನರ್ಸಿಂಗ್ ಹೋಂ ಕ್ಯಾಂಟಿನ್ ನಿಂದ ಬಂತು. ಅಂಥ ವ್ಯವಸ್ಥೆ ನಿವೇದಿತಾ ನರ್ಸಿಂಗ್‌ಹೋಂನಲ್ಲಿತ್ತು.

ಸಂಜೆ ಐದೂವರೆಗೆ ತಾಯಿ, ಮಗ ಮನೆಗೆ ಹೊರಡುವಾಗ ಆಟೋದಿಂದ ಇಳಿಯುತ್ತಿದ್ದ ಚಾರುಲತ ಕಂಡಳು.

"ನಿಮ್ಮಪ್ಪನ್ನ ನೋಡೋಕೆ ಬಂದಿದ್ದಾಳೇಂತ ಕಾಣುತ್ತೆ. ಇಷ್ಟು ನಡೆದರೂ ನಮ್ಮಮೇಲಿನ ಪ್ರೀತಿ, ವಿಶ್ವಾಸ ಕಡ್ಮೆಯಾಗಿಲ್ಲ" ನೊಂದ ದನಿಯಲ್ಲಿ ಮೃಣಾಲಿನಿ ನುಡಿದರು. ತಾಯಿಯ ಅರ್ಧದಷ್ಟಾದರೂ ಕೋಪ ಕರಗಿದೆ ಯೆನಿಸಿತು ಅವನಿಗೆ.

"ಪ್ರೀತಿ, ವಿಶ್ವಾಸ ಕಡ್ಮೆಯಾಗೋಕೆ ನಾವೇನು ಮಾಡಿದ್ದೀವಿ" ಎತ್ತಲೋ ನೋಡುತ್ತ ವಿಮನಸ್ಕನಾಗಿ ನುಡಿದ. ಅದು ಪೂರ್ತಿ ಸರಿಯೆನಿಸದಿದ್ದರೂ ಆಕೆಯೇನು ಮಾತಾಡಲಿಲ್ಲ.

ಬಹುಶಃ ಇವರನ್ನ ಗಮನಿಸಿದಳೇನೋ, ಅವಳು ಇನ್ನೊಂದು ಗೇಟುನ ಮೂಲಕ ಒಳಕ್ಕೆ ಹೋದಳು. ಅವಳಿಗೆ ಯಾರ ಸರ್ಟಿಫಿಕೇಟ್ಸ್ ಬೇಡವಾಗಿತ್ತು. ಅವಳೆದೆಯಾಳದ ಸ್ಪಂದನಕ್ಕೆ ಅನುಗುಣವಾಗಿತ್ತು ಚಾರುಲತಳ ನಡವಳಿಕೆ.

ರಿಸೆಪ್ಷನಿಸ್ಟ್ ಕೌಂಟರ್‌ನಲ್ಲಿ ವಿಚಾರಿಸಿಕೊಂಡು ಮೇಲೆ ಸ್ಪೆಷಲ್ ವಾರ್ಡ್‌ನ ರೂಮು ನಂಬರ್ ನಾಲ್ಕಕ್ಕೆ ಬಂದಾಗ ನಿಶ್ಯಬ್ಧವಾಗಿತ್ತು. ಬಾಗಿಲು ಸರಿಸಿ ಒಳಕ್ಕೆ ಅಡಿಯಿಟ್ಟಳು.

ಯುಗಂಧರ್ ಕಣ್ಣು ತೆರೆದರು. ಇಂದೇನು ಮುಖ ಗಂಟಿಕ್ಕಲಿಲ್ಲ. ಅನಾರೋಗ್ಯ ಸ್ವಲ್ಪ ಮೆತ್ತಗೆ ಮಾಡಿತ್ತೇನೋ ! ಅದೂ ಅಲ್ಲದೆ ಪೂಜಾಳ ಮದುವೆಗೆ ಸೊಸೆಯ ಅಗತ್ಯವಿತ್ತು. ಬಹುಶಃ ಅವಳು ಬರದಿದ್ದರೇ ನೂರು ಕತೆಗಳು ಹುಟ್ಟಿಕೊಳ್ಳುತ್ತದೆಯೆಂದು ಅವರಿಗೆ ಗೊತ್ತು.

ತಂದ ಮೋಸಂಬಿಗಳನ್ನ ಅಲ್ಲೇ ತೆಗೆದಿಟ್ಟು "ಹೇಗಿದ್ದೀರಿ ?" ಕೇಳಿದಳು. ಹಿಂಜರಿಕೆಯನ್ನ ಮೆಟ್ಟಿ. "ಅಂಥದೇನಿಲ್ಲ ! ಮನೆಯಲ್ಲಿ ಅವ್ನ ಬಡಬಡಿಕೆ ಕೇಳಲಾರ್ದೇ ನರ್ಸಿಂಗ್‌ಹೋಂಗೆ ಬಂದ್ ಸೇರ್ಕೊಂಡೆ" ಎಂದರು.

ಇದು ಸುಳ್ಳೆಂದು ಅವಳಿಗೆ ಗೊತ್ತು. ಮೃಣಾಲಿನಿ ಮೌನಿಯಲ್ಲದಿದ್ದರೂ ಹೆಚ್ಚು ಮಾತಾಡಿ ಬೇರೆಯವರ ತಲೆ ಮಾತ್ರವಲ್ಲ, ಮನೆಯವರ ತಲೆಯನ್ನು ಕೂಡ ಬಿಸಿ ಮಾಡಲಾರರು.

ಮಾತು ಇಲ್ಲವೆನಿಸಿತು ಅವಳಿಗೆ.

"ಮೋಸಂಬಿ ರಸ ತೆಗ್ದುಕೊಡ್ಲಾ ?" ಕೇಳಿದಳು.

"ಏನು ಬೇಡಾಂತ ಅನ್ನಿಸ್ತಾ ಇದೆ?" ಅಂದರು ಮೆಲ್ಲಗೆ.

"ಬರ್ತೀನಿ...." ಅವರ ಅನುಮತಿಗಾಗಿ ಕಾಯದೇ ಹೊರಗೆ ಬಂದಳು. ಇಂದು ಮನೆಗೆ ಹೋಗುವ ಧಾವಂತ ಅವಳದು. "ಸಾರಿ ಅಮ್ಮ..." ಅಂದಿದ್ದ ಡಾ|| ನವೀನ್ ಫೋನ್ ಮಾಡಿ. ಜೊತೆಯಲ್ಲಿಯೇ "ಸ್ವಲ್ಪ ಬೇಗ್ಬಾ....ನಿಂಗೋಸ್ಕರ ಕಾಯ್ತ ಇದ್ದೀನಿ" ಎಂದ ಸೋದರ ವಾತ್ಸಲ್ಯ ಹರಿಸುತ್ತ.

"ಬಹುಶಃ..." ಅಂದವಳು "ಬೇಡ ಬಿಡು, ಆದಷ್ಟು ಬೇಗ್ಬರ್ತೀನಿ" ಹೇಳಿ ಫೋನ್ ಇಟ್ಟಿದ್ದಳು.

ಆಫೀಸ್‌ಗೆ ಬಂದ ಕೂಡಲೇ ಸೆಕ್ಷನ್ ಆಫೀಸರ್‌ನ ಭೇಟಿ ಮಾಡಿ ಈ ದಿನ ರಜ ನೀಡಬೇಕೆಂದು ಲೀವ್‌ಲೆಟರ್ ಇಟ್ಟಾಗ ಅವರು ಸಕ್ಕಿದ್ದರು. ಅರ್ಧ ದಿನ ಮುಗಿದಿತ್ತು. ಉಳಿದ ಅರ್ಧ ದಿನವನ್ನು ಪನಿಷ್‌ಮೆಂಟಾಗಿ ಸ್ವೀಕರಿಸಿ ಕೆಲಸ ಮಾಡುವುದಾಗಿ ತಿಳಿಸಿದಾಗ ಆಕೆಯ ಕಣ್ಣಲ್ಲಿ ಅರಳಿದ್ದು ಮೆಚ್ಚಿಗೆಯೇ.

ಆಫೀಸ್ ಅವರ್ಸ್ ಮುಗಿದ ನಂತರವೆ ಹೊರಟಿದ್ದು.

ಮನೆಗೆ ಬರುವ ವೇಳೆಗೆ ಆರೂವರೆಯಾಗಿ ಹೋಗಿತ್ತು. ಬಸ್ಸಿಗೆ ಕಾಯದ ಆಟೋ ಹಿಡಿದು ಬಂದಿದ್ದಳು.

"ಸಾರಿ, ಮಹರಾಯ ! ಎಲ್ಲೋ ಹೊರಟಂಗಿದೆ ಅತ್ತೆ ಮನೆಗಾ ?" ಹಾಸ್ಯ ಮಾಡಿದಳು. ಎದೆಯಾಳದಲ್ಲಿ ನೋವಿದ್ದರೂ ತೋರಿಸದೇ ತಮಾಷೆ ಮಾಡುವುದು, ಉತ್ಸಾಹ ತೋರುವುದು ಚಾರುಲತಳಿಂದ ಮಾತ್ರ ಸಾಧ್ಯವೇನೋ!

"ಸದ್ಯ, ನೀನ್ಹೋಗಿ ಬೇಗ ರೆಡಿಯಾಗು, ಹತ್ತು ನಿಮಿಷದ ಮೇಲೆ ಹೆಚ್ಚಿಗೆ ತಗೋಬಾರ್ದು" ಎಚ್ಚರಿಸಿದ ನಗುತ್ತ. ಅವಳಿಗೆ ಆರಾಮೆನಿಸಿತು. ಬೆಳಗಿನ ಡಾ|| ನವೀನ್ ರುದ್ರ ರೂಪ ನೋಡಿ ನಡುಗಿ ಹೋಗಿದ್ದಳು.

ಒಳಗೆ ಬಂದಾಗ ಟೀಪಾಯಿ ಮೇಲೆ ಸ್ಟೀಲ್ ಬುಟ್ಟಿ ಇತ್ತು. ಅದರಲ್ಲಿ ಹಣ್ಣು, ಕಾಯಿ, ಹೂ ಜೋಡಿಸಿದ್ದು ನೋಡಿ ಅವಳ ಹುಬ್ಬೇರಿತು.

"ದೇವಸ್ಥಾನಕ್ಕೆ ಕರ್ಕಂಡ್ ಹೋಗ್ಬೇಕೂಂತ ಹಣ್ಣು, ಕಾಯಿ ತೆಗೆದಿಟ್ಟಿದ್ದಾನೆ. ಒಂದ್ಗಂಟೆಯಿಂದ ಹೊರಗಡೆ ನಿಂಗಾಗಿ ಕಾಯ್ತ ಇದ್ದಾನೆ" ಎಂದರು ವಾಸುದೇವಯ್ಯ.

ಅವರತ್ತ ನೋಡಿದಳು. ಬೆಳಗಿನ ಘಟನೆಯಿಂದ ಅವರಿನ್ನ ಚೇತರಿಸಿ ಕೊಂಡಂಗೆ ಕಾಣಲಿಲ್ಲ. ತೀರಾ ವಯಸ್ಸಾದವರಂತೆ ಚಿಂತೆ ಮುಪ್ಪನ್ನ ಎಷ್ಟು ಬೇಗ ಸ್ವಾಗತಿಸುತ್ತದೆಯೆಂದು ಹೆದರಿದಳು.

"ಅಪ್ಪ....." ಅವರ ಬಳಿ ಹೋದಳು.

"ಬೇಗ ರೆಡಿಯಾಗಿ ಹೋಗು. ಬೆಳಿಗ್ಗೆ ನವೀನ್ ಅಂದಿದ್ದರಲ್ಲಿ ಏನು ತಪ್ಪಿಲ್ಲ. ಕಿರಿಯರ ತಪ್ಪಿಗೆ ಕ್ಷಮೆ ಇರುತ್ತೆ. ಹಿರಿಯರಾಗಿ ಪೂರ್ವಾಪರ ಯೋಚ್ಸಬೇಕು. ನೀರದ ನಡವಳಿಕೆ ನೋಡಿದ ಮೇಲೆ ಈ ಮನೆಗೆ ಸೊಸೆಯಾಗದಿದ್ದರೂ ಏನು ಆತ್ಮಹತ್ಯೆ ಮಾಡ್ಕೋತಾ ಇರ್ಲಿಲ್ಲಾಂತ ಈಗ ಅನ್ನಿಸ್ತಾ ಇದೆ. ಅವ್ಳು ಪೂಜಾಳಷ್ಟು ದುರ್ಬಲ ಮನಸ್ಸಿನ ಹುಡ್ಗಿಯಲ್ಲ" ಒಂದು ಸತ್ಯ ಕಂಡು ಕೊಂಡವರಂತೆ ನುಡಿದರು.

ಈ ತೀರ್ಮಾನ ಅವಳಿಗೆ ತಪ್ಪೆನಿಸಿತು.

"ಅಪ್ಪ, ನಿಮ್ಗೆ ನೀರದ ಸ್ವಭಾವದ ಬಗ್ಗೆ ಬೇಸರವಿರ್ಬಹುದು. ಒಂದಿಷ್ಟು ಅವಿವೇಕಿ ಅಂದ್ಕೋಬಹುದು. ಆದರೆ, ಅವ್ಳು ನಿಜ್ವಾಗ್ಲೂ ನವೀನಣ್ಣನ್ನ ಪ್ರೀತಿಸ್ತಾ ಇದ್ಲು. ಈಚೆಗೆ ಅಣ್ಣ ಪ್ರೀತಿಯ ಬಗ್ಗೆ ಏನೇನೋ ಮಾತಾಡೋಕೆ ಷುರು ಮಾಡಿದ್ದಾನೆ. ನೀವು ಈ ರೀತಿ ಮಾತಾಡಿದ್ರೆ ಮಡದಿನ ತುಂಬ ನಿರ್ಲಕ್ಷ ಮಾಡ್ಬಿಡ್ತಾನೆ. ಹಾಗಾಗ್ಬಾರ್ದು" ಅವರ ಕೈ ಹಿಡಿದು ಕೇಳಿಕೊಂಡಳು.

ಮಗಳನ್ನು ಮೆಚ್ಚಿಗೆ, ಅಭಿಮಾನದಿಂದ ಕಣ್ಣುಗಳಲ್ಲಿ ತುಂಬಿ ಕೊಳ್ಳುವಂತೆ ನೋಡಿದರು.

"ಹೋಗು....ಹೋಗು ಬೇಗ ರೆಡಿಯಾಗು" ಎಂದರಷ್ಟೆ.

ಒಳಗೆ ಬಂದ ನವೀನ್ ತಾನೇ ತಂಗಿಗೆ ಮೆರೂನ್ ಕಲರ್‌ನ ಮೈಸೂರು ಸಿಲ್ಕ್ ಸೀರೆ ಆರಿಸಿಕೊಟ್ಟ. ಹಿಂದೆ ಮುಂದೆ ಉತ್ಸಾಹದಿಂದ ಓಡಿಯಾಡಿದ.

ಅವರಿಬ್ಬರನ್ನ ಹೊತ್ತು ಸ್ಕೂಟರ್ ದೇವಸ್ಥಾನದ ಮುಂದೆ ನಿಂತಿತು. ಅವನೆದೆ ಭಾರವಾಯಿತು. ಈಗ ಮೂರ್ತಿಯು ಜೊತೆಯಲ್ಲಿ ಇದ್ದಿದ್ದರೇ ಅದೊಂದು ಅದ್ಭುತವಾದ ಕನಸ್ಸಾಗಿ ಬಿಡುತ್ತಿತ್ತೆಂದುಕೊಂಡ.

ತಾನೇ ನವೀನ್ ಚಾರುಲತ, ಮೂರ್ತಿಯ ಹೆಸರಲ್ಲಿ ಅರ್ಚನೆ ಮಾಡಿಸಿದ. ತಂಗಿಯ ಮುಖ ನೋಡಲು ಹೆದರುತ್ತಿದ್ದ. ಅವನಲ್ಲಿನ ಅಪರಾಧ ಭಾವ ಚುಚ್ಚಿ ಚುಚ್ಚಿ ನೋಯಿಸುತ್ತಿತ್ತು.

ಮನದಲ್ಲಿ ಘರ್ಷಣೆ ಇದ್ದರೂ ಕಿಂಚಿತ್ ಕೂಡ ಮುಖದಲ್ಲಿ ಪ್ರಕಟಿಸಲಿಲ್ಲ. ಚಾರುಲತ ಗಟ್ಟಿ ನಿರ್ಧಾರದ ಮೇಲೆ ನಿಂತಿದ್ದಳು.

"ದೇವರನ್ನ ಏನಾದ್ರೂ ಕೇಳಿಕೊಂಡ್ಯಾ ?" ಹೊರಗೆ ಬರುವಾಗ ಪ್ರಶ್ನಿಸಿದ ನವೀನ್ ತಂಗಿಯನ್ನ. ಅವಳು ಪಕಪಕ ನಕ್ಕುಬಿಟ್ಟಳು. "ಖಂಡಿತ ಇಲ್ಲ ಅನ್ನೋದನ್ನ ನೀನು ನಂಬಬೇಕು. ದೇವರ ಮುಂದೆ ಭಕ್ತಿಯ ತನ್ಮಯತೆ ನನ್ನನ್ನು ಆವರಿಸುತ್ತೆ. ಕೇಳೋದಂಥದೇನಿಲ್ಲ. ಪ್ರತಿಯೊಂದನ್ನ ಅಪ್ಪ ಅಮ್ಮನ ಬಳಿಗೆ ದೂರಿನ ರೂಪದಲ್ಲಿ ಒಯ್ಯೋಕ್ಕಾಗುತ್ತ ? ಕೆಲವನ್ನ ನಾನೇ ಬಗೆಹರಿಸ್ಕೋಬೇಕು" ಎಂದಳು ಗಂಭೀರವಾಗಿ. ಈಗ ಮೂರ್ತಿ ಏನು ಮಾಡುತ್ತಿರಬಹುದು ? ಬಹುಶಃ ನರ್ಸಿಂಗ್ ಹೋಂನಲ್ಲಿರಬೇಕೆಂದು ಕೊಂಡಳಷ್ಟೆ.

ತಂಗಿಯ ಮಾತಿಗೆ ಮರು ನುಡಿಯಲಿಲ್ಲ. ಅವನೊಂದು ರೀತಿಯಲ್ಲಿ ಭ್ರಮೆನಿರಸನದಲ್ಲಿದ್ದ. ವಿವಾಹದ ನಂತರವೆ ನೀರದಳ ಬುದ್ಧಿಮತ್ತೆಯು ಅರಿವಾಗಿದ್ದು. ಅವಳ ಆಸೆ, ಆಕಾಂಕ್ಷೆ, ನಡವಳಿಕೆಯಲ್ಲಿ ಪೂರ್ಣ ಸ್ವರೂಪದ ಅರಿವಾಗಿತ್ತು.

ಸ್ವಲ್ಪ ಜೋರಾಗಿ ಡಾ॥ ನವೀನ್ ನಕ್ಕಾಗ ಗಾಬರಿಯಿಂದ ಅತ್ತ ತಿರುಗಿದಳು. "ಏನಾಯ್ತು ?" ಮೂಲೆಯಲ್ಲಿದ್ದ ಕಲ್ಲಿನ ಹಜಾರದ ಕಡೆ ಹೊರಟ ಅವನು "ಬಾ ಕೂತ್ಕೊಂಡ್ ಮಾತಾಡೋಣ" ಕರೆದೊಯ್ದ.

ಇಬ್ಬರು ಕೂತರು. ಬಾಳೆಹಣ್ಣಿನ ಜೊತೆ ತೆಂಗಿನ ಹೋಳನ್ನ ಚೂರು ಚೂರು ಮಾಡಿ ತಿಂದರು. ಒಂದೆರಡು ಸಲ ಮೂರ್ತಿಯೊಂದಿಗೆ ಕೂಡ ಈ ದೇವಸ್ಥಾನಕ್ಕೆ ಬಂದಿದ್ದುಂಟು. ಆಗ ನವೀನ್ ಕೂಡ ಜೊತೆಯಲ್ಲಿದ್ದ. ಎಂಥ ಸಂತೋಷದ ಕ್ಷಣಗಳು ಅವು. ಅವೆಲ್ಲ ಬರೀ ನೆನಪುಗಳಾಗಿ ಮಾತ್ರ ಉಳಿಯಬಲ್ಲವೆನಿಸಿತು ಚಾರುಲತಗೆ.

"ಯಾಕೆ, ನಕ್ಕಿದ್ದು ?" ಮತ್ತೆ ಕೇಳಿದಳು.

ತೆಂಗಿನ ಚಿಪ್ಪಿನ ಚೂರುಗಳನ್ನು ದೂರಕ್ಕೆಸೆದು ಬಂದು ಕೂತ "ಪ್ಲೀಸ್, ಈ ಮಾತುಗಳು ಯಾವುದೇ ಪೂರ್ವಾಗ್ರಹದಿಂದ ಕೂಡಿದ್ದಲ್ಲ. ನೀರದನ ನಾನು ಮದ್ವೆ ಮಾಡ್ಕೋಬೇಕೂಂತ ಅಂದ್ಕೊಂಡಿದ್ದು ಎಂ.ಬಿ.ಬಿ.ಎಸ್.ನ ಕೊನೆಯ ವರ್ಷ. ಇದಕ್ಕೆ ವಯಸ್ಸು ಕಾರಣವಿರಬಹ್ದು, ಅಥ್ವಾ ಯಾವುದಾದ್ರೂ ಲವ್ ಫಿಲಂನ ಇನ್ಸ್‌ಪಿರೇಷನ್ ಇರ್ಬಹ್ದು. ಹೇಗೋ, ಎಂತೋ ಇದಕ್ಕೆ ಒಂದು ಪ್ರೇಮ ಅಂತ ಹೆಸರು ಇಟ್ಕೊಂಡಿದ್ದು ಆಯ್ತು. ಎಂಥ ಸ್ಥಿತಿಯಲ್ಲಿ ನಾನು ಅವ್ಳನ್ನ ವಿವಾಹವಾದೇಂತ ಗೊತ್ತು. ಇಷ್ಟು ಕಡಿಮೆ ಸಮಯದಲ್ಲಿಯೇ ನಂಗೆ ಸಂಗಾತಿಯ ಬಗ್ಗೆ ಬೇಸರ ಬಂದಿದೆ. ಅದ್ಕೆ ನೀನು ತಿಳ್ಕೊಂಡ ಕಾರಣ ಅಲ್ಲ. ಹಿಂದೆ ನೀರದ ನಿಂತ ಕಡೆಯೆಲ್ಲ ಪ್ರೀತಿ, ಪ್ರೇಮ ಕಾಣಿಸ್ತಾ ಇತ್ತು. ಈಗ ಬರೀ ಸ್ವಾರ್ಥನೇ ! ಅವ್ಳಿಗೆ ತನ್ನ ಸುಖ ಭದ್ರತೆ ಮಾತ್ರ ಮುಖ್ಯ. ನನ್ನ ಮೃದುವಾದ ಭಾವನೆಗಳಿಗೆ ಮರು ಸ್ಪಂದನವೇ ಇಲ್ಲ. ನೀರಸವೆನಿಸುತ್ತೆ. ದೇಹದ ಬಯಕೆ ಎಷ್ಟು ದಿನದ್ದು ? ಇದು ಅಳಿದರೆ ಉಳಿಯುವುದೇನು ? ದಂಪತಿಗಳ ನಡುವೆ ಮಧುರವಾದ ಭಾವನೆಗಳು ಇರ್ಬೇಕು" ತನ್ನದೆ ರೀತಿಯಲ್ಲಿ ಹೇಳಿಕೊಂಡ. ಗದಕ್ಕೆ ಕೈ ಹಚ್ಚಿ ಕೂತ ಚಾರುಲತ ನಿಬ್ಬೆರಗಾದಳು. 'ಇಷ್ಟು ಅಲ್ಪ ಸಮಯದಲ್ಲಿ ಇಂಥ ನಿರ್ಧಾರಕ್ಕೆ ಬರುವುದು ಅಪಾಯವೆನಿಸಿತು.'

"ಅಣ್ಣ...." ಎಂದಳು ಮೆಲ್ಲಗೆ.

ನವೀನ್ ತಲೆಯೆತ್ತಿ ಅವಳ ಕಣ್ಣಲ್ಲಿ ಕಣ್ಣಿಟ್ಟು "ಇಷ್ಟೆಲ್ಲ ಹೇಳ್ತಾ ಇದ್ದಾನಲ್ಲ, ಎಂದು ಭಯಪಡುವ ಅಗತ್ಯವಿಲ್ಲ. ಪತ್ನಿಯಾಗಿ ಸ್ವೀಕರಿಸಿರುವ ನೀರದನ ಬಿಡೋ ಪ್ರಮೇಯವೇನಿಲ್ಲ. ಈಗ ಏರ್ಪಟ್ಟಿರುವ ಅಂತರ ಕಡಿಮೆಯಾಗ ಬಹ್ದು, ಹೆಚ್ಚಿಗಾಗ್ಬಹ್ದು. ಆದ್ರೂ ಒಂದೇ ಛಾವಣಿಯಲ್ಲಿ ಬದುಕಲು ಬದ್ಧರು. ಎಲ್ಲಾ ನಿನ್ಮುಂದೆ ಹೇಳ್ಕೋಬೇಕೂಂತ ಅನ್ನಿಸ್ತು. ನಿಮ್ಮದ್ದೇನು ನಮ್ಮ ವರ್ಷಾನು ಗಟ್ಟಲೆ ಪ್ರೇಮಿಸಿ ಆದ ಮದ್ವೆಯೇನಲ್ಲ. ಆದರೆ ನಿನ್ನ ಮೂರ್ತಿಯ ನಡ್ವೇ ಎಷ್ಟೊಂದು ಅನ್ಯೋನ್ಯತೆ ಇತ್ತು. ಅಲ್ಲಿವರ್ಗೂ ಸಾಕು ಬಿಡು. ಮುಂದು ವರಿಕೆಯಿಂದ ಬರೀ ನೋವೇ" ಎದ್ದು ಮೈ ಮುರಿದ.

ಸೂರ್ಯ ಮರಗಳ ಮರೆಯಲ್ಲಿ ಅಸ್ತಮಿಸುತ್ತಿದ್ದ. ಕತ್ತಲೆಯಲ್ಲಿ ಮುಳುಗಲು ಒಂದಿಷ್ಟು ಸಮಯವಿತ್ತು. ವಿದ್ಯುತ್ ದೀಪಗಳು ದಗ್ಗನೆ ಪ್ರಜ್ವಲಿಸಿದವು.

ಮಾನವ ಎಷ್ಟೊಂದು ಚಮತ್ಕಾರಿ. ಈ ಬುದ್ಧಿವಂತಿಕೆ ಸೃಷ್ಟಿಕರ್ತನಿಗೂ ಮೆಚ್ಚಿಗೆಯೇ.

"ಹೋಗೋಣ ಚಾರು" ಹೇಳಿದ ದೂರದಲ್ಲಿ ನೋಟ ನೆಟ್ಟು.

ಮೆಟ್ಟಲು ಇಳಿದು ಕೆಳಗೆ ಬಂದ ನಂತರ "ನೀರದ ಮನೆಗೆ ಹೋಗೋಣ್ವಾ?" ಕೇಳಿದ ಕೂಡಲೇ ಎರಡು ಕೈಗಳು ಜೋಡಿಸಿದ "ಮೊದ್ಲು ಅಪ್ಪಿಗೆ ನನ್ನ ಪ್ರೇಮಿಸೋದರಲ್ಲಿ, ಮದ್ವೆ ಆಗೋದ್ರಲ್ಲಿ ಸುಖವೆನಿಸಿತ್ತು. ಈಗ ಅಪ್ಪಿಗೆ ತವರುನಲ್ಲಿರೋದು, ಅಮ್ಮನ ಮುಂದೆ ಕೂಡೋದೇ ಹಿತವೆನಿಸಿತು. ಮನೆ ಬದಲಾಯಿಸಿ ಕೂಡ ಪ್ರಯೋಜನವಿಲ್ಲವೆಂದು ನಿಂಗೆ ಗೊತ್ತಿದೆ. ಖುಷಿಯಿಂದ ಹೋಗಿದ್ದಾಳೆ. ಬೇಕೆನಿಸಿದಾಗ ಬರ್ಲಿ. ನಂಗೆ ಸದಾ ಅಪ್ಪ ಸೆರ್ಗು ಹಿಡ್ದು ಓಡಾಡೋ ಆಸೆಯೇನಿಲ್ಲ. ಇನ್ನಷ್ಟು ನನ್ನ ಪ್ರೊಫೆಷನ್ ಕಡೆ ಗಮನ ಕೊಡಲು ಸಹಕಾರಿ ಆಯ್ತು" ಎಂದು ತನ್ನ ರಾಜಿ ಸೂತ್ರ ಪ್ರಕಟಿಸಿದಾಗ ಚಕಿತಳಾದಳು.

"ಆ ಬಗ್ಗೆ ಕಾಮೆಂಟ್ಸ್ ಬೇಡ" ಎಂದು ಸ್ಕೂಟರ್ ಏರಿದ.

ಒಂದು ದೊಡ್ಡ ಸ್ವೀಟ್ ಸ್ಟಾಲ್ ಮುಂದೆ ನಿಂತಿತು ಸ್ಕೂಟರ್. ಸಾಕಷ್ಟು ಸಿಹಿ ತಿಂಡಿಗಳನ್ನ ಕಟ್ಟಿಸಿಕೊಳ್ಳುವುದರೊಂದಿಗೆ ತಂಗಿಗೆ ಬಾದಾಮಿ ಹಾಲು ಕುಡಿಸಿದ.

ಹಿಂದಿರುಗಿದವನು ಬೆಪ್ಪಾದ, ಮೂರ್ತಿ ಬರುತ್ತಿದ್ದ. ಮೊದಲು ನಾಲ್ಕು ಒದೆಯ ಬೇಕೆನಿಸಿತು. ನಂತರ ಕಾಲು ಹಿಡಿಯಬೇಕೆನಿಸಿತು. ಅವೆರಡು ಒಪ್ಪಿಗೆಯಾಗದೇ ಸ್ಕೂಟರ್‌ನಿಂದ ಇಳಿದು ಅತ್ತ ಹೋದ.

"ಹಲೋ, ಮೂರ್ತಿ.....ಈಗ ಸಂಬಂಧಿಗಳು ಅಲ್ಲವಾದ್ರೂ ಫ್ರೆಂಡ್ಸ್ ಆಗಿ ಕೆಲವು ನಿಮಿಷ ಮಾತಾಡಬಹುದಲ್ಲ" ಎಂದ ಡಾ।। ನವೀನ್.

ಈಗಿನ ಪರಿಸ್ಥಿತಿ ತಂದೆಯ ಅನಾರೋಗ್ಯ, ತಾಯಿ ಹೇಳಿದ ಮಾತುಗಳು ಒಂದಿಷ್ಟು ಮೆತ್ತಗಾಗಿಸಿತ್ತು. ಪೂಜಾ ಮುಂಬಯಿನಲ್ಲಿದ್ದಳು. ಅವಳ ವಿವಾಹದ ಮಾತುಕತೆ ಒಂದು ಹಂತಕ್ಕೆ ಬಂದಿತ್ತು. ತಿರಸ್ಕಾರ ತೋರಲಾಗಲಿಲ್ಲ.

"ವೈ ನಾಟ್....?" ಎಂದ ಮೆತ್ತಗೆ.

ಜೊತೆಯಲ್ಲಿ ಕರೆದೊಯ್ದು ಕೂಡಿಸಿ ಬಂದ. ಅವಳು ಎತ್ತಲೋ ನೋಡುತ್ತ ನಿಂತಿದ್ದವಳ ಮುಖದಲ್ಲಿ ಶೂನ್ಯವಿತ್ತು.

"ಚಾರು, ನನ್ನ ಫ್ರೆಂಡ್ ಒಬ್ರು ಸಿಕ್ಕಿದ್ದಾರೆ ಸ್ವಲ್ಪ ಬಾ" ಕರೆದ.

ಅವಳು ಮೂರ್ತಿನ ಗಮನಿಸದಿದ್ದುದ್ದರಿಂದ "ಬೇಡ, ಸಿಕ್ಕಿದ್ದರೇ ಬೇಗ ಮಾತಾಡಿಕೊಂಡು ಬಾ ಹೋಗು. ನಂಗಂತು ಯಾರ್ಧತ್ರನು ಮಾತಾಡೋ ಇಷ್ಟವಿಲ್ಲ" ನಿರಾಕರಿಸಿದಳು ಸಪ್ಪಗೆ.

"ಪ್ಲೀಸ್ ಬಾಮ್ಮ" ಬಲವಂತ ಮಾಡಿ ಕರೆದೊಯ್ದು.

ಅಲ್ಲಿ ಸ್ವೀಟ್ಸ್ ಮಾರುಕಟ್ಟೆ, ರೆಸ್ಟೋರೆಂಟ್‌ನ ಬೇರ್ಪಡಿಸಿದ್ದರಷ್ಟೆ. ಒಂದಾರು ಟೇಬಲ್ಸ್ ಮಾತ್ರವಿತ್ತು. ಅಲ್ಲಿ ಸ್ವೀಟ್ಸ್ ತಿನ್ನಲೆಂದೇ ಜನ ಬರುತ್ತಿದ್ದುದ್ದು.

ಟೇಬಲ್ಲುನ ಬಳಿ ಹೋದಾಗಲೇ ಮೂರ್ತಿನ ಗಮನಸಿದಿದ್ದು. ಚೇತರಿಸಿ ಕೊಳ್ಳಲು ನಿಮಿಷಗಳು ಬೇಕಾದರೂ ಅಷ್ಟೊಂದೇನು ನರ್ವಸ್ ಆಗಲಿಲ್ಲ. ಇದೇ ವರ್ಷದ ಹಿಂದಿನ ದಿನ ಭೂಮಕ್ಕೆ ಕೂಡಿಸಿದಾಗ ಎಲ್ಲರೆದುರು ಲಾಡು ತುರುಕಿ ಅವಳ ಕೆನ್ನೆಯನ್ನು ರಂಗೇರಿಸಿದ್ದ.

"ನನ್ನ ಸಿಸ್ಟರ್ ಚಾರುಲತ. ಇವ್ರು ಮೂರ್ತಿ ಅಂತ ಲೆಕ್ಚರರ್ ಆಗಿದ್ದಾರೆ" ಇಬ್ಬರನ್ನು ಪರಿಚಯಿಸಿದ. ಮೂರ್ತಿಯ ಮುಖ ವಿವರ್ಣವಾದರ ಡಾ॥ನವೀನ್ ತನ್ನನ್ನು ಅವಮಾನಿಸುತ್ತಿದ್ದಾನೆಂದುಕೊಳ್ಳ ಲಾಗಲಿಲ್ಲ. ಆದರೂ ಪರಿಸ್ಥಿತಿ ನುಂಗಲಾರದ ತುತ್ತಾಗಿತ್ತು.

ಡಾ॥ ನವೀನ್ ಸ್ವೀಟ್ಸ್‌ಗೆ ಆರ್ಡರ್ ಮಾಡಿದ. ವಾತಾವರಣ ಬಿಗುವೆ. ಒಂದು ನಾಲ್ಕು ಮಾತು ಆಡಿದ್ದು ಅವನೊಬ್ಬನೇ. ಮೂರ್ತಿ ಹ್ಞೂಗುಟ್ಟಿದರೇ, ಚಾರುಲತ ತೆಪ್ಪಗೆ ಕೂತಿದ್ದಳು.

ಬಿಲ್ಲು ತೆತ್ತು ಬಂದ ನವೀನ್ ಮೂರ್ತಿಯ ಕೈ ಕುಲುಕಿ "ಥ್ಯಾಂಕ್ಯೂ... ಥ್ಯಾಂಕ್ಯೂ ವೆರಿ ಮಚ್ ಸರ್. ಐ ಯಾಮ್ ಎವರ್ ಗ್ರೇಟ್‌ಫುಲ್ ಟು ಯೂ." ಮತ್ತೆ ಕೈ ಜೋಡಿಸಿದ. ಕಣ್ಣಲ್ಲಿ ತುಂತರಿದ್ದರು ಮರೆಸಿದ. ಮೂರ್ತಿಯ ಬಾಯಿಂದ ಕೂಡ ಮಾತು ಹೊರಡಲಿಲ್ಲ. 'ಹ್ಯಾಪಿ ಮ್ಯಾರೀಡ್ ಅನಿವರ್ಸರಿ' ಎಂದು ನವೀನ್ ಹೇಳದಿದ್ದರೂ ಅವನ ಮನಸ್ಸು ಹಾರೈಸುತ್ತಿತ್ತು. ಅವರಿಬ್ಬರ ಬಿಡುಗಡೆ - ಆವೇಶದಲ್ಲಿ ಸರಿಯೆನಿಸಿದರೂ ನಂತರ ನೋವೆನಿಸುತ್ತಿತ್ತು.

ಬೀಳ್ಕೊಟ್ಟ ಅಣ್ಣ, ತಂಗಿ ಮನೆಗೆ ಬರುವವರೆಗೂ ಮಾತಾಡಲಿಲ್ಲ.

ಅವಳೇನು ಕನಸ್ಸಿನ ಲೋಕಕ್ಕೆ ಜಾರಲಿಲ್ಲ. ವಾಸ್ತವವನ್ನ ಎದುರಿಸಲು ಮಾನಸಿಕವಾಗಿ ಸಿದ್ಧವಾಗಿದ್ದಳು.

ಸ್ವೀಟ್ಸ್ ಒಂದು ಪ್ಲೇಟ್‌ಗೆ ಹಾಕಿ ತಂದೆಯ ಮುಂದಿಟ್ಟ "ತುಂಬ ಫ್ರೆಷಾಗಿತ್ತು. ನಾವಿಬ್ರೂ ಅಲ್ಲೇ ತಗೊಂಡ್ವಿ. ನೀರದ ನಾಳೆ ನಾಳಿದ್ದು ಬಿಟ್ಟು ಬರಬಹುದ್ದು" ಎಂದು ಅಲ್ಲೇ ಕೂತ.

ಅವರಿಗೆ ಇಷ್ಟವೆನಿಸಲಿಲ್ಲ "ಬೇಡ ಕಣೋ, ಈಗ ನಂಗೆ ತಿಂಡಿಯ ಆಸೆ, ಅಕರಾಸ್ತೆ ಕಡ್ಮೆಯಾಗಿದೆ. ಆರೋಗ್ಯಕ್ಕೆ ಹಿತವಲ್ಲ" ನಿರಾಕರಿಸಿದರು.

ಆದರೂ ನವೀನ್ ಬಲವಂತದಿಂದ ತಂದೆಗೆ ಅಷ್ಟಿಷ್ಟು ತಿನ್ನಿಸಿದ ಬೆಳಗಿನ ಪ್ರಕರಣದಿಂದ ಅವರಿನ್ನ ಚೇತರಿಸಿಕೊಂಡಿರಲಿಲ್ಲ. ಅದರಿಂದ ಹೊರ ತರಬೇಕಿತ್ತು.

ಊಟದನಂತರ ಒಂದಿಷ್ಟು ವಾಕ್ ಮಾಡಿ ಬರುತ್ತಿದ್ದರು ವಾಸುದೇವಯ್ಯ. ಈ ದಿನ ಹೊರಟಾಗ ತಂಗಿಯನ್ನ ಕರೆದುಕೊಂಡು ಬಂದು ಹೊರಗಡೆ ಕೂತ.

"ಚಾರು, ಒಂದ್ಮಾತು ಕೇಳ್ಲಾ ?" ಎಂದ ಮೆಲ್ಲಗೆ.

"ಏನಪ್ಪ ಅಂಥದ್ದು ? ನನ್ನ ವಿಷ್ಯ ಮಾತಾಡೋಕೆ ಪೀಠಿಕೆ ಯಾಕೆ ? ಹಾಗಂತ ಏನೇನೋ ಪ್ರಶ್ನೆಗಳು ಬೇಡ. ಕೆಲವನ್ನ ಕಾಲದ ನಿರ್ಧಾರಕ್ಕೆ ಬಿಡ್ಬೇಕು. ಸುಮ್ನೆ ತಲೆ ಕೆಡ್ಸಿಕೊಂಡು ನಮ್ಮ ಆರೋಗ್ಯ ಸಮಯ ಎರ್ಡು ಹಾಳು ಮಾಡ್ಕೋಬಾರ್ದು" ದೀರ್ಘವಾಗಿ ನೋಡುತ್ತ ಉಸುರಿದಳು.

"ಮುಂದೇನು ? ಕಾಲ ನಿರ್ಧರಿಸುತ್ತೇಂತ ಸುಮ್ನೆ ಕೂಡೋಕ್ಕಾಗೋಲ್ಲ" ಕೆದಕಿದ. ಅವಳ ಮನಸ್ಥಿತಿಯನ್ನ ಅರಿಯಬೇಕಿತ್ತು. ಮೂರ್ತಿಯ ಬಗ್ಗೆ ಯಾವುದೇ ನಿರ್ಧಾರಕ್ಕೆ ಬರಲಾರ. ಇಂದಿನ ಅವನ ನಡತೆ ಆಸೆ ಹುಟ್ಟಿಸಿದರೂ ಹ್ಯಾಂಗೋವರ್‌ನಿಂದ ಹೊರ ಬಂದಿಲ್ಲವೆನಿಸಿತು.

"ನನ್ನ ಬಗ್ಗೆ ಕೇಳ್ತಾ ಇದ್ದೀಯಾ ? ನಾನೇನು ಸುಮ್ನೆ ಅಳ್ತಾ ಕೂತಿಲ್ಲ. ಒಂದ್ಕೆಲ್ಸ ಸಿಕ್ಕಿದೆ. ಎಷ್ಟು ಸಿಕ್ಕು ಸಿಕ್ಕಾಗಿದೆ ಸಮಸ್ಯೆಗಳು ಇವೇಂತ ಈಗ ಅರ್ಥವಾಗ್ತಾ ಇದೆ. ಬರೀ ವೈಯಕ್ತಿಕವಾಗಿ ಯೋಚ್ಸಿ ಸವೆದು ಹೋಗೋದು ಬೇಡಾಂತ ಅನ್ನಿಸಿದೆ. ಖಂಡಿತ ನನ್ನ ಬಗ್ಗೆ ನಿಂಗೆ ಚಿಂತೆ ಬೇಡ" ಎಂದಳು. ಉದ್ವೇಗವನ್ನ ಹಿಡಿತಕ್ಕೆ ತಂದುಕೊಳ್ಳಲು ಎಷ್ಟೋ ಕಷ್ಟ ಪಟ್ಟಿದ್ದಳು.

"ಬಹುಶಃ ಮೂರ್ತಿ ನಿಂಗೆ ಡೈವೋರ್ಸ್ ಕೊಡೋಕೆ ಮುಂದಾದರೆ?" ನೇರವಾಗಿತ್ತು ಅವನ ಪ್ರಶ್ನೆ.

ಅದನ್ನ ಅರಗಿಸಿಕೊಳ್ಳಲು ಪ್ರಯಾಸಪಟ್ಟಳು. ನಗಲು ಪ್ರಯತ್ನಿಸಿ "ನಿಂಗೆಲ್ಲೋ ಕ್ಲೂ ಸಿಕ್ಕಿರಬಹ್ದು. ಅದ್ಕೇ ನನ್ನ ಒಪ್ಗೇ ಇದೆ. ಹೇಗೂ ಬೇರೆ ಬೇರೆ ವಾಸಿಸ್ತಾ ಇದ್ದೀವಿ. ಈಗ ಅವ್ರ ಅನ್ಕೂಲಕ್ಕಾಗಿ ಡೈವೋರ್ಸ್ ಕೇಳಿದ್ರೆ 'ಒಲ್ಲೆ' ಅನ್ನೋಲ್ಲ. ಒಂದು ಅಧ್ಯಾಯ ಮುಗಿದಂತಾದರೂ ಮುಂದಿನ ಅಧ್ಯಾಯ ಇದ್ದೇ ಇದೆ. ಅವ್ರ ಮನೆಯವರೆಲ್ಲ ಪ್ರೀತಿಯಿಂದ ಕಂಡಿದ್ದಾರೆ. ಮೂರ್ತಿ ಕೂಡ ಎಂದೂ ನೋಯಿಸಿಲ್ಲ. ನನ್ನ ಭಾವನೆಗಳ್ನ ಅರ್ಥ ಮಾಡಿಕೊಂಡ ಒಳ್ಳೆಯ ಪತಿ. ಪೂಜಾ ತೋರಿದ ಸ್ನೇಹ ಕೂಡ ಮರೀಲಾರೆ. 'ಈಗೋ' ಬಿಟ್ಟು ಯೋಚಿಸ್ತಾ ಇದ್ದೀನಿ. ನನ್ನಿಂದ ಅವ್ರಿಗೆ ನೋವಾಗ್ಲಿ, ಸಮಸ್ಯೆಯಾಗ್ಲಿ ಬೇಡ" ಮನದಲ್ಲಿದ್ದುದ್ದನ್ನ ಮುಂದಿಟ್ಟ ತಂಗಿಯನ್ನ ಅಭಿಮಾನ ದಿಂದ ನೋಡಿದ.

"ಬಡ್ಡಿ ಮಗ ಮೂರ್ತಿ ತುಂಬ ಲಕ್ಕಿ ಕಣೇ. ಎಲ್ಲರಿಗೂ ಇಂಥ ಹೆಂಡ್ತಿ ಜೀವನ ಸಂಗಾತಿಯಾಗಿ ಸಿಗ್ಬೇಕು. ಆದರೆ ಪೂಜಾ ರೂಪದಲ್ಲಿ ಬಂದ ಹಕ್ಕಿ ಅವ್ನ ಅದೃಷ್ಟನ ಹಾರ್ಸಿಕೊಂಡು ಹೋಯ್ತು. ಹೆಚ್ಚು ಕಳಕೊಂಡೋನು ಅವ್ನೇ" ಎಂದು ವಿಷಾದದಿಂದ ನುಡಿದ.

ಚಾರುಲತ ಮಾತಾಡಲಿಲ್ಲ. ಹತ್ತಿರಕ್ಕೆ ಬಂದು ಅವಳ ಕೈ ಹಿಡಿದುಕೊಂಡು "ನೀನು ಒಪ್ಪಿದ್ರೆ ನಾನೇ ಡೈವೋರ್ಸ್‌ಗೆ ಪ್ರಯತ್ನಿಸ್ತೀನಿ. ನೀನು ಜೀವ್ನ ಪೂರ್ತಿ ಒಂಟಿಯಾಗಿರೋದು ನಂಗಿಷ್ಟವಿಲ್ಲ" ಅವನ ಉದ್ದೇಶ ಕೇಳಿ ಮೆಟ್ಟಿ ಬಿದ್ದಳು. "ನಂಗೆ ಒಂಟಿತನ ಅನ್ನಿಸೋಲ್ಲ. ನೆನಪುಗಳು ಇದೆ. ಅಪ್ಪನಿಗೆ ಈಗ ನಮ್ಮ ಪ್ರೀತಿ, ಆರೈಕೆ ಅಗತ್ಯ. ಅದ್ರಿಂದ ಬೇರೇನು ಯೋಚ್ಸಬೇಡ" ಎದ್ದು ಹೋದಳು.

ಡಾ|| ನವೀನ್ ರಾತ್ರಿಯೆಲ್ಲ ಯೋಚಿಸಿದ. ದುಬೈನಲ್ಲಿದ್ದ ಇವನ ಫ್ರೆಂಡ್ ಒಂದು ಆಫರ್ ಕೊಟ್ಟಿದ್ದ "ಇಲ್ಬಂದ್ ನೀನು ಕೆಲ್ಸ ಮಾಡ್ಬಹ್ದು. ಒಳ್ಳೆ ಸಂಬಳ. ಫ್ಯೂಚರ್‌ನಲ್ಲಿ ಭರವಸೆ ಇಟ್ಕೋಬಹ್ದು" ಅವನಿಗೆ ಇಷ್ಟವೆನಿಸಲಿಲ್ಲ. ಸ್ವಂತ ಆಕಾಂಕ್ಷೆಗಳಿಗಿಂತ ಅವನಿಗೆ ತಂದೆ ಮುಖ್ಯವಾಗಿದ್ದರು.

ಆಳಕ್ಕೆ ಇಳಿದು ಚಿಂತಿಸಿದಂತೆ ನೀರದ ಬಗ್ಗೆ ಅನಾಸಕ್ತಿಯ ಜೊತೆ ಸಹಾನುಭೂತಿಯು ಕೂಡ. ಅವಳ ಚಿಂತನೆಯ ಪರಧಿ ತೀರಾ ಚಿಕ್ಕದೆನಿಸಿತು. ಇಲ್ಲಿ ಆದ ನಷ್ಟವನ್ನ ತನ್ನ ಪ್ರೊಫೆಷನ್‌ನಲ್ಲಿ ತುಂಬಿಕೊಳ್ಳಬೇಕೆಂಬ ನಿರ್ಧಾರಕ್ಕೆ ಬಂದ

ಮೇಲೆ ನಿಶ್ಚಿಂತೆಯೆನಿಸಿತು. ಮಾನಸಿಕವಾಗಿ ಅವನನ್ನು ಆವರಿಸದಿದ್ದರೂ ಮನೆಗೊಬ್ಬ ಗೃಹಿಣಿ, ತಂದೆಗೊಬ್ಬ ಸೊಸೆ - ಆ ಲಿಮಿಟ್‌ನಲ್ಲಿ ಬಿಟ್ಟರೇ ಅವಳು ಸುಖಿಯೆಂದುಕೊಂಡ.

ಯುಗಂಧರ್ ಮತ್ತು ಮೃಣಾಲಿನಿ ಅವರುಗಳ ಆಹ್ವಾನವನ್ನು ಮನ್ನಿಸಿ ಚೆನ್ನೈಗೆ ಹೋಗಿ ಬಂದ ಮೇಲೆ ಎಷ್ಟೋ ಉತ್ಸಾಹಿತರಾದರು. ಆ ಜನ ಅವರ ಕಲ್ಚರ್ ಎಲ್ಲಾ ಇಷ್ಟವಾಗಿತ್ತು. ಮಧು ಅವರಿಗೆ ಪೂರ್ತಿಯಾಗಿ ಒಪ್ಪಿಗೆ.

ಮಧು ಇಲ್ಲಿಗೆ ಬರುವ ದಿನವೇ ನಿಶ್ಚಿತಾರ್ಥವೆಂದು ನಿಶ್ಚಯವಾಯಿತು. ಮುಂಬಯಿನಿಂದ ಬಂದ ಪೂಜಾ ಸ್ವಲ್ಪ ಮಟ್ಟಿಗೆ ಚೇತರಿಸಿಕೊಂಡಿದ್ದಳು. ಅವಳಿಗೂ ಮಧು ಇಷ್ಟವಾಗಿದ್ದ. ಒಂದೆರಡು ಸಲ ಫೋನ್‌ನಲ್ಲಿ ಇಬ್ಬರು ಸಂಭಾಷಿಸಿ ಒಪ್ಪಿಗೆ ಸೂಚಿಸಿದ್ದರು. ಇದೆಲ್ಲವು ಸಂತೋಷವೇ. ಆದರೆ ಅವರುಗಳು ಈ ಮನೆಯ ಸೊಸೆಯ ವಿಷಯಕ್ಕೆ ಬಂದರೆ ಏನು ಮಾಡುವುದು?

ಯುಗಂಧರ್ ಹೆಂಡತಿಯನ್ನ ಕೇಳಿದರು "ಈಚೆಗೆ ಚಾರುಲತ ಏನಾದ್ರೂ ಫೋನ್ ಮಾಡಿದ್ಲಾ ?" ಆಕೆ ಅಡ್ಡಡ್ಡ ತಲೆಯಾಡಿಸಿದರು. "ನೀವು ನರ್ಸಿಂಗ್ ಹೋಂನಿಂದ ಡಿಸ್ಚಾರ್ಜ್ ಆದ ದಿನ ಅಲ್ಲಿ ಅವಳನ್ನ ನೋಡಿದ್ದಷ್ಟೆ. ಮತ್ತೊಂದು ಫೋನ್ ಮಾಡಿದ್ದು ಕೂಡ ಇಲ್ಲ. ಬಳೆ, ಸರ..." ಎಂದವರು ಸುಮ್ಮನಾದಾಗ ಯುಗಂಧರ್ ಹಣೆಯಲ್ಲಿ ಗೆರೆಗಳು ಮೂಡಿದವು. "ನಂಗೆ ಅರ್ಥವಾಗ್ಲಿಲ್ಲ, ಸ್ವಲ್ಪ ಬಿಡ್ಸಿ ಹೇಳು."

"ಒಂದ್ವಿಷ್ಯ ನಿಮ್ಮಿಂದ ಮುಚ್ಚಿಟ್ಟೆ. ನಿಮ್ಗೆ ಹಾರ್ಟ್ ಅಟ್ಯಾಕ್ ಆದಾಗ ನಾನು, ಪೂಜಾ ಕೂಡ ಪೇಷಂಟ್‌ಗಳಾಗಿದ್ವಿ. ಮರುದಿನ ನಮ್ಮನ್ನ ಮನೆಗೆ ಬಿಡೋಕೆ ಚಾರು ಬಂದಿದ್ಲು. ಆಗ ಸರ, ಬಳೆ ದೇವರ ಮನೆಯಲ್ಲಿ ಬಿಚ್ಚಿಟ್ಟು ಹೋಗಿದ್ಲು. ನಾವು ಅವ್ಳಿಗೆ ಮಧ್ಯೆಯಲ್ಲಿ ಕೊಟ್ಟಿದ್ದು. ಅಕಸ್ಮಾತ್ ಒಡ್ವೆಗೋಸ್ಕರ ಬರಬಹ್ದು, ಇಲ್ಲ ಫೋನ್‌ನಲ್ಲಾದ್ರೂ ವಿಚಾರ್‍ಸಬಹ್ದು ಅಂದ್ಕೊಂಡಿದ್ದೆ. ಏನ್ನು ಮಾಡ್ಲಿಲ್ಲ. ಪುನಃ ನರ್ಸಿಂಗ್‌ಹೋಂನಲ್ಲಿ ಸಿಕ್ಕಾಗ್ಲೂ ಪ್ರಸ್ತಾಪಿಸ್ಲಿಲ್ಲ. ಅವ್ಳು ಬೇಕೂಂತಲೇ ಬಿಟ್ಟೋಗಿರ್ಬಹ್ದು" ವಿವರಿಸಿದರು ಮೃಣಾಲಿನಿ.

"ಕೆಲವನ್ನ ಮುಚ್ಚಿಡೋದ್ರಿಂದ ತಪ್ಪೇನಿಲ್ಲ. ಆ ಬಗ್ಗೆ ಏನ್ಮಾಡ್ಬೇಕೂಂತ ನಿನ್ನ ತೀರ್ಮಾನ ? ಹೆಣ್ಣು ಗಂಡಿಗಿಂತ ಸ್ವಲ್ಪ ಬೇರೆಯಾಗಿ ಯೋಚಿಸ್ತಾಳೆ. ಇದ್ನ ಮೂರ್ತಿಗೆ ಹೇಳಿದ್ಯಾ ?" ಕೇಳಿದರು ಯುಗಂಧರ್. ಆಕೆಯ ಅಭಿಪ್ರಾಯ

ಸ್ಪಷ್ಟವಾಗಿ ತಿಳಿಯುವುದು ಅವರ ಅಭಿಮತವಾಗಿತ್ತು.

ಆಕೆ ಸಪ್ಪಗಾದರು. ಬರೀ ಚಡಪಡಿಸಿದರಷ್ಟೆ. ಏನು ಹೇಳಬೇಕೆಂದು ತಿಳಿಯಲಿಲ್ಲ.

"ಹೇಳ್ಲಿಲ್ಲಾಂತ ಇಟ್ಕೋ ! ಅದ್ರಿಂದ ಕೂಡ ಏನು ಅನಾಹುತವಿಲ್ಲ. ಆ ಹುಡ್ಗಿಗೆ ಕೊಟ್ಟ ಚಿನ್ನ ನಮ್ಗೇನು ಬೇಡ. ವೈಮನಸ್ಸು ಬಂತೂಂತ ಚಾರುಲತಗೆ ಹಾಕಿದ ಚಿನ್ನನ ಹಿಂದಕ್ಕೆ ಪಡ್ಕೋಂಥ ಕೆಟ್ಟ ಸಂಸತಿಯ ಜನನಾ, ನಾವು ? ಫೋನ್ ಮಾಡಿ ಕರ್ಸಿ ಅವ್ಳ ಒಡ್ವೆಗಳ್ನ ಅವ್ಳಿಗೆ ಕೊಡ್ಬಿಡು" ಎಂದರು ಯುಗಂಧರ್. ಆಕೆಯ ಮುಖದಲ್ಲಿ ಕೂಡ ಗೆಲುವು ಮೂಡಿತು.

"ಇದ್ನ ಒಂದು ನೆಪ ಮಾಡಿಕೊಳ್ಳೋಣ. ಮೂರ್ತಿನ ಕೇಳ್ಬೇಕಾ ?" ಹೆಂಡತಿಯ ಪ್ರಶ್ನೆಗೆ ಯೋಚಿಸುವಂತಾದರು. ಅವರಿಬ್ಬರ ಮಧ್ಯೆ ಯಾವ ವಿರಸವು ಇಲ್ಲ. ವೈಯಕ್ತಿಕವಾಗಿ "ಏನು ಬೇಡ, ಹೇಗೂ ಶನಿವಾರ ಬರ್ತೀನಿ ಅಂದಿದ್ದಾನಲ್ಲ ತಿಳಿಸಿದರಾಯ್ತು" ಯುಗಂಧರ್ ವಿವೇಕಿಯೇ. ಪೂಜಾಳ ಸ್ಥಿತಿ ಅವರನ್ನ ಪೂರ್ತಿಯಾಗಿ ಅವಿವೇಕಿಯನ್ನಾಗಿಸಿತ್ತು.

ಅಂತು ಸೊಸೆಗೆ ಫೋನ್ ಮಾಡುವ ನಿರ್ಧಾರಕ್ಕೆ ಬಂದರು. ಮನೆಗೆ ಬೇಡವೆಂದು 'ನಿವೇದಿತಾ ನ್ಯೂ ವುಮೆನ್ಸ್ ವೇರ್' ಕಂಪನಿಯ ಫೋನ್ ನಂಬರ್‌ನ ತಾವೇ ಹುಡುಕಿ ಹೆಂಡತಿಗೆ ಕೊಟ್ಟರು.

"ಯಾವ ಸೆಕ್ಷನ್‌ನಲ್ಲಂತೆ ಕೆಲ್ಸ ಮಾಡೋದು ?" ಕೇಳಿದರು ಸುಸ್ತಾಗಿ "ಕಮಲ ಕೂಡ ಅಲ್ಲೇ ಕೆಲ್ಸಕ್ಕೆ ಹೋಗ್ತಾ ಇದ್ದಾಳಲ್ಲ. ಅಕೌಂಟ್ ಸೆಕ್ಷನ್ ನಲ್ಲಿ ಅಂತ ಹೇಳ್ದಂಗೆ ಜ್ಞಾಪ್ಕ. ಆದ್ರೂ ಸ್ವಾಭಿಮಾನದ ಹುಡ್ಗಿ" ಮೆಚ್ಚಿಗೆ ಯಾಡಿದರು.

"ಅಂತು ನೀನು ಸೊಸೆನ ಪೂರ್ತಿಯಾಗಿ ಕ್ಷಮ್ಸಿ ಬಿಟ್ಟಂಗೆ ಕಾಣುತ್ತೆ" ಎಂದು ನಕ್ಕರು ಯುಗಂಧರ್ "ಇನ್ನೊಂದ್ಸಲ ಹಾರ್ಟ್ ಅಟ್ಯಾಕ್ ಆದರೆ ಪ್ರಾಣಕ್ಕೆ ಆಪತ್ತು. ಬಿ ಕೇರ್ ಫುಲ್" ಡಾಕ್ಟರರ ಎಚ್ಚರಿಕೆ ಮತ್ತಷ್ಟು ವಿವೇಕಿಯನ್ನಾಗಿ ಮಾಡಿತ್ತು.

"ಪೂಜಾ ಸ್ಥಿತಿ ಹಾಗಾಯಿತಲ್ಲ ಅನ್ನೋ ನೋವು" ಎಂದರು ವಿಷಾದದಿಂದ ಆಕೆ. ಯುಗಂಧರ್ ನಕ್ಕರು "ಅವ್ನೇನು ಅವರಿಬ್ರ ಪ್ರೇಮಕ್ಕೆ ಪುರೋಹಿತ್ಯ ವಹಿಸಿದ್ದಾ ? ಎಲ್ಲಾ ಮೂರ್ಖರಾಗಿ ನ್ಯಾಯ, ಅನ್ಯಾಯದ ಬಗ್ಗೆ ಯೋಚ್ಸಿಲ್ಲ. ಎಲ್ಲಕ್ಕು ಅವ್ನ ತಲೆಯ ಮೇಲೆ ಗೂಬೆ ಕೂರಿಸ್ಬಿಟ್ವಿ" ಪಶ್ಚಾತ್ತಾಪವಿತ್ತು ಅವರ

ದನಿಯಲ್ಲಿ.

ಮೃಣಾಲಿನಿ ಅವಾಕ್ಕಾದರು. ಇವರ ಹಟವೇನಾಯಿತು ? ಹೆಚ್ಚು ಹಾರಾಡಿದವರು ಇವರೇ ಎನ್ನುವ ಆಪಾದನೆ ಗಂಡನ ಮೇಲೆ ! ಆದರೆ ಈಗ ಅವರು ಇರೋ ಸ್ಥಿತಿಯಲ್ಲಿ ಅದನ್ನ ಮುಖದ ಮೇಲೆ ಹೇಳುವುದು ಸರಿಯೆನಿಸಲಿಲ್ಲ.

"ಈ ರಾಜಿಯ ಹಿಂದೆ ಸ್ವಾರ್ಥವಿದೆಯೆಂದುಕೊಂಡರೇ ಚಾರುಲತ?" ಮೃಣಾಲಿನಿಯ ಮಾತಿಗೆ ತಲೆದೂಗಿದರು "ಕೊಂಡರೇ, ಏನು ? ಹಾಗೇ ಅಂದುಕೊಳ್ಳೋದು. ಮೆದುವಿನ ಮನುಷ್ಯ ವಾಸುದೇವಯ್ಯ. ಇಲ್ಲಿ ನೀರದ ಮಾತ್ರ ಬುದ್ಧಿವಂತಳು. ಡಾ॥ ನವೀನ್ ಪ್ರಾಮಾಣಿಕ. ಬದ್ಧಿನ ಆದರ್ಶಕ್ಕೆ ಬಲಿಯಾದ. ಈಗ ಯೋಚ್ಸಿದರೇ ಹಾಗೇ ಅನ್ನಿಸುತ್ತೆ. ಇದು ಬೆಳಕಿನಲ್ಲಿ ನೋಡೋ ವಿಧಾನ. ಆಗ ನೋಡಿದ್ದು ಕತ್ತಲಲ್ಲಿಯೇನೋ ?" ತೀರಾ ವಿಷಾದದಿಂದ ನುಡಿದರು.

ಲಂಚ್ ಟೈಂನಲ್ಲಿ ಮೃಣಾಲಿನಿ ತಾವೇ ಬಟನ್ನೊತ್ತಿ ಫೋನಾಯಿಸಿದರು ನಿವೇದಿತಾ ವುಮನ್ಸ್ ವೇರ್‌ಗೆ "ಲೈನ್‌ನಲ್ಲಿರಿ ಕನೆಕ್ಟ್ ಮಾಡ್ತೀವಿ" ಎಂದರು ಆ ಕಡೆ. ಆವೇಗದಿಂದ ಅವರ ಹೃದಯದ ಬಡಿತ ಏರಿತ್ತು. ಯಾಕೆ ? ಟವಲಿನಿಂದೊರೆಸಿಕೊಂಡರು ಫೋನಿಡಿದಂತೆಯೇ.

"ಹಲೋ...." ಎಂದಿದ್ದು ಚಾರುಲತ.

ಅವಳಿಗೆ ಆಗಾಗ ತಂದೆ ಅಥವಾ ಅಣ್ಣ ಫೋನ್ ಮಾಡುವುದಿತ್ತು. ಬೇಗ ಸ್ವರ ಕೇಳದ್ದು ಗಾಬರಿ "ಅಪ್ಪ, ಕೆಮ್ಮು ಹೇಗಿದೆ ? ಸಂಜೆ ನವೀನಣ್ಣ ಬೇಗ್ಬಾರ್ತಾನೆ" ಗಡಿಬಿಡಿಯಿಂದ ಹೇಳಿದಾಗ ಮೃಣಾಲಿನಿಯ ದನಿಗೆ ಜೀವ ಬಂತು "ನಾನು...." ಎಂದರು.

"ಹೇಗಿದ್ದೀರಾ ಅತ್ತೆ ? ಮಾವನವ್ರು ಹುಷಾರಾಗಿದ್ದಾರೇ, ತಾನೇ ?" ಆತ್ಮೀಯವಾಗಿ ಕೇಳಿಸಿತು ಚಾರುಲತ ದನಿ. ಮೃಣಾಲಿನಿಯ ಕಣ್ಣಲ್ಲಿ ನೀರಾಡಿತು. "ಚೆನ್ನಾಗಿದ್ದೀನಿ. ಅವ್ರು ಕೂಡ ಚೆನ್ನಾಗಿದ್ದಾರೆ. ಒಂದ್ಸಲ ನೀನು ಬರೋಕೆ ಸಾಧ್ಯನಾ ? ನಿನ್ನ ಸರ, ಬಳೆ ಇಲ್ಲೇ ಬಿಟ್ಹೋಗಿದ್ದೀಯಾ" ಅಂದರು.

"ಮರತೇನು ಬಿಟ್ಟು ಬಂದಿಲ್ಲ" ಹೇಳಿದಳು ನವಿರಾಗಿ.

"ಒಂದ್ಸಲ ಬಂದ್ಹೋಗು. ಯಾವಾಗ್ಬರ್ತೀಯಾ ?"

"ನಾಳೆ ಬೆಳಿಗ್ಗೆ ಆಫೀಸ್‌ಗೆ ಹೋಗೋವಾಗ ಬರ್ತೀನಿ ? ಇಡ್ಲಾ...ಫೋನ್ ?" ಇಟ್ಟೇ ಬಿಟ್ಟಳು. ಒಂದು ಕ್ಷಣ ಕೋಪಗೊಂಡರು "ಚಾರುಗೆ ತುಂಬ ಅಹಂಕಾರ ಕಂಡ್ರಿ. ಕಾಲ ಈಗ ಹಿಂದಿನಂಗಿಲ್ಲ. ತುಂಬ ಬದಲಾಗಿದೆ."

ಯುಗಂಧರ್ ಮುಗುಳ್ನಕ್ಕರು. ದೈಹಿಕವಾಗಿ ಸೊಸೆಗೆ ಯಾವ ಹಿಂಸೆ ನೀಡದಿದ್ದರೂ ಮಾನಸಿಕವಾಗಿ ತುಂಬ ಕಂಗೆಡಿಸಿದ್ದೇವೆಂದು ಅವರಿಗೆ ಗೊತ್ತು. ಆರಾಮಾಗಿ ಸಂಸಾರ ಮಾಡಿಕೊಂಡಿದ್ದವರು ಬೇರ್ಪಟ್ಟರು. ಇದೇನು ಕಡಿಮೆ ಶಿಕ್ಷೆಯೆ ?

"ಬದಲಾಗ್ಬೇಕು. ನಿನ್ನಷ್ಟು ನಿನ್ನ ಸೊಸೆ ಮೊಡರ್ನ್ ಅಲ್ಲ. ಚಾರುಗಿಂತ ಪೂಜಾ ಒಂದೆರಡು ತಿಂಗ್ಳು ಚಿಕ್ಕವಳು ಇರ್ಬಹುದ್ದು. ಈಗ್ಲೂ ಅದೇನು ಹಟ!" ಬಾಯಿ ಮೇಲೆ ಕೈಯಿಟ್ಟುಕೊಂಡರು "ಅವ್ಳ ಪಟ್ಟಿಗೆ ಇಡೀ ಮನೆಯೇ ತಲ್ಲಣಿಸಿ ಹೋಯ್ತು. ಇತ್ತ ಪುಲಿ. ಅತ್ತ ದರಿಯೆನ್ನುವ ಸ್ಥಿತಿ ಅವಳದು. ಆದ್ರೂ ಎಷ್ಟು ಶಾಂತವಾಗಿ ನಡೆದುಕೊಂಡಳು. ಆಗ ಇದೆಲ್ಲ ನಾವು ಗಮನಿಸೋ ಸ್ಥಿತಿಯಲ್ಲಿಲ್ಲ. ಮೂರ್ತಿಗೆ ತಂಗಿ ಮುಖ್ಯವಾಗಿದ್ಲು. ಡಾ|| ನವೀನ್‌ಗೆ ಪ್ರೇಮಿಸಿದವ್ಳು ಹೆಚ್ಚೆನಿಸಿದಳು. ಮಧ್ಯದಲ್ಲಿ ನೊಂದವ್ಳು ಚಾರುನೆ. ನೆನಸ್ಕೊಂಡರೇ ತುಂಬ ನೋವಾಗುತ್ತೆ" ಎಂದು ದೀರ್ಘವಾಗಿ ಉಸಿರೆಳೆದು ದಬ್ಬಿದರು.

ಹುಲಿಯಂಗೆ ಹಾರಾಡುತ್ತಿದ್ದ ಗಂಡ ಇಷ್ಟು ಮೆತ್ತಗಾಗಿದ್ದು ಪವಾಡವೆನಿಸಿದರೂ, ತಾವು ಮಾಡಿದ ವಾಂತಿಯನ್ನ ಒಂದಿಷ್ಟು ಅಸಹ್ಯಿಸಿಕೊಳ್ಳದೆ ಬೊಗಸೆಯಲ್ಲಿ ತುಂಬಿಕೊಂಡ ಸೊಸೆ ದೇವತೆಯಂತೆ ಕಂಡಿದ್ದಳು.

ಹೆಂಡತಿ ಹೊರಗೆ ಹೋದ ಮೇಲೆ ಮಲಗಿ ತಾರಸಿಯನ್ನು ನೋಡ ತೊಡಗಿದರು. "ನಿಮ್ಮ ಸೊಸೆ ಕರ್ಕಂಡ್ ಬಂದು ನಿಮ್ಗೆ ಚಿಕಿತ್ಸೆ ಒದಗಿಸದಿದ್ದರೇ, ನಿಮ್ಮನ್ನ ಮರ್ರು ಬಿಡಬಹುದಿತ್ತು" ಇವರು ಚೇತರಿಸಿಕೊಂಡ ನಂತರ ಡಾಕ್ಟರ್ ಹೇಳಿದ ಮಾತುಗಳು.

ಇಡೀ ರಾತ್ರಿ ತಮ್ಮ ಬಳಿ ಕೂಡುತ್ತಿದ್ದ ಚಾರುಲತ ಮನಸ್ಸಿಗೆ ಪ್ರಿಯವೆನಿಸಿದ್ದಳು. ಈಗ ಚೆಂಡು ಅವಳ ಮೈದಾನದಲ್ಲಿತ್ತು. ಆಟವು ಅವಳದೇ. ಸ್ವಾಭಿಮಾನಿಯಾದ

ಅವಳು ಯಾವ ನಿರ್ಧಾರ ತೆಗೆದು ಕೊಳ್ಳುತ್ತಾಳೋ !

ಮರುದಿನ ಅವಳ ನಡವಳಿಕೆಯನ್ನು ನೋಡಿ ನಿರ್ಧರಿಸಬಹುದೆಂದು ಮನಸ್ಸಿನಿಂದ ಆ ಸಂಗತಿಯನ್ನು ದಬ್ಬಿದಷ್ಟು ಬಂದು ಕೂಡುತ್ತಿತ್ತು ದೊಡ್ಡ ಬಂಡೆಯಂತೆ.

ಹೇಳಿದಂತೆ ಸ್ವಲ್ಪ ಬೇಗ ಮನೆ ಬಿಟ್ಟು ಆಫೀಸ್‌ಗೆ ಹೊರಟಾಗ "ಚಾರು, ನಂಗೂ ಆ ಕಡೆ ಹೋಗೋದಿದೆ. ಡ್ರಾಪ್ ಮಾಡ್ತೀನಿ" ಎಂದು ಕ್ರಾಪ್‌ನಲ್ಲಿ ಕೂಮ್ ಆಡಿಸುತ್ತಿದ್ದ ಡಾ॥ ನವೀನ್ ಹೇಳಿದಾಗ ಅವಳು ಸಮ್ಮತಿಸಲಿಲ್ಲ.

"ಬೇಡ, ಇವತ್ತು ಬೇಗ ಹೊರಟಿದ್ದೀನಿ. ದಾರಿಯಲ್ಲಿ ಒಬ್ರನ್ನ ನೋಡ್ಬೇಕಿದೆ. ಅದ್ರಿಂದ ನೀನು ಹೋಗ್ಬಿಡು."

ತಂಗಿಯ ಮಾತಿಗೆ ಕಣ್ಣರಳಿಸಿದ. ಅವಳು ತಾನಾಗಿ ಎಲ್ಲಿಗೂ ಹೋಗುತ್ತಿರಲಿಲ್ಲ. ಮನೆ ಬದಲಾಯಿಸಿದ ಮೇಲೆ ಸ್ವಲ್ಪ ನೆಮ್ಮದಿಯಾಗಿದ್ದಂಗೆ ಕಂಡಿದ್ದು ಬಹಶಃ ಅವನ ಭ್ರಮೆ ಇರಬಹುದೇನೋ ?

"ಯಾರಮ್ಮ ಅಂಥ ಪುಣ್ಯಾತ್ಮರು ?" ಎಂದು ಬಂದು ಅವಳ ಮುಂದೆ ನಿಂತ "ಅತ್ತೆ ಫೋನ್ ಮಾಡಿದ್ರು ಒಮ್ಮೆ ಬಂದ್ಹೋಗೂಂತ" ತಂಗಿಯ ಮಾತು ಕೇಳಿದ ಕೂಡಲೇ ಕೋಪದಿಂದ ಹಲ್ಲುಡಿ ಕಚ್ಚಿದ. "ಈಗೇನಂತೆ? ಆಗ ಅವಮಾನ ಮಾಡಿದ್ದು ಸಾಲಲಿಲ್ವ ? ನೀನು ಹೋಗ್ಲೇಬೇಡ" ಎಂದು ರೇಗಾಡಿದರು ತಕ್ಷಣ ತನ್ನನ್ನ ತಿದ್ದಿಕೊಂಡ "ಸಾರಿ ಅಮ್ಮ ಸುಮ್ನೆ ಲಾಭ ನಷ್ಟ, ಮಾನ - ಅವಮಾನಗಳ್ನ ಕೆಲವೊಮ್ಮೆ ಪಕ್ಕಕ್ಕೆ ಸರಿಸ್ಬೇಕಾಗುತ್ತೆ. ಹೋಗ್ಬಾ, ಸುಮ್ನೆ ಅವರೊಂದಿಗೆ ಬಿದ್ದು ಯಾಕೆ ? ಸಮಾಧಾನಕ್ಕೆ ಬಂದ."

ಇವಳು ಹೊರಟಾಗ ನೀರದ ಡಬ್ಬಿ ಹಿಡಿದು ಬಂದಳು. ಸ್ವಲ್ಪ ಅವಳೊಂದಿಗೆ ಮಾತು ಕಮ್ಮಿ ಮಾಡಿದ್ದ ಡಾ॥ ನವೀನ್.

"ಬೇಡ ಅತ್ತಿಗೆ ! ಅಲ್ಲೇ ಏನಾದ್ರೂ ತಿಂದ್ಕೋತೀನಿ" ಎಂದಳು. ಉಪ್ಪಿಟ್ಟು ರುಚಿಸಿರಲಿಲ್ಲ. ತಂದೆಗಾಗಿ ತಾನೇ ಅಡಿಗೆ ಮಾಡಿದ್ದಳು "ಅಪ್ಪ ಏನು ತಿನ್ಲಿಲ್ಲ. ಬಂದ ಕೂಡ್ಲೇ ಬಲವಂತ ಮಾಡಿ ಬಡ್ಸಿ" ಒಂದು ಮಾತು ಹೇಳಲು ಮರೆಯಲಿಲ್ಲ.

ಆ ವೇಳೆಗೆ ಸ್ಕೂಟರ್‌ನ ಹೊರಗೆ ನಿಲ್ಲಿಸಿದ ಡಾ|| ನವೀನ್ "ಬೇಗ್ಬಾ, ನಂಗೂ ಬೇಗ ಹೋಗೋದಿದೆ" ಅವಸರಿಸಿದ. ನೀರದಳ ಜೊತೆ ಮಾತುಗಳೇ ಇಲ್ಲವೆನಿಸಿ ಬಿಟ್ಟಿತ್ತು ಅವನಿಗೆ.

ಸ್ಕೂಟರ್ ಯುಗಂಧರ್ ಮನೆಯ ತಿರುವಿನಲ್ಲಿ ನಿಂತಿತ್ತು "ನಾನ್ಬರ್ತೀನಿ" ಸ್ಕೂಟರ್ ಸ್ಟಾರ್ಟ್ ಆಗಿ ಮರುಕ್ಷಣವೇ ಕಾಣೆಯಾಗಿ ಹೋಯಿತು.

ಗೇಟು ತೆರೆದುಕೊಂಡು ಹೋಗಿ ಕಾಲಿಂಗ್ ಬೆಲ್ ಒತ್ತಿದಳು. ಇದು ಅವಳಧೇ ಮನೆ. ಇಲ್ಲಿನವರು ಅವಳವರೇ. ಆದರೂ ಇಂದು ಈ ಬಾಗಿಲ ಮುಂದೆ ಒಬ್ಬ ಪರಿಚಿತಳಂತೆ ನಿಂತಿದ್ದಳು.

ಬಾಗಿಲು ತೆರೆದ ಕೆಲಸದವಳು ಅಚ್ಚರಿ, ಸಂತೋಷದಿಂದ ಕಣ್ಣರಳಿಸಿ "ಅಮ್ಮ ಚಿಕ್ಕಮ್ಮ ಅವ್ರು ಬಂದಿದ್ದಾರೆ" ದೊಡ್ಡ ಕೂಗು ಹಾಕಿಕೊಂಡು ಒಳಗೆ ಓಡಿದಾಗ, ವರಾಂಡದಲ್ಲಿ ಚಪ್ಪಲಿ ಬಿಟ್ಟು ಹಾಲ್‌ಗೆ ಹೋದಳು.

ಕೈಯೊರೆಸುತ್ತ ಬಂದ ಮೃಣಾಲಿನಿ "ಓ ಚಾರುನ.... ಕೂತ್ಕೋ" ಎಂದು ರೂಮಿಗೆ ಹೋದವರು "ಚಾರು ಬಂದಿದ್ದಾಳೆ. ನೀವೇ ಹೊರ್ಗಡೆ ಬಂದು ಮಾತಾಡಿಸ್ತೀರಾ ಅಥ್ವಾ ನಾನೇ ಇಲ್ಲಿಗೆ ಕಳಿಸ್ಲಾ ?" ಉದ್ವಿಗ್ನರಾಗಿ ವಿಚಾರಿಸಿದರು.

ಯುಗಂಧರ್‌ಗೆ ತಕ್ಷಣ ಏನು ಹೇಳಬೇಕೋ ತಿಳಿಯಲಿಲ್ಲ. ಕನ್ನಡಕ ಹಾಕಿಕೊಂಡು "ಕೆಲ್ಸದವ್ಳು ಬಂದು ನಿಲ್ಲುತ್ತಾಳೆ. ಇಲ್ಲಿಗೆ ನೀನೇ ಕರ್ಕೊಂಡ್ಬಾ. ನಂಗೆ ಏನು ಮಾತಾಡ್ಬೇಕೋ ಗೊತ್ತಾಗೋಲ್ಲ" ಎಂದರು ಸ್ವಲ್ಪ ಕಸಿವಿಸಿ ಅನುಭವಿಸುತ್ತ.

ಅದನ್ನ ಚಾರುಲತೆಗೆ ಮುಟ್ಟಿಸಿ ಹೊರಗೆ ಹೋದರು ಲಗುಬಗೆಯಿಂದ. ಕುಕ್ಕರ್‌ನಲ್ಲಿಯೇ ಇದ್ದ ಇಡ್ಲಿಗಳನ್ನು ತಟ್ಟೆಗೆ ಹಾಕಿಕೊಂಡು, ಅದರೊಂದಿಗೆ ಎರಡು ಉದ್ದಿನವಡೆ ಸಾಂಬಾರ್, ಚಟ್ನಿ ತಂದು ಅವಳ ಮುಂದಿನ ಟೀಪಾಯಿ ಮೇಲಿಟ್ಟರು.

"ತಗೋ...." ಅಂದರು ಅವಳ ಎದುರು ಗಂಡನ ಪಕ್ಕ ಕೂಡುತ್ತ ತಟ್ಟೆ ಮತ್ತು ಅವರ ಮುಖವನ್ನ ಬದಲಿಸಿ ಬದಲಿಸಿ ನೋಡುತ್ತ "ಎಲ್ಲಾ ಮುಗ್ಸಿಕೊಂಡ್ಬಂದೆ. ಮತ್ತೆ ತಿನ್ನೋಕ್ಕಾಗೋಲ್ಲ. ಒಂದೇ ಒಂದು ತಗೋತೀನಿ" ಎಂದು ತಟ್ಟೆಯನ್ನ ಅಡಿಗೆ ಮನೆಗೆ ಒಯ್ದು ಮಿಕ್ಕವನ್ನು ತೆಗೆದಿಟ್ಟು ಒಂದು ವಡೆ, ಒಂದು ಇಡ್ಲಿಯನ್ನ ಹಾಕಿಕೊಂಡು ಬಂದು ಅವರ ಮುಂದೆ ಕೂತಳು.

"ಹೇಗಿದ್ದೀರಾ ?" ಯುಗಂಧರ್‌ನ ವಿಚಾರಿಸಿದಳು.

"ಪರ್ವಾಗಿಲ್ಲ, ಹೃದಯ ಬಡಿತ ನಿಲ್ಲೋವರ್ಗೂ" ಅಂದರು.

"ಎಲ್ಲರ ಸ್ಥಿತಿಯು ಅದೇ ! ಹಾಗೆಂದು ಅತ್ತೆ ಮನಸ್ಸು ಯಾಕೆ ನೋಯಿಸ್ತೀರಾ! ಈಗ ತುಂಬ ಆರೋಗ್ಯವಾಗಿ ಕಾಣ್ತೀರಾ" ಅವಳೇ ಒಂದು ಮಾತು ಹೇಳಿ, ತಿಂದು ಮುಗಿಸಿದ ತಟ್ಟೆಯನ್ನು ತೊಳೆಯಲು ಹಾಕಿ ಬಂದು ಕೈಯೊರೆಸುತ್ತ "ಕುಡ್ಯೋಕೆ ಏನು ಬೇಡ" ಎಂದಳು.

ಕರೆಸಿದ್ದಕ್ಕೆ ಕಾರಣ ಹೇಳಬೇಕಿತ್ತು. ದೇವರ ಮನೆಯಲ್ಲಿದ್ದ ಸರ, ಬಳೆಗಳನ್ನ ತಂದು ಅವಳ ಮುಂದಿನ ಟೀಪಾಯಿ ಮೇಲಿಟ್ಟು "ಇದ್ನ ಇಲ್ಲೇ ಬಿಟ್ಹೋಗಿದ್ದೆ" ಹೇಳಿದರು.

ತನ್ನ ಹ್ಯಾಂಡ್ ಬ್ಯಾಗ್‌ನಲ್ಲಿದ್ದ ಜ್ಯೂಯಲ್ ಬಾಕ್ಸ್‌ನ ಹೊರ ತೆಗೆದು ಮುಚ್ಚಳ ತೆರೆದು ಇವುಗಳನ್ನ ಅದರಲ್ಲಿಯೇ ಹಾಕಿ ಅಲ್ಲೇ ಇಟ್ಟಳು. "ದಯವಿಟ್ಟು ತಪ್ಪು ತಿಳ್ಕೋಬೇಡಿ. ನಾನು ಪೂಜಾಗೆ ಗಿಫ್ಟ್ ಆಗಿ ಕೊಟ್ಟರೇ ನೀವು ಅಹಂಕಾರ ಅಂತ ತಿಳ್ಕೋಬಹ್ದು. ಅವು ನೀವು ಹಾಕಿದ ಒಡ್ವೆಗಳು. ಹೇಗೆ ತಿಳಿದುಕೊಂಡ್ರು....ಅವು ಇಲ್ಲೀಯೇ ಉಳಿಯಬೇಕು. ಬರ್ತೀನಿ" ಎಂದವಳು ಪೂಜಾಳ ರೂಮಿಗೆ ನುಗ್ಗಿ ಮ್ಯಾಗ್‌ಝೀನ್ ತಿರುವುತ್ತಿದ್ದವಳ ಕೈ ಹಿಡಿದುಕೊಂಡು "ಕಂಗ್ರಾಜುಲೇಷನ್. ನಿನ್ನ ಬಗ್ಗೆ ನಂಗೆ ಯಾವ್ದೇ ದುರುದ್ದೇಶವಿರ್ಲಿಲ್ಲ. ಆಫೀಸ್‌ಗೆ ಹೊತ್ತಾಗುತ್ತೆ ಬರ್ತೀನಿ" ಅಂದವಳು ದೇವರ ಮನೆಗೆ ಹೋಗಿ ಕುಂಕುಮ ಹಚ್ಚಿಕೊಂಡು ಇಲ್ಲಿಗೆ ಬಂದ ಕೆಲಸ ಮುಗಿಯಿತೆಂದುಕೊಂಡು ತನ್ನ ಪಾಡಿಗೆ ತಾನು ಹೋದಳು.

ಕೂತವರು ಅಲ್ಲಲ್ಲಿಯೇ ಗೊಂಬೆಗಳಾಗಿದ್ದರು. ಅವರಲ್ಲಿ ಚಲನೆ ಮೂಡಲು ಸಾಕಷ್ಟು ಸಮಯವೇ ಬೇಕಿತ್ತು. ಯುಗಂಧರ್ ತಾವು ವಿದ್ಯಾರ್ಥಿ ಜೀವನದಲ್ಲಿದ್ದಾಗ ನೋಡಿದ ಹಳೆಯ ಹಿಂದಿ, ತೆಲುಗು, ಕನ್ನಡ ಚಿತ್ರಗಳನ್ನು ಜ್ಞಾಪಿಸಿಕೊಂಡರು. ಒಡವೆಗಳಿಗಾಗಿ ಆಸೆ ಪಡುವ ಹೆಂಡತಿ, ಸೊಸೆಯರು, ಅತ್ತೆಯ ಮನೆಯಿಂದ ಹೊರ ದೂಡಿದಾಗ ಬಾಗಿಲಲ್ಲೇ ಮುದುರಿ ಅವರ ಪಾದದಡಿಯಲ್ಲಿ ಹೊರಳಾಡುವ ಯುವತಿಯರು ಪತಿಯೇ ಪರದೈವವೆಂದು ಭಾವಿಸಿ ಎಲ್ಲಾ ಕಷ್ಟ ಕೋಟಲೆಗಳನ್ನ ಸಹಿಸಿ, ಕ್ಷಮಿಸಿ ತೆಪ್ಪಗೆ ಕಣ್ಣೀರು ಸುರಿಸುತ್ತಿದ್ದ ಹೆಣ್ಣುಗಳ ದುರಂತ ಚಿತ್ರಣ.

ತೀರಾ ಗಯ್ಯಾಳಿ, ತೀರಾ ದುರ್ಬಲೆಯ ಪಾತ್ರಕ್ಕಿಂತ ಹೆಣ್ಣು ಹೀಗಿದ್ದರೇನೇ ಚೆನ್ನೆನಿಸಿತು. 'ಶಭಾಷ್' ಎಂದುಕೊಂಡರು. ಮಗನ ಪಾಲಿಗೆ ಬಂದ ಚಾರುಲತ ಸೌಭಾಗ್ಯವೆಂದುಕೊಂಡರು.

"ನಾವು ಪುಣ್ಯ ಮಾಡಿದ್ವಿ" ಅಂದರು ತನ್ಮಯತೆಯಿಂದ.

"ಹೌದು, ಈಗ ಗೊತ್ತಾಗುತ್ತೆ. ಚಾರುಯಿಂದ ನಮ್ಮ ಕುಟುಂಬಕ್ಕೆ ಯಾವ್ದೇ ಅಪಾಯವಿಲ್ಲ. ಚೆನ್ನ ಸಂಪ್ರದಾಯಸ್ಥ ಜನ, ನಿಶ್ಚಿತ್ತಾರ್ಥದ ದಿನ ಸೊಸೆ ಇಲ್ಲದಿದ್ದರೇ....ಗೋವಿಂದ. ತಿರುಪತಿ ಶ್ರೀನಿವಾಸ ನಮ್ಮನ್ನ ಕಾಪಾಡ್ಬೇಕು" ಆತಂಕ ವ್ಯಕ್ತಪಡಿಸಿದರು ಮೃಣಾಲಿನಿ.

"ಹಾಗೇನಾಗೋಲ್ಲ ! ಸುಮ್ನಿರು" ಧೈರ್ಯ ನೀಡಿದರು.

ಹೆಂಡತಿಗೇನೋ ಆರಾಮಾಗಿ ಧೈರ್ಯದ ಮಾತಾಡಿದರು. ಆದರೆ ಅವರ ಮನದಲ್ಲಿ ದಿಗಿಲಿತ್ತು.

"ನಂಗಂತು ಧೈರ್ಯವಿಲ್ಲ. ಅಪ್ಪ, ಮಗ, ಮಗ್ಳಿಗೆ ಸಾಕಷ್ಟು ಅವಮಾನ ಮಾಡಿದ್ದೀವಿ. ಈಗ ಅವ್ರಿಗೆ ಸಮಯ. ಅವರೇನಾದ್ರೂ ಪಟ್ಟು ಹಿಡ್ದು ಕೂತರೇ ಗತಿಯೇನು ?"

ಹೆಂಡತಿಯ ಮಾತಿನಲ್ಲಿ ಸತ್ಯವಿತ್ತು. ಆದ್ದರಿಂದ ಮೌನವಹಿಸಿದರು.

ನಿಶ್ಚಿತಾರ್ಥಕ್ಕೆ ಎರಡು ದಿನ ಇದೇ ಅನ್ನೋವಾಗಲೇ ಬಂದಿಳಿದ ಮೂರ್ತಿ. ಅವನಿಗಂತು ಸಂಭ್ರಮ, ಸಡಗರ. ಈಗ ಮತ್ತಷ್ಟು ಪೂಜಾ ಚೇತರಿಸಿಕೊಂಡಿದ್ದು ಸಂತಸದ ವಿಷಯವಾಗಿತ್ತು.

ಮಧ್ಯಾಹ್ನದ ಊಟ ಮುಗಿಸಿ ಕೈ ತೊಳೆದು ಬಂದು ಮೂರ್ತಿ ತಂಗಿಯ ಕೈಯಲ್ಲಿನ ಪೇಪರ್ ಕಿತ್ಕೊಂಡು "ಒಂದಿಷ್ಟು ಹೋಗಿ ಮಲ್ಗು. ಸಂಜೆ ಒಂದಿಷ್ಟು ಷಾಪಿಂಗ್ ಇದೆ. ನಿಂಗೆ ಏನೇನು ಬೇಕೋ, ಎಲ್ಲಾ ಲಿಸ್ಟ್ ಮಾಡಿಡು. ಅಪ್ಪ, ಮಧುಗೆ ಉಂಗುರ ಮಾಡ್ಸಿ ಹಾಕ್ತೀನೀಂದ್ರು. ನಾನೇ ಬೇಡಾಂದೆ. ಇಬ್ರೂ ಹೋಗಿ ಸೆಲೆಕ್ಟ್ ಮಾಡ್ಕೊಂಡ್ ಬರೋಣ" ಅದೇ ಪೇಪರ್‌ನಲ್ಲಿಯೇ ತಂಗಿಯ ತಲೆಯ ಮೇಲೊಂದು ಏಟು ಹಾಕಿದ.

ಪೂಜಾ ಪೂರ್ತಿ ಸಪ್ಪಗಾಗಿ ಬಿಟ್ಟಳು. ಫೋನ್‌ನಲ್ಲಿ ಕೂಡ ಮಧು ಇವಳ

ಅತ್ತಿಗೆಯನ್ನ ವಿಚಾರಿಸಿದ್ದ. ಅಂಥದ್ದರಲ್ಲಿ ಚಾರುಲತ ಇಲ್ಲದ್ದು ದೊಡ್ಡ ವಿಷಯವಾಗಬಹುದು.

"ಅಪ್ಪ, ಚಾರುಲತ ಬರದಿದ್ದರೇ" ಅವಳು ಅನುಮಾನದ ಸ್ವರದಲ್ಲಿ ಕೇಳಿದಾಗ "ನಿನಗೇಕೆ ಅದೆಲ್ಲ ? ಇಲ್ಲದ್ದು ತಲೆಗೆ ಹಚ್ಕೋಬೇಡ" ಮೃಣಾಲಿನಿ ಮಗಳನ್ನ ಗದರಿಕೊಂಡರು. ಈಗ ಅವಳ ಮೇಲೆ ಕೋಪ ಬಂತು ಕೂಡ. 'ಇಷ್ಟಕ್ಕೆಲ್ಲ ನೀನೇ ಕಾರಣ' ಎಂದು ಹಂಗಿಸಿಬಿಡಬೇಕೆನ್ನುವುದನ್ನ ತಡೆದರು.

ಎದ್ದ ಮೂರ್ತಿ ತಾಯಿಯನ್ನ ರೂಮಿನಿಂದ ಹೊರಗೆ ಕರೆದೊಯ್ದು "ಅವ್ಳ ಮೇಲೇಕೆ ಕೋಪ ಮಾಡ್ಕೋತೀರಿ. ಅವ್ಳು ಇಷ್ಟು ಚೇತರ್ರಿ ಕೊಳ್ಳೋಕೆ ಎಷ್ಟೊಂದು ಕಷ್ಟಪಟ್ಟಿದ್ದೀವಿ" ಸಾಂತ್ವನಿಸಿದ ನಯವಾಗಿ.

"ಮತ್ತೇನು ಮಾಡೂಂತೀಯಾ ? ಎಲ್ಲಾ ರಾಮಾಯಣಕ್ಕೂ ಇವ್ಳೇ ಕಾರಣ." ಸ್ಪಷ್ಟವಾದ ಬೇಸರವಿತ್ತು ಆಕೆಯ ದನಿಯಲ್ಲಿ. ತಾಯಿಯ ಕೈ ಹಿಡಿದುಕೊಂಡು "ಒಂದು ತಪ್ಪು ನಮ್ಮಿಂದ ಆಗಿದೆ. ಈಗ್ಲೂ ನಂಗೆ ತಪ್ಪು ಅನ್ನಿಸ್ತಾ ಇಲ್ಲ. ಚಾರುಲತ ಸ್ವಲ್ಪ ಗಟ್ಟಿ ಮನಸ್ಸು ಮಾಡಿದ್ದರೇ ಡಾ।। ನವೀನ್ ನಮ್ಮಿಂದ ತಪ್ಪಿ ಹೋಗ್ತಾ ಇರ್ಲಿಲ್ಲ" ಇಟ್ಟ ಹೆಜ್ಜೆಯಿಂದ ಹಿಂದೆ ಸರಿಯಲಾರೆನು ಎನ್ನುವಂತೆ ಮಾತಾಡಿದ್ದು ಆಕೆಗೆ ಹಿಡಿಸಲಿಲ್ಲ. ಆಕೆ ಕೂಡ ಒಬ್ಬ ಹೆಣ್ಣು.

"ಹೌದು, ಸುಮ್ಮನಿರಪ್ಪ. ನಿಂಗೆ ನಿನ್ತಂಗಿ ಅಪ್ಪ, ಅಮ್ಮ ಮುಖ್ಯವಾಗಿ ಅವ್ಳನ ಹೊರಗಟ್ಟಿಬಿಟ್ಟೆ. ಅವ್ಳಿಗೂ ಅವಳಪ್ಪ, ಅಣ್ಣ ಮುಖ್ಯವಾಗೋಲ್ವಾ? ಗಂಡಿಗಿಂತ ಹೆಣ್ಣಿನ ಅಂತಃಕರಣ ತೀರಾ ಮೃದು. ಇದ್ನ ಗಂಡಸರು ಯಾಕೆ ಅರ್ಥಮಾಡಿಕೊಳ್ಳೋಲ್ಲ. ಹೊಕ್ಕ ಮನೆಗಾಗಿ ಹುಟ್ಟಿದ ಮನೆನಾ ಸರ್ವನಾಶ ಮಾಡ್ಬಿಡ್ಬೇಕಾ ? ಸಾಕು ಸುಮ್ಮನಿರೋ ! ಪೂಜಾ ದೊಂಬರಾಟ, ನಿಮ್ಮಪ್ಪನ ಹಾರಾಟದಲ್ಲಿ ಚಾರು ದೊಡ್ಡ ಅಪರಾಧಿಯಾಗಿ ಕಂಡ್ಳು. ಜೀವಾವಧಿಯೇನು ಮರಣದಂಡನೆಗೆ ಗುರಿಯಾದ ಖೈದಿಯಂತೆ ನೋಡ್ದೆ. ಈಗ ನೋಡಿದ್ರೆ ಅವಳದೇನು ತಪ್ಪಿಲ್ಲ. ಬೇಡಾಂದ ಗಂಡಿಗೋಸ್ಕರ ಅಷ್ಟೆಲ್ಲ ಹಾರಾಟ ಯಾಕೆ ಬೇಕಿತ್ತು ? ಬರೀ ತಾನು ಹೇಳಿದ್ದು ನಡೀಬೇಕನ್ನೋ ಕೆಟ್ಟ ಹಟ ಪೂಜಾದು" ಗೊಣಗಿಕೊಂಡು ಹೋದರು.

ಮೂರ್ತಿ ನಿಬ್ಬೆರಗಾಗಿ ನಿಂತ. ತಾಯಿ ಪೂರ್ತಿಯಾಗಿ ಸೊಸೆಯ ಪಕ್ಕ ನಿಂತಂತೆ ಕಂಡರೂ ಆದ ರಂಪ, ರಾಮಾಯಣ ನೆನಪಿಸಿಕೊಂಡ. ಬಂದವಳನ್ನ

ನಾಯಿಯಂತೆ ಅಟ್ಟಿದ್ದ ಬಿಸಿಲಲ್ಲಿ. ಅಂದು ಕೂಡ ತಳಮಳವಿತ್ತು. ಕಾಲೇಜಿಗೆ ಹೋದವನು ಪಾಠ ಮಾಡಲಾರದೆ ಬಸ್ಸು ಸ್ಟಾಂಡ್‌ಗೆ ಹೋಗಿದ್ದ. ಬಸ್ಸು ಹೊರಟು ಹೋಗಿತ್ತು. ಕೋಪ ಬೇಸರವಿತ್ತು ಮಡದಿಯ ಮೇಲೆ. ಆದರೆ ಅವನೆದೆಯ ಪ್ರೇಮದ ಕಾರಂಜಿಯೇನು ಬತ್ತಿ ಹೋಗಿರಲಿಲ್ಲ. ಕೂಡಿ ಬದುಕಲೀ, ಬಿಡಲೀ ಅವಳೊಬ್ಬಳೆ ಅವನ ಪಾಲಿಗೆ ಹೆಣ್ಣು.

ವರಾಂಡದಲ್ಲಿ ಕೂತುಬಿಟ್ಟ ಮೌನವಾಗಿ.

* * *

ರೂಮಿನೊಳಕ್ಕೆ ಬಂದ ನೀರದ "ಒಂದು ರಿಜಿಸ್ಟರ್ ಪಾರ್ಸಲ್ ಬಂದಿದೆ ನಿಮ್ಮ ಹೆಸರಿಗೆ. ಚಾರು, ನಿಮ್ಮಿಂದ ನಂಗೊಂದು ಸಹಾಯ ಆಗ್ಬೇಕು" ಮುಂದಕ್ಕೆ ಕೂದಲನ್ನ ಹಾಕಿಕೊಂಡು ಜಡೆ ಹಣೆಯುತ್ತಿದ್ದವಳು ಕತ್ತನ್ನ ತಿರುಗಿಸಿ "ಸ್ವಲ್ಪ ಸರ್ರ್ಯಾಗಿ ವಿಚಾರಿಸ್ಬೇಕಿತ್ತು. ನಂಗೆ ರಿಜಿಸ್ಟರ್ ಪಾರ್ಸಲ್ ಯಾರಿಂದ ಬರ್ಬೇಕು?" ಎನ್ನುತ್ತಲೇ ಹೊರಗೆ ಬಂದಳು.

ಕೊರಿಯರ್ ಹುಡುಗ ನಿಂತಿದ್ದ. ಅವನ ಕೈಯಲ್ಲಿನ ಪಾರ್ಸಲ್ ಪಡೆದು ತಿರುಗಿಸಿ ತಿರುಗಿಸಿ ನೋಡಿದಳು. ಮಿಂಚೊಡೆದಂತಾಯಿತು. ಹೃದಯದಲ್ಲಿ ಒತ್ತಿದ ಸುಂದರ ಅಕ್ಷರಗಳೇ. ನಡುಗುವ ಕೈಯಿಂದ ಸಹಿ ಹಾಕಿ ಪಡೆದು ಕೊಂಡಳು. ಮಿದುಳು, ಮನಸ್ಸು ಏಕವಾದರೂ ಹೃದಯಕ್ಕೆ ಸೋಲಲೇ ಬೇಕಾಯಿತು.

"ಹಲೋ, ಏನದು ?" ಸ್ಕೂಟರ್ ಹೊರಗೆ ನಿಲ್ಲಿಸುತ್ತಿದ್ದ ಡಾ|| ನವೀನ್ ಬಂದ "ಯಾರ್ದೂ ಪಾರ್ಸಲ್ ? ಹಾಗೆಲ್ಲ ತಗೋಬೇಡ, ಬಾಂಬ್ ಏನಾದ್ರೂ ಇಟ್ಟಿದ್ದಾರು. ನಾಳಿನ ಪೇಪರ್‌ನ ಮುಖ್ಯ ಸುದ್ಧಿಯಾಗೋದ್ಬೇಡ" ಅವಳ ಕೈಯಲ್ಲಿನ ಪಾರ್ಸಲ್ ತೆಗೆದುಕೊಂಡ.

ಕೆಳಗೆ ಮೂರ್ತಿಯ ವಿಳಾಸ. ಅವನೆದೆ ಬಡಿತದ ವೇಗ ಎಷ್ಟು ಹೆಚ್ಚಿತೆಂದರೆ ಒಂದು ಅಂದಾಜುಗೆ ಬರದಾದ. ಸಂತೋಷವೋ, ಆವೇಗವೋ ಈ ಎರಡು ಅಲ್ಲದ ಅವಮಾನದ ಬೇಗೆಯೋ ? ಅವಳತ್ತ ತಿರುಗುವ ವೇಳೆಗೆ ಚಾರುಲತ ಇರಲೇ ಇಲ್ಲ.

ಪ್ಯಾಕೆಟ್ ಹಿಡಿದು ಒಳ ಬಂದ. ಹಾಲ್‌ನಲ್ಲಿರಲಿಲ್ಲ ತಂಗಿ. ರೂಮಿನತ್ತ ಹೊರಟಾಗ ಬಂದ ನೀರದ "ಯಾರ್ದ್ದು ಪಾರ್ಸಲ್ ?" ಕೇಳಿದಳು. "ನಿನ್ನದಂತು ಖಂಡಿತ ಅಲ್ಲ" ಒಳ ನಡೆದ.

ಹಿಂದಿನ ದಿನ ತನ್ನ ಸಂಬಳದಲ್ಲಿ ನೀರದ ಅತ್ತಿಗೆಗಾಗಿ ಎರಡು ಸೀರೆ ಖರೀದಿಸಿ ತಂದಿದ್ದರಿಂದ ತುಂಬ ಖುಷಿಯಾಗಿದ್ದಳು ನವೀನ್‌ನ ಹೆಂಡತಿ. ಅವಳಿಗೆ ಸೀರೆ, ಒಡವೆ ಎಲ್ಲಾ ಇಷ್ಟವೇ. ತಾಯಿಯ ಮನೆಯಲ್ಲಿ ಅಂಥದ್ದೆಲ್ಲ ಏನು ಇರಲಿಲ್ಲ. ಡಾ॥ ನವೀನ್‌ನ ಮದುವೆಯಾಗುವ ಕನಸ್ಸಿನಲ್ಲಿ ಮುಖ್ಯ ವಾದುದ್ದು ಸೀರೆ, ಒಡವೆಗಳೇ. ಇಲ್ಲೂ ಯಥೇಚ್ಛವಾಗಿಯೇನು ಸಿಕ್ಕಿರಲಿಲ್ಲ. ಅದೊಂದು ಗೊಣಗು ಅವಳದು.

ತಲೆ ಬಗ್ಗಿಸಿ ಮಂಚದ ಮೇಲೆ ಕೂತಿದ್ದ ಚಾರುಲತ ಮುಂದೆ ಪ್ಯಾಕೆಟ್ ಇಟ್ಟ "ನಿನ್ನ ಹುಟ್ಟಿದ ಹಬ್ಬಕ್ಕೆ ಮೂರ್ತಿ ಉಡುಗೊರೆ ಕಳ್ಸಿದ್ದಾನೆ. ನಿನ್ನಂಥ ಮಡದಿಯನ್ನ ಮರೆಯೋಂಥ ಮೂರ್ಖ ಅವನೇನು ಅಲ್ಲ" ಎಂದವನು ಅವಳನ್ನ ಒಂಟಿಯಾಗಿ ಬಿಟ್ಟು ಹೊರಗೆ ಹೋದ.

ಶಕುನದ ಹಕ್ಕಿ ಶುಭ ಹಾಡಿದಂತಾಯಿತು.

ನೇರವಾಗಿ ಅಡಿಗೆ ಮನೆಗೆ ಬಂದ. ಕಾಯಿ ಹೋಳಿಗೆಗೆ ಕಣಕ ರೆಡಿ ಮಾಡುತ್ತಿದ್ದ ವಾಸುದೇವಯ್ಯ "ಇವತ್ತೊಂದು ದಿನ ರಜ ಹಾಕೋಕೆ ಹೇಳು. ಎಲ್ಲರೂ ಒಟ್ಟಿಗೆ ಕೂತು ಊಟ ಮಾಡೋಣ. ಅವ್ಳಿಗೆ ಹೋಳಿಗೆ ಇಷ್ಟ. ಅದ್ಕೆ ಮಾಡ್ತಾ ಇದ್ದೀನಿ" ತಲೆಯೆತ್ತಿ ಹೇಳಿದರು.

ಅಲ್ಲೇ ಇದ್ದ ಸ್ಟೂಲನ್ನ ತಂದೆಯ ಮುಂದಕ್ಕೆ ಎಳೆದುಕೊಂಡು ಕೂತ "ಒಂದು ಒಳ್ಳೆ ಸುದ್ಧಿ. ಮೂರ್ತಿ ಚಾರುಗೆ ಹುಟ್ಟಿದ ಹಬ್ಬದ ಪ್ರಸೆಂಟೇಷನ್ ಕಳ್ಸಿದ್ದಾನೆ. ಅವ್ರ ಮನೆಯವರು ಮಾಡಿದ ಅವಮಾನಕ್ಕೆ ಡೈವೋರ್ಸ್ ಕೊಡ್ಸಿ ಚಾರುಲತಗೆ ಇನ್ನೊಂದು ಮ್ಯಾರೇಜ್ ಮಾಡ್ಬಿಡೋಣಾಂತ ಅನ್ನಿಸುತ್ತೆ. ಅದು ಸಾಧ್ಯವಾಗ್ದು. ಅವ್ಳಿಗೆ ಇನ್ನೊಂದು ವಿವಾಹದ ಬಗ್ಗೆ ಆಸಕ್ತಿ ಇಲ್ಲ" ಎಂದು ಉಸುರಿದ ಅವನಲ್ಲಿ ರಾಜಿ ಧೋರಣೆ ಇತ್ತು. ಅವಳ ದಾಂಪತ್ಯ ಸರಿ ಹೋಗದ ಹೊರತು, ಡಾ॥ ನವೀನ್ ಸುಖಿಯಲ್ಲ.

ವಾಸುದೇವಯ್ಯ ಕಣ್ಣುಗಳಲ್ಲಿ ಆನಂದ ಬಾಷ್ಪ ಇಣಕಿತು. ಅವಮಾನದ

ಬಗ್ಗೆ ತಲೆ ಕೆಡಿಸಿಕೊಳ್ಳಲಾರರು. 'ಅಹಂ' ಪ್ರತಿಷ್ಟೆಗಿಂತ ಅವರಿಗೆ ಮಗಳ ಭವಿಷ್ಯ ಮುಖ್ಯ.

"ಎಲ್ಲಾ ಒಳ್ಳೆದಾಗ್ಲಿ ! ಮೂರ್ತಿ ಬಂದು ಕರೆದೊಯ್ದರೇ ನಂಗಿಂತ ಸುಖಿ ಯಾರಿಲ್ಲ. ಅಂಥ ದಿನ ಬರಲಿ" ಹೆಗಲ ಮೇಲಿನ ಚೌಕದಿಂದ ಕಣ್ಣೀರು ತೊಡೆದುಕೊಂಡರು.

ಮತ್ತೆ ಡಾ।। ನವೀನ್ ರೂಮಿಗೆ ಬಂದಾಗ ಚಾರುಲತ ಅದೇ ಸ್ಥಿತಿಯಲ್ಲಿ ಕೂತಿದ್ದಳು. ಇನ್ನ ಪ್ಯಾಕೆಟ್ ಓಪನ್ ಆಗಿರಲಿಲ್ಲ. ತಾನೇ ಮೇಲಿನ ಬಣ್ಣದ ಕಾಗದ ಬಿಡಿಸಿ ರಟ್ಟಿನ ಕವರ್ ತೆಗೆದ. ಮೆರೂನ್ ಬಣ್ಣದ ಚೆಂದದ ರೇಶಿಮೆ ಸೀರೆ ಉಡುಗೊರೆಯಾಗಿ ಬಂದಿತ್ತು. ಹಿಂದಿನ ಸಂಜೆ ತಾನೇ ತಂಗಿಗಾಗಿ ಒಂದು ಸೀರೆ, ನೀರದಗಾಗಿ ಒಂದು ಸೀರೆ ಖರೀದಿಸಿ ತಂದಿದ್ದ. ಆದರೆ ಇಷ್ಟು ಭಾರಿಯಾದುದ್ದಲ್ಲ.

"ಫೆಂಟಾಸ್ಟಿಕ್, ಮೂರ್ತಿ ಒಳ್ಳೆ ರಸಿಕ. ಈ ಸೀರೆಯುಟ್ಟರೇ ನೀನು ಚೆಂದದ ಗೊಂಬೆಯೇ." ಸೀರೆಯನ್ನ ಹೊರತೆಗೆದ. ಅದರಡಿಯಲ್ಲಿ ಒಂದು ಚೀಟಿ ಇತ್ತು. ಹರ್ಷಿತನಾದ. "ತಗೋ ಇದ್ನ ನಾನೇ ಓದಿ ಹೇಳ್ಲಾ ? ನೀನೇ ಓದ್ಕೋತೀಯಾ" ಹಾಸ್ಯ ಮಾಡಿದ. ಅತಿಯಾಗುವುದು ಬೇಡವೆಂದು ಚೀಟಿಯನ್ನ ಅವಳ ತೊಡೆಯ ಮೇಲಿಟ್ಟು ಹೊರಗೆ ಬಂದ.

ಇದ್ನ ನಾನೇ ಓದಿ ಹೇಳ್ಲಾ ? ಓದ್ಕೋತೀಯಾ ? ಹಾಸ್ಯ ಮಾಡಿದ. ನಿರ್ಲಿಪ್ತವಾದಳು. ಅತಿ ಮಾಡುವುದು ಬೇಡವೆಂದು ಹೊರಗೆ ಹೋದ ಡಾ।। ನವೀನ್.

ಕಣ್ಣೀರು ಸುರಿಸಿ ಸಮಾಧಾನವಾದ ನಂತರವೆ ಚೀಟಿ ಬಿಡಿಸಿದ್ದು. 'ನಿನ್ನ ಹುಟ್ಟು ಹಬ್ಬಕ್ಕೆ ನೂರು ಸಿಹಿ ಮುತ್ತುಗಳು.' ಪುಟ್ಟ ಒಂದು ಸಾಲಿನ ಒಕ್ಕಣೆಯ ಕೆಳಗೆ ಸಹಿ ಇತ್ತು.

ಹಿಂದಿನ ದಿನ ಕಮಲ "ನಿಂಗೆ, ಈಗ ಡಿಮ್ಯಾಂಡ್ ಬರೋ ಹಾಗಿದೆ. ಚೆನ್ನೈ ಜನ ತೀರಾ ಸಂಪ್ರದಾಯಸ್ಥರು. ಈಗಾಗ್ಲೇ ಒಂದೆರಡು ಸಲ ನಿನ್ನ ಬಗ್ಗೆ ಪ್ರಶ್ನಿಸಿದ್ದಾರಂತೆ. ನೀನು ಬರದ್ದು ನೂರು ಪ್ರಶ್ನೆಗಳಿಗೆ ದಾರಿಯಾಗುತ್ತೆ. ಅದ್ಕೇ ನಿನ್ನ ಬಂದು ಕರ್ಕೊಂಡ್ಹೋಗ್ತಾರಂತೆ ಮೃಣಾಲಿನಿ ಅತ್ತೆ" ಹೇಳಿದ್ದು ನೆನಪಾಯಿತು. ಅದಕ್ಕೆ ಇದೊಂದು ಪೀಠಿಕೆಯಾ ?

ಚೀಟಿಯನ್ನ ಸೀರೆಯ ಬಾಕ್ಸ್‌ನಲ್ಲಿ ಹಾಕಿ ತೆಗೆದಿಟ್ಟಳು. ಪ್ರೀತಿ, ಪ್ರೇಮ, ಸಂಬಂಧಗಳು ತೀರಾ ವ್ಯವಹಾರವಾದರೇ, ಅಲ್ಲೇನು ಉಳಿಯದೆನಿಸಿತು. ಎಷ್ಟು ಕಠಿಣವಾಗಿ ವರ್ತಿಸಿದ್ದ ಮೂರ್ತಿ. ಎಷ್ಟು ಕೆಟ್ಟದಾಗಿ ನಡೆದುಕೊಂಡಿದ್ದ.

ಕಣ್ಣಿಂದ ಹರಿದ ಕಂಬನಿಯನ್ನೊರೆಸಿಕೊಂಡು ಹೊರ ಬಂದಾಗ ಡಾ॥ ನವೀನ್ ಅಚ್ಚರಿಯಿಂದ ಕಣ್ಣರಳಿಸಿದ. ತಂಗಿ ಗಂಡ ಕಳಿಸಿದ ಸೀರೆಯುಟ್ಟು ಖುಷಿಯಿಂದ ಹೊರ ಬರುತ್ತಾಳೆಂದು ತಿಳಿದಿದ್ದು ತಪ್ಪಾಗಿತ್ತು.

"ಹಾಯ್, ಚಾರು ಇಬ್ರೂ ರಜ ಹಾಕಿ ಮನೆಯಲ್ಲಿ ಉಳಿದ್ರೆ ಅಪ್ಪನ ಕೈನಾ ಬಿಸಿ ಬಿಸಿ ಒಬ್ಬಟ್ಟು ತಿನ್ನಬಹ್ದು" ಉತ್ಸಾಹದಿಂದ ನಕ್ಕಾಗ ಕಿರು ನಗೆ ಬೀರಿದಳು "ನಿಂದು ಪ್ರೈವೇಟ್ ನರ್ಸಿಂಗ್ ಹೋಂ. ನಂದು ಕೂಡ ಪ್ರೈವೇಟ್ ಕಂಪನಿ, ಟೆಂಪರರೀ ಜಾಬ್. ರಜ ಹಾಕ್ಕೊಂಡ್ ಆಗಾಗ ಮನೆಯಲ್ಲಿ ಕೂತರೇ, ಅವ್ರು ಬೇರೆ ಡಿಸಿಷನ್ ತಗೋತಾರೆ. ಅದೆಲ್ಲ ಬೇಡ. ನಾನಂತೂ ಹೊರಟಿದ್ದೀನಿ."

ಅಣ್ಣ, ತಂಗಿ ಬಾಗಿಲಿಗೆ ಬರುವ ವೇಳೆಗೆ ಯುಗಂಧರ್ ಕಾರುನಿಂದ ಕೆಳಗಿಳಿಯುತ್ತಿದ್ದರು. ಕ್ಷಣ ಅವನ ಅವುಡುಗಳು ಬಿಗಿಯಾಯಿತು. ಮರು ಕ್ಷಣವೇ ಅದು ಸೌಜನ್ಯವಲ್ಲವೆನಿಸಿತು.

"ಬನ್ನಿ......" ಎಂದರು ಇಬ್ಬರು ಒಟ್ಟಿಗೆ.

ಹೆಂಡತಿಯೊಂದಿಗೆ ಯುಗಂಧರ್ ಬಂದರು. ಹಾರ್ಟ್ ಅಟ್ಯಾಕ್ ನಂತರ ಇಂದೇ ಅವರು ಸ್ಟೀರಿಂಗ್ ವ್ಹೀಲ್ ಮುಂದೆ ಕೂತಿದ್ದು "ವಾಸುದೇವಯ್ಯ ಇದ್ದಾರ ?" ಕೇಳಿದರು. ಅವರ ದನಿಯಲ್ಲಿ ಸಹಜತೆ ಮೂಡಲಿಲ್ಲ.

"ಇದ್ದಾರೆ" ತಂದೆಯನ್ನ ಕರೆಯಲು ಒಳಗೆ ಹೋದಳು ಚಾರುಲತ. ಅವಳ ನಿರ್ಧಾರ ಸ್ಪಷ್ಟವಾಗಿದ್ದರಿಂದ ಅವಳೇನು ವಿಚಲಿತಳಾಗಲಿಲ್ಲ. "ಯುಗಂಧರ್ ಪತ್ನಿಯೊಂದಿಗೆ ಬಂದಿದ್ದಾರೆ. ನೀವೇನು ಎಕ್ಸೈಟ್ ಆಗೋದ್ಬೇಡ. ಸಹಜವಾಗಿ ಮಾತಾಡಿಸಿದರೇ ಸಾಕು" ಅವರ ಕೈ ಹಿಡಿದು ಹೇಳಿದಳು. ಬಹಳ ಅವಮಾನ ಅನುಭವಿಸಿದ್ದರು.

ಅವರನ್ನ ಹೊರಗೆ ಕಳಿಸಿ ತಾನೇ ಕಾಫಿ ಹಿಡಿದು ಬಂದಳು.

ಮೃಣಾಲಿನಿ ಎದ್ದು ಸೊಸೆಯ ಹಣೆಗೆ ಕುಂಕಮ ಹಚ್ಚಿ "ಹ್ಯಾಪಿ ಬರ್ತ್ ಡೇ,

ಪೂಜಾ ನಿಂಗೆ ಗಿಫ್ಟ್ ಕಳ್ಸಿದ್ದಾಳೆ" ಒಂದು ಸ್ಕಾರಿ ಪ್ಯಾಕೆಟ್ ಅವಳ ಕೈಯಲ್ಲಿಟ್ಟರು. ಅದೇನು ಹಿತವಾದ ಸ್ಪರ್ಶವೆನಿಸಲಿಲ್ಲ ಅವಳಿಗೆ. ತಣ್ಣಗಿದ್ದಳು.

"ಪೂಜಾ ಮದ್ವೆಯ ನಿಶ್ಚಿತಾರ್ಥ. ಎಲ್ಲಾ ನಾಳೆ ಅಲ್ಲಿಗೆ ಬಂದ್ಬಿಡ್ಬೇಕು" ಅಂದರು ಮತ್ತೊಮ್ಮೆ. ಡಾ॥ ನವೀನ್ ಹ್ಲುಗುಟ್ಟಿ ನಾಲ್ಕು ಹೆಜ್ಜೆ ಹಿಂದಕ್ಕೆ ಸರಿದ. ವಾಸುದೇವಯ್ಯ "ಆಯ್ತು....." ಎಂದರು. ಮನಗಳಲ್ಲಿನ ವಿಷಾದ ಕರಗಿ ಹೋಗಲು ಅದೇನು ಮಂಜಾ ? ಅದಕ್ಕೂ ಸೂರ್ಯನ ಬಿಸಿಲು ಸೋಕಬೇಕು.

ಬಹಳ ಪ್ರಯತ್ನಪಟ್ಟರೂ ಯುಗಂಧರ್‌ನಿಂದ ಮಾತಾಡಲಾಗಲಿಲ್ಲ. "ಬೆಳಿಗ್ಗೆನೇ ಬಂದ್ಬಿಡ್ಬೇಕು" ಎಂದವರು ಮೇಲೆದ್ದರು. ಎಲ್ಲಾ ಕಲ್ಲಾಗಿದ್ದರು. ಏನೇ ಪ್ರಯತ್ನಿಸಿದರೂ ಪ್ರತಿಕ್ರಿಯಿಸಲಾಗಲಿಲ್ಲ.

"ಚಾರುಲತನ ಕರ್ಕೊಂಡ್ಹೋಗ್ತೀವಿ" ಎಂದರು ಮೃಣಾಲಿನಿ.

ಅಪ್ಪ, ಮಗ ಏನು ಮಾತಾಡಲಿಲ್ಲ. ಅವರಿಗೆ ಸಂತೋಷವೋ, ದುಃಖವೋ, ಸಂಭ್ರಮವೋ, ಇಲ್ಲ ಸ್ವಾಭಿಮಾನದ ಸತ್ವ ಪರೀಕ್ಷೆಯೋ ?

"ನಿನ್ನ ಸೂಟುಕೇಸ್ ತಂದ್ಬಿಡಮ್ಮ" ಎಂದು ಯುಗಂಧರ್ ಆಚೆ ಹೋದರು. "ಈಗ್ಬಂದೆ...." ಎಂದು ಒಳಗೆ ಹೋದ ಚಾರುಲತ ಮೂರ್ತಿಯಿಂದ ಬಂದ ಸೀರೆಯ ಪ್ಯಾಕೆಟ್‌ನ ಜೊತೆ ಹರಿಶಿನ, ಕುಂಕುಮ ತಾಂಬೂಲ ತಂದು ಕೊಟ್ಟಾಗ ಆಕೆ ಹುಬ್ಬೇರಿತು "ಇದೆಲ್ಲ ಈಗ ಯಾಕೆ ?" ಎಂದರು.

"ನನ್ನ ಹುಟ್ಟಿದ ಹಬ್ಬ ಅಲ್ವಾ ? ನಿಮ್ಗೇ ಕೊಟ್ಟು ಆಶೀರ್ವಾದ ಪಡ್ಕೊಣಾಂತ" ಎಂದು ಅದನ್ನೆಲ್ಲ ಒಂದು ಪ್ಲಾಸ್ಟಿಕ್ ಕ್ಯಾರಿ ಬ್ಯಾಗ್‌ಗೆ ಹಾಕಿಕೊಟ್ಟು ಬಗ್ಗಿ ನಮಸ್ಕರಿಸಿ "ನಾಳೆ ನಿಶ್ಚಿತಾರ್ಥ ಒಂದೆರಡು ಗಂಟೆಗಳು ಇರೋವಾಗ್ಲೇ ಬರ್ತೀನಿ. ನೀವೇನು ಅದಕ್ಕೋಸ್ಕರ ತಲೆ ಕೆಡ್ಸಿ ಕೊಳ್ಳೋದ್ಬೇಡ. ನೀವು ಸಾಕಷ್ಟು ಸಲ ರಾಮಾಯಣ ಓದಿರಬೇಕು. ಸೀತೆ ಯಾರ ಸಹಾನುಭೂತಿನು ಅಪೇಕ್ಷಿಸೋಲ್ಲ. ಹೆಣ್ಣು ಕುಲಕ್ಕೆ ಮಾರ್ಗದರ್ಶಿ. ತುಂಬು ಬಸುರಿಯನ್ನ ರಾಮ ಯಾವುದೇ ಕಾರಣಕ್ಕೆ ಕಾಡಿಗೆ ಕಳುಹಿಸಿರಲೀ, ಪತಿಯ ಬಗ್ಗೆ ಗೌರವ ಇರಲೀ ಆದರೆ ಮತ್ತೆ ಪತಿಯೊಂದಿಗೆ ಸಂಸಾರ ಮಾಡಲು ಇಚ್ಛಿಸದೇ ಭೂಗರ್ಭ ಸೇರಿ ಹೋದಳು. ನಿಮ್ಗೆ ಅರ್ಥವಾಗಿರುತ್ತೆ ಅಂದ್ಕೊಂಡಿದ್ದೀನಿ. ನನ್ನಿಂದ ಪೂಜಾಗೆ ತೊಂದರೆಯಾಗೋಲ್ಲ.

ನಾಳೆ ನಿಶ್ಚಿತಾರ್ಥಕ್ಕೂ ಬರ್ತೀನಿ. ಮದ್ವೆಯ ಮನೆಯಲ್ಲು ಓಡಾಡ್ತೀನಿ. ಇಷ್ಟು ಸಾಕು. ಹೋಗ್ಬನ್ನಿ" ತಟ್ಟೆಯನ್ನ ಒಳಗೆ ಒಯ್ದಳು.

ಅವಳ ನಿರ್ಧಾರ ಅಚಲವಾಗಿತ್ತು.

ಕಾರು ಹೊರಟ ನಂತರವೇ ಹೊರಗೆ ಬಂದಿದ್ದು ಚಾರುಲತ.

"ನಾನು, ಈ ವಿಷ್ಯದಲ್ಲಿ ನಿಮ್ಮಗಳ ಸಲಹೆ ಪಡೀಲಿಲ್ಲ. ದಾಂಪತ್ಯಕ್ಕೆ ಬೇಕಾಗಿರೋದು ಪ್ರೀತಿ, ಸಾಮರಸ್ಯ. ಒತ್ತಡಕ್ಕಾಗಿ, ವ್ಯವಸ್ಥೆಗಾಗಿ ಬೇರೆಯವರನ್ನ ಮೆಚ್ಚಿಸಲು ಸಾಧ್ಯವಿಲ್ಲ. ನನ್ನ ಕ್ಷಮಿಸಿಬಿಡಿ" ಎಂದು ಹೊರಗೆ ಹೋದಳು.

ಅಪ್ಪ, ಮಗನ ಕಣ್ಣುಗಳಲ್ಲಿ ಮೂಡಿದ್ದು ಮೆಚ್ಚುಗೆಯಾದರೇ, ನೀರದ ಕಣ್ಣಲ್ಲಿ ಕಂಬನಿ. ಚಾರುಲತ ಅವಳ ಮುಂದೆ ಬಹಳ ಎತ್ತರಕ್ಕೆ ಬೆಳೆದಿದ್ದಳು.

- 0 - 0 - 0 -

## ರಜತನಂದನ

# ಹೊಸ ಸಾಮಾಜಿಕ ಕಾದಂಬರಿಗಳು

| | | |
|---|---|---|
| ಮಾಗಿಯ ಮಂಜು | ಸಾಯಿಸುತೆ | 50-00 |
| ಹಂಸಪಲ್ಲಕಿ | '' | 60-00 |
| ದಂತದ ಗೊಂಬೆ | '' | 50-00 |
| ಜನನೀ ಜನ್ಮಭೂಮಿ | ” | 50-00 |
| ವರ್ಷ ಬಿಂದು | ” | 50-00 |
| ನೀಲ ಆಕಾಶ | ” | 50-00 |
| ಪಾಂಚಜನ್ಯ | ” | 45-00 |
| ಪುಷ್ಕರಿಣಿ | ” | 40-00 |
| ಶಿಲ್ಪ ತರಂಗಿಣಿ | ” | 35-00 |
| ಕೋಗಿಲೆ ಹಾಡಿತು | ” | 35-00 |
| ಇಂದ್ರ ಧನಸ್ಸು | ” | 30-00 |
| ನೂರು ನೆನಪು | ” | 22-00 |
| ಅರುಣ ಕಿರಣ | ” | 30-00 |
| ರಾಧ ಮೋಹನಾ | ” | 26-00 |
| ಆಶಾಸೌರಭ | ” | 12-00 |
| ಸ್ವಪ್ನ ಸಂಭ್ರಮ | ” | 20-00 |
| ನವಚೈತ್ರ | ” | 16-00 |
| ಸೊಬಗಿನ ಪ್ರಿಯದರ್ಶಿನಿ | ” | 20-00 |
| ಬಾಂದಳದ ನಕ್ಷತ್ರ | ” | 15-00 |
| ಕಾರ್ತೀಕದ ಸಂಜೆ | ” | 20-00 |
| ಮಿಂಚು | ” | 16-00 |
| ಬಾನು ಮಿನುಗಿತು | ” | 15-00 |
| ಬರಿದ ನೈದಿಲೆ | ” | 15-00 |
| ಮೇಘವರ್ಷಿಣಿ | ” | 25-00 |

**ರಜತನಂದನ**

| | | |
|---|---|---|
| ಶರದೃತುವಿನ ಚಂದ್ರ | ಸಾಯಿಸುತೆ | 12-00 |
| ಮೂಡಿ ಬಂದ ಶಶಿ | ” | 12-00 |
| ಸಿರಿಯ ಸಂಕೋಲೆ | ತನುಜ | 15-00 |
| ದೀಪಲಕ್ಷ್ಮಿ | ಸುನೀತಿ ಕೃಷ್ಣಮೂರ್ತಿ | 10-00 |

*ಪ್ರಕಾಶಕರು :*

# ವಾಸವಾಂಬ ಪ್ರಕಾಶನ

ವಾಸವಾಂಬ ನಿಲಯ, ಸಾರಕ್ಕಿ ಬಡಾವಣೆ,

**ಬೆಂಗಳೂರು - 560 078**

(ದೂರವಾಣಿ : 6642996)

# ನಮ್ಮಲ್ಲಿ ದೊರೆಯುವ ಕನ್ನಡ ಪುಸ್ತಕಗಳು

ಕಾದಂಬರಿಗಳು —— (ಸಾಮಾಜಿಕ ಐತಿಹಾಸಿಕ ಪೌರಾಣಿಕ)
ಸಣ್ಣ ಕಥೆಗಳು
ಕವನ ಸಂಗ್ರಹಗಳು
ನಾಟಕಗಳು
ಆಧ್ಯಾತ್ಮಿಕ ಮತ್ತು ಪೌರಾಣಿಕ ಗ್ರಂಥಗಳು
ವಿಶ್ವವಿದ್ಯಾಲಯದ ಪ್ರಕಟಣೆಗಳು
ಸಂಗೀತ ಪುಸ್ತಕಗಳು
ಕಿರು ಸಾಹಿತ್ಯ
ಪ್ರಬಂಧ ಹಾಗೂ ಪ್ರೌಢಗ್ರಂಥಗಳು
ಜ್ಯೋತಿಷ್ಯ ಶಾಸ್ತ್ರಗ್ರಂಥಗಳು
ವೈಜ್ಞಾನಿಕ ಪುಸ್ತಕಗಳು
ಹಾಗೂ ಇತರ ಪುಸ್ತಕಗಳಿಗಾಗಿ ಒಮ್ಮೆ ಭೇಟಿಕೊಡಿ

ಅಥವಾ

ಪುಸ್ತಕಗಳ ಪಟ್ಟಿಗಾಗಿ ಇಂದೇ ಬರೆಯಿರಿ

ಗೀತಾ ಏಜನ್ಸೀಸ್
[illegible]